ಸ್ಮೃತಿ ಸೌರಭ

ವ್ಯಕ್ತಿಚಿತ್ರಗಳು



ಚೆನ್ನವೀರ ಕಣವಿ

ಸ್ಮೃತಿ ಸೌರಭ

[illegible]

[illegible]

[illegible]

೨೬-೪-೨೦೧೭

ಮನೋಹರ ಗ್ರಂಥ ಮಾಲೆಯ
ಆಗಸ್ಟ್ ೨೦೧೬ರ ಐದನೆಯ ಗ್ರಂಥ

ಮೊದಲ ಮುದ್ರಣ : ೨೦೧೬

ಸ್ಮೃತಿ ಸೌರಭ

ಲೇಖಕರು
ಚೆನ್ನವೀರ ಕಣವಿ

೨೦೧೬

ಮನೋಹರ ಗ್ರಂಥ ಮಾಲಾ, ಧಾರವಾಡ

SMRITI SOURABHA
(Memories in Kannada)

Author : **Chennaveera Kanavi**

PUBLISHERS : **MANOHARA GRANTHA MALA**
Laxmi Bhavan, Subhas Road,
DHARWAD - 580 001.
Phone : 0836 - 2441822, 2441823
www.granthamala.com

Webdesign : Weblogix, Dharwad

DTP & PRINTERS : TWARITHA MUDRANA OFFSET
PRINTERS, GADAG - 582 101.

Edition : First Year : 2016 Pages : x + 128 = 138
Paper : 70 Gsm N.S. Book Print

Founder Editor : Late G. B. JOSHI
Literary Advisers : GIRISH KARNAD, GIRADDI GOVINDARAJ
Editor-Publisher : RAMAKANT G. JOSHI
Manager : SAMEER R. JOSHI

Price : **Rs. 120/-** ISBN : 978-93-41822-77-7

ಪ್ರಕಾಶಕರ ಮಾತು

ಗ್ರಂಥ ಮಾಲೆಯ ೨೦೧೬ನೇ ವರ್ಷದ ಐದನೆಯ ಗ್ರಂಥವಾಗಿ ನಾಡೋಜ ಚೆನ್ನವೀರ ಕಣವಿಯವರ ''ಸ್ಮೃತಿ ಸೌರಭ'' ಎಂಬ ವ್ಯಕ್ತಿ ಚಿತ್ರಗಳ ಪುಸ್ತಕವನ್ನು ನಮ್ಮ ಚಂದಾದಾರರಿಗೆ ನೀಡಲು ಅತ್ಯಂತ ಸಂತೋಷವಾಗುತ್ತದೆ. ಈಗಾಗಲೇ 'ನಡೆದು ಬಂದ ದಾರಿ'ಯ ೧ ನೇ ಸಂಪುಟದಲ್ಲಿ ತಮ್ಮ ಕವನ ನೀಡಿ, ಗ್ರಂಥಮಾಲೆಯ ಲೇಖಕರ ಬಳಗಕ್ಕೆ ಸೇರಿದ್ದರು. ಆದರೆ ಈಗ ಪುಸ್ತಕವೊಂದನ್ನು ನೀಡಿ ಇನ್ನೂ ಹೆಚ್ಚಿಗೆ ಹತ್ತಿರ ಬಂದಿದ್ದಾರೆ. ತಮ್ಮ ಇಳಿವಯಸ್ಸಿನಲ್ಲಿ ಅವರು ಧಾರವಾಡದ ಸಾಹಿತ್ಯಿಕ ವಲಯದ ಸ್ಮೃತಿಗಳನ್ನು ಬರೆದು ಕೊಡಬೇಕೆಂದು ನಮ್ಮ ಆಶಯವಾಗಿತ್ತು. ಆದರೆ ಅವರು ಗದ್ಯಲೇಖನಕ್ಕೆ ಈಗ ಸಮಯ ನೀಡಲು ಆಗುತ್ತಿಲ್ಲವಾದ್ದರಿಂದ, ಈ ಮೊದಲು ಬರೆದ ಗದ್ಯ ಲೇಖನಗಳಲ್ಲೇ ಧಾರವಾಡಕ್ಕೆ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದವುಗಳನ್ನು ಆರಿಸಿ ಈ ಪುಸ್ತಕ ಹೊರತರುತ್ತಿದ್ದೇನೆ.

ಮುಖಪುಟ ವಿನ್ಯಾಸ ಮಾಡಿದ ವಿಶ್ವಜ್ಞಸಹೋದರರಿಗೆ ಕೃತಜ್ಞತೆಗಳು. ಮುದ್ರಿಸಿದ ಗದುಗಿನ ತ್ವರಿತ ಮುದ್ರಣದ ಸಿಬ್ಬಂದಿಗೆ ಆಭಾರಿ

ರಮಾಕಾಂತ ಜೋಶಿ

ಲೇಖಕರ ಮಾತು

ಮನೋಹರ ಗ್ರಂಥಮಾಲೆಯ ರಮಾಕಾಂತ ಜೋಶಿಯವರು ಧಾರವಾಡದ ನನ್ನ ನೆನಪುಗಳನ್ನು ಕುರಿತು ಬರೆಯಲು ಕೇಳಿಕೊಂಡು ಆಗಾಗ ನೆನಪಿಸುತ್ತಲೇ ಇದ್ದರು. ನನ್ನ ಅನೇಕ ಕವಿತೆಗಳಲ್ಲಿ ಹಾಗೂ ಕೆಲ ಗದ್ಯ ಬರೆಹಗಳಲ್ಲಿ (ವಿಶೇಷವಾಗಿ ವ್ಯಕ್ತಿಚಿತ್ರಗಳಲ್ಲಿ) ಈ ವಿಷಯ ಪ್ರಸ್ತಾತಪಗೊಂಡಿರುವುದರಿಂದ ಪುನರುಕ್ತಿಯಾಗಬಹುದೆಂದು ನಾನು ಅದಕ್ಕೆ ಮನಸ್ಸು ಮಾಡಲಿಲ್ಲ. ಅದಕ್ಕೆ ಪರ್ಯಾಯವೆಂಬಂತೆ ಈ 'ಸ್ಮೃತಿ ಸೌರಭ' ರೂಪುಗೊಂಡಿದೆ. ಇಲ್ಲಿ ಚಿತ್ರಣಗೊಂಡ ಹಿರಿಯರ ಹಾಗೂ ಮಿತ್ರರ ಒಡನಾಟದಿಂದ ನಾನು ಧನ್ಯತೆ ಪಡೆದಿದ್ದೇನೆ.

ಲೇಖನಗಳ ಕೊನೆಯಲ್ಲಿ ಅವು ಈ ಮೊದಲು ಪ್ರಕಟಗೊಂಡ ಗ್ರಂಥ ಅಥವಾ ಪತ್ರಿಕೆಗಳ ಹೆಸರುಗಳನ್ನು ಇಸವಿಗಳೊಂದಿಗೆ ಕೊಡಲಾಗಿದೆ.

ಗ್ರಂಥಮಾಲೆಯ ಸಾಹಿತ್ಯ ಸಲಹೆಗಾರರಾದ ಡಾ. ಗಿರಡ್ಡಿ ಗೋವಿಂದರಾಜ ಹಾಗೂ ಸಂಪಾದಕ–ಪ್ರಕಾಶಕರರಾದ ಡಾ. ರಮಾಕಾಂತ ಜೋಶಿ ಈ ಲೇಖನಗಳ ಆಯ್ಕೆಯಲ್ಲಿ ನೆರವಾಗಿದ್ದಾರೆ. ಪುಸ್ತಕ ಅಚ್ಚುಕಟ್ಟಾಗಿ ಪ್ರಕಟವಾಗುವಂತೆ ಶ್ರೀ ಸಮೀರ ಜೋಶಿ ದಕ್ಷತೆ ವಹಿಸಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಧಾರವಾಡ
೧೨ ಜೂನ್ ೨೦೧೬

ಚೆನ್ನವೀರ ಕಣವಿ

ಅರ್ಪಣೆ

ಪೂಜ್ಯ ಮಾಸ್ತಿಯವರಿಗೆ
೧೨೫ನೆಯ ಹುಟ್ಟು
ಹಬ್ಬದ ಶುಭ ಸಂದರ್ಭದಲ್ಲಿ
ಪ್ರೀತಿ
ಗೌರವ
ಕೃತಜ್ಞತೆಗಳೊಂದಿಗೆ.

ಪರಿವಿಡಿ

೧. ಮಾಸ್ತಿ: ನಾನು ಕಂಡಂತೆ ೧

೨. ವರಕವಿಯೊಂದಿಗೆ ಒಡನಾಟ ೧೨

೩. ಡಿ.ವಿ.ಜಿ. ಸಂಸ್ಮರಣ ೨೧

೪. ಶಂಬಾ ಸ್ಮೃತಿ ೨೫

೫. ವಿ. ಸೀ. ಮಾಸದ ನೆನಪು ೩೧

೬. ಪ್ರೊ. ಶಿ. ಶಿ. ಬಸವನಾಳರು ೩೬

೭. ತೀ. ನಂ. ಶ್ರೀ. : ನೆನಪಿನಂಗಳದಲ್ಲಿ ೫೦

೮. ಹಲವು ಹೋರಾಟಕಗಳ ಕಲಿ : ಅ.ನ.ಕೃ. ೫೮

೯. ಕ್ರಾಂತಿಕಾರಿ ಕಾದಂಬರಿಕಾರ ಬಸವರಾಜ ಕಟ್ಟೀಮನಿ ೬೭

೧೦. ಜೊತೆಗಾರ ಜಿಎಸ್‌ಎಸ್ ೮೦

೧೧. ಜಿ. ಬಿ. ಜೋಶಿ : ಕನಸು–ನನಸು ೮೯

೧೨. ಹಿರೇಮಲ್ಲೂರು ಈಶ್ವರನ್ : ಒಂದು ಅದ್ಭುತ ಚೇತನ ೯೨

೧೩. ಡಾ. ಆರ್. ಸಿ. ಹಿರೇಮಠ : ಒಂದು ಸ್ಮರಣೆ ೯೮

೧೪. ಪ್ರೊ. ಸ. ಸ. ಮಾಳವಾಡ : ಜನ್ಮಶತಾಬ್ದಿ ಸ್ಮರಣೆ ೧೦೪

೧೫. ಕಲಬುರ್ಗಿ ನೆನಪುಗಳು ೧೧೪

೧೬. ಚೆನ್ನವೀರ ಕಣವಿ (ಬದುಕು–ಬರೆಹ) ೧೧೮

■■

ಮಾಸ್ತಿ : ನಾನು ಕಂಡಂತೆ

ನಾನು ಹಾಯ್‌ಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಶ್ರೀನಿವಾಸರ 'ಕೆಲವು ಸಣ್ಣಕಥೆಗಳು' ಪುಸ್ತಕ ನನ್ನ ಕೈಗೆ ಹೇಗೋ ಬಂದಿತ್ತು. ಆ ಕತೆಗಳನ್ನು ಮರಮರಳಿ ಓದಿದ್ದೇ ಓದಿದ್ದು. ನಾನಿದ್ದ ವಿದ್ಯಾರ್ಥಿ ನಿಲಯದಲ್ಲಿ ಕಾಲೇಜಿನ ವಿದ್ಯಾರ್ಥಿಗಳೂ ಇದ್ದರು. 'ಸುಬ್ಬಣ್ಣ' ಅವರಲ್ಲಿ ಕೆಲವರಿಗೆ ಪಠ್ಯವಾಗಿತ್ತೆಂದು ತೋರುತ್ತದೆ. ನಾನು ಅವರಿಂದ ಅದನ್ನು ಪಡೆದುಕೊಂಡು ಕೂತ ಮೆಟ್ಟಿನಲ್ಲಿಯೇ ಓದಿ ಮುಗಿಸಿದ್ದೆ. ಕತೆಗಳನ್ನು ಓದಿದಾಗ ನನ್ನಲ್ಲಿ ಉಂಟಾಗಿದ್ದ ಉತ್ಸಾಹ, ಸಂತೋಷದ ಬದಲು ಸುಬ್ಬಣ್ಣ ಓದಿದಾಗ ಒಂದು ಬಗೆಯ ವಿಲಕ್ಷಣ ದುಃಖ ನನ್ನ ಮನಸ್ಸನ್ನಾವರಿಸಿತ್ತು. ಸಾಹಿತ್ಯದಲ್ಲಿ ನನಗೆ ವಿಶೇಷ ಅಭಿರುಚಿಯನ್ನು ಹುಟ್ಟಿಸಿದ ಗ್ರಂಥಗಳಲ್ಲಿ ಇವುಗಳಿಗೆ ಮಹತ್ವದ ಸ್ಥಾನವಿದೆ.

೧೯೪೪ರಲ್ಲಿ (ನಾನಾಗ ಹಾಯ್‌ಸ್ಕೂಲಿನ ಆರನೆಯ ವರ್ಗದಲ್ಲಿ ಓದುತ್ತಿದ್ದೆ) ರಬಕವಿಯಲ್ಲಿ ಸಾಹಿತ್ಯ ಸಮ್ಮೇಳನ ನಡೆಯುವದಿತ್ತು. ಧಾರವಾಡದವರೇ ಆದ ಪ್ರೊ. ಬಸವನಾಳರು ಅದಕ್ಕೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ತುಂಬು ಗಾಂಭೀರ್ಯದ ಆ ವ್ಯಕ್ತಿಯನ್ನು ನಾನು ದೂರದಿಂದಲೇ ನೋಡಿದ್ದೆನಲ್ಲದೆ ಅವರ ಒಂದೆರಡು ಭಾಷಣಗಳನ್ನೂ ಕೇಳಿದ್ದೆ. ಆಗ ಪ್ರಗತಿಶೀಲ ಸಾಹಿತ್ಯದ ಬಗ್ಗೆ ಪತ್ರಿಕೆಗಳಲ್ಲಿ, ವಿಶೇಷವಾಗಿ 'ಉಷಾ'ದಲ್ಲಿ ನಡೆಯುತ್ತಿದ್ದ ವಾದ ವಿವಾದಗಳೂ ನನ್ನಲ್ಲಿ ಕುತೂಹಲವನ್ನು ಕೆರಳಿಸಿದ್ದವು. ಆ ಸಮ್ಮೇಳನದಲ್ಲಿ ಗೋಕಾಕರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಪ್ರಗತಿಶೀಲ ಸಾಹಿತ್ಯ ಗೋಷ್ಠಿಯಲ್ಲಿ ಅ.ನ.ಕೃ., ತರಾಸು., ಕುಳುಕುಂದ ಶಿವರಾಯ, ನಾಡಿಗೇರ ಕೃಷ್ಣರಾಯ, ಅರ್ಚಕ ವೆಂಕಟೇಶ, ಮಾ.ನಾ. ಚೌಡಪ್ಪ ಭಾಗವಹಿಸಲಿರುವರೆಂದು ತಿಳಿದಾಗಲಂತೂ ನನ್ನ ಹಾಗೂ ನನ್ನ ಒಂದಿಬ್ಬರು ಗೆಳೆಯರ ಉತ್ಸಾಹಕ್ಕೆ ರೆಕ್ಕೆ ಮೂಡಿದವು. ಅವರಲ್ಲಿ ಒಬ್ಬರ ಊರು ಮುಧೋಳ. ಸಮ್ಮೇಳನದ ಜೊತೆಗೆ ತಮ್ಮ ಊರಿಗೂ ನಮ್ಮನ್ನು ಕರೆದುಕೊಂಡು ಹೋಗುವುದಾಗಿ ಹೇಳಿ ಹೊರಡಿಸಿಯೇ ಬಿಟ್ಟರು.

ರಬಕವಿಯ ಪಟ್ಟಣ ಹಾಯ್‌ಸ್ಕೂಲಿನ ಆವರಣದಲ್ಲಿ ಸಜ್ಜುಗೊಳಿಸಿದ ಭವ್ಯವಾದ ಮಂಟಪದಲ್ಲಿ ಸಮ್ಮೇಳನ ಪ್ರಾರಂಭವಾಯಿತು. ಕಿಕ್ಕಿರಿದು ತುಂಬಿದ್ದ ಆ ಸಭೆಯಲ್ಲಿ ದೂರ ಹಿಂಬದಿಯಲ್ಲಿ ನಾನು ಗೆಳೆಯರೊಡನೆ ಹೇಗೋ ಸ್ಥಳ ಮಾಡಿಕೊಂಡು ಕೂತಿದ್ದೆ. ಜೋಳದರಾಶಿ ದೊಡ್ಡನಗೌಡರ ಕಂಚಿನ ಕಂಠದಿಂದ ನಡೆದ ಪ್ರಾರ್ಥನೆ ಸುತ್ತಲಿನ

ಕಟ್ಟಡಗಳಿಂದ ಪ್ರತಿಧ್ವನಿಗೊಂಡಿತು. ಸ್ವಾಗತಾಧ್ಯಕ್ಷರ ಭಾಷಣ ಇತ್ಯಾದಿಗಳಾದ ಮೇಲೆ, ಒಬ್ಬರು ಮೆಲ್ಲಗೆ ಮೇಲೆದ್ದು ಮುಗುಳುನಗುತ್ತಲೇ ಪ್ರೀತಿ ತುಂಬಿದ ಮಾತಿನಲ್ಲಿ ಸಭಿಕರನ್ನು 'ಅಣ್ಣಂದಿರೆ, ತಾಯಂದಿರೆ' ಎಂದು ಸಂಬೋಧಿಸುತ್ತ, ಕನ್ನಡದ ಬಗ್ಗೆ ಕಳಕಳಿಯಿಂದ ಅತ್ಯಂತ ಮೋಹಕವಾಗಿ ಮಾತನಾಡಿದ್ದನ್ನು ನಾನು ಮಂತ್ರಮುಗ್ಧನಾಗಿ ಕೇಳಿದೆ. 'ಇವರೇ ಮಾಸ್ತಿಯವರು' ಎಂದು ನನ್ನ ಬಳಿಯಲ್ಲಿದ್ದವರು ಮಾತನಾಡಿಕೊಂಡರು. ಇಷ್ಟು ಸೊಗಸಾಗಿ ಅಂತಃಕರಣ ಕರಗುವಂತೆ ಮಾತನಾಡಿದ ಈ ವ್ಯಕ್ತಿಗೆ 'ಮಾಸ್ತಿ' ಎನ್ನುವ ಹೆಸರು ನನಗೇಕೊ ಚಂದವೆನಿಸಲಿಲ್ಲ. 'ಸಣ್ಣ ಕತೆಗಳ ಶ್ರೀನಿವಾಸರೆಂದರೆ ಇವರೇ' ಎಂದು ಹತ್ತಿರದಲ್ಲಿದ್ದ ಇನ್ನೊಬ್ಬರು ಹೇಳಿದರು. ಆಗ ನಿಜಕ್ಕೂ ರೋಮಾಂಚನವಾಯಿತು. 'ಮಾಸ್ತಿ' ಎನ್ನುವ ಹೆಸರು ಅನಿಸಿದಂತೆ ಅಸಡ್ಡಾಳವಾಗಿ ಕಾಣದೆ ಈಗ ಹೆಚ್ಚು ಸುಂದರವಾಗಿ ತೋರಿತು.

ಮರುದಿನ ಸಾಯಂಕಾಲ ಸಭೆ ಸೇರಿದಾಗ ಈಶ್ವರ ಸಣಕಲ್ಲರು (ಅವರೂ ರಬಕವಿಯವರೇ) ಸಭಿಕರಾಗಿ ಎಲ್ಲೋ ಕುಳಿತುಕೊಂಡಿದ್ದರೆಂದು ತೋರುತ್ತದೆ. ಮಾಸ್ತಿಯವರು, ಈಶ್ವರ ಇಲ್ಲಿ ಮೇಲೆ ಬನ್ನಿ ಎಂದು ವೇದಿಕೆಯ ಮೇಲೆ ಅವರನ್ನು ಜುಲುಮೆಯಿಂದ ಕರೆದು ಕುಳ್ಳಿರಿಸಿಕೊಂಡ ಚಿತ್ರ ನಾಲ್ವತ್ತು ವರ್ಷಗಳಾದ ಮೇಲೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ಅಂದು ರಾತ್ರಿ ಮನರಂಜನ ಕಾರ್ಯಕ್ರಮಗಳಲ್ಲಿ ನಾಟಕವೊಂದಿತ್ತು ಮಂಟಪ ಕಾಲಿಡಲೂ ಜಾಗವಿಲ್ಲದಷ್ಟು ಜನರಿಂದ ತುಂಬಿಕೊಂಡಿತ್ತು. ಆಗ ಮಲ್ಲಿಕಾರ್ಜುನ ಮನಸೂರ ಅವರ ಸಂಗೀತ ಪ್ರಾರಂಭವಾಯಿತು. ಸುತ್ತುಮುತ್ತಲಿನ ಹಳ್ಳಿಗಳಿಂದ ಬಂದ ಜನ ನಾಟಕ ನೋಡುವಾತುರದಿಂದ ಸ್ವಲ್ಪ ಗಲಾಟೆ ಮಾಡತೊಡಗಿದರು. ಆಗ ಸ್ವತಃ ಮಾಸ್ತಿಯವರು ವೇದಿಕೆಯ ಮೇಲೆ ಬಂದು ಸಭಿಕರಿಗೆ ಶಾಂತರಾಗಿ ಆಲಿಸಲು ಕೈ ಮುಗಿದು ಬಿನ್ನವಿಸಿಕೊಂಡರು.

ನಾನು ನೋಡಿದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ನನಗೆ ಮಾಸ್ತಿಯವರ ಪ್ರಥಮ ದರ್ಶನವಾದದ್ದು ಹೀಗೆ, ಈ ಮಾಸ್ತಿಯವರೇ ಶ್ರೀನಿವಾಸರು ಎಂದು. ಆ ಸಂದರ್ಭದಲ್ಲಿ 'ಕನ್ನಡ ಬಾವುಟ'ದಲ್ಲಿ ನಾನು ಓದಿದ ಅವರ ಕವಿತೆಗಳು ನೆನಪಾದವು.

''ಹರಿದು ತುಂಡಾಗಿಹುದು ಇಂದು ಕನ್ನಡನಾಡು
ಅಣ್ಣ ತಮ್ಮಂದಿರು ತಾವಣ್ಣತಮ್ಮದಿರೆಂದು
ತಿಳಿಯಲಾರರು ನಡೆಯಲಾರರು...''

''ಕೋಗಿಲೆ ಕೋಗಿಲೆ
ಎಂಥ ಹೆಸರು ಊರಿಗೆ''

ಕುವೆಂಪು, ಬೇಂದ್ರೆ, ವಿ. ಸೀ. ಮೊದಲಾದವರ ಕವಿತೆಗಳಂತೆ ಇವು ಆವೇಶ ಪೂರ್ಣವಾಗಿರಲಿಲ್ಲ . ಆದರೂ ಒಂದು ಬಗೆಯ ಸಲಿಗೆಯ ಮಾತಿನ ರೀತಿಯಿಂದ ಅವು ನನ್ನ ಮನಸ್ಸನ್ನು ಆಕರ್ಷಿಸಿದ್ದವು. ದೂರದಿಂದಲೇ ಮಾಸ್ತಿಯವರನ್ನು ಕಂಡು ಅವರ ಮಾತುಗಳನ್ನಾಲಿಸಿ ಆ ಸಮ್ಮೇಳನದ ಮಂಟಪದಲ್ಲಿ ಕುಳಿತಾಗಲೇ ಅವರ ತೆಂಗಾಳಿಯ ಮೊದಲ ನುಡಿಯನ್ನು ಮನಸ್ಸಿನಲ್ಲಿಯೇ ಮೆಲುಕು ಹಾಕಿದೆ.

''ಬಾರ ಮುಂಬೇಸಗೆಯ ಮೆಲುನಡೆಯ ಮಾರುತ
ಬಾರಯ್ಯ ಮಧುಮಾಸದೈತರವ ಸಾರುತ
ಬಾರ ಲೋಕಕೆ ಹರಿಸದೈಸಿರಿಯ ಬೀರುತ
ಬಾರ ಸೊಗಸಿನ ತೆರನ ಜನಕೆಲ್ಲ ತೋರುತ''

ಈ ಕವಿತೆಯ ಭಾವ ನಾನು ಅಂದು ಕಂಡ ಮಾಸ್ತಿಯವರ ರೂಪದಲ್ಲಿ ಸಹಜವಾಗಿಯೇ ನೆಲೆಯೂರಿ ನಿಂತುಬಿಟ್ಟಿತು.

೧೯೪೪ರಲ್ಲಿ ನಾನು ಮ್ಯಾಟ್ರಿಕ್ (ಈಗಿನ ಎಸ್.ಎಸ್.ಎಲ್.ಸಿ.) ವಿದ್ಯಾರ್ಥಿಯಾಗಿದ್ದಾಗ ಧಾರವಾಡದಲ್ಲಿ ಬೇಂದ್ರೆಯವರ ಐವತ್ತನೆಯ ಹುಟ್ಟಿದಹಬ್ಬದ ಸಮಾರಂಭ. ಮಾಸ್ತಿಯವರು ಅದಕ್ಕೆ ಅಧ್ಯಕ್ಷರಾಗುವರೆಂದು ಕೇಳಿ ರಜೆಗೆ ಊರಿಗೆ ಹೋಗಿದ್ದವನು ಮರಳಿ ಧಾರವಾಡಕ್ಕೆ ಬಂದೆ. ಆಗ ಮಾಸ್ತಿಯವರನ್ನು ಇನ್ನಿಷ್ಟು ಹತ್ತಿರದಿಂದ ನೋಡುವ, ಕೇಳುವ ಸುಸಂಧಿ ಒದಗಿತು. ಅಂದಿನ ಭಾಷಣಗಳಲ್ಲಿ ಮಾಸ್ತಿಯವರು ಬೇಂದ್ರೆಯವರನ್ನು ತಮ್ಮನೆಂದೂ, ಬೇಂದ್ರೆಯವರು ಮಾಸ್ತಿಯವರನ್ನು ಅಣ್ಣನೆಂದೂ ಸಂಬೋಧಿಸಿದ್ದನ್ನು ಕೇಳಿ ಇವರು ನಿಜವಾಗಿಯೂ ಅಣ್ಣ-ತಮ್ಮಂದಿರೇ ಇರಬಹುದೇನೋ ಎಂದು ನನಗೆ ಅನಿಸದೆ ಇರಲಿಲ್ಲ. ಆದರೆ ನೋಡಲು ಅವರಿಬ್ಬರ ಮುಖ, ವೇಷಭೂಷಣ, ಮಾತಿನ ರೀತಿ ತೀರ ಭಿನ್ನವಾಗಿದ್ದವು.

ಮಾಸ್ತಿಯವರನ್ನು ಹೀಗೆ ಎರಡನೆಯ ಸಲ ಧಾರವಾಡದ ಸಭೆಯಲ್ಲಿ ಬೇಂದ್ರೆಯವರ ಜೊತೆಗೆ ಕಂಡೆ.

೧೯೪೭ರಲ್ಲಿ ನಾನು ಕರ್ನಾಟಕ ಕಾಲೇಜಿನಲ್ಲಿ ಇಂಟರಮೀಡಿಯೇಟ್ ಕ್ಲಾಸಿನಲ್ಲಿದ್ದಾಗ ಕರ್ನಾಟಕ ಸಂಘ 'ಶ್ರೀನಿವಾಸರ ಸಣ್ಣ ಕತೆಗಳು' ಬಗ್ಗೆ ಪ್ರಬಂಧ ಸ್ಪರ್ಧೆಯನ್ನೇರ್ಪಡಿಸಿದ್ದಿತು. ಆ ನಿಮಿತ್ತವಾಗಿ ಅದುವರೆಗೆ ಪ್ರಕಟವಾದ ಮಾಸ್ತಿಯವರ ಸಣ್ಣ ಕತೆಗಳನ್ನೆಲ್ಲ ಓದುವ ಭಾಗ್ಯ ನನ್ನದಾಯಿತು. ಸ್ಪರ್ಧೆಯಲ್ಲಿ ಐವತ್ತು ರೂ.ಗಳ ಬಹುಮಾನವೂ ದೊರೆಯಿತು. ಆ ಕಾಲಕ್ಕೆ ಅದೇನೂ ಸಣ್ಣ ಮೊತ್ತವಾಗಿರಲಿಲ್ಲ. ಆ ಹೊತ್ತಿಗೆ ನಾನು ಆಗಲೆ ಕವಿತೆ ಬರೆಯಲು ಪ್ರಾರಂಭಿಸಿದ್ದೆ. ಒಂದೆರಡು ಕವಿತೆಗಳು ಬಸವನಾಳರ 'ಜಯಕರ್ನಾಟಕ'ದಲ್ಲಿಯೂ, ಬೆಟಗೇರಿಯವರ 'ಜಯಂತಿ'ಯಲ್ಲಿಯೂ ಪ್ರಕಟವಾಗಿದ್ದವು. ನೋಡೋಣವೆಂದು ಒಂದು ಕವಿತೆಯನ್ನು ಮಾಸ್ತಿಯವರ 'ಜೀವನ'ಕ್ಕೂ ಕಳಿಸಿಕೊಟ್ಟೆ. ಅದು ಪ್ರಕಟವಾಗುತ್ತದೆಂಬ ಭರವಸೆಯೇ ನನಗಿರಲಿಲ್ಲವಾದ್ದರಿಂದ ಆ ಬಗ್ಗೆ ನಾನು ಯಾರಿಗೂ ಹೇಳಿರಲಿಲ್ಲ. ಮುಂದಿನ ತಿಂಗಳು ನನ್ನ ಗೆಳೆಯರೊಬ್ಬರು 'ಜೀವನ'ದಲ್ಲಿ ನನ್ನ ಕವಿತೆಯನ್ನು ನೋಡಿದ್ದಾಗಿ ಬಂದು ಹೇಳಿದರು. ನನಗೆ ನಂಬಲು ಸಾಧ್ಯವಾಗಲಿಲ್ಲ, ವಾಚನಾಲಯಕ್ಕೆ ಧಾವಿಸಿದೆ. ಹೌದು, ನನ್ನ 'ಕಾಡಮಲ್ಲಿಗೆ' ಕವಿತೆ 'ಜೀವನ'ದಲ್ಲಿ ಪ್ರಕಟವಾಗಿತ್ತು. ಆಗ ಕಾಗದದ ಮುಗ್ಗಟ್ಟಿನಿಂದಾಗಿ 'ಜೀವನ' ಖಾಕಿಯ ಬಣ್ಣದ ಕಾಗದದಲ್ಲಿ ಅಚ್ಚಾಗುತ್ತಿತ್ತು. ಆದರೂ ನನ್ನ ಕವಿತೆ ಪ್ರಕಟವಾದ ಆ ಸಂಚಿಕೆ ನನಗೆ ಅತ್ಯಂತ ಸುಂದರವಾಗಿಯೇ ಕಂಡಿತು. ಮುಂದೆ ಸುಮಾರು ಹತ್ತು ವರ್ಷಗಳವರೆಗೂ ನನ್ನ

ಕವಿತೆಗಳು 'ಜೀವನ'ದಲ್ಲಿ ಆಗೀಗ ಪ್ರಕಟವಾಗುತ್ತಲೇ ಬಂದವು. ಜನಪದ ಕಾವ್ಯದ ಸಂಗ್ರಹದಲ್ಲಿ ತೊಡಗಿದ್ದ ನನ್ನ ಆತ್ಮೀಯ ಗೆಳೆಯ ಶಿವೇಶ್ವರ ದೊಡ್ಡಮನಿಯವರ 'ಜನಪದ ಸಾಹಿತ್ಯದಲ್ಲಿ ಜೀವನ ಸೌಂದರ್ಯ' ಎಂಬ ಲೇಖನ ಮಾಲೆಗೂ 'ಜೀವನ' ಸಾಕಷ್ಟು ಇಂಬುಗೊಟ್ಟಿತು. ಹೀಗೆ ನಮ್ಮಿಬ್ಬರಿಗೂ 'ಜೀವನ'ದಿಂದ ದೊರೆತ ಪ್ರೋತ್ಸಾಹ ಮರೆಯಲಾರದಂತಹದು.

೧೯೪೪ರಲ್ಲಿ ನಾನು ಜ್ಯೂ.ಬಿ.ಎ.ದಲ್ಲಿದ್ದಾಗ ಹಿರೇಮಲ್ಲೂರು ಈಶ್ವರನ್ ಅವರು ಹುಬ್ಬಳ್ಳಿಯ ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಒಂದೆರಡು ವರ್ಷಗಳಾಗಿದ್ದವು. ಧಾರವಾಡದಲ್ಲಿ ಅವರು ಪ್ರಾರಂಭಿಸಿದ 'ಕಲ್ಪನಾ ಗ್ರಂಥಮಾಲೆ'ಯ ಆಫೀಸಿನ ಕೋಣೆಯನ್ನೇ ನನ್ನ ವಾಸಕ್ಕಾಗಿ ಕೊಡಮಾಡಿದ್ದರು. ಅವರ ಸ್ನೇಹ ನನಗೆ ಆಗ ಒದಗಿಬಂದದ್ದು ಒಂದು ಯೋಗಾಯೋಗ. ಅದೇ ವರ್ಷ ಅವರು ತಮ್ಮ ಕಾಲೇಜಿನ ಕರ್ನಾಟಕ ಸಂಘದ ಉದ್ಘಾಟನೆಗೆ ಮಾಸ್ತಿಯವರನ್ನು ಆತಿಥಿಗಳಾಗಿ ಬರಮಾಡಿಕೊಂಡರು. ಕಾಲೇಜಿನ ಹಾಸ್ಟೆಲ್ಲಿನಲ್ಲಿಯ ಒಂದು ವಿಶಾಲವಾದ ಕೋಣೆಯಲ್ಲಿಯೇ ಈಶ್ವರನ್ ವಾಸವಾಗಿದ್ದರು. ಅವರು ಮೊದಲಿನಿಂದಲೂ ಒಳ್ಳೇ ಶಿಸ್ತುಗಾರರು. ಮಾಸ್ತಿಯವರನ್ನು ಅದೇ ಕೋಣೆಯಲ್ಲಿ ಇಳಿಸಿಕೊಂಡಿದ್ದರೆಂದು ನೆನಪು. ಅಲ್ಲಿ ಮಾಸ್ತಿಯವರಿಗೆ ಈಶ್ವರನ್, "He is our budding poet" ಎಂದು ನನ್ನನ್ನು ಪರಿಚಯ ಮಾಡಿಕೊಟ್ಟರು. ''ಈಶ್ವರನ್, alredy bloomed" ಎಂದುಬಿಟ್ಟರು ಮಾಸ್ತಿ. ನಾನು ಅವಾಕ್ಕಾದೆ. ನನ್ನ ಕೆಲವು ಕವಿತೆಗಳನ್ನು 'ಜೀವನ'ದಲ್ಲಿ ಪ್ರಕಟಿಸಿದ್ದ ಅವರು ಅವುಗಳನ್ನು ಇಷ್ಟು ಮೆಚ್ಚಿಕೊಂಡಿದ್ದಾರೆಂದು ನಾನು ನಿಜಕ್ಕೂ ಭಾವಿಸಿರಲಿಲ್ಲ. ಅಷ್ಟೇ ಅಲ್ಲ, ಅವರು ನನ್ನನ್ನು ಹತ್ತಿರದ ಕುರ್ಚಿಯಲ್ಲಿ ಕುಳ್ಳಿರಿಸಿಕೊಂಡು 'ಚನ್ನವೀರಪ್ಪ ತುಂಬಾ ಚೆನ್ನಾಗಿ ಬರೀತಾನೆ' ಎಂದು ಮೈದಡವುತ್ತ 'ತರುಣರು ಮುಂದೆ ಬರಬೇಕು. ಕನ್ನಡದ ಕೆಲಸ ಹತ್ತುಪಟ್ಟು ನೂರುಪಟ್ಟು ಬೆಳೆಯಬೇಕು' ಎಂದು ಮುಖ ಹಿಗ್ಗಲಿಸಿ ಹೇಳುತ್ತ ಸೌಮ್ಯವಾಗಿ ನಗೆಯರಳಿಸಿದರು. ಅಂಥ ನಿರ್ಮಲವಾದ ನಗೆಯನ್ನು ನಾನು ಅದುವರೆಗೆ ಎಲ್ಲೂ ಕಂಡಿರಲಿಲ್ಲವೇನೊ ಎನಿಸಿತು. ಮೃದುವಾದ ಸ್ಪರ್ಶದಿಂದ ಅವರು ನನ್ನನ್ನು ತಮ್ಮ ಹೃದಯದಲ್ಲಿಯೇ ಹುದುಗಿಸಿಕೊಳ್ಳುತ್ತಾರ್ತೇನೋ ಎಂಬ ಭಾವನೆಯನ್ನು ತಂದುಕೊಟ್ಟರು. ಕೃತಜ್ಞತಾ ಭಾವದಿಂದ ನಮ್ರನಾಗಿ ಹೋಗಿದ್ದ ನನಗೆ ಆಗ ಏನು ಮಾತನಾಡಬೇಕೊ ಹೊಳೆಯಲೇ ಇಲ್ಲ. ಅದು ನನ್ನ ಜೀವನದಲ್ಲಿಯ ಒಂದು ಚಿರಸ್ಮರಣೀಯವಾದ ಅನುಭವ. ಈಶ್ವರನ್ ಅವರ ಅಂದಿನ ಸಭೆ ಹುಬ್ಬಳ್ಳಿಯ ನಗರ ಸಭಾಭವನದಲ್ಲಿ ಪ್ರೊ. ಮಾಳವಾಡರ ಅಧ್ಯಕ್ಷತೆಯಲ್ಲಿ ನಡೆಯಿತು. ಮಾಸ್ತಿಯವರ ಮಾತಿನ ಮೋಡಿಯಲ್ಲಿ ಸಭಿಕರು ತಮ್ಮನ್ನೇ ತಾವು ಮರೆತುಬಿಟ್ಟಿದ್ದರು. ಆ ಸಂದರ್ಭದಲ್ಲಿ ಧಾರವಾಡದಲ್ಲಿಯೂ ಒಂದೆರಡು ಕಡೆ ಅವರ ಭಾಷಣಗಳಾದವು. ಕನ್ನಡದ ಬಗ್ಗೆ ಕಳಕಳಿಯಂತೂ ಸರಿಯೆ, ನಮ್ಮ ಸಾಹಿತ್ಯದ ಪರಂಪರೆಯನ್ನು ಅರ್ಥಮಾಡಿಕೊಳ್ಳಬೇಕಾದ ರೀತಿ, ನಮ್ಮ ಜನದ, ನಾಡಿನ ಸಂಸ್ಕೃತಿಯ ತಿರುಳನ್ನು ಎತ್ತಿ ತೋರಿಸುವ ಬಗೆ, ಜೀವನದಲ್ಲಿ ಅನುಭವ,

ಅನುಕಂಪಗಳಿಗೆ ಅವರಿಗಿದ್ದ ವಿಶೇಷ ಒಲವು, ಇವೆಲ್ಲವೂ ನಯವಿನಯದ ಅವರ ತಿಳಿಯಾದ ಮಾತಿನಲ್ಲಿ ತಳತಳಿಸುತ್ತಿದ್ದವು. 'ನಾಲಗೆ ಚಿಗುರುತ್ತಿರೆ ಸವಿದುದೊಂದು ಗಿಳಿ ತನಿವಣ್ಣಂ' ಎಂದು ಹರಿಹರ ಕವಿಯ ಬಣ್ಣನೆಯನ್ನು ಓದಿದ್ದೆ. ಆದರೆ ಮಾಸ್ತಿಯವರ ಮಾತುಗಳನ್ನು ಕೇಳುತ್ತಿದ್ದಂತೆ ನಮ್ಮ ಕಿವಿಗಳೂ ಚಿಗುರತೊಡಗುವುದಲ್ಲದೆ ಮನಸ್ಸು ಮಲ್ಲಿಗೆಯಂತೆ ಅರಳಿ ಮಾತಿಗೆ ಮೀರಿದ ಸುಖವನ್ನನುಭವಿಸಿದಂತಾಗುತ್ತದೆ. 'ಪರಮಾತ್ಮನುಂಟು ಸುಖದೊಳು' ಎಂದು 'ತೆಂಗಾಳಿ'ಯಲ್ಲಿ ಅವರೇ ಹಾಡಿದ್ದಾರೆ.

ಇಲ್ಲಿ ಕಾರ್ಯಕ್ರಮಗಳನ್ನೆಲ್ಲ ಮುಗಿಸಿ ಇನ್ನೇನು ಬೆಂಗಳೂರಿಗೆ ಹಿಂದಿರುಗಬೇಕೆನ್ನುವಷ್ಟರಲ್ಲಿ ಅವರಿಗೆ ಜ್ವರ ಕಾಣಿಸಿಕೊಂಡಿತು. ಕಾಲಿಗೆ ಮುಳ್ಳು ಚುಚ್ಚಿದ್ದೊ, ಚಪ್ಪಲಿ ಒತ್ತಿದ್ದೊ ನೆಪವಾಗಿ ಕಾಲಿನ ಬೆರಳು ಬಾತುಕೊಂಡಿತ್ತು. ಅನಿವಾರ್ಯವಾಗಿ ಅವರು ತಮ್ಮ ಪ್ರವಾಸವನ್ನು ರದ್ದು ಪಡಿಸಿ ಕೆಲದಿನ ಇಲ್ಲಿಯೇ ಉಳಿಯಬೇಕಾಯಿತು. ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಎಸ್. ಆರ್. ಮಳಗಿಯವರ ಮನೆಯಲ್ಲಿಯೇ ಡಾ. ಕಮಲಾಪೂರ ಅವರಿಂದ ಅವರಿಗೆ ಶುಶ್ರೂಷೆ ಸುರುವಾಯಿತು. ಪ್ರೊ. ಮಾಳವಾಡರು, ಎನ್ಕೆ ದೀಕ್ಷಿತ ವಕೀಲರು ಹಾಗೂ ಊರೊಳಗಿನ ಸಾಹಿತಿಗಳು ದಿನವೂ ಬಂದು ಅವರ ಆರೋಗ್ಯದ ಬಗ್ಗೆ ವಿಚಾರಿಸಿಕೊಂಡು ಹೋಗುತ್ತಿದ್ದರು. 'ಅತಿಥಿಗಳಾಗಿ ಧಾರವಾಡಕ್ಕೆ ಬಂದಾಗ ಹೀಗೆ ಅಸ್ವಸ್ಥರಾಗಿ ಮಲಗಬೇಕಾಯಿತಲ್ಲ' ಎಂದು ಎಲ್ಲರ ಮನಸ್ಸಿನಲ್ಲಿಯೂ ಕೊರೆಯತೊಡಗಿತು. ಆಗ ದಿನಕ್ಕೆ ಮೂರು ಹೊತ್ತು ಅವರಿಗೆ ಔಷಧಿ ಕುಡಿಸುವ ಕೆಲಸ ನನ್ನ ಪಾಲಿಗೆ ಬಂದಿತ್ತು. ಇದರಿಂದ ನಾನು ಅವರಿಗೆ ಇನ್ನಷ್ಟು ಸಮೀಪದವನಾಗಿಬಿಟ್ಟೆ. ಇಷ್ಟು ದಿನ ಗೆಲುವಿನಿಂದ ಕೂಡಿದ ಅವರ ಮುಖದಿಂದ ಸರಸವಾದ ವೀಣಾವಾಣಿಯನ್ನು ಕೇಳಿದ ನಾನು ಈಗ ಅವರು ಆಗಾಗ 'ಅಪ್ಪಾ ಶ್ರೀನಿವಾಸ' ಎಂದು ಮೆಲ್ಲಗೆ ನರಳುವದನ್ನು ಕೇಳಿದಾಗೆಲ್ಲ ನನ್ನ ಜೀವನವೇ ಹಿಡಿದಂತಾಗುತ್ತಿತ್ತು. ಮುಂದೆ ಒಂದು ವಾರದಲ್ಲಿ ಬೆಂಗಳೂರಿನಿಂದ ಶ್ರೀಮತಿ ಪಂಕಜಮ್ಮನವರು ಬಂದರು. ಮಾಸ್ತಿಯವರ ಶುಶ್ರೂಷೆಯನ್ನು ಈಗ ಪೂರ್ತಿ ಅವರೇ ವಹಿಸಿಕೊಂಡರು. 'ನನ್ನಿಂದ ಇವರಿಗೆಲ್ಲ ಎಷ್ಟು ತೊಂದರೆಯಾಯಿತಲ್ಲ' ಎಂದು ಒಳಗೊಳಗೇ ಮಿಡುಕುತ್ತಿದ್ದ ಮಾಸ್ತಿಯವರಿಗೂ ಒಂದಿಷ್ಟು ನೆಮ್ಮದಿಯೆನಿಸಿತು. ಅವರು ಪಂಕಜಮ್ಮನವರಿಗೆ ಹೇಳಿದರು, 'ಚೆನ್ನವೀರಪ್ಪ ನನಗೆ ದಿನವೂ ಅಮೃತ ಕುಡಿಸುತ್ತಿದ್ದ.' ನಾಲ್ಕು ದಿನ ಔಷಧಿ ಕುಡಿಸಿದ ನನ್ನ ಕಿಂಚಿತ್ ಸೇವೆಯನ್ನು ಮಾಸ್ತಿಯವರು ಎಷ್ಟು ದೊಡ್ಡದಾಗಿ ಭಾವಿಸಿಬಿಟ್ಟರಲ್ಲ ಎಂದು ನನಗೆ ಆಶ್ಚರ್ಯವಾಯಿತು. ಅವರ ಹೃದಯವೈಶಾಲ್ಯಕ್ಕೆ ಅಂತಃಕರಣದ ಅಮೂಲ್ಯ ನಿಧಿಗೆ ನಾನು ಮಾರುವೋದೆ.

ಮಾಸ್ತಿಯವರು ಗುಣಮುಖರಾಗಿ ಬೆಂಗಳೂರಿಗೆ ಮರಳಿದ ಮೇಲೆ ಅಷ್ಟು ದಿನ ಉಳಿದಿದ್ದ 'ಜೀವನ' ಪತ್ರಿಕೆಯ ಕೆಲಸದಲ್ಲಿ ಮತ್ತೆ ಯಥಾ ಪ್ರಕಾರ ಮುಳುಗಿದರು. ನನ್ನ ಕವಿತೆಗಳ ಬಗ್ಗೆ ಅವರು ವ್ಯಕ್ತಪಡಿಸಿದ್ದ ಮೆಚ್ಚುಗೆಯಿಂದ ಉತ್ತೇಜಿತನಾಗಿ ನನ್ನ ಕವನಗಳನ್ನು

ಸಂಗ್ರಹರೂಪದಲ್ಲಿ ಪ್ರಕಟಿಸಲು ಯೋಚಿಸಿದಾಗ ಹಿರೇಮಲ್ಲೂರು ಈಶ್ವರನ್ ಅವರು ತಮ್ಮ ಕಲ್ಪನಾ ಗ್ರಂಥಮಾಲೆಯಲ್ಲಿ ಅದನ್ನು ಪ್ರಕಟಿಸಲು ಮುಂದಾದರು. ಆಗ ನಾನು ಮಾಸ್ತಿಯವರಿಗೆ ಈ ವಿಷಯವನ್ನು ತಿಳಿಸಿ ಮತ್ತು ಅವರ ಆರೋಗ್ಯವನ್ನು ವಿಚಾರಿಸಿ ಕಾಗದ ಬರೆದೆ. ಅವರು ತಮ್ಮ ಕೆಲಸದಲ್ಲಿ ಬಿಡುವು ಮಾಡಿಕೊಂಡು, ದಿ. ೨೦–೫–೧೯೪೯ರಂದು ಅದಕ್ಕೆ ಉತ್ತರ ಬರೆದರು; ದ್ರಾಕ್ಷಿಯ ಬಳ್ಳಿಯಂತಿರುವ ಅವರ ಹಸ್ತಾಕ್ಷರಗಳನ್ನು ಮೊಟ್ಟ ಮೊದಲು ನೋಡಿದೆ.

ಪ್ರಿಯ ಮಿತ್ರರೆ,

ಕಳೆದ ತಿಂಗಳ ನಿಮ್ಮ ಕಾಗದಕ್ಕೆ ಈಗ ಉತ್ತರ ಬರೆಯುತ್ತಿದ್ದೇನೆ. ಸಾವಕಾಶ ಮಾಡಿರುವುದನ್ನು ದಯವಿಟ್ಟು ಕ್ಷಮಿಸಿರಿ.

ಈಗ ನಾನು ಎಂದಿನಂತೆ ಆರೋಗ್ಯವಾಗಿದ್ದೇನೆ. ಅಲ್ಲಿಂದ ಬಂದವನು ಅಲ್ಲಿ ನನ್ನನ್ನು ನೋಡಿಕೊಂಡ ಎಲ್ಲ ಗೆಳೆಯರಿಗೂ ಕಾಗದ ಬರೆಯಲಾಗಲಿಲ್ಲ, ನಾಲ್ಕು ಕಾಗದ ಬರೆದು ಆ ಮಿತ್ರರನ್ನು ಎಲ್ಲರಿಗೂ ತಿಳಿಸಲು ಬೇಡಿದೆ.

ನಿಮ್ಮ ಕವನಸಂಗ್ರಹ ಅಚ್ಚಾಗುತ್ತಿದೆಯೆನ್ನುವುದು ಸಂತೋಷ. ನೀವು ಸಹಜವಾಗಿ ಬರೆಯುವುದರಿಂದ ಬರಹ ಚೆನ್ನಾಗುತ್ತದೆ. ಕಾವ್ಯ ಚೆನ್ನವಾಗುವುದಕ್ಕೆ ಇದು ಮೂಲ ಕಾರಣ. ಈ ಗುಣವನ್ನು ಕಾದುಕೊಂಡರೆ ಉಳಿದೆಲ್ಲ ಗುಣ ಜೊತೆಗೂಡಿ ಬರುತ್ತವೆ.

ನೀವು ಜೀವನ ಪತ್ರಿಕೆಗೆ ಕೆಲವು ಚಂದಾದಾರರನ್ನು ಸೇರಿಸಿಕೊಡಿರಿ. ಲೇಖಕರಿಗೆ ಕಾಸು ಕೊಡಬೇಕೆಂದು ಮೊದಲು ಮಾಡಿದ ಪತ್ರಿಕೆ ಅದೊಂದು ಗುರಿಯನ್ನು ತೀರಾ ಸಾಧಿಸದೆ ಸೋತಿದೆ. ನಿಮ್ಮಂಥ ಮಿತ್ರರು ಜನರನ್ನು ಬೇಡಿ, ಕಾಡಿ ಅದರ ಪ್ರಸಾರವನ್ನು ಸಾಧಿಸಬೇಕು. ಹಾಗಿಲ್ಲದ ನಾನು ಅದರ ಗುರಿಯನ್ನು ಮುಟ್ಟಲಾರೆ.

ಪತ್ರಿಕೆಯನ್ನು ನೋಡುತ್ತಿದ್ದೀರಾ? ಅದು ನಿಮಗೆ ಒಪ್ಪಿಗೆಯೆಂದು ತಿಳಿಯುತ್ತೇನೆ. ಶ್ರೀ ಶಿವೇಶ್ವರರು ಮುಂತಾಗಿ ಎಲ್ಲ ಗೆಳೆಯರಿಗೆ ನನ್ನ ನಮಸ್ಕಾರ ತಿಳಿಸಿರಿ.

ಇಂತಿ ನಿಮ್ಮ

ಮಾಸ್ತಿ ವೆಂಕಟೇಶ ಅಯ್ಯಂಗಾರ

ಲೇಖಕರಿಗೆ ಗೌರವಧನ ಕೊಡಲು ಸಾಧ್ಯವಾಗದೆ ಇದ್ದುದಕ್ಕೆ ಅವರ ಮನಸ್ಸು ತುಂಬ ಚಡಪಡಿಸುತ್ತಿತ್ತು. ಗೆ. ಶಿವೇಶ್ವರ ದೊಡ್ಡಮನಿ ವಿಷಮ ಜ್ವರದಿಂದ ಹಾಸಿಗೆ ಹಿಡಿದಾಗ 'ಜೀವನ'ದಲ್ಲಿ ಅವರು ಬರೆಯುತ್ತಿದ್ದ ಲೇಖನಮಾಲೆ ನಿಂತುಹೋಗಿತ್ತು. ಅವರ ಅನಾರೋಗ್ಯದ ಬಗ್ಗೆ ತಿಳಿದ ಮೇಲೆ ಮಾಸ್ತಿಯವರು ಸ್ವಲ್ಪ ಹಣವನ್ನು ಕಳಿಸಿಕೊಟ್ಟರು. ಅಷ್ಟರಲ್ಲಿ ಶಿವೇಶ್ವರ ತೀರಿಕೊಂಡಿದ್ದರಿಂದ ಆ ಹಣ ವಾಪಸ್ಸಾಯಿತು. ''ಎಷ್ಟು ಒಳ್ಳೆಯ ಜೀವ, ಎಷ್ಟು ಎಳೆತನದಲ್ಲಿ ಹೋಗಿಬಿಟ್ಟರು'' ಎಂದು ಮಾಸ್ತಿಯವರು ಮರುಗಿದರು.

* * *

೧೯೫೨ರಲ್ಲಿ ನನ್ನ ಮದುವೆಯಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ(ಆಗ ವ್ಯಾಸಂಗ ವಿಸ್ತರಣ ಮತ್ತು ಪ್ರಕಟಣ ವಿಭಾಗ) ಕೆಲಸಕ್ಕೆ ಸೇರಿದ್ದು ಮಾಸ್ತಿಯವರಿಗೆ ಸಂತೋಷವನ್ನುಂಟು ಮಾಡಿತ್ತು. ನಾನು ಬೆಂಗಳೂರಿಗೆ ಹೋದಾಗ ಎಷ್ಟೋ ಸಲ ಅವರ ಮನೆಗೆ ಹೋಗಿ ಅವರನ್ನು ಭೇಟಿಯಾಗಿ ಬರುತ್ತಿದ್ದೆ. ಪ್ರತಿಸಲವೂ ಅದೇ ಪ್ರೀತಿಯಿಂದ ಎಡಗೈಯನ್ನು ನನ್ನ ಬೆನ್ನ ಮೇಲೆ ಇರಿಸುತ್ತ, ನಸುಬಾಗಿ ಮನೆಯವರೂ ಮಕ್ಕಳೂ ಕ್ಷೇಮವೇ, ಮಾವನವರು ಸೌಖ್ಯವೇ ಎಂದು ವಿಚಾರಿಸದೆ ಇರುವುದಿಲ್ಲ. ನನ್ನ ಮಾವಂದಿರಾದ ಸಿದ್ಧಬಸಪ್ಪ ಗಿಡ್ನವರ (ಕಂದಾಯ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದರು) ಪ್ರಾರಂಭದ ಸಂಚಿಕೆಯಿಂದ ಮಾಸ್ತಿಯವರು ಬೇರೆಯವರಿಗೆ ಅದನ್ನು ವಹಿಸಿಕೊಡುವವರೆಗೂ 'ಜೀವನ'ಕ್ಕೆ ಚಂದಾದಾರರಾಗಿದ್ದರು. ಆದ್ದರಿಂದ ಅವರ ಬಗ್ಗೆ ಮಾಸ್ತಿಯವರಿಗೆ ಬಹಳ ಅಭಿಮಾನ.

ಮನೆಗೆ ಹೋದಾಗ ಕಾಫಿಯ ಆತಿಥ್ಯವಂತೂ ಸರಿಯೆ. ಬರಿಗೈಯಿಂದ ಅವರು ಹಾಗೆಯೇ ಕಳಿಸಿದವರಲ್ಲ. ಈಚೆಗೆ ಪ್ರಕಟವಾದ ತಮ್ಮ ಯಾವುದಾದರೊಂದು ಪುಸ್ತಕದ ಪ್ರತಿಯನ್ನಾದರೂ ಕೊಡುತ್ತಾರೆ. ಈ ವಯಸ್ಸಿನಲ್ಲಿಯೂ ಕನ್ನಡಕದ ಅಗತ್ಯವಿಲ್ಲದೆ ಆ ಪುಸ್ತಕದಲ್ಲಿ, 'ಪ್ರಿಯ ಮಿತ್ರರು ಶ್ರೀ ಚನ್ನವೀರ ಕಣವಿ ಇವರಿಗೆ ಪ್ರೀತಿಯಿಂದ, ಶ್ರೀನಿವಾಸ' ಎಂದು ಬರೆಯುವದಕ್ಕೆ ಮರೆಯುವುದಿಲ್ಲ. ಈಚೆಗೆ ೧೯೭೮ರಲ್ಲಿ ಪ್ರಕಟವಾದ 'ಕಾಳಿದಾಸ' ನಾಟಕದ ಪ್ರತಿಯನ್ನು ನೀಡಿದರು. ೧೯೮೦ರಲ್ಲಿ ಹೋದಾಗ 'ಸಣ್ಣ ಕಥೆಗಳು ೧೪' ಬಂದಿತ್ತು. ಈ ಕಥಾಸಂಕಲನವನ್ನು ಕೊಡುವಾಗ ಶ್ರೀಮತಿ ಕಣವಿ ಕತೆಗಾರ್ತಿಯೆಂಬುದನ್ನು ಜ್ಞಾಪಿಸಿಕೊಂಡು ಅವರ ಹೆಸರನ್ನೂ ಅದರಲ್ಲಿ ಸೇರಿಸಿ ಬರೆದುಕೊಟ್ಟರು.

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ. ಸಿ. ಪಾವಟೆಯವರು ೧೯೫೭ರಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವಕ್ಕೆ ಮಾಸ್ತಿಯವರನ್ನೂ ಹಳಕಟ್ಟಿಯವರನ್ನೂ ಬರಮಾಡಿಕೊಂಡು ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದಾಗ ನಮಗೆಲ್ಲ ಹಿಡಿಸಲಾರದಷ್ಟು ಹಿಗ್ಗು. ಆ ವರ್ಷ ಕರ್ನಾಟಕ ರಾಜ್ಯೋದಯದ ಹರ್ಷ. "This is a historic occasion. The dreams of the people of this part of the country to have all Kannada speaking people under one administration have been realised by the Grace of God" ಎಂದೇ ಡಾ. ಪಾವಟೆಯವರು ತಮ್ಮ ಸ್ವಾಗತ ಭಾಷಣವನ್ನು ಪ್ರಾರಂಭಿಸಿದ್ದರು. ವಿಶ್ವವಿದ್ಯಾಲಯ ಸ್ಥಾಪನೆಗೊಂಡು ಏಳು ವರ್ಷಗಳಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಪ್ರಾರಂಭವಾದದ್ದೂ ಅದೇ ವರುಷ. ಆ ಪರ್ವಕಾಲದಲ್ಲಿ ಘಟಿಕೋತ್ಸವ ಭಾಷಣ ಮಾಡುವ ಗೌರವ ಮಾಸ್ತಿಯವರಿಗೆ ದೊರೆತಿತ್ತು. ಮಾಸ್ತಿಯವರು ಅದನ್ನು ಕನ್ನಡದಲ್ಲಿಯೇ ನೆರವೇರಿಸಿದಾಗಲಂತೂ ನಮ್ಮ ಸಂತೋಷಕ್ಕೆ ಪೂರವೇ ಬಂದಿತ್ತು. ''ಇದುವರೆಗೆ ಬರಿಯ ಶ್ರೀಮಾನ್ ಎಂದು ಕರೆದುಕೊಂಡು ಇನ್ನು ಮುಂದೆ ಡಾಕ್ಟರ್ ಶ್ರೀಮಾನ್

ಕರೆದುಕೊಳ್ಳಬಹುದಾಯಿತು ಎಂಬ ಭಾವನೆಯಿಂದ ನನಗೇನು ಬಹಳ ಸಂತೋಷವಾಗಿದೆಯೆಂದು ಹೇಳಲಾರೆ. ಆದರೆ ನನ್ನ ತಾಯಿನಾಡು ನನ್ನ ಭಾಷಾಸೇವೆಯನ್ನು ಎಷ್ಟುಮಟ್ಟಿಗಾದರೂ ಮೆಚ್ಚಿಕೊಂಡಿತು ಎಂಬ ಭಾವನೆಯಿಂದ ನನ್ನ ಸಂತೋಷ ತುಂಬಿದೆ. ನಮ್ಮ ವಿಶ್ವವಿದ್ಯಾಲಯಗಳು ಇಂಥ ಮೆಚ್ಚಿಕೆ ತೋರಿಸುವಲ್ಲಿ ನಮ್ಮ ಜನತೆಯ ಅಧಿಕೃತ ಪ್ರತಿನಿಧಿಗಳಾಗುತ್ತವೆ'' ಎಂದು ಸಂತೋಷಕ್ಕೆ ಕಾರಣವನ್ನು ನಿವೇದಿಸಿದ ಮಾಸ್ತಿಯವರು ''ಕನ್ನಡದ ಜನತೆಯ ಜೀವನದಲ್ಲಿ ಕನ್ನಡದ ಸ್ಥಾನ ಯಾವುದಾಗಿರಬೇಕು? ಕೇಳಬೇಕೆ? ಇಂಗ್ಲೀಷ್ ಜನರ ಜೀವನದಲ್ಲಿ ಇಂಗ್ಲಿಷ್ ಭಾಷೆಗೆ ಯಾವುದೊ, ಫ್ರೆಂಚ್ ಜನರ ಜೀವನದಲ್ಲಿ ಫ್ರೆಂಚ್ ಭಾಷೆಯ ಸ್ಥಾನ ಯಾವುದೊ ಆ ಸ್ಥಾನ ಕನ್ನಡ ಜನರ ಜೀವನದಲ್ಲಿ ಕನ್ನಡ ಭಾಷೆಗೆ ಇರಬೇಕು, ಈಗ ನಾವು ಈ ಸ್ಥಾನದ ಎಷ್ಟು ಹತ್ತಿರಕ್ಕೆ ಸಾರಿದ್ದೇವೆ?'' ಎಂದು ಪ್ರಶ್ನಿಸಿ ಅದನ್ನು ವಿಶ್ಲೇಷಿಸಿದರು. ಇಪ್ಪತ್ತೆರಡು ಪುಟಗಳ ಅವರ ಭಾಷಣ ಯಾರಿಗೂ ಬೇಸರವುಂಟುಮಾಡಲಿಲ್ಲ . ಮಾತನಾಡಿದ ಹಾಗೆಯೆ ಅವರು ಅದನ್ನು ಓದಿದರು. ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಘಟಿಕೋತ್ಸವ ಭಾಷಣ ಕನ್ನಡದಲ್ಲಿ ನಡೆದದ್ದು ಅದೇ ಮೊದಲು ಎಂದು ತೋರುತ್ತದೆ.

ಮುಂದೆ ಹತ್ತು ವರುಷಗಳ ನಂತರ ೧೯೬೬ರಲ್ಲಿ ಕುವೆಂಪು ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದ ಸಂದರ್ಭದಲ್ಲಿ ಪದವೀದಾನ ಸಮಾರಂಭದ ಪ್ರತಿಯೊಂದು ಕಾರ್ಯಕ್ರಮವೂ ಕನ್ನಡದಲ್ಲಿಯೇ ನಡೆಯಿತು. (ಹಾಗೆ ನಡೆಯಬೇಕೆಂದು ಕುವೆಂಪು ಕರಾರು ಹಾಕಿದ್ದರು.) ಇಂದಿಗೂ ಅದೇ ಸತ್ ಸಂಪ್ರದಾಯ ಮುಂದುವರಿದಿದೆ. ಈ ದಿಸೆಯಲ್ಲಿಯೂ ಕರ್ನಾಟಕ ವಿಶ್ವದ್ಯಾಲಯವೇ ಪ್ರಥಮವೆನಿಸಿದ್ದು ವೈಯಕ್ತಿಕವಾಗಿ ನನಗೆ ಹೆಮ್ಮೆಯ ಸಂಗತಿ. ೧೯೫೬ರಲ್ಲಿ ಮಾಸ್ತಿಯವರು ಕನ್ನಡದಲ್ಲಿ ಘಟಿಕೋತ್ಸವ ಭಾಷಣ ಮಾಡಿದ್ದೇ ಇದಕ್ಕೆ ನಾಂದಿಯಾಯಿತೆಂದರೆ ತಪ್ಪಾಗದು.

ಮಾಸ್ತಿಯವರು ಮತ್ತೆ ಧಾರವಾಡಕ್ಕೆ ಬಂದದ್ದು ಹದಿಮೂರು ವರ್ಷಗಳ ತರುವಾಯ, ೧೯೭೦ರಲ್ಲಿ ಕುಟುಂಬ ಯೋಜನೆಯ ಕವಿ ಸಮ್ಮೇಳನಕ್ಕೆ ಅಧ್ಯಕ್ಷರಾಗಿ. ನಾಡಿನ ಮಹತ್ವದ ಕವಿಗಳೆಲ್ಲರೂ ಇದರಲ್ಲಿ ಭಾಗವಹಿಸಿದ್ದರು. ಮಾಸ್ತಿಯವರ ಸಾನ್ನಿಧ್ಯ ಮಹಿಮೆಯಿಂದ ಅದು ಸರಕಾರದ ಪ್ರಚಾರ ಸಭೆಯೆಂಬ ಭಾವನೆ ಎಳ್ಳಷ್ಟೂ ಬರಲಿಲ್ಲ. ಅಲ್ಲದೆ ಅಂದು ಸಭೆಯಲ್ಲಿ ಓದಿದ ಕವಿತೆಗಳು ಕಾವ್ಯಗುಣದಲ್ಲೂ ಮಿಗಿಲಾಗಿದ್ದವು. ಆ ಕಾರ್ಯಕ್ರಮವನ್ನು ತುಂಬ ಗಾಂಭೀರ್ಯದಿಂದ, ಅಷ್ಟೇ ಅಲ್ಲದೆ, ಮಾಸ್ತಿಯವರಿಗೇ ಮೀಸಲಾದ ಸರಸ ವಿನೋದದಿಂದ ಅವರು ನಡೆಸಿಕೊಟ್ಟರಲ್ಲದೆ ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಂತೆ ತಾವೂ ಒಂದು ಒಳ್ಳೆಯ ಪದ್ಯವನ್ನು ಓದಿದರು. ಕವಿತೆ ಓದುವ ನನ್ನ ಸರದಿ ಬಂದಾಗ ಮಾಸ್ತಿಯವರು ನನ್ನನ್ನು ಸಭೆಗೆ ಪರಿಚಯಿಸುತ್ತ ನಾನು ಹಿಂದೆ ಮಗುವಿನ ಬಗ್ಗೆ ಬರೆದ ವಾತ್ಸಲ್ಯ ಗೀತವೊಂದರ ಕೆಲವು ಸಾಲುಗಳನ್ನು ಉದಾಹರಿಸಿ ಸಭಿಕರನ್ನು ನಗೆಗಡಲಿನಲ್ಲಿ ತೇಲಿಸಿದರು. ಎಷ್ಟೋ ವರ್ಷಗಳ ಹಿಂದೆ 'ಜೀವನ'ದಲ್ಲಿ ಪ್ರಕಟವಾಗಿದ್ದ ಆ ಪದ್ಯದ ಸಾಲುಗಳನ್ನು ಅವರು ನೆನಪಿಟ್ಟಿದ್ದು ನನಗೆ ತುಂಬ ಆಶ್ಚರ್ಯವನ್ನುಂಟು ಮಾಡಿತು.

ಮಾಸ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ಸಂದಾಗ ಇಡಿಯ ಕನ್ನಡ ನಾಡೇ ಸಂತೋಷಪಟ್ಟಿತು. ಈ ಪ್ರಶಸ್ತಿ ಅವರಿಗೆ ಎಂದೋ ಸಲ್ಲಬೇಕಾಗಿತ್ತು ಎಂಬ ಭಾವನೆ ಸಾಮಾನ್ಯವಾಗಿ ಎಲ್ಲರಲ್ಲಿಯೂ ಒಡಮೂಡಿದ್ದು ಮಾಸ್ತಿಯವರ ಹಿರಿಮೆಯನ್ನೇ ಎತ್ತಿತೋರಿಸುತ್ತದೆ. ಈ ಸಂದರ್ಭದಲ್ಲಿ ಅ.ಕ. ಕೇಂದ್ರ ಕನ್ನಡ ಕ್ರಿಯಾ ಸಮಿತಿಯು ಧಾರವಾಡದಲ್ಲಿ ಸಭೆಗೂಡಿ ನಾಡಿನ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿತ್ತು. ಆಗ ಕ್ರಿಯಾ ಸಮಿತಿ ತನ್ನ ನಿರ್ಣಯ ತಿಳಿಸಿ ಅವರಿಗೆ ಬರೆದ ಪತ್ರಕ್ಕೆ ೯೪ರ ಆ ವಯಸ್ಸಿನಲ್ಲಿಯೂ ಸ್ವಹಸ್ತಾಕ್ಷರಗಳಲ್ಲಿಯೇ ತಮ್ಮ ಕೃತಜ್ಞತೆಯ ಪತ್ರವನ್ನು ಬರೆದರು.

ಪ್ರಿಯ ಮಿತ್ರರೆ, ನಮಸ್ಕಾರ,

೨೭–೬–೮೪ರ ತಮ್ಮ ಪತ್ರ ಸಕಾಲದಲ್ಲಿ ಮುಟ್ಟಿತು.

ತಮ್ಮ ಮತ್ತು ಕ್ರಿಯಾ ಸಮಿತಿಯ ಅಭಿನಂದನೆಗಾಗಿ ನನ್ನ ಹೃತ್ಪೂರ್ವಕ ವಂದನೆ. ತಾವೂ ತಮ್ಮ ನಗರದ ಹಿರಿಯರೂ ಸದಾಕಾಲ ನನ್ನನ್ನು ಅಕ್ಕರೆಯಿಂದ ನಡೆಸಿಕೊಂಡಿದ್ದೀರಿ. ಹೀಗಿರುವಲ್ಲಿ ಈ ಸಂದರ್ಭದಲ್ಲಿ ನಿಮ್ಮ ನಿರ್ಣಯದ ಅಕ್ಕರೆಯ ಮಾತನ್ನಾಡಿಸುವುದು ಸಹಜವಾಗಿದೆ.

ನಮ್ಮ ಜನರ ಅಕ್ಕರೆ, ದೇವರು ನನಗೆ ಅನುಗ್ರಹಿಸಿರುವ ಭಾಗ್ಯದ ಮುಖ್ಯ ಭಾಗ. ನನ್ನ ವಂದನೆಯ ಮಾತನ್ನು ಮಿತ್ರರಿಗೆಲ್ಲ ತಿಳಿಸೋಣವಾಗಲಿ. ದೇವರು ತಮಗೆಲ್ಲ ಸದಾಕಾಲ ಶುಭವನ್ನು ನೀಡಲಿ.

ನಮಸ್ಕಾರ

ಮಾಸ್ತಿ

ಮರಳಿ :

ಮುತ್ತಿನಂತಹ ಮಾತುಗಳನ್ನು ಬರೆದಿರುವ ತಮ್ಮ ಬರಹದ ಅಕ್ಷರಗಳೂ ಮುತ್ತಿನಂತಿವೆ.

ಮಾಸ್ತಿ

ಪ್ರಗತಿಶೀಲ ಸಾಹಿತ್ಯದ ಆಂದೋಲನದ ಕಾಲಕ್ಕೆ ಹಾಗೂ ಸಾಹಿತ್ಯ ಪರಿಷತ್ತಿಗೆ ಸಂಬಂಧಪಟ್ಟಂತೆ ಕೆಲವು ಲೇಖಕರು ಮಾಸ್ತಿಯವರನ್ನು ದುಡುಕಿನಿಂದ ಟೀಕಿಸಿದ್ದುಂಟು. ಆ ಸಂದರ್ಭದಲ್ಲಿ ಮಾಸ್ತಿಯವರು ಸ್ವಭಾವ ಸಹಜವಾದ ಸಂಯಮವನ್ನು ಕಾಪಾಡಿಕೊಂಡು ಗಂಭೀರವಾಗಿಯೇ ವರ್ತಿಸಿದರು. ಉತ್ತರ ಕೊಡುವ ಪ್ರಸಂಗ ಬಂದಾಗ ನಯವಾಗಿಯೇ ತಮ್ಮ ವಿಚಾರಗಳನ್ನು ಪ್ರಕಟಿಸಿದರು. ಹಾಗೆ ಟೀಕಿಸಿದ ಆ ಲೇಖಕರಿಗೆ ಕೆಲಕಾಲದ ನಂತರ ತಮ್ಮ ತಪ್ಪಿನ ಅರಿವಾದದ್ದು ಒಂದು ಒಳ್ಳೆಯ ಸಂಗತಿ.

"ನಾನೂ ಮಾಸ್ತಿಯವರೂ ಕೆಲವು ಸಲ ವಾದಿ ಪ್ರತಿವಾದಿಗಳಾಗಿ ಹೋರಾಡಿದ್ದೇವೆ. ವಾದದ ಮಾತು ಹೃದಯವನ್ನು ಕಲುಷಿತ ಮಾಡಿಲ್ಲ. ಹೇಳದೆ ಧರ್ಮವ ಕಲಿಸುವ

ಗುರುವಾಗಿ ಪ್ರೇಯಸ್ಸಿನ ಮಾರ್ಗದಲ್ಲಿ ಶ್ರೇಯಸ್ಸಿಗೆ ಒಯ್ದಿದ್ದಾರೆ ಮಾಸ್ತಿಯವರು ಹಲವು ಮಿತ್ರರ ಬಾಳನ್ನು'' ಎಂದು ಅ.ನ.ಕೃ. ಬರೆದರು. ''ಪ್ರಗತಿಶೀಲತೆಯ ಬಿರುಗಾಳಿ ಬೀಸಿದಾಗ, ಉಳ್ಳವರ ಸುಖ ಸಂತೋಷಗಳನ್ನಷ್ಟೆ ಶ್ರೀನಿವಾಸರು ಚಿತ್ರಿಸುತ್ತಾರೆ ಎಂಬ ಟೀಕೆ ಕೇಳಿಬಂತು. ಇದೆಷ್ಟು ಹಾಸ್ಯಾಸ್ಪದ ಎಂಬುದಕ್ಕೆ ಶ್ರೀನಿವಾಸರು ಚಿತ್ರಿಸಿದ ಪಾತ್ರಗಳ ಕುಲಗೋತ್ರಗಳ ಪಟ್ಟಿಯೊಂದೇ ಸಾಕು'' ಎಂದು ನಿರಂಜನರು ಮಾಸ್ತಿಯವರ ಮಾನವೀಯತೆಯನ್ನು ಸಮರ್ಥಿಸಿದರು. ''ಅವರ ಕೃತಿಗಳಲ್ಲಿ ಬಡವರ ಜೀವನದ ಚಿತ್ರಣವೇ ಇಲ್ಲ. ಅವರು ಪ್ರತಿಗಾಮಿಗಳು, ಸಂಪ್ರದಾಯಶೀಲರು ಎಂದೆಲ್ಲ ಟೀಕೆ ಬರುತ್ತಿತ್ತು. ಅದು ಸಾಧುವಾದ ಟೀಕೆಯಲ್ಲವೆನ್ನುವದು ನನಗೆ ಕೆಲದಿನಗಳಲ್ಲಿಯೇ ಮನವರಿಕೆಯಾಯಿತು'' ಎಂದಿರುವ ಬಸವರಾಜ ಕಟ್ಟೀಮನಿಯವರು ಅವರ ವಿರುದ್ಧವಾಗಿ ನಡೆದ ಚಳುವಳಿಯಿಂದ ತಾವು ದೂರ ಸರಿದದ್ದನ್ನು ದಾಖಲಿಸಿದ್ದಾರೆ. ''೧೯೪೪–೪೫ರಲ್ಲಿ ಪ್ರಗತಿಶೀಲ ಸಾಹಿತ್ಯದ (ಬಿರು)ಗಾಳಿ ಎದ್ದಾಗ ಒಗರು ತುಂಬಿದ ಯುವಕರಾಗಿದ್ದನಾವು ಶ್ರೀ ಮಾಸ್ತಿಯವರ ಬರವಣಿಗೆಯನ್ನು ಕಟುವಾಗಿ ಟೀಕಿಸಿದ್ದುಂಟು. ನಮ್ಮದು ಅನುದಾರವಾದ ಖಂಡನೆ ಎಂದು ಈಗ ನನಗೆ ಅನಿಸುತ್ತಿದೆ'' ಎಂದು ಕೋ.ಚನ್ನಬಸಪ್ಪ ತಮ್ಮ ಪ್ರಾಮಾಣಿಕತೆಯನ್ನು ವ್ಯಕ್ತಪಡಿಸಿದ್ದುಂಟು.

* * *

ಎರಡು ಸಂದರ್ಭಗಳಲ್ಲಿ ಮಾತ್ರ ಮಾಸ್ತಿಯವರ ಮನಸ್ಸು ಕ್ಷೋಭೆಗೊಂಡದ್ದು ಹಾಗೂ ಸಹನೆಯನ್ನು ಕಳೆದುಕೊಂಡದ್ದು ಒಡೆದು ಕಾಣುತ್ತದೆ. ಹಿಂದೆ ೧೯೫೮ರಲ್ಲಿ ಅವರ 'ಚನ್ನಬಸವ ನಾಯಕ' ಕಾದಂಬರಿಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಇನ್ನುಳಿದ ಭಾರತೀಯ ಭಾಷೆಗಳಿಗೆ ಅನುವಾದಿಸಿ ಪ್ರಕಟಿಸಬೇಕೆಂದಾಗ ಅದಕ್ಕೆ ಪ್ರತಿಭಟನೆ ವ್ಯಕ್ತಗೊಂಡು ಅದರ ಭಾಷಾಂತರ ಕಾರ್ಯವನ್ನು ಅಕಾಡೆಮಿ ಹಿಂತೆಗೆದುಕೊಂಡಿತು. ಎರಡನೆಯದಾಗಿ, ಮಾಸ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ಕೊಡುವಾಗ ಆಯ್ಕೆ ಸಮಿತಿಯವರು 'ಚಿಕ್ಕವೀರ ರಾಜೇಂದ್ರ' ಕಾದಂಬರಿಯನ್ನು ಆಯ್ಕೆ ಮಾಡಿದ್ದು ವಾಗ್ವಾದಕ್ಕೆ ಗುರಿಯಾದದ್ದು. ''ಇವು ಕನ್ನಡದ ಅತ್ಯುತ್ತಮ ಕಾದಂಬರಿಗಳೇ?'' ಎಂಬ ಪ್ರಶ್ನೆ ಎದ್ದಿತು. ಒಂದು ಕೃತಿ ಸಾಹಿತ್ಯಿಕ ಮಟ್ಟದ ಚರ್ಚೆಗಳಿಗೆ ಆಸ್ಪದವೀಯುವುದರಲ್ಲಿ ತಪ್ಪೇನಿಲ್ಲ . ಆದರೆ ಆಡಾಡುತ್ತ ಅದು ಅಡ್ಡ ಹಾದಿ ಹಿಡಿಯುವಂತಾಗಬಾರದೆಂಬುದು ಮುಖ್ಯ. ನಿಜವಾದ ವಿಮರ್ಶೆಯಿಂದ ಕೃತಿಯ ಗುಣಗಳು ಇನ್ನಷ್ಟು ಬೆಳಕಿಗೆ ಬರುತ್ತವೆಯೇ ವಿನಃ ಕೃತಿಗೆ ಯಾವ ಅಪಚಾರವೂ ಆಗಲಾರದು. ನಮ್ಮ ಸಂಸ್ಕೃತಿಯಲ್ಲಿಯ ಒಳ್ಳೆಯದನ್ನೇ ಯಾವಾಗಲೂ ಎತ್ತಿಹಿಡಿಯುತ್ತ ಸಾಹಿತ್ಯದಲ್ಲಿ ಅದಕ್ಕೆ ಕೃತಿಯ ರೂಪು ಕೊಡುತ್ತ ಬಂದಿರುವ ಹಾಗೂ ನಾಡಿನ ಸಂಸ್ಕೃತಿಯ ಒಂದು ಅವಿಭಾಜ್ಯ ಭಾಗವಾಗಿ ಸಾಹಿತ್ಯವನ್ನು ನೋಡುತ್ತಿರುವ ಮಾಸ್ತಿಯವರು, ದುಷ್ಟತನವೇ ಪ್ರಧಾನವಾಗಿರುವ ವಸ್ತುವನ್ನು ತಮ್ಮ ಈ ಕಾದಂಬರಿಗಳಿಗೆ ಆರಿಸಿಕೊಂಡಿರುವುದು ಕೆಲವರಿಗೆ ಆಶ್ಚರ್ಯದ ಸಂಗತಿಯಾಗಿ ಪರಿಣಮಿಸಿತು. ಹಾಗೆ ನೋಡಿದರೆ ಅವರ ಇನ್ನುಳಿದ ಯಾವ ಕೃತಿಯಲ್ಲಿಯೂ ದುರಂತ

ದೃಷ್ಟಿ ಕಂಡು ಬರುವದಿಲ್ಲ. ಆದರೆ ಈ ಎರಡು ಐತಿಹಾಸಿಕ ವಸ್ತುವಿಗಾಗಿ ಅವರು ಸಾಕಷ್ಟು ಪರಿಶ್ರಮಪಟ್ಟಿರುವುದೇನೂ ಸುಳ್ಳಲ್ಲ. ಅಲ್ಲದೆ ಈ ಕತೆಯನ್ನು ಬರೆಯುವ ಯೋಜನೆ ಎಷ್ಟೋ ವರ್ಷಗಳ ಹಿಂದಿನಿಂದಲೇ ಅವರ ಮನಸ್ಸಿನಲ್ಲಿ ಹೊಳಹುಗೊಂಡು ಬಂದದ್ದು, ಇದೆಲ್ಲವೂ ನಿಜ. ಆದರೂ ಇವು ಪ್ರಶಸ್ತಿಗೆ ಯೋಗ್ಯವಾದ ಕೃತಿಗಳಲ್ಲ ಎಂಬುದು ಕೆಲವರ ಅಭಿಪ್ರಾಯ. ಇಂಥ ಪ್ರಶಸ್ತಿಗಳು ದೊರೆಯುವ ಸಂದರ್ಭದಲ್ಲಿ ಯಾವುದೊ ಒಂದು ಕೃತಿಯನ್ನು ಹೆಸರಿಸಿದರೂ ಆ ಸಾಹಿತಿಯ ಒಟ್ಟು ಕೊಡುಗೆಯನ್ನು ಪರಿಗಣಿಸಲೇಬೇಕಾಗುತ್ತದೆ. ಆ ದೃಷ್ಟಿಯಿಂದ ಮಾಸ್ತಿಯವರದು ಪ್ರಥಮ ಪಂಕ್ತಿಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ಅವರದು ಎಷ್ಟೋ ಬಗೆಯ ನೋವುಗಳ ಸಂಸ್ಕಾರದಿಂದ ಹದಗೊಂಡ ದೊಡ್ಡ ಜೀವ. ಅಂಥವರು ಈ ಸಂದರ್ಭದಲ್ಲಿ ಆಕ್ರೋಶಕ್ಕೆ ಒಳಗಾದರು ಎಂದು ಹೇಳಿದರೆ ನಂಬುವುದು ಕಷ್ಟ. 'ಚೆನ್ನಬಸವ ನಾಯಕ' ಕಾದಂಬರಿಯಲ್ಲಿ ನಗರದ ನೇಮಯ್ಯನ ಪಾತ್ರಕ್ಕೆ ಸಂಬಂಧಪಟ್ಟಂತೆ ಈ ಮಾತು ಬರುತ್ತದೆ. ''ಶ್ರುತಿಯಾಗಿರುವ ವಾದ್ಯವನ್ನು ಚೇಷ್ಟೆಗೆಂದು ಮುಟ್ಟಿದರೂ ಸ್ವರ ಶ್ರುತಿಯಲ್ಲಿಯೇ ಹೊರಡುವಂತೆ ಸ್ವಭಾವ ಪರಿಶುದ್ಧವಾದ ಮೇಲೆ ಮನುಷ್ಯನ ಮಾತು ಎಂಥ ಹೊತ್ತಿನಲ್ಲಿಯೂ ಶುದ್ಧವಾಗಿಯೇ ಇರುವುದು.''

ಸಂಪ್ರದಾಯ ಮನೋಭಾವಕ್ಕೂ ಹೊಸಮೌಲ್ಯಗಳಿಗೂ ಘರ್ಷಣೆ ನಡೆದರೆ ಮಾಸ್ತಿಯವರು ಬಹುಶಃ ಸಂಪ್ರದಾಯಕ್ಕೆ ಒಲಿದಾರು. 'ಭಾವ'ದ ಮುನ್ನುಡಿಯ ಕೊನೆಯಲ್ಲಿ ಅವರು ಹೀಗೆ ನುಡಿದಿದ್ದಾರೆ: ''ನನ್ನ ಬಾಳಿನಲ್ಲಿ ತಪ್ಪೇನಾಗಿದೆ ಇದಕ್ಕೆಲ್ಲ ನನ್ನ ಸ್ವಭಾವ ಕಾರಣ; ಒಳಿತೇನಾಗಿದೆ ಅದೆಲ್ಲದರ ಕಾರಣ ದೈವಕೃಪೆ.''

'ಪ್ರಬುದ್ಧ ಕರ್ನಾಟಕ'
೧೯೮೫

■■

ವರಕವಿಯೊಂದಿಗೆ ಒಡನಾಟ

ನಾನು ಹಾಯ್‌ಸ್ಕೂಲ್ ವಿದ್ಯಾರ್ಥಿಯಾಗಿ ಧಾರವಾಡಕ್ಕೆ ಕಾಲಿಟ್ಟಿದ್ದು ೧೯೪೫೧೯ರಲ್ಲಿ. ಆಗ ತಾನೆ ಸಾಹಿತ್ಯದಲ್ಲಿ ಒಲವು ಚಿಗುರುತ್ತಿದ್ದ ನನಗೆ ನಾನು ವಾಸಿಸುತ್ತಿದ್ದ ಮುರುಘಾಮಠ ವಚನ ಸಾಹಿತ್ಯದಲ್ಲಿ ಅಭಿರುಚಿ ಹುಟ್ಟಿಸಿದರೆ, ಕರ್ನಾಟಕ ವಿದ್ಯಾವರ್ಧಕ ಸಂಘ, ಆಧುನಿಕ ಕನ್ನಡ ಸಾಹಿತ್ಯ ಹಾಗೂ ಕನ್ನಡ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ನನ್ನ ಅರಿವನ್ನು ಹೆಚ್ಚಿಸಿತು. ಧಾರವಾಡದ ಅನೇಕ ಹಿರಿಯ ಸಾಹಿತ್ಯಜ್ಞರು ಇಂದಿಗೂ ನನಗೆ ಸ್ಮರಣೀಯರಾಗಿದ್ದರೂ ಕಾವ್ಯರಚನೆಯಲ್ಲಿ ಆಸ್ಥೆತಳೆದಿದ್ದ ನನಗೆ ಬೇಂದ್ರೆಯವರ ವ್ಯಕ್ತಿತ್ವ ವಿಶೇಷವಾಗಿ ಆಕರ್ಷಿಸಿತಲ್ಲದೆ ಕೊನೆಯವರೆಗೂ ವರ್ಧಿಸುತ್ತಲೇ ಬಂದಿತು. ಹಳ್ಳಿಯಲ್ಲಿ ಹುಟ್ಟಿ ಬೆಳೆದು, ಅಲ್ಲಿಯ ಜಾನಪದ ಸಂಸ್ಕಾರದೊಂದಿಗೆ ಬಂದ ನನಗೆ ಬೇಂದ್ರೆ ಪರಕೀಯರೆಂದೆನಿಸಲೇ ಇಲ್ಲ. ಸಭೆಗಳಲ್ಲಿ, ಭಾಷಣದ ನಂತರ ತಮ್ಮದೇ ಆದ ಧಾಟಿಯಲ್ಲಿ ಹಾವಭಾವದೊಂದಿಗೆ, ಬಲಗೈಯನ್ನು ಮೇಲೆತ್ತಿ ಆಡಿಸುತ್ತ ಕಾವ್ಯವಾಚನ ಮಾಡುತ್ತಿದ್ದ ಅವರ ರೀತಿಯೇ ಅಪೂರ್ವವಾಗಿತ್ತು. 'ಪಾತರಗಿತ್ತಿ ಪಕ್ಕ', 'ಶ್ರಾವಣಾ ಬಂತು', 'ಬೆಳುದಿಂಗಳ ನೋಡ', 'ತುಂಬಿ ಬಂದಿತ್ತು', 'ಭೃಂಗದ ಬೆನ್ನೇರಿ ಬಂತು', ಇವೇ ಮೊದಲಾದ, ಇನ್ನೂ ಹಲವಾರು ಕವಿತೆಗಳು ಅವುಗಳನ್ನು ಪುಸ್ತಕಗಳಲ್ಲಿ ಓದುವ ಮೊದಲೇ ನಮ್ಮ ಮನಸ್ಸನ್ನು ಆವರಿಸಿಕೊಂಡು ಬಿಟ್ಟವು. ಅಲ್ಲದೆ, ಅವರ ಕವಿತೆಗಳನ್ನು ಹೇಗೆ ಓದಿಕೊಳ್ಳಬೇಕು ಎಂಬುದನ್ನು ಅದು ಪರ್ಯಾಯವಾಗಿ ಸೂಚಿಸುವಂತಿತ್ತು. ಆಗ ಕಾವ್ಯಗಾಯನಕ್ಕೆ ಮೊದಲು ಮಾಡಿದ ಪಿ. ಆರ್. ಭಾಗವತರು ಬೇಂದ್ರೆಯವರ ಕವಿತೆಗಳ ಹಾಡುಗಾರಿಕೆಯಿಂದಲೇ ಜನಪ್ರಿಯರಾದರು. ಮುಂದೆ ನಾಲ್ಕೈದು ವರ್ಷಗಳಲ್ಲಿ 'ಗರಿ', 'ಸಖಿಗೀತ', 'ಉಯ್ಯಾಲೆ', 'ನಾದಲೀಲೆ', 'ಮೇಘದೂತ' ಮೊದಲಾದ ಸಂಗ್ರಹಗಳನ್ನು ಓದುತ್ತಹೋದಂತೆ ಬೇಂದ್ರೆ ನನ್ನ ಅತ್ಯಂತ ಮೆಚ್ಚಿನ ಕವಿಯಾಗಿ ಬಿಟ್ಟರು. ಅದೇ ಕಾಲಕ್ಕೆ ದೂರದಲ್ಲಿದ್ದ ಕುವೆಂಪು ಅವರ ಕಾವ್ಯವನ್ನು ನಾನು ಅಷ್ಟೇ ಶ್ರದ್ಧೆಯಿಂದ ಓದಿದೆ. ಮಧುರಚೆನ್ನರ 'ನನ್ನನಲ್ಲ' ಆಗಲೇ ನನ್ನ ಮನಸ್ಸನ್ನು ಸೂರೆಗೊಂಡಿತ್ತು. ನವೋದಯದ ಈ ಹಿರಿಯರನ್ನೆಲ್ಲ ನಾನು ಸಮಾನ ಗೌರವದಿಂದ ಕಾಣುತ್ತಿದ್ದೆನಾದ್ದರಿಂದ ಆ ಬಗ್ಗೆ ಯಾವ ದ್ವಂದ್ವವನ್ನೂ ನಾನು ಅನುಭವಿಸಲಿಲ್ಲ.

* * *

೧೯೪೬ರಲ್ಲಿ ನಾನು ಕರ್ನಾಟಕ ಆರ್ಟ್ಸ್ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿಯಾಗಿದ್ದೆ. ಅದೇ ವರ್ಷ ಬೇಂದ್ರೆಯವರ ೫೦ನೆಯ ಹುಟ್ಟುಹಬ್ಬದ ಸಮಾರಂಭ ಧಾರವಾಡ ನಗರಸಭೆಯ ಅಟ್ಟದ ಮೇಲೆ ನೇರವೇರಿತು. ಕಿಕ್ಕಿರಿದ ಆ ಸಭೆಯಲ್ಲಿ ಕೂಡ್ರಲು ಸ್ಥಳವಿಲ್ಲದೆ ನಾನು ಕೊನೆಯವರೆಗೂ ನಿಂತುಕೊಂಡೇ ಕಾರ್ಯಕ್ರಮವನ್ನು ವೀಕ್ಷಿಸಿದೆ. ಮುದವೀಡು ಕೃಷ್ಣರಾಯರು 'ಕುಣಿಯೋಣು ಬಾರ' ಕವಿತೆಯನ್ನೋದಿ ತಮ್ಮ ಮನೆಯ ಅಟ್ಟದಲ್ಲಿ ಬೇಂದ್ರೆಯವರನ್ನು ಅಪ್ಪಿಕೊಂಡು ಕುಣಿದಾಡಿದ್ದನ್ನು ನೆನಪಿಸಿಕೊಂಡರು. ಅಧ್ಯಕ್ಷತೆ ವಹಿಸಿದ್ದ ಮಾಸ್ತಿಯವರನ್ನು ಬೇಂದ್ರೆಯವರು ಅಣ್ಣನೆಂದು ಸಂಬೋಧಿಸಿ ಮಾತನಾಡುತ್ತ ಸಾಹಿತ್ಯ ಸಂಬಂಧದೊಂದಿಗೆ ಆರ್ಥಿಕವಾಗಿಯೂ ಅವರು ತಮಗೆ ನೆರವಾಗಿದ್ದನ್ನು ಸ್ಮರಿಸಿಕೊಳ್ಳುತ್ತ ಆಡಿದ ಒಂದು ಮಾತು ಇನ್ನೂ ನನ್ನ ನೆನಪಿನಲ್ಲಿದೆ. 'ಮನೆಯಲ್ಲಿ ಎಷ್ಟೇ ಬಡತನವಿದ್ದರೂ ನನ್ನ ಕೈಯೊಳಗಿನ ಬಕ್ಕರಿಯಲ್ಲಿ ಬೆಣ್ಣೆಯ ಮುದ್ದೆ ಎಂದೂ ತಪ್ಪಿರಲಿಲ್ಲ' ಎಂದು ತಾವು ಅನುಭವಿಸಿದ ಮಾತೃವಾತ್ಸಲ್ಯವನ್ನು ನೆನೆದುಕೊಂಡರು. ಕೊನೆಯಲ್ಲಿ 'ನಾವು ಬರತೇವಿನ್ನ ನಂ ನಮಸ್ಕಾರ ನಿಮಗ' ಎಂಬ 'ಧಾರವಾಡದ ತಾಯಿ' ಕವಿತೆಯನ್ನೋದಿದಾಗ ಸಭೆ ಅದನ್ನು ಉತ್ಕಂಠೆಯಿಂದ ಆಲಿಸಿತು. (ಎರಡು ವರ್ಷದ ಹಿಂದೆಯೇ ಅವರು ಸೊಲ್ಲಾಪುರದ ಡಿ.ಎ.ವ್ಹಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲಸಕ್ಕೆ ಸೇರಿದ್ದರು)

* * *

ನಾನು ಜ್ಯೂ.ಬಿ.ಎ.ದಲ್ಲಿದ್ದಾಗ (೧೯೪೯) ನನ್ನ ಪ್ರಥಮ ಕವನಸಂಗ್ರಹ 'ಕಾವ್ಯಾಕ್ಷಿ' ಪ್ರಕಟವಾಯಿತು. ಅದುವರೆಗೂ ಬೇಂದ್ರೆಯವರ ಪ್ರತ್ಯಕ್ಷ ಪರಿಚಯ ನನಗಿರಲಿಲ್ಲ. ಮುನ್ನುಡಿ ಬರೆಯಲು ಕೋರಿ ನಾನೂ, ಪ್ರಕಾಶಕರಾದ ಹಿರೇಮಲ್ಲೂರು ಈಶ್ವರನ್ ಅವರೂ ಬೇಂದ್ರೆಯವರಿಗೆ ಸೊಲ್ಲಾಪುರಕ್ಕೆ ಪತ್ರ ಬರೆದೆವು. ಮುಂದೆ ಒಂದು ವಾರದಲ್ಲಿ ಮುನ್ನುಡಿ ನಮ್ಮ ಕೈ ಸೇರಿದಾಗ ನಮ್ಮ ಸಂತೋಷಕ್ಕೆ ಪಾರವೇ ಇರಲಿಲ್ಲ. 'ಕವಿಗಳಾದ ಚೆನ್ನವೀರ ಕಣವಿಯವರನ್ನು ಧಾರವಾಡದಲ್ಲಿ ನಾನು ನೋಡಿದ್ದರೂ ನೋಡಿರಬಹುದು. ಆದರೆ ಅವರ ನನ್ನ ಪರಿಚಯವಿಲ್ಲ . ಅವರ ಕವನಗಳನ್ನು ಮಾತ್ರ ಅಲ್ಲಲ್ಲಿ ಮಾಸಪತ್ರಿಕೆಗಳಲ್ಲಿ ಕಂಡಿದ್ದೆ. ಉದಿತವಾದ ಕನ್ನಡದ ಹೊಸ ಹುಮ್ಮಸ್ಸಿನ ದಂಡಿಗೆ ಸೇರಿದ ವೀರರು ಇವರೊಬ್ಬರು ಎಂದು ಗುರುತಿಸಿದ್ದೆ... ಅವರ ಕವನಗಳಲ್ಲಿ ಜೀವಂತಗತಿಯಿದೆ, ಮಾತಿಗೆ ಅಚ್ಚುಕಟ್ಟು ಇದೆ, ಅಲ್ಪ ಸಂತುಷ್ಟಿಯಿಲ್ಲ, ಮಹತ್ತಿನ ಕಡೆಗೆ ಎಳೆತವಿದೆ' ಇತ್ಯಾದಿ ಪ್ರೋತ್ಸಾಹದ ನುಡಿಗಳನ್ನು ಆಡಿದ್ದರು. ಕನ್ನಡದಲ್ಲಿ ಏನು ನಡೆಯುತ್ತಿದೆ, ಯಾರ್ಯಾರು ಬರೆಯುತ್ತಿದ್ದಾರೆ, ಯಾವ ಬಗೆಯ ಸಾಹಿತ್ಯ ರಚನೆಯಾಗುತ್ತಿದೆ ಎಂಬ ಬಗ್ಗೆ ಅವರಿಗಿರುವ ಕಾಳಜಿ ಅಪರೂಪದ್ದಾಗಿತ್ತು. ನವೋದಯದ ಹಿರಿಯ ಸಾಹಿತಿಗಳಲ್ಲಿ ಅಂಥ ಸಹೃದಯತೆ ಅನೇಕರಿಗಿದ್ದಿತು. ಅವರಲ್ಲಿ ಬೇಂದ್ರೆ ಅಗ್ರಮಾನ್ಯರಾಗಿ ನನಗೆ ಕಂಡು ಬಂದರು.

ಅದೇ ವರ್ಷ (೧೯೪೯) ಬೇಂದ್ರೆ ಮತ್ತು ಗೋಕಾಕರು ಧಾರವಾಡಕ್ಕೆ ಬರಲಿರುವುದು ತಿಳಿಯಿತು. ಆ ಹೊತ್ತಿಗೆ ಸಾಹಿತ್ಯಾಸಕ್ತರಾದ ನಾವು ಕೆಲವು ಗೆಳೆಯರು

ಕೀರ್ತಿನಾಥ ಕುರ್ತುಕೋಟಿ, ಶಂಕರ ಮೊಖಾಶಿ, ವಸಂತ ಕವಲಿ, ಶಿವೇಶ್ವರ ದೊಡ್ಡಮನಿ, ಜಿ. ಎಚ್. ಕಣೇಕಲ್ ಮೊದಲಾದವರು ಕೂಡಿಕೊಂಡು ನಮ್ಮ ಕೋಣೆಯಲ್ಲಿ (ಮಾಳಮಡ್ಡಿಯ ಜೋಗ ವಕೀಲರ ಮನೆಯಲ್ಲಿಯ ಬಾಡಿಗೆ ಕೋಣೆ) ವಾರಕ್ಕೊಮ್ಮೆ ಸಾಹಿತ್ಯಿಕ ಚರ್ಚೆ, ಕಾವ್ಯವಾಚನ, ವಿಮರ್ಶೆ ಮುಂತಾದ ಚಟುವಟಿಕೆ ಪ್ರಾರಂಭಿಸಿದ್ದೆವು. ನಮ್ಮ ಈ 'ಕಾವ್ಯಾನುಭವ ಮಂಟಪ'ಕ್ಕೆ ಅವರಿಬ್ಬರನ್ನೂ ಆಮಂತ್ರಿಸಲು ಅವರು ಇಳಿದುಕೊಂಡಿದ್ದ ಎನ್. ಕೆ. ದೀಕ್ಷಿತ್ ವಕೀಲರ ಮನೆಗೆ ಹೋದೆವು. ನಮ್ಮ ಚಟುವಟಿಕೆಗಳನ್ನು ಕೇಳಿ, ಒಂದೆರಡು ತಾಸು ನಮ್ಮೊಡನೆ ಕಳೆಯಲು ಇಬ್ಬರೂ ಸಂತೋಷದಿಂದ ಒಪ್ಪಿಕೊಂಡರು. ಅದೇ ಪ್ರಥಮ ಬಾರಿಗೆ ನನಗೆ ಬೇಂದ್ರೆಯವರ ಪ್ರತ್ಯಕ್ಷ ಪರಿಚಯವಾದದ್ದು. ಅಂದು ಬೇದ್ರೆಯವರೂ, ಗೋಕಾಕರೂ ನಮ್ಮೊಡನೆ ಕಾವ್ಯವಾಚನದಲ್ಲಿ ಭಾಗಿಗಳಾಗಿ, ಭಾಷಣ ಮಾಡಿ ಮೂರು ಗಂಟೆ ಕಳೆದದ್ದು ಇಂದಿಗೂ ಅವಿಸ್ಮರಣೀಯ.

ಬೇಂದ್ರೆಯವರು ನಿವೃತ್ತರಾಗಿ ಧಾರವಾಡಕ್ಕೆ ಮರಳಿ ಬಂದ ಮೇಲೆ ಸಾಧನಕೇರಿ ಹಸಿರು ಮುರಿಯತೊಡಗಿತು. ಹಾಗೆಯೇ ಅವರೊಡನೆ ನನ್ನ ಒಡನಾಟವೂ ಹೆಚ್ಚುತ್ತ ಬಂದಿತು. ಅವರ ೬೦ನೆಯ ಹುಟ್ಟುಹಬ್ಬವನ್ನು ಧಾರವಾಡದ ವಿಜಯ ಟಾಕೀಸಿನಲ್ಲಿ ಡಾ. ಡಿ. ಸಿ. ಪಾವಟೆಯವರ ಅಧ್ಯಕ್ಷತೆಯಲ್ಲಿ ಆಚರಿಸಿದಾಗ ನಾನು ಆ ಸಮಾರಂಭದ ಕಾರ್ಯದರ್ಶಿಯಾಗಿದ್ದೆ. ಹುಕ್ಕೇರಿಕರ ರಾಮರಾಯರು ಸ್ವಾಗತಾಧ್ಯಕ್ಷರಾಗಿದ್ದರು. (ಆ ಸಂದರ್ಭದಲ್ಲಿ ಪ್ರಕಟವಾದ ನನ್ನ 'ದೀಪಧಾರಿ' ಕವನ ಸಂಗ್ರಹವನ್ನು ಬೇಂದ್ರೆಯವರಿಗೆ ಗೌರವಪೂರ್ವಕ ಅರ್ಪಿಸಿದ್ದೆ). ಡಿ. ಸಿ. ಪಾವಟೆಯವರು ಡಿ. ಪಿ. ಆಯ್. ಇದ್ದಾಗ ಬೇಂದ್ರೆಯವರು ಪುಣೆಯಲ್ಲಿ ಒಮ್ಮೆ ಅವರ ಆಫೀಸಿಗೆ ಹೋಗಿದ್ದರಂತೆ. ಬೇಂದ್ರೆಯವರು ತಮ್ಮ ಚೀಟಿಯನ್ನು ಕಳಿಸಿದಾಗ ತಕ್ಷಣ ಪಾವಟೆಯವರೇ ಎದ್ದು ಬಂದು ಬೇಂದ್ರೆಯವರನ್ನು ಒಳಗೆ ಬರಮಾಡಿಕೊಂಡು, 'ನೀವು ಕವಿಗಳು ಅಮರರು, ನನ್ನ ಆಫೀಸಿಗೆ ನೀವು ಬರುವದೇ ಒಂದು ಭಾಗ್ಯ' ಎಂದರಂತೆ. ಬೇಂದ್ರೆಯವರು ಸಭೆಯಲ್ಲಿ ಈ ಮಾತನ್ನು ಹೇಳಿದಾಗ ಸಭೆಗೆ ಸಭೆಯೇ ಹರ್ಷದಿಂದ ಕರತಾಡನ ಮಾಡಿತು. ಕುಲಪತಿಗಳಾದ ಪಾವಟೆಯವರು ಹಾಗೂ ಕವಿವರ ಬೇಂದ್ರೆಯವರು ಅಂದಿನ ಸಮಾರಂಭದಲ್ಲಿ ಪರಸ್ಪರ ಗೌರವಿಸಿದ ರೀತಿ ಧಾರವಾಡದ ಸಂಸ್ಕೃತಿಯ ಪ್ರತೀಕದಂತಿತ್ತು.

* * *

೧೯೫೭ರಲ್ಲಿ ಪ್ರಕಟವಾದ 'ಅರಳು–ಮರಳು' ಪಂಚಕಾವ್ಯಗುಚ್ಛದ ಬಿಡುಗಡೆ ಸಮಾರಂಭ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನೆರವೇರಿದಾಗ ಮುರುಘಾಮಠಾಧ್ಯಕ್ಷರಾದ ಮೃತ್ಯುಂಜಯ ಸ್ವಾಮಿಗಳು ಸಭೆಯ ಸಾನ್ನಿಧ್ಯವಹಿಸಿದ್ದು ಒಂದು ವಿಶೇಷ. ಮಠದ ಹೊರಗೆ ಇಂಥ ಸಮಾರಂಭದಲ್ಲಿ ಸ್ವಾಮೀಜಿಯವರು ಭಾಗವಹಿಸಿದ್ದು ಬಹುಶಃ ಅದೇ ಮೊದಲಸಲವೆಂದು ನನ್ನ ತಿಳುವಳಿಕೆ. 'ನಿಮ್ಮರುಳಿನಿಂದ ಮರಮರಳಿ ಅರಳಿ, ಸ್ಫುಟವಾಗಿ ಭಾವಶುದ್ಧ' ಎಂಬ ನುಡಿ 'ಅರಳು–ಮರಳು' ಶಬ್ದದ

ಸಾಮಾನ್ಯಾರ್ಥವನ್ನು ಮೀರಿ ಆಧ್ಯಾತ್ಮಿಕ ಸ್ಥರದಲ್ಲಿ ವಿಶೇಷಾರ್ಥವನ್ನು ಹೊಮ್ಮಿಸುವ ಬಗೆಯನ್ನು ನಾನು ಅಂದಿನ ನನ್ನ ಭಾಷಣದಲ್ಲಿ ಹೇಳಿದ್ದನ್ನು ಬೇಂದ್ರೆಯವರು ಮೆಚ್ಚಿಕೊಂಡರು. ಕಾವ್ಯಸೇವೆಯನ್ನು ಅಖಂಡ ನಡೆಸಲು ಅರವತ್ತರ ಸಂದಿನಲ್ಲಿ ಅನುವು ಮಾಡಿಕೊಟ್ಟ ಅಖಿಲಭಾರತ ಆಕಾಶವಾಣಿಗೆ ತಾವು ಋಣಿಯಾಗಿರುವ ವಿಷಯವನ್ನು ಕಾವ್ಯ ಕೃತಿಯಲ್ಲಿ ಸೂಚಿಸಿದ್ದಾರೆ. ಒಂದು ಸಂದರ್ಭದಲ್ಲಿ ನಾನವರನ್ನು ಕೇಳಿದ್ದೆ; 'ಆಕಾಶವಾಣಿ ಸಾಹಿತ್ಯ ಸಲಹಾಕಾರ ಹುದ್ದೆಯಲ್ಲಿರುವ ನೀವು ಮನೆಯಲ್ಲಿ ಬಹಳ ವೇಳೆ ರೇಡಿಯೊ ಕೇಳಬೇಕಾಗಿ ಬಂತಲ್ಲ' ಎಂದು. 'ಯಾವಾಗಾದರೂ ಸ್ವಲ್ಪ ಹೊತ್ತುಕೇಳ್ತೀನಿ. ಹಗಲೆಲ್ಲ ಕೇಳಿದರ ನನ್ನ ಕಲ್ಪನಾಶಕ್ತಿಯನ್ನೇ ಕಳಕೊಳ್ಳಬೇಕಾದೀತು' ಎಂದು ನಕ್ಕರು.

ವಿನೋಬಾ ಭಾವೆಯವರು ಭೂದಾನ ಚಳುವಳಿಯ ನಿಮಿತ್ತ ಈ ಭಾಗಕ್ಕೆ ಬಂದಾಗ ತಿಳವಳ್ಳಿಯಲ್ಲಿ ಕ್ಯಾಂಪ ಮಾಡಿದ್ದರು. ಗೋಕಾಕರು ಆಗ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅವರೊಂದಿಗೆ ಬೇಂದ್ರೆಯವರು, ಮಾಳವಾಡರು, ವ್ಹಿ.ಜಿ. ಭಟ್ಟ ಹಾಗೂ ನಾನು ಕೂಡಿಕೊಂಡು ತಿಳವಳ್ಳಿಗೆ ಹೋಗಿ ವಿನೋಬಾ ಅವರನ್ನು ಕಂಡೆವು. ಕನ್ನಡವನ್ನು ಸ್ವಲ್ಪ ತಿಳಿದುಕೊಂಡಿದ್ದ ಅವರು ನಮ್ಮಿಂದ ಕವಿತೆಗಳನ್ನೋದಿಸಿ ಕೇಳಿ ಸಂತೋಷಗೊಂಡರು. ಭೂಮಿ, ಭೂದಾನ ಇತ್ಯಾದಿಗಳ ಬಗ್ಗೆ ತಾತ್ವಿಕವಾಗಿ ಚರ್ಚಿಸಿದ ಬೇಂದ್ರೆಯವರ ವಿಚಾರಗಳನ್ನು ವಿನೋಬಾ ಅತ್ಯಂತ ಆಸ್ಥೆವಹಿಸಿ ಕೇಳಿದರು.

* * *

೧೯೬೪ರಲ್ಲಿ ನನ್ನ ಏಳನೆಯ ಕವನ ಸಂಕಲನ 'ನೆಲಮುಗಿಲು'ಗೆ ಬೇಂದ್ರೆಯವರಿಂದಲೇ ಮುನ್ನುಡಿ ಬರೆಸಬೇಕೆಂಬ ಅಪೇಕ್ಷೆಯುಂಟಾಯಿತು. ಅದಕ್ಕೆ ಅವರು 'ಆಯಿತು' ಎಂದು ಸ್ವಲ್ಪ ವಿಸ್ತಾರವಾಗಿಯೇ ಬರೆದರಲ್ಲದೆ ಪುಸ್ತಕದ ಬಿಡುಗಡೆಯ ಕಾರ್ಯಕ್ರಮದಲ್ಲಿಯೂ ಭಾಗವಹಿಸಿದ್ದರು. ನನ್ನ ಮಾವಂದಿರಾದ ಎಸ್. ವಿ. ಗಿಡ್ನವರ ತಮ್ಮ ವಿಶ್ರಾಂತ ಜೀವನವನ್ನು ಧಾರವಾಡದಲ್ಲಿ ಕಳೆಯಬೇಕೆಂದು ಇಚ್ಛಿಸಿ ಇಲ್ಲಿಯೇ ಮನೆ ಮಾಡಿದ್ದರು. 'ಗೆಳೆಯರ ಗುಂಪಿ'ನ ಕಾಲದಿಂದಲೂ ಅವರು ಬೇಂದ್ರೆಯವರ ಸ್ನೇಹಿತರಾಗಿದ್ದರು. ಅವರಿಗೆ ಸಾಹಿತ್ಯ ಮತ್ತು ತತ್ವಜ್ಞಾನದಲ್ಲಿ ವಿಶೇಷ ಒಲವಿದ್ದಿತಲ್ಲದೆ ಮನೆಯಲ್ಲಿ ದೊಡ್ಡ ಗ್ರಂಥಭಂಡಾರವನ್ನು ನಿರ್ಮಿಸಿಕೊಂಡಿದ್ದರು. ಗುಂಪಿನ ಗೆಳೆಯರೆಲ್ಲರೂ ಅವರ ನಿಕಟವರ್ತಿಗಳಾಗಿದ್ದರು. ಅದರಲ್ಲೂ ಬೇಂದ್ರೆ ಹಾಗೂ ಮಧುರಚೆನ್ನರು ಮನೆಯವರಿಗಿಂತಲೂ ಹೆಚ್ಚು ಆತ್ಮೀಯರೆನಿಸಿದ್ದರು. ಬೇಂದ್ರೆಯವರಿಗೆ ಚಪಾತಿ, ಬೆಲ್ಲ, ತುಪ್ಪ ಇಷ್ಟವಾದರೆ ಮಧುರಚೆನ್ನರು ಸಪ್ಪೆಯೂಟ ಮಾಡುತ್ತಿದ್ದರೆಂದು ಶ್ರೀಮತಿ ಭಾಗೀರಥೀ ಗಿಡ್ನವರ (ನನ್ನ ಅತ್ತೆಯವರು) ನಮ್ಮೆದುರು ಹೇಳುತ್ತಿದ್ದರು. ಗಿಡ್ನವರ ಮಗಳು ಶಾಂತಾದೇವಿಯೊಡನೆ ನನ್ನ ಮದುವೆ ನಡೆದದ್ದು ಬೇಂದ್ರೆ ಅವರಿಗೆ ಹೆಚ್ಚಿನ ಸಂತೋಷಕ್ಕೆ ಕಾರಣವಾಗಿತ್ತು.

* * *

'ನೆಲ–ಮುಗಿಲಿ'ನ ಮುನ್ನುಡಿಯಲ್ಲಿ ತಾವು ಹಿಂದೆ 'ಕಾವ್ಯಾಕ್ಷಿ'ಗೆ ಬರೆದ ಮುನ್ನುಡಿಯ ಮಾತನ್ನು ನೆನಪಿಸಿಕೊಳ್ಳುತ್ತ 'ವಿನಯ ಹಳಸುವ ಬದುಕಲ್ಲ, ವಿಶಿಷ್ಟಕ್ಕೆ ತೊಡಕಲ್ಲ, ಇದು ಧಾರವಾಡ ತತ್ವ' ಎಂದು ಹೇಳುತ್ತ ಬೇಂದ್ರೆ 'ಅಂಬಿಕಾತನಯ'ನಂತೆ ಕಣವಿಯ ಚೆನ್ನವೀರನಿಗೂ ಇವೇ, ಇಂಥವೇ ಮಹಾಪ್ರೇರಣೆಗಳು ಎಂಬ ದೊಡ್ಡ ಮಾತನ್ನು ಬರೆದರು. ಮಾಸ್ತಿಯವರು ಬೇಂದ್ರೆಯವರ 'ನಾದಲೀಲೆ'ಗೆ ಬರೆದ ಮುನ್ನುಡಿಯಷ್ಟೇ ಬೇಂದ್ರೆಯವರು 'ನೆಲಮುಗಿಲು'ಗೆ ಬರೆದ ಮುನ್ನುಡಿಯೂ ಮಹತ್ವದ್ದಾಗಿದೆಯೆಂಬ ಮಾತನ್ನು ಕೀರ್ತಿನಾಥ ಕುರ್ತುಕೋಟಿಯವರು ಒಂದೆಡೆ ಬರೆದದ್ದುಂಟು.

ಬೇಂದ್ರೆಯವರಿಗೆ ಮಾತು ಸಿಕ್ಕರೆ ಮಾರುಹೊಲ ಸಿಕ್ಕಂತೆ ಎಂಬುದು ಗಾದೆಯ ಮಾತೇ ಆಗಿತ್ತು. ಅವರ ೭೦ನೆಯ ಹುಟ್ಟುಹಬ್ಬದ ಸಮಾರಂಭವನ್ನು ಅವರ ಪೂರ್ವಿಕರ ಊರಾದ ಶಿರಹಟ್ಟಿಯಲ್ಲಿ ೧೯೬೭ರಲ್ಲಿ ಏರ್ಪಡಿಸಲಾಗಿತ್ತು. ಧಾರವಾಡದಿಂದ ಇದಕ್ಕಾಗಿ ಪ್ರತ್ಯೇಕ ಬಸ್ಸನ್ನೇ ಮಾಡಿಕೊಂಡು ಹೊರಡಲಾಗಿತ್ತು. ವೆಂಕಟೇಶ ಮಾಗಡಿ, ಗೌರೀಶಕಾಯ್ಕಿಣಿ, ಎನ್ಕೆ, ನರೇಗಲ್ ಪ್ರಹ್ಲಾದರಾಯರು, ದೇಸಾಯಿ ದತ್ತಮೂರ್ತಿಯವರಲ್ಲದೆ ನಮ್ಮ ಜೊತೆಗೆ ಧಾರವಾಡ ಹುಬ್ಬಳ್ಳಿಯ ಇನ್ನೂ ಅನೇಕ ಸ್ನೇಹಿತರಿದ್ದರು. ಪ್ರೊ. ಗೋಕಾಕ ಮತ್ತು ಪ್ರೊ. ಮಾಳವಾಡರು ಮರುದಿನ ಬೆಳಿಗ್ಗೆ ಶಿರಹಟ್ಟಿಗೆ ಬಂದರು. ಬಸ್ಸಿನಲ್ಲಿ ಧಾರವಾಡದಿಂದ ಶಿರಹಟ್ಟಿಗೆ ಹೋಗುವವರೆಗೂ ಮಾತಾಡಿದವರೆಂದರೆ ಬೇಂದ್ರೆಯವರು. ನಾವೆಲ್ಲ ಆಗೀಗ ನಮ್ಮ ಮಾತುಗಳನ್ನು ಅದಕ್ಕೆ ಜೋಡಿಸುತ್ತಿದ್ದೆವು ಅಷ್ಟೇ. ಆಗಾಗ ಹಾಸ್ಯಕ್ಕೂ ಕೊರತೆಯಿರಲಿಲ್ಲ. ಅದೊಂದು ಅದ್ಭುತ ಅನುಭವ. ಬೇಂದ್ರೆಯವರಿಗೆ ಯಾವತ್ತೂ ಜನ ಬೇಕು. ಅವರು ನೂರಕ್ಕೆ ನೂರರಷ್ಟು ಸಂಘಜೀವಿಗಳು. 'ಏಕಾಂತತೆ ಗದ್ದಲದಲ್ಲಿಯೂ ಸಾಧ್ಯ, ಎನ್ನುತ್ತಾರೆ ಅವರು. ಜಿ.ಐ.ಪಿ. ಗಾಡಿಯ ಸಪ್ಪಳ, ಸಾ ಮಿಲ್ಲಿನ ಕರಕರ, ಫ್ಯಾನಿನ ಗುಂಯ್‌ನಾದ ಇಂಥವು ಕೂಡ ನನ್ನನ್ನು ಏಕಾಂತದಲ್ಲಿ ನೂಕಲು ಸಮರ್ಥವಾಗುತ್ತವೆ' ಎಂದು 'ನನ್ನ ನಾ ಕಂಡಂತೆ'ಯಲ್ಲಿ ಬರೆದಿರುವುದನ್ನು ನೋಡಿದರೆ ಅವರ ಕಾವ್ಯದ ನಾದಗುಣದ ನೆಲೆ ನಮಗೆ ಗೋಚರಿಸಬಹುದು.

* * *

ಮೈಸೂರು ವಿಶ್ವವಿದ್ಯಾಲಯ ತನ್ನ ಸುವರ್ಣಮಹೋತ್ಸವದ ಸಂದರ್ಭದಲ್ಲಿ ಆಧುನಿಕ ಕನ್ನಡ ಕಾವ್ಯದ 'ಸುವರ್ಣ ಸಂಪುಟ' ಪ್ರಕಟಿಸುವ ಯೋಜನೆ ಹಾಕಿಕೊಂಡಿತ್ತು. ಬೇಂದ್ರೆಯವರ ಕವಿತೆಗಳನ್ನು ಸೇರಿಸಿಕೊಳ್ಳಲು ಅವರ ಅನುಮತಿ ಕೋರಲಾಗಿತ್ತು. ಎಷ್ಟು ದಿನಗಳಾದರೂ ಅವರಿಂದ ಉತ್ತರ ಬಂದಿರಲಿಲ್ಲ. ದೇಜಗೌ ಹಾಗೂ ಹಾ. ಮಾ. ನಾಯಕರು ಆ ಜವಾಬುದಾರಿಯನ್ನು ಸಂಪಾದಕ ಸಮಿತಿಯ ಸದಸ್ಯನಾದ ನನಗೇ ವಹಿಸಿದರು. ನಾನು ಅವರ ಹನ್ನೆರಡು ಪ್ರಾತಿನಿಧಿಕ ಕವಿತೆಗಳನ್ನು ಆಯ್ಕೆ ಮಾಡಿ

ಬೇಂದ್ರೆಯವರ ಅನುಮತಿ ಪಡೆಯಲು ಸ್ವಲ್ಪ ಅಳುಕಿನಿಂದಲೇ ಅವರ ಮನೆಗೆ ಹೋದೆ. 'ನೀನೂ ಆ ಸಮಿತಿಯಲ್ಲಿ ಅದಿಯೇನು? ನಿನ್ನ ಆಯ್ಕೆ ಸರಿಯಾಗಿದೆ, ಆಗಬಹುದು' ಎಂದು ಹಿಂದುಮುಂದೆ ನೋಡದೆ ಒಪ್ಪಿಗೆ ನೀಡಿದರು. ನನಗೆ ತಲೆಯ ಮೇಲಿನ ದೊಡ್ಡಭಾರ ಇಳಿದಂತಾಯಿತು. ಇಂಥ ಸಂದರ್ಭಗಳಲ್ಲಿ ಅನೇಕರು ಅವರನ್ನು ತಪ್ಪು ತಿಳಿದುಕೊಂಡಂತಿತ್ತು. ಆದರೆ ಸರಿಯಾದ ದಾರಿಯನ್ನು ಅನುಸರಿಸಿದಾಗಲೆಲ್ಲ ಅವರು ಉದಾರವಾಗಿಯೇ ನಡೆದುಕೊಂಡದ್ದನ್ನು ನಾನು ಕಂಡಿದ್ದೇನೆ. ಆದರೆ ಮನಸ್ಸಿನಲ್ಲಿ ಒಳಗೊಂದು, ಹೊರಗೊಂದು ಇಟ್ಟುಕೊಂಡು ಬಂದವರನ್ನು ಮಾತ್ರ ಚೆನ್ನಾಗಿ ತಿರುವಿ ಬಿಡುತ್ತಿದ್ದರು. ತಮ್ಮ ಕಾವ್ಯದ ಬಗ್ಗೆ ಬಂದಿರುವ ವಿಮರ್ಶೆಗಳನ್ನೆಲ್ಲ ಅವರು ಗಮನಿಸಿರುತ್ತಿದ್ದರು. ಆ ಬಗ್ಗೆ 'ದಿವ್ಯ ನಿರ್ಲಕ್ಷತೆ' ಯೇನೂ ಅವರಿಗಿರಲಿಲ್ಲ. ವಿಮರ್ಶಕರೆಂಬವರ ಟೀಕೆಗಿಂತ ರಸಿಕರ ವಿಮರ್ಶೆ ತಮಗೆ ಪ್ರೇರಣೆ ಉದ್ದೀಪನಗಳನ್ನು ಕೊಟ್ಟಿವೆಯೆಂದು ಅವರೇ ಒಂದೆಡೆ ಹೇಳಿದ್ದುಂಟು.

* * *

'ನಾಕು ತಂತಿ' ಕವನ ಸಂಗ್ರಹಕ್ಕೆ ಜ್ಞಾನಪೀಠ ಪ್ರಶಸ್ತಿ ಬಂದ ಸಂದರ್ಭದಲ್ಲಿ ಒಮ್ಮೆ ಮಾಸ್ತಿಯವರು ಧಾರವಾಡಕ್ಕೆ ಬಂದಿದ್ದರು. ಬೇಂದ್ರೆಯವರ ಮನೆ 'ಶ್ರೀಮಾತಾ' ದಲ್ಲಿಯೇ ಮಾಸ್ತಿಯವರ ಹಿರಿತನದಲ್ಲಿ ಸಹೃದಯರ ಸಂತೋಷ ಕೂಟವೊಂದನ್ನು ವಾಮನ ಏರ್ಪಡಿಸಿದ್ದರು. ಅಂದು ಅಲ್ಲಿ ಸೇರಿದವರೆಲ್ಲರೂ ತಮತಮಗೆ ಇಷ್ಟವಾದ ಯಾವುದಾದರೂ ಒಂದು ಪದ್ಯದ ನುಡಿ ಹೇಳಬೇಕೆಂಬ ಸೂಚನೆ ಬಂದಿತು. ನನ್ನ ಸರದಿ ಬಂದಾಗ ನಾನು ಮುಪ್ಪಿನ ಷಡಕ್ಷರಿಯ 'ಅವರವರ ದರುಶನಕೆ' ಪದ್ಯದ ಕೊನೆಯ ನುಡಿ 'ಹೋರಾಟವಿಕ್ಕಿಸಲು ಬೇರಾದೆಯಲ್ಲದೆ ಬೇರುಂಟೆ ಜಗದೊಳಗೆ ಎಲೆದೇವನೆ' ಎಂಬುದನ್ನು ಹೇಳಿದೆ. ಅದರ ವಿಚಾರವನ್ನೆತ್ತಿಕೊಂಡು ಮಾಸ್ತಿಯವರು ಒಂದೆರಡು ಮಾತು ಹೇಳಿದರು. 'ಬೇರಾದ' ಪದಕ್ಕೆ ಬೇರೆ ಬೇರೆ ಹೆಸರಿನಿಂದ ದೇವರನ್ನು ಕರೆಯಲಾಯಿತು ಎಂಬ ಸಾಮಾನ್ಯವಾದ ಅರ್ಥವೇ ನಮ್ಮೆಲ್ಲರ ಮನಸ್ಸಿನಲ್ಲಿತ್ತು. ಬೇಂದ್ರೆಯವರು ಮಾತ್ರ ಯಥಾ ಪ್ರಕಾರ ಶ್ಲೇಷಾರ್ಥವನ್ನು ಉಪಯೋಗಿಸಿ 'ಬೇರಾದೆ' ಎಂಬ ಪದವನ್ನು ಬೇರು ಆದೆ, ಹೋರಾಟಕ್ಕೆ ಮೂಲ ಕಾರಣವಾದೆ ಎಂದು ಅರ್ಥೈಸಿದಾಗ ಮಾಸ್ತಿಯವರೂ ಗೋಣುಹಾಕಿದರು. ಶ್ಲೇಷೆ ಒಂದು ಸಹಜವಾದ ಶಕ್ತಿಯಾಗಿ ಬೇಂದ್ರೆಯವರಿಗೊಲಿದಿರುವುದನ್ನು ಅವರ ಕಾವ್ಯದುದ್ದಕ್ಕೂ ಕಾಣಬಹುದು.

ನಾನು ಹಿಂದೊಮ್ಮೆ ಅವರ ಮನೆಗೆ ಹೋದಾಗ ಅವರ ಮೇಜಿನ ಮೇಲೆ ಕುವೆಂಪು ಅವರ 'ಬೆರಳ್‌ಗೆ ಕೊರಳ್' ನಾಟಕವಿತ್ತು. ಅದನ್ನವರು ಮೆಚ್ಚಿಕೊಂಡದ್ದು ಅವರ ಮಾತಿನ ಮೇಲಿಂದ ನನಗೆ ತಿಳಿದು ಬಂತು. ಕುವೆಂಪು ಆ ನಾಟಕವನ್ನು 'ಶ್ರೀ' ಅವರಿಗೆ ಅರ್ಪಿಸಿ ಕೆಳಗೆ ಒಂದು ಕವಿತೆಯನ್ನೇ ಬರೆದಿದ್ದಾರೆ. 'ಬೆರಳ್‌ಗೆ ಕೊರಳ್' ಏಕಲವ್ಯ–ದ್ರೋಣರ ಪ್ರಸಂಗವನ್ನು ಧ್ವನಿಪೂರ್ಣವಾಗಿ ಸೂಚಿಸುತ್ತದೇನೊ ನಿಜ. ಆದರೆ 'ಶ್ರೀ' ಮತ್ತು

ಕುವೆಂಪುವಿಗೆ ಸಂಬಂಧಪಟ್ಟಂತೆ ಅದನ್ನು 'ಬೆರಳು ಹಿಡಿದು ನಡೆಸಿದ ಗುರುವಿಗೆ ತನ್ನ ಕೊರಳು ಅಂದರೆ ಕಂಠ, ಧ್ವನಿ (ಕಾವ್ಯ) ಯ ಅರ್ಪಣೆ' ಎಂದು ಬೇಂದ್ರೆಯವರು ಅರ್ಥೈಸಿ ನನಗೆ ಹೇಳಿದರು. ಹೀಗೆ ಯಾರಿಗೂ ಹೊಳೆಯದ್ದು ಬೇಂದ್ರೆಯವರಿಗೆ ಹೊಳೆಯುತ್ತಿದ್ದುದು ಅವರ ಪ್ರತಿಭೆಯ ವಿಶೇಷ ಲಕ್ಷಣ.

೧೯೮೧ರಲ್ಲಿ ಒಂದು ದಿನ ನಾನು ಆಫೀಸಿಗೆ ಹೊರಡುತ್ತಿರುವಾಗ ಬೇಂದ್ರೆಯವರು ವಾಮನನ ಜೊತೆಗೆ ಸ್ಕೂಟರಿನಲ್ಲಿ ನಮ್ಮ ಮನೆಗೆ ಬಂದು, ತಮ್ಮ ಕೈ ಚೀಲದಿಂದ ಒಂದು ನೋಟಬುಕ್ಕನ್ನು ತೆಗೆದು ತಾವು ಈಚೆಗೆ ಬರೆದ ನಾಲ್ಕೈದು ಕವಿತೆಗಳನ್ನು ಓದಲು ಹೇಳಿ, ''ನಿನಗೇನು ತಿಳೀತದೆ ಅದನ್ನು ಹೇಳು' ಎಂದರು. ಕೊನೆಗಾಲದಲ್ಲಿ ಅವರು ಸಂಖ್ಯಾಶಾಸ್ತ್ರಕ್ಕೆ ಮಾರುವೋದದ್ದನ್ನು ಎಲ್ಲರೂ ಬಲ್ಲರು. ನಾನು ಕವಿತೆಗಳನ್ನೋದಿ ನನ್ನ ಅಲ್ಪಮತಿಗೆ ಹೊಳೆದದ್ದನ್ನು ಹೇಳಿದೆ. 'ಹೌದಲ್ಲ; ಅದನ್ನೇ ಈ ನೋಟುಬುಕ್ಕಿನಲ್ಲಿ ಬರೆದು ಸಹಿಮಾಡಿಕೊಡು' ಎಂದರು. ಡಾ. ಕೆ. ಕೃಷ್ಣಮೂರ್ತಿಯವರು ಇಂಥದೇ ಪ್ರಸಂಗವನ್ನು ತಾವೂ ಎದುರಿಸಿದ್ದನ್ನು ನನ್ನ ಮುಂದೆ ಈ ಮೊದಲು ಹೇಳಿದ್ದರು. ಬಹುಶಃ ಅಪ್ರತಿಮವಾದ ಈ ಕವಿ ಚೇತನಕ್ಕೆ ಓದುಗರ ಈ 'ತಿಳಿಯೂದಿಲ್ಲ' ಎಂಬ ಮಾತನ್ನು ಸಹಿಸಲಾಗುತ್ತಿರಲಿಲ್ಲವೆಂದು ತೋರುತ್ತದೆ. ಸಹೃದಯರಾದ ಓದುಗರ ಬಗ್ಗೆ ಕವಿಗಿರುವ ಕಳಕಳಿ ಅವರ ಸಾತ್ವಿಕ ಸಿಟ್ಟಿಗೆ ಕಾರಣವಾಗಿರಬಹುದು. ಸಹೃದಯರನ್ನು ಬೇಂದ್ರೆ ಯಾವಾಗಲೂ ಗೌರವದಿಂದಲೇ ಕಂಡಿದ್ದರು. ಯಾಕೆಂದರೆ ಕಾವ್ಯ ಕೇಳುವ ಹೃದಯ ಕಲ್ಲಲ್ಲ, ಅದು ಕಲ್ಲುಸಕ್ಕರೆ. 'ಕಲ್ಲುಸಕ್ಕರೆಯಂಥ ನ್ನಿನೆದೆಯು ಕರಗಿದರೆ ಆ ಸವಿಯ ಹಣಿಸು ನನಗೆ' ಎಂಬುದೇ ಅವರ ಕಾವ್ಯ ಜೀವನದ ಹಂಬಲವಾಗಿತ್ತು.

* * *

ಬೇಂದ್ರೆಯವರ ಜೊತೆಗಿನ ನನ್ನ ಒಡನಾಟದ ಕೆಲವು ಸಂಗತಿಗಳನ್ನು ಮಾತ್ರ ಇಲ್ಲಿ ಮೆಲುಕು ಹಾಕಿದ್ದೇನೆ. ಕೊನೆಯದಾಗಿ ಒಂದು ಪ್ರಸಂಗವನ್ನು ಇಲ್ಲಿ ಉಲ್ಲೇಖಿಸುವದು ಅಗತ್ಯವೆಂದು ನಾನು ಭಾವಿಸಿದ್ದೇನೆ. ಯಾಕೆಂದರೆ ಅದು ಅವರ ಕೊನೆಯ ಸಾರ್ವಜನಿಕ ಭಾಷಣಕ್ಕೆ ಸಂಬಂಧಪಟ್ಟದ್ದು. ೧೯೮೧ ಮೇ ತಿಂಗಳು ಧಾರವಾಡದ ಮಲ್ಲಿಕಾರ್ಜುನ ಮನಸೂರ ಕಲಾಭವನದಲ್ಲಿ, ನನಗೊಂದು ಸನ್ಮಾನ ಸಮಾರಂಭವೇರ್ಪಟ್ಟು 'ಚೆಂಬೆಳಕು' ಅಭಿನಂದನ ಗ್ರಂಥದ ಬಿಡುಗಡೆಯ ಕಾರ್ಯಕ್ರಮವಿತ್ತು. ಪು.ತಿ.ನ. ಅವರು ಮುಖ್ಯ ಅತಿಥಿಯಾಗಿದ್ದು ಸದಾಶಿವ ಒಡೆಯರ, ಪಾಟೀಲಪುಟ್ಟಪ್ಪ, ಬಸವರಾಜ ಕಟ್ಟೀಮನಿ, ಶಾಂತರಸರು ಅಭಿನಂದನ ಭಾಷಣ ಮಾಡಿದರು. ಅಂದು ಬೇಂದ್ರೆಯವರು ಜ್ವರದಿಂದ ಅಸ್ವಸ್ಥರಾಗಿದ್ದರೂ ಸಭೆಗೆ ಬಂದು ವೇದಿಕೆಯ ಎದುರಿಗೆ ಕುಳಿತರು. ಪ್ರೀತಿಯ ಒತ್ತಾಯದಿಂದ ಅವರನ್ನು ವೇದಿಕೆಯ ಮೇಲೆ ಕುಳ್ಳಿರಿಸಲಾಯಿತು. ಮೊದಲು ತಾವು ಮಾತಾಡುವುದಿಲ್ಲವೆಂದು ಹೇಳಿದ್ದರೂ ಕೊನೆಯಲ್ಲಿ ಆಶೀರ್ವಾದದ ಎರಡು ಮಾತು ಹೇಳಬಹುದೇ ಎಂದು ಸಂಘಟಕರಾದ ಡಾ. ಗುರುಲಿಂಗ ಕಾಪಸೆಯವರು

ಕೇಳಿಕೊಂಡಾಗ ಒಪ್ಪಿ ಮಾತಾಡಲು ಎದ್ದರು. ತಾವು ಜ್ವರ ಪೀಡಿತರಾಗಿರುವುದನ್ನು ಮರೆತು ಎಂದಿನ ಧ್ವನಿ–ಧಾಟಿಯಲ್ಲಿಯೇ ಸಭಿಕರನ್ನು ನಗಿಸಿ, ಸಂತೋಷಪಡಿಸುತ್ತ ಆತ್ಮೀಯತೆಯಿಂದ ಅರ್ಧ ಗಂಟೆಯವರೆಗೂ ಮಾತನಾಡಿದರು. ಅವರ ಅಂದಿನ ಭಾಷಣದ ಸ್ವಲ್ಪ ಭಾಗವನ್ನು ಧ್ವನಿಸುರುಳಿಯಿಂದ ಪ್ರತಿಮಾಡಿ ಇಲ್ಲಿ ಕೊಟ್ಟರೆ ಅನುಚಿತವಾಗದೆಂದು ಭಾವಿಸಿದ್ದೇನೆ.

‘‘ನನ್ನ ಜತೆಯಲ್ಲಿ ಕೂತವರಿಗಿಂತ ಮೊದಲ ನೆನ್ನೆದುರಿಗೆ ಕೂತವರಿಗೆ ನಮಸ್ಕಾರ ಮಾಡ್ತಿನಿ. ಯಾಕೆಂದರೆ ನಿಮ್ಮಿಂದ ನಮಗೆ ಕಿಮ್ಮತ್ತದ. ನಿಮಗ ಕಿಮ್ಮತ್ತಿಲ್ಲದಿದ್ದರ ನಮಗೆಲ್ಲಿಂದ ಬರಬೇಕು? ಬಂಗಾರ ಮಾರಿದಮ್ಯಾಲೆ ಅದಕ ಬೆಲೆ ಬರತದ ಅಂತಲ್ಲ. ಅದರ ಬೆಲೆ ಅದಕ ಇದ್ದs ಇರತದ. ಒಬ್ಬರೊಬ್ಬರೊಳಗೆ ಒಡನಾಟ ಇರಬೇಕು. ದೇಶದೊಳಗ ಒಳ್ಳೇ ಕವಿ ಹುಟ್ಟಿದರಷ್ಟೇ ಸಾಲದು ಅವ ಒಳ್ಳೇವ ಅನಲಿಕ್ಕೆ ಒಬ್ಬ ಒಳ್ಳೆ ವಿಮರ್ಶಕ ಹುಟ್ಟಬೇಕು. ಕವಿ–ಸಹೃದಯರ ಒಡನಾಟ ಸರಸ್ವತೀ ತತ್ವ. ಇವತ್ತಿನ ದಿವಸ ಐವತ್ತರ ಕಣವಿಗೆ ಆಶೀರ್ವಾದ ಮಾಡಲಿಕ್ಕೆ ನಾ ಬಂದೀನಿ. ಅವರಿಗೆ ಅರವತ್ತರ ಹಬ್ಬ ಆದಾಗ ಅವತ್ತೂ ಇವರಿಗೆ ಆಶೀರ್ವಾದ ಮಾಡಲಿಕ್ಕೆ ಬರತೀನಿ. ನಾ ಹಿಂದ ಕೊಟ್ಟ ಆಶೀರ್ವಾದ ಫಲಿಸಿತೋ ಇಲ್ಲ ಅಂತ ನೋಡಲಿಕ್ಕೆ ನಾ ಇರಬೇಕು. ಕಣವಿ ನನ್ನ ಗೆಳೆಯರಾದ ಗಿಡ್ನವರ ಅಳಿಯಂದಿರು. ಆದ್ದರಿಂದ ನನಗೂ ಅಳಿಯಂದಿರು. ಪ್ರಕೃತಿ ಕಾಯ್ಕೊಳ್ಳದಾಂವ ಪುರುಷನ ಅಲ್ಲ. ಪ್ರಕೃತಿಯನ್ನು ಧಿಕ್ಕರಿಸುವವ ಎಂಥಾ ಪುರುಷ?’’

‘‘೧೯೪೯ರೊಳಗ ನಾನೂ ಗೋಕಾಕರೂ ಅವರಿದ್ದ ರೂಮಿಗೆ ಹೋಗಿದ್ವಿ. ನಾವಿದ್ದಲ್ಲೆ ಅವರ್ನ ಕರೆಸಿಕೊಳ್ಳಲಿಲ್ಲ. ಒಳ್ಳೆ ವಿಚಾರನೂ ಮಾಡಬೇಕು. ಕೆಟ್ಟ ವಿಚಾರನೂ ಮಾಡಬೇಕು ಅಂದರೆ ಒಳ್ಳೇದು ಯಾವುದು ಅಂತ ಗೊತ್ತಾಗ್ತದ. ಕಣವಿ ತಮಗಿಂತ ಬೇರೆ ಕವಿಗಳಿಲ್ಲ ಅಂತ ತಿಳಿಕೊಂಡಿಲ್ಲ. ತಾನೂ ಬದುಕಬೇಕು, ಇನ್ನೊಬ್ಬರೂ ಬದುಕಬೇಕು. ವೀರ ಅಂದರ ಯಾರಕೂಟ? ಇವರ ವೀರಾವೇಶವನ್ನು ನೋಡಿ ಉಳಿದವರು ಆನಂದ ಪಡಬೇಕು. ಕಾಪಸೆ ಎರಡು ಒಳ್ಳೇ ಕೆಲಸ ಮಾಡ್ಯಾರ. ಮೊದಲಿಗೆ ಚೆನ್ನಮಲ್ಲನ (ಮಧುರಚೆನ್ನ) ಬಗ್ಗೆ ಮಾಡಿದ್ದನ್ನು ಈಗ ಚೆನ್ನವೀರನ ಬಗ್ಗೆ ಮಾಡ್ಯಾರ. ಅವರಿಗೂ ಒಳ್ಳೇದಾಗಲಿ. ಸಭಾಕ ನಾನು ಬರೂದಿಲ್ಲಅಂತ ಹೇಳಿದ್ದೆ. ಈಗ ಬಂದೀನಿ. ಬಂದ ಮ್ಯಾಲೆ ಸಭಾದ ಮರ್ಯಾದಿ ಕಾಯಬೇಕು.

‘‘ಇಲ್ಲೆನಮ್ಮ ಪು.ತಿ.ನ. ಇದ್ದಾರಲ್ಲ, ಅವರು ಎಷ್ಟು ಸಭ್ಯರಂಗ ಕಾಣಸ್ತಾರ, ಅಷ್ಟಿಲ್ಲ ಅವರು. ಯಾರಿಗೆ ಕವಿ ಅನಬೇಕು? ಬೇಂದ್ರೆ, ಪುಟ್ಟಪ್ಪನವರ ದಾರಿಬಿಟ್ಟು ಯಾರು ಹೋಗ್ತಾರ ಅವರೇ ಕವಿಗಳು ಅಂತ ಪು.ತಿ.ನ. ಹಿಂದೆ ಹೇಳ್ಯಾರ. ಹೊಸಬರಿಗೆ ಅವರು ಉತ್ಸಾಹ ತುಂಬ್ಯಾರ. ನೀವು ದೊಡ್ಡ ಮಂದಿಯವರ್ಹಾಂಗ ಆಗಾಕ ಹೋಗಿ ಬಹಳ ಸಣ್ಣವರಾಗಿ ಬಿಡ್ತೀರಿ. ಸಣ್ಣವರಿದ್ದರೂ ನಿಮ್ಹಂಗ ನೀವಿದ್ದರ ದೊಡ್ಡವರಾಗ್ತೀರಿ. ಸೂರ್ಯ ಬಹಳ ದೊಡ್ಡವ. ಆದರ ಅವನ್ನ ನೋಡಲಿಕ್ಕೆ ಕಣ್ಣುಸಣ್ಣವಿರಬೇಕು.

“ರವಿ ಕಾಣದ್ದನ್ನು ಕವಿ ಕಾಣ್ತಾನ; ಕವಿ ಕಾಣದ್ದನ್ನ ಸಹೃದಯ ಕಾಣ್ತಾನ, ಪಂಪ, ಕುಮಾರವ್ಯಾಸರ ನಾಡಿನಲ್ಲಿ ಬಂದಿದ್ದೇವೆ. ಒಬ್ಬರಿಗಿಂತ ಒಬ್ಬರು ಹೆಚ್ಚಿನವರಾಗಿ ಬೆಳಿಬೇಕು. ಇಲ್ಲಿಯವರೆಗೂ ನಾ ಒಳ್ಳೇ ಮಾತನ್ನು ಆಡೀನಿ. ನನಗೆ ಕೆಟ್ಟ ಮಾತು ಆಡಲಿಕ್ಕೆ ಬರುದಿಲ್ಲ ಅಂತಲ್ಲ. ಆದರ ಅದನ್ನ ಎಲ್ಲಿ ಆಡಬೇಕು ಅಲ್ಲೆ ಆಡಬೇಕು ಇಲ್ಲಿ ಅಲ್ಲ.”

“ಕವಿ–ಸಹೃದಯರ ಕೂಡ ಮೂರನೇ ಮಂದೀನೂ ಇರತಾರ. ಅವರು ಯಾರ ಅಂದರ ಇವರಿಬ್ಬರೂ ಹ್ಯಾಂಗ ಜಗಳಾಡತಾರ ಅಂತ ನೋಡಲಿಕ್ಕೆ ಬಂದವರು. ಅಂಥ ಪ್ರೇಕ್ಷಕರು ಇಲ್ಲೂ ಇರಬಹುದು. ಈ ಮೂರೂ ಜನರಿಂದ ಸಾಹಿತ್ಯ ಮೂರಾಬಟ್ಟೆಯಾಗದೆ ನಾಲ್ಕನೇ ದಾರಿ ತೆರಿಬೇಕು. ಪರಸ್ಪರ ಅನಸೂಯಾ ಭಾವದಿಂದ ಧಾರವಾಡ ಬೆಳೀಲಿ.”

‘ಸಂಯುಕ್ತ ಕರ್ನಾಟಕ’

೨೦೦೫

■■

ಡಿ.ವಿ.ಜಿ. ಸಂಸ್ಮರಣ

ನಾನು ವಿದ್ಯಾರ್ಥಿಯಾಗಿದ್ದಾಗ ಧಾರವಾಡದ ಒಂದು ಸಮಾರಂಭದಲ್ಲಿ ಡಿ.ವಿ.ಜಿ.ಯವರನ್ನು ಮೊದಲ ಸಲ ಕಂಡು ಅವರ ಭಾಷಣ ಕೇಳಿದ ನೆನಪು ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ. ತುಂಬಿದ ಭದ್ರಾಕೃತಿ. ಅದಕ್ಕೊಪ್ಪುವ ಕೋಟು. ಸುಳುವಿನ ಟೊಪ್ಪಿಗೆ, ಕೊರಳಿಗೆ ಉತ್ತರೀಯ. ಗಂಭೀರ ಪ್ರಕೃತಿಯಾದರೂ ಮುಖದಲ್ಲಿ ತುಂಬು ವಿದ್ವತ್ತಿನ ಪ್ರಸನ್ನತೆ. ಅಂದಿನ ಅವರ ಭಾಷಣದಲ್ಲಿ ಮಾತ್ರ ಪಾಂಡಿತ್ಯಕ್ಕಿಂತ ರಸಿಕತೆಯೇ ಒಡೆದು ಕಂಡದ್ದು. ಅ.ನ.ಕೃ., ಮಾಸ್ತಿ, ವಿ.ಸೀ. ಮೊದಲಾದವರಂತೆ ಅವರು ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರವಾಸ ಮಾಡುತ್ತಿರಲಿಲ್ಲವೆಂದು ತೋರುತ್ತದೆ. ಹೀಗಾಗಿ ಅವರ ಭಾಷಣ ಕೇಳುವ ಸಂಯೋಗ ಮತ್ತೆ ನನಗೆ ಒದಗಿ ಬರಲಿಲ್ಲ. ಆದರೆ ಅವರ ಸಾಹಿತ್ಯ ಕೃತಿಗಳ ಮೂಲಕ ನಮಗೆಲ್ಲ ಅವರು ಹಿರಿಯ ಗೌರವಾನ್ವಿತ ವ್ಯಕ್ತಿಯಾಗಿದ್ದರು (ಅವರ ವ್ಯಕ್ತಿತ್ವದ ಇತರ ಮುಖಗಳ ಪರಿಚಯ ಆಗ ನಮಗೆ ಅಷ್ಟಿರಲಿಲ್ಲ.)

'ವನಸುಮ' ಭಕ್ತಿಗೀತ ಮನಸ್ಸಿಗೆ ಕೆಲಮಟ್ಟಿಗೆ ಹಿಡಿಸಿತ್ತು. 'ಕನ್ನಡದ ಬಾವುಟ'ದಲ್ಲಿ ಮೊದಲು ಅದನ್ನೋದಿದ್ದೆ. 'ಬೇಲೂರಿನ ಶಿಲಾಬಾಲಿಕೆಯರು' ಮಾತ್ರ ಆಗ ಹಳಗನ್ನಡವಾಗಿಯೇ ಕಂಡಿತು. 'ಉಮರನ ಒಸಗೆ', 'ಮಂಕುತಿಮ್ಮನ ಕಗ್ಗ', 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಈ ಮೂರು ಅವರ ಬಗ್ಗೆ ಹೆಚ್ಚಿನ ಆದರ ಅಭಿಮಾನಗಳನ್ನು ಹುಟ್ಟಿಸಿದ ಕೃತಿಗಳಾಗಿ ಪರಿಣಮಿಸಿದವು. ವಿದ್ಯಾರ್ಥಿದೆಸೆಯಲ್ಲಿ ಅವುಗಳನ್ನು ಓದಿದ್ದೇ ಓದಿದ್ದು. ನಮ್ಮ ಕಾವ್ಯಾಸಕ್ತಿಯನ್ನು ಪುಟಗೊಳಿಸಿದ ಕೃತಿಗಳಲ್ಲಿ ಅವುಗಳಿಗೂ ಒಂದು ಸ್ಥಾನವಿದೆ. ಪೌರ್ವಾತ್ಯ ಹಾಗೂ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಸಾರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ'ದಿಂದ ಒಂದೆಡೆಗೆ ದೊರಕಿದಂತಾಗಿತ್ತು. ರಸಾನುಭವದಿಂದ ಮನಸ್ಸು ಹದಗೊಂಡು, ಸಂಸ್ಕಾರಗೊಳ್ಳುವ ಪರಿಯನ್ನು ತಾತ್ವಿಕವಾಗಿ ಅದು ಬಿಂಬಿಸಿತು. ವಿಚಾರಗಳನ್ನು ತಿಳಿಯಾಗಿ ಮನಸ್ಸಿಗೆ ಮುಟ್ಟಿಸುವ ಆ ಗದ್ಯಶೈಲಿಯೂ ಅಷ್ಟೇ ಆಕರ್ಷಣೀಯವಾಗಿತ್ತು.

ಆ ಪ್ರಾಯದಲ್ಲಿ 'ಉಮರನ ಒಸಗೆ' ಒಂದು ಅನುವಾದಿತ ಕೃತಿಯೆಂಬುದನ್ನು ಮರೆಸಿ ಮನಸ್ಸನ್ನು ಸೆಳೆದುಕೊಂಡಿತ್ತು. 'ಅಲ್ಲಿ ಮರದಡಿಯಲ್ಲಿ', 'ಜೀವನದ ಸೊದೆಯ

ಸವಿಯಲ್ಕಿರುವುದೀ ನಿಮಿಷ', 'ಏಳು ಸಖಿ, ನಿನ್ನು ಗುರು ಮೀಟಲಿ ಸಿತಾರೆಯನು' ಮೊದಲಾದ ಪದ್ಯಗಳು. 'ನಾವೇನು ಚಿನ್ನವೇ. ಮರುಳೆ, ನಮ್ಮನದಾರು ಮಣ್ಣಿಕೆಳಗಿಂದ ಮೇಲೆತ್ತುವವರು ಮರಳಿ' ಇವೇ ಮೊದಲಾದ ಸಾಲುಗಳು ಈಗಲೂ ನೆನಪಿನ ತೋಟದಲ್ಲಿ ನಳನಳಿಸುತ್ತಿವೆ. ಆದರೆ ಡಿ.ವಿ.ಜಿ. ಒಂದು ರೀತಿ ಮನೆಮಾತಾಗಿ ಉಳಿದಿದ್ದು 'ಮಂಕುತಿಮ್ಮನ ಕಗ್ಗ' ದಿಂದ. ಇಂಥ ಒಳ್ಳೆಯ ಕೃತಿಗೆ ಅನಾಕರ್ಷಕವಾದ ಇಂಥ ವಿಚಿತ್ರ ಹೆಸರನ್ನೇಕಿಟ್ಟರೋ ಎಂದು ನಾನಾಗ ಅಚ್ಚರಿಗೊಂಡಿದ್ದೆ. 'ಈ ವಿಚಿತ್ರಕೆ ನಮಿಸು ಮಂಕುತಿಮ್ಮ' ಎಂದು ಗೆಳೆಯರೊಡನೆ ಹಾಸ್ಯ ಮಾಡಿದ್ದೂ ಉಂಟು. ಆಗ ಸಾಮಾನ್ಯವಾಗಿ ಭಾಷಣದಲ್ಲಿ. ಸಂಭಾಷಣೆಯಲ್ಲಿ, ಬರಹದಲ್ಲಿ ಮಂಕುತಿಮ್ಮನ ಪದ್ಯಗಳನ್ನು ಉದಾಹರಿಸದಿರುವುದೇ ಅಪರೂಪವಾಗಿತ್ತು, ಜೀವನದ ಅನುಭವ, ಬದುಕಿನ ಬಗೆ. ನಿಸರ್ಗದ ಸೊಗಸು, ತಿಳಿಯಾದ ತಾತ್ವಿಕ ವಿಚಾರ ಸರಣಿ, ಸರಳವಾದ ಭಾಷೆ, ಮಾತಿನ ಓಘ, ಸಮಯೋಚಿತ ಉಪಮೆ ದೃಷ್ಟಾಂತಗಳು– ಎಲ್ಲ ಎರಕಗೊಂಡಂತಿರುವ 'ಕಗ್ಗ' ಇಂದಿಗೂ ತನ್ನ ಪ್ರಭಾವವನ್ನು ಅಚ್ಚಳಿಯದೆ ಉಳಿಸಿಕೊಂಡಿದೆ. ಆಧುನಿಕ ಜೀವನದ ಸಂದರ್ಭದಲ್ಲಿ ಈ 'ಸರ್ವಜ್ಞ', ತ್ರಿಪದಿಯ ಬದಲು ಚೌಪದಿಯನ್ನು ಆರಿಸಿಕೊಂಡು ತನ್ನ ಅನುಭವವನ್ನು ಅಭಿವ್ಯಕ್ತಿಗೊಳಿಸಿರಬಹುದೆ ಎಂದು ಈಗಲೂ ಅನ್ನಿಸುತ್ತದೆ.

೧೯೫೩ರಲ್ಲಿ ನನ್ನ 'ಆಕಾಶಬುಟ್ಟಿ' ಕವನಸಂಗ್ರಹ ಪ್ರಕಟವಾದಾಗ ಅದರ ಪ್ರತಿಯನ್ನು ಪತ್ರದೊಂದಿಗೆ ಡಿ.ವಿ.ಜಿ.ಯವರ ಅವಲೋಕನೆಯ ಕೃಪೆಗಾಗಿ ಕಳಿಸಿಕೊಟ್ಟಿದ್ದೆ. ಅವರು ಉತ್ತರ ಬರೆಯಬಹುದೆಂದೇನೂ ನಾನು ನಿರೀಕ್ಷಿಸಿರಲಿಲ್ಲ. ಆದರೆ ಅವರಿಂದ ಪತ್ರ ಬಂದಾಗ ನನಗಾದ ಸಂತೋಷ ಹೇಳತೀರದು. ಆ ಪತ್ರ ಹೀಗಿತ್ತು :

ಜೂನ್ ೨೫, ೧೯೫೩

ಮಿತ್ರರಲ್ಲಿ ವಿಜ್ಞಾಪನೆ,

ನನ್ನ ಅನಾರೋಗ್ಯದ ಕಾರಣದಿಂದ ಇದುವರೆಗೂ ತಮ್ಮ ೬ನೆಯ ತಾರೀಖಿನ ಪತ್ರಕ್ಕಾಗಿಯೂ ಪುಸ್ತಕಕ್ಕಾಗಿಯೂ ವಂದನೆ ಸಲ್ಲಿಸುವುದು ತಡವಾಗಿದೆ. ಕ್ಷಮಿಸಬೇಕೆಂದು ಬೇಡುತ್ತೇನೆ. "ಆಕಾಶ ಬುಟ್ಟಿ" ಯಲ್ಲಿಯ ಕವಿತೆಗಳನ್ನು ಓದಿ ಸಂತೋಷಪಟ್ಟಿದ್ದೇನೆ. ಶೈಲಿ ಸರಳವಾಗಿಯೂ ಭಾವಗಳು ಲಲಿತವಾಗಿಯೂ ಇರುವುದರಿಂದ ಬಹುಮಂದಿ ಈ ಗ್ರಂಥವನ್ನು ಪ್ರೀತಿಯಿಂದ ಆದರಿಸಿಯಾರು ಎಂದು ನಂಬಿದ್ದೇನೆ. ತಮ್ಮ ಕೃಪೆಗಾಗಿ ತುಂಬ ಕೃತಜ್ಞನಾಗಿದ್ದೇನೆ.

ಇಂತಿ ವಿಜ್ಞಾಪನೆ
ವಿಧೇಯ
ಡಿ.ವಿ.ಗುಂಡಪ್ಪ

ಕವಿತೆಗಳ ಬಗ್ಗೆ ಅವರ ಮೆಚ್ಚಿಕೆಯ ಒಂದು ಮಾತು ನನ್ನಲ್ಲಿ ಉತ್ಸಾಹವನ್ನೂ

ಸಂತೋಷವನ್ನೂ ಹೆಚ್ಚಿಸಿದ್ದು ನಿಜವೇ. ಆದರೆ ಅವರ ಬರವಣಿಗೆಯ ರೀತಿ ನನ್ನನ್ನು ಮೂಕವಿಸ್ಮಿತನನ್ನಾಗಿಸಿತು. ಇಂಥ ಒಬ್ಬ ಮೇಧಾವಿ ಹಿರಿಯ ಸಾಹಿತಿ, ಅಪರಿಚಿತ ತರುಣನೊಬ್ಬ ಪುಸ್ತಕ ಕಳಿಸಿದ್ದಕ್ಕೆ 'ತಮ್ಮ ಕೃಪೆಗಾಗಿ ತುಂಬ ಕೃತಜ್ಞತೆಗಳು' ಎಂಬ ಭಾವವನ್ನು ವ್ಯಕ್ತಪಡಿಸುವುದಾಗಲಿ, 'ವಿಧೇಯ' ಎಂದು ಸಹಿ ಮಾಡುವುದಾಗಲಿ, ನನ್ನಂಥವನ ಊಹೆಗೂ ಮೀರಿದ್ದಾಗಿತ್ತು. ಅವರನ್ನೊಮ್ಮೆ ಪ್ರತ್ಯಕ್ಷ ಕಂಡು, ಅವರು ಹೊರಿಸಿದ ಕೃತಜ್ಞತೆಯ ಭಾರವನ್ನು ಇಳುಹಿಕೊಳ್ಳಲೇಬೇಕೆಂದು ನಿಶ್ಚಯಿಸಿದೆ.

ಮುಂದೆ ಎರಡು ವರ್ಷಗಳಲ್ಲಿ ಆ ಸುಯೋಗ ಒದಗಿ ಬಂದಿತು. ೧೯೫೫ರಲ್ಲಿ ಮೈಸೂರಿನಲ್ಲಿ ನೆರವೇರಿದ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ ಹಾಗೂ ವಿಮರ್ಶಾಗೋಷ್ಠಿಗಳಲ್ಲಿ ಭಾಗವಹಿಸಿ ಬೆಂಗಳೂರಿಗೆ ಬಂದೆ. ನಾನು ಬೆಂಗಳೂರಿಗೆ ಹೋದದ್ದು ಅದೇ ಮೊದಲು. ಜೊತೆಗೆ ಮಾರ್ಗದರ್ಶನಕ್ಕಾಗಿ ಮಿತ್ರರಾದ ಶ್ರೀ ಬಸವರಾಜ ಕಟ್ಟೀಮನಿಯವರೂ ಇದ್ದರು. ಬಸವನಗುಡಿಯ ನಾಗಸಂದ್ರ ರೋಡಿನಲ್ಲಿಯ ಡಿ.ವಿ.ಜಿ.ಯವರ ಮನೆಯನ್ನರಸಿಕೊಂಡು ಹೋದೆವು. ಮಧ್ಯಾಹ್ನ ಮೀರಿ ಹೋಗಿತ್ತು. ಅದೇ ಊಟ ಮುಗಿಸಿ ಹೊರ ಬಂದಿದ್ದರೆಂದು ತೋರಿತು. ನಾನು ಹಿಂದೆ ಧಾರವಾಡದಲ್ಲಿ ನೋಡಿದಾಗಿಗಿಂತ ಈಗ ಹೆಚ್ಚು ಸ್ಥೂಲವಾಗಿ ಕಂಡರು. ನಮ್ಮ ಪರಿಚಯದಿಂದ ಸಂತೋಷ ವ್ಯಕ್ತಪಡಿಸಿ, ಕುಡಿಯಲು ಪಾನಕ ಕೊಟ್ಟರು. ಮೈಸೂರು ಸಾಹಿತ್ಯ ಸಮ್ಮೇಳನದ ಬಗ್ಗೆ ವಿಚಾರಿಸಿದರು. ಅವರ ಆರೋಗ್ಯ ಚೆನ್ನಾಗಿಲ್ಲದ್ದನ್ನು ತಿಳಿದು, ತೊಂದರೆ ಕೊಡಬಾರದೆಂದು ನಾವೇ ಹೆಚ್ಚು ಹೊತ್ತು ಕುಳಿತುಕೊಳ್ಳದೆ ಗೌರವ ಪೂರ್ವಕ ನಮಸ್ಕಾರ ಸಲ್ಲಿಸಿ ಹೊರಬಂದೆವು. ಅವರನ್ನು ಮತ್ತೆ ಕಾಣುವ ಸಂಯೋಗ ಬರಲಿಲ್ಲ.

ಇಪ್ಪತ್ತು–ಇಪ್ಪತ್ತೈದರ ಪ್ರಾಯದಲ್ಲಿ ಓದಿದ 'ಕಗ್ಗ'ವನ್ನು ಅರುವತ್ತರ ಅಂಚಿನಲ್ಲಿ ಈಗ ಮತ್ತೆ ಓದಿದಾಗ ಇನ್ನೂ ಅರ್ಥಪೂರ್ಣವಾಗಿ ಅದರ ಮಹತ್ವ ಹೆಚ್ಚು ಮನದಟ್ಟಾಗುತ್ತಿದೆ. ಕಾವ್ಯದ ಭಾಗವಾಗಿ ಬರಲಿಲ್ಲವೆಂದೋ, ತಾತ್ವಿಕ ಜಿಜ್ಞಾಸೆಗೆ ನಾನೇ ಆತುರಪಡಲಿಲ್ಲವೆಂದೋ ಆಗ ಅಲಕ್ಷಿಸಿದ್ದ ಕೆಲವು ಪದ್ಯಗಳು ಈಗ ಮನಸ್ಸನ್ನು ಸಂಪೂರ್ಣ ಆವರಿಸಿಕೊಳ್ಳುತ್ತ ತಮ್ಮ ಜೀವನ ವಿವೇಕದಿಂದ, ಪಕ್ವವಾದ ವಿಚಾರ ಪ್ರಣಾಲಿಯಿಂದ ನಮ್ಮ ಅನುಭವದ ಒಂದು ಭಾಗವಾಗಿ ನಿಲ್ಲುತ್ತ, ಅಂತರಂಗವನ್ನು ಬೆಳಗುತ್ತವೆ. ಗುಣಕೆ ಕಾರಣ ಹಲವಾರು; ತತ್ವ ತರ್ಕಕ್ಕೆ ಸಿಲುಕುವುದಲ್ಲ; 'ಸುಳಿವುದಾಗೀಗಳದು ಸೂಕ್ಷ್ಮಾನುಭವಗಳಲಿ, ತಿಳಿಮನದಿ ನೋಳ್ಪರ್ಗೆ', ಪರಸತ್ತ್ವ ಮಹಿಮೆ ಮನಸಿನನುಭವದಲ್ಲಿ ಕಾಣುವಂಥದು; 'ಮನುಜರೊಳಗಾಗಾಗ ತೋರ್ಪ ಮಹನೀಯಗುಣ' ದೈವದದ್ಭುತವನ್ನು ಮನಗಾಣಿಸುತ್ತದೆ. ಯಾವುದರಲ್ಲಿಯೋ ಹೇಗೋ ಸಮಾಧಾನಗಳನ್ನರಸುತ್ತಿರುವ ಮಾನವನಿಗೆ' 'ಆನಂದವಾತ್ಮಗುಣ'ವೆಂಬುದರ ಅರಿವಿಲ್ಲ. 'ನಿತ್ಯ ಪರಿವರ್ತನೆಯೆ ಚೈತನ್ಯ ನರ್ತನೆಯ ಜಗದಲಿ ಸತ್ಯ', 'ಇರವಿದೇನೊಣರಗಳೆ?' ಎಂಬ ನಿರಾಶೆಯ ನಿಲವಿನಲ್ಲೇ ನಿಲ್ಲದೆ 'ಪೌರುಷವು ನವಸತ್ತ್ವ' ವೆಂಬುದನ್ನು ಸೂಚಿಸಲಾಗಿದೆ. ವಿಧಿಯನ್ನು ನೇಮಿಸಿದ್ದು ಬೇರಾವುದಕ್ಕೂ ಅಲ್ಲ. 'ನರಜಾತಿ

ಸಾನುಭೂತಿಯ ಕಲಿಯಲೆಂದು'. ಸೃಷ್ಟಿ ರಸಿಕತೆಗೆ ಗುರು 'ವೈಭವಮಯ ಸಂಸಾರದಲಿ ವಿನೋದವ ಕಾಣ್ಬ ರಸಿಕತೆಯೆ ಯೋಗ', 'ನಲುಮೆಯನು ಹೊರ ಹೊಮ್ಮಿಸುವುದು ನರನುನ್ನತಿಗೆ, ಒಲವಾತ್ಮ ವಿಸ್ತರಣ', ಪ್ರತ್ಯೇಕ ಸುಖ ಅಲ್ಲದು, ಗಳಿಗೆತೋರ್ಕೆಯದು; 'ವ್ಯಕ್ತಿಜೀವನದ ಸೊಂಪು ಸಮಷ್ಟಿ ಜೀವನದಿ' 'ಜೀವ ದೈವಂಗಳ ಪರಸ್ಪರಾನ್ವೇಷಣೆಯ ಲಾವಣ್ಯ ಸೃಷ್ಟಿಯಲಿ', ಬಾಳಿನಲ್ಲಿ 'ಹೋರಿ ಸತ್ತ್ವ ನಿಲಿಸು', 'ತಾಳುಮೆಯ ಪರಿಪಾಕ',– ಹೀಗೆಯೇ ಜೀವನದ ನೂರೊಂದು ಸಂದರ್ಭಗಳಲ್ಲಿ, ನೂರೊಂದು ಬಗೆಯಲ್ಲಿ ವಿವೇಕದ ಬುತ್ತಿಗೆ ಎಣ್ಣೆಯೆರೆದು ದೀಪ ಹೊತ್ತಿಸಿ, ಬೆಳಕು ಬೀರಿ ಮನಸ್ಸಿಗೆ ಸಮಾಧಾನವನ್ನೂ, ನೆಮ್ಮದಿಯನ್ನೂ ನೀಡುತ್ತವೆ ಕಗ್ಗದ ಪದ್ಯಗಳು. 'ಕಲೆಗಳಲಿ ಪರಮಕಲೆ ಜೀವನದ ಲಲಿತ ಕಲೆ' ಎಂಬುದನ್ನು ತೋರಿಸಿಕೊಟ್ಟು ಒಲಿದು ಒಲಿಸಿಕೊಳ್ಳುವ ಲೌಕಿಕ ನಯದ ಸೊಗಸನ್ನು ಒಳಹದದಿಂದ ತಿಳಿಯಲು ಪ್ರಚೋದಿಸುತ್ತ 'ವಿಶದಮಾದೊಂದು ಜೀವನಧರ್ಮ ದರ್ಶನ'ವನ್ನು ಒದಗಿಸುವುದರಲ್ಲಿಯೇ ಈ ಕಾವ್ಯದ ಶ್ರೇಷ್ಠತೆಯಿರುವುದೆಂದು ನನಗನಿಸುತ್ತದೆ.

ಬಹುಮುಖವಾದ ಸಾಮಾಜಿಕ ಸೇವೆಗೈಯುತ್ತಲೇ, ಜೀವನವನ್ನು, ಚೇತನವನ್ನು ಗೌರವಿಸುತ್ತ ಹಿರಿಯ ಬಾಳನ್ನು ಬಾಳಿ, ಆತ್ಮೋನ್ನತಿಗಾಗಿ ಸಾಹಿತ್ಯಕೃಷಿ ಗೈದು, ಚಿರಕಾಲ ಬಾಳುವ ಸತ್ವಪೂರ್ಣವಾದ ಕೃತಿಗಳಿಂದ ಕನ್ನಡದ ಹಿರಿಮೆಯನ್ನೂ ಹೆಚ್ಚಿಸಿದ 'ದಿವಿಜ'ರ ಪುಣ್ಯಸ್ಮರಣೆಗೆ ಈ ನೆನಹಿನ ದೀವಿಗೆ.

''ಧೀಮಂತ'
೧೯೮೮

■■

ಶಂಬಾ ಸ್ಮೃತಿ

ಧಾರವಾಡದ ನನ್ನ ಹಾಯಸ್ಕೂಲು ಹಾಗೂ ಕಾಲೇಜು ಅಭ್ಯಾಸದ ಅವಧಿಯಲ್ಲಿ (೧೯೪೦–೫೦) ನನ್ನ ಮನಸ್ಸನ್ನು ವಿಶೇಷವಾಗಿ ಆಕರ್ಷಿಸಿದ ಸಾಹಿತಿಗಳಲ್ಲಿ ಶಂ.ಬಾ. ಜೋಶಿಯವರೂ ಒಬ್ಬರಾಗಿದ್ದರು. ಗೌರವರ್ಣದ ಎತ್ತರದ ನಿಲುವಿನ ಇವರನ್ನು ಪ್ರತಿದಿನ ಸಂಜೆ ಸುಭಾಸ್ ರಸ್ತೆಯಲ್ಲಿ ಕಾಣುವದು ಸಾಮಾನ್ಯವಾಗಿತ್ತು. ಇವರು ಧರಿಸುತ್ತಿದ್ದ ಕರಿಟೊಪ್ಪಿಗೆಯಿಂದಾಗಿ ಇನ್ನಷ್ಟು ಎದ್ದು ಕಾಣುತ್ತಿದ್ದರು. ದ.ಬಾ. ಕುಲಕರ್ಣಿಯವರ 'ಮನೋಹರ ಗ್ರಂಥ ಭಂಡಾರ'ದಲ್ಲಿ ಸ್ವಲ್ಪ ಹೊತ್ತು ನಿಂತು ಮಾತಾಡಿ ಆಮೇಲೆ ಪೇಟೆಯಲ್ಲಿ ಹಾಯ್ದು ಕೈ ಚೀಲದಲ್ಲಿ ಕಾಯಿಪಲ್ಲೆ ಇತ್ಯಾದಿ ತೆಗೆದುಕೊಂಡು ಸಾಧನಕೇರಿಗೆ ಹಿಂತಿರುಗುತ್ತಿದ್ದರು. ವಿಕ್ಟೋರಿಯಾ ಹಾಯಸ್ಕೂಲಿನ (ಈಗಿನ ವಿದ್ಯಾರಣ್ಯ ಹಾಯ್‌ಸ್ಕೂಲು) ಶಿಕ್ಷಕ ವೃತ್ತಿಯಿಂದ ನಿವೃತ್ತರಾದ ಮೇಲೂ ಅವರ ಈ ದಿನಚರಿಯಲ್ಲಿ ಯಾವ ಬದಲಾವಣೆಯೂ ಆಗಿರಲಿಲ್ಲ.

* * *

ಶಂಬಾ ಅವರ ಶಿಷ್ಯರಾಗಿದ್ದ ಕವಿ ಚಿದಂಬರ ದೀಕ್ಷಿತ ಕಾಲೇಜಿನಲ್ಲಿ ನನ್ನ ಸಹಪಾಠಿಯಾಗಿದ್ದರು. ಶಂಬಾ ಅವರ ಸಂಶೋಧನ ಪ್ರವೃತ್ತಿ ಹಾಗೂ ವೈಚಾರಿಕತೆಯ ಬಗ್ಗೆ ದೀಕ್ಷಿತ್ ತುಂಬ ಗೌರವದಿಂದ ನನ್ನೆದುರು ಹೇಳುತ್ತಿದ್ದರು. ಅವರ ಮೂಲಕವೇ ಒಂದು ಸಂದರ್ಭದಲ್ಲಿ ನನಗೆ ಶಂಬಾ ಅವರ ಪರಿಚಯವಾಯಿತು. ಯುವಕರೊಂದಿಗೆ ಹೆಚ್ಚಿನ ಆಸಕ್ತಿ ಹಾಗೂ ಸಲಿಗೆಯಿಂದ ಮಾತಾಡುತ್ತಿದ್ದ ಶಂಬಾ ಅವರ ಬಗ್ಗೆ ನನಗೂ ಆದರವುಂಟಾಯಿತು. ಪತ್ರಿಕೆಗಳಲ್ಲಿ ಆಗೀಗ ಪ್ರಕಟವಾಗುತ್ತಿದ್ದ ನನ್ನ ಕವಿತೆಗಳ ಬಗೆಗೂ ಅವರು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಆದರೆ ಕೇವಲ ಭಾವುಕತನವನ್ನು ಅವರು ಇಷ್ಟಪಡುತ್ತಿರಲಿಲ್ಲವೆಂಬುದು ಅವರ ಮಾತಿನಲ್ಲಿಯೇ ವ್ಯಕ್ತವಾಗುತ್ತಿತ್ತು.

* * *

ಕರ್ನಾಟಕ ಏಕೀಕರಣದ ಆಂದೋಲನಕ್ಕೆ ಧಾರವಾಡವೇ ಸ್ಫೂರ್ತಿ ಕೇಂದ್ರವಾಗಿದ್ದುದರಿಂದ ವಿದ್ಯಾರ್ಥಿಗಳಾದ ನಮ್ಮ ಮೇಲೂ ಅದು ಪರಿಣಾಮ

ಬೀರದೆ ಇರಲಿಲ್ಲ. 'ಎದ್ದೇಳು ಕನ್ನಡಿಗಾ ಅಥವಾ ಅಸಂತೋಷವೇ ಏಳ್ಗೆಯ ಮೂಲ', 'ಕಣ್ಮರೆಯಾದ ಕನ್ನಡ', 'ಕಂನಡದ ನೆಲೆ', 'ಕಂನುಡಿಯ ಹುಟ್ಟು' ಇವೇ ಮೊದಲಾದ ಗ್ರಂಥಗಳು ನಾಡು–ನುಡಿಯ ಬಗ್ಗೆ ಅಭಿಮಾನವನ್ನು ಹುಟ್ಟಿಸುವುದರ ಜೊತೆಗೆ ನಾಡು ನುಡಿಯ ನಂಟನ್ನು ಸೂಚಿಸುವ ವಿಶಿಷ್ಟ ತಿಳುವಳಿಕೆಯನ್ನು ಓದುಗರಲ್ಲಿ ಹರಡಿದ್ದವು. ಕನ್ನಡ ನುಡಿಯ ಜೀವಾಳವನ್ನು ಶಂಬಾ ಅವರು ತಮ್ಮದೇ ಆದ ರೀತಿಯಲ್ಲಿ ಕಂಡುಕೊಂಡಿದ್ದರು. ಕರ್ನಾಟಕ ಸಂಸ್ಕೃತಿಯನ್ನು ಕುರಿತ ಅವರ ಮುಂದಿನ ವಿಸ್ತಾರವಾದ ಬರವಣಿಗೆಯಲ್ಲಿಯೂ ಭಾಷೆಯ ಬಗೆಗಿನ ಅವರ ಮೂಲ ಚಿಂತನೆ ಗಟ್ಟಿಗೊಳ್ಳುತ್ತಲೇ ಬಂದುದನ್ನು ಕಾಣಬಹುದು. ಯಾವುದಾದರೂ ಕೆಲವು ಶಬ್ದಗಳು, ಸಂಕೇತಗಳು, ಪ್ರತಿಮೆಗಳು ನಮ್ಮ ಚರ್ಚೆಗೆ ಒಳಗಾಗಿದ್ದರೆ ಅವರು ತಮ್ಮ ದೈಹಿಕ ಅಸ್ವಸ್ಥತೆಯನ್ನೂ ಮರೆತು ಎದ್ದು ಕೂಡುತ್ತಿದ್ದರು. ಹೊಸ ಅರ್ಥ, ಹೊಸ ವಿಚಾರವೇನಾದರೂ ಹೊಳೆದುಬಿಟ್ಟರೆ ಅವರ ಹಿಗ್ಗಿಗೆ ಮೇರೆಯೇ ಇರುತ್ತಿರಲಿಲ್ಲ.

* * *

ಉದಯೋನ್ಮುಖ ಬರಹಗಾರರನ್ನು, ಯುವ ಕಾರ್ಯಕರ್ತರನ್ನು ಶಂಬಾ ತುಂಬಾ ಪ್ರೀತಿಯಿಂದ ಕಾಣುತ್ತಿದ್ದರು. ಅಂಥವರ ಲೇಖನದಲ್ಲಿಯೋ ಮಾತಿನಲ್ಲಿಯೋ ಏನಾದರೂ ಒಂದು ಗುಣವನ್ನು ಕಂಡಿದ್ದರೆ ಅದನ್ನು ತಕ್ಷಣವೇ ಪತ್ರದ ಮೂಲಕ ತಿಳಿಸಿಬಿಡುತ್ತಿದ್ದರು. ೧೯೫೫ರಲ್ಲಿ ಧಾರವಾಡ ಆಕಾಶವಾಣಿಯಲ್ಲಿ ನಾನೊಂದು ಭಾಷಣ ಮಾಡಿದ್ದೆ. ಅದನ್ನು ಕೇಳಿ ತಮಗಾದ ಸಂತೋಷವನ್ನು ಮರುದಿನವೇ ಕಾರ್ಡಿನಲ್ಲಿ ಬರೆದು ತಿಳಿಸಿದರು. ಅದರ ಮೊದಲ ವಾಕ್ಯದಲ್ಲಿಯೇ 'ನಮೋಯುವಭ್ಯೋ' ಎಂಬ ವೇದದ ನುಡಿ ಕಂಗೊಳಿಸಿತ್ತು.

* * *

'ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ' ಗ್ರಂಥ ಪ್ರಕಟಗೊಂಡಾಗ ೧೯೬೭ರಲ್ಲಿ ಅದನ್ನು ಕುರಿತ ವಿಚಾರ ಸಂಕಿಣವೊಂದನ್ನು ವಿದ್ಯಾರಣ್ಯ ಹಾಯಸ್ಕೂಲಿನ ಸಭಾಗೃಹದಲ್ಲಿ ಕುಲಪತಿ ಡಾ. ಡಿ. ಸಿ. ಪಾವಟೆಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದ್ದಿತು. ಅದರಲ್ಲಿ ಭಾಗವಹಿಸಿದ್ದವರಲ್ಲಿ ನಾನೂ ಒಬ್ಬನಾಗಿದ್ದೆ.

ಅಂದಿನ ಪರಿಸಂವಾದೊಳಗಿನ ಅನೇಕ ವಿಚಾರಗಳ ಪರಿಣಾಮದಿಂದ ತುಂಬ ಹರ್ಷಿತರಾಗಿ ಡಾ. ಪಾವಟೆಯವರು ಶಂಬಾ ಅವರಿಗೆ ಮಾತನಾಡಲೇಬೇಕೆಂದು ಆತ್ಮೀಯ ಭಾವದಿಂದ ಹೇಳಿದ್ದು ಅವರನ್ನು ರೋಮಾಂಚಿತಗೊಳಿಸಿತು. ಶಂಬಾ ಅವರು ಮಾತನಾಡುತ್ತ, ಮಹಾರಾಷ್ಟ್ರದಲ್ಲಿ ತಮ್ಮ ಲೇಖನ ಕೃತಿಗಳ ವಿಚಾರಗಳಿಂದ ಮತ ಪರಿವರ್ತನವಾದರೂ ಕಂನಾಡಿನಲ್ಲಿ ಒಂದು ಗುಂಪಿನ ಒಳಸಂಚಿನ ಮೂಲಕ ಇವರ ಪ್ರಭಾವಲಯದಲ್ಲಿ ಬರುವ ಕಂನಾಡಿನ ಸಾಹಿತ್ಯಕರೂ ತಮ್ಮ ಬಗೆಗೆ ಖಾಸಗೀ ಆತ್ಮೀಯತೆ

ತೋರಿದರೂ ಬಹಿರಂಗವಾಗಿ ತಮ್ಮೊಡನೆ ಸಹಕರಿಸಲು ತಮ್ಮ ಪುಸ್ತಕಗಳ ಬಗ್ಗೆ ಬರೆಯಲು ಹಿಂಜರಿಯುತ್ತಿದ್ದುದನ್ನು ಸಭೆಗೆ ತೋಡಿಕೊಂಡರು. ಯಾರ ಹೆಸರನ್ನು ಎತ್ತದೆ ತಮಗಾದ ಅನ್ಯಾಯದ ಪುರಾವೆ ಹೇಳುವಾಗ ಸಭೆಯಲ್ಲಿ ಎದುರಿಗೇ ಕುಳಿತಿದ್ದ ಬೇಂದ್ರೆಯವರು ಎದ್ದು ನಿಂತು ಶಂಬಾ ಅವರು ಆಡಿದ ಮಾತುಗಳು ತಮ್ಮನ್ನು ಉದ್ದೇಶಿಸಿಯೇ ಹೇಳಿದವುಗಳು ಎಂದು ಅದಕ್ಕೆ ವಿವರಣೆ ನೀಡುತ್ತಿರುವಂತೆಯೇ ಅವರಿಬ್ಬರ ನಡುವೆ ಮಾತಿನ ಚಕಮಕಿ ನಡೆದು ಸಭೆ ದಿಗ್ಭ್ರಮೆಗೊಂಡಿತು. ಡಾ. ಪಾವಟೆಯವರು ಇಬ್ಬರನ್ನು ಹೇಗೊ ಸಮಾಧಾನಗೊಳಿಸಿ ಸಮಾರೋಪ ಭಾಷಣ ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು.

ಈ ಪ್ರಸಂಗಕ್ಕೆ ಹಿನ್ನೆಲೆಯಾಗಿದ್ದ ಒಂದು ವಿಷಯವನ್ನು ಇಲ್ಲಿ ಹೇಳಬಹುದು. 'ಕಂನಾಡು' ವಿಚಾರದ ಶಂಬಾ ಅವರ ಗಂಭೀರ ಲೇಖನವೊಂದು 'ಜಯಂತಿ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆಗ 'ಕಂ–ನಾಡು' ಪದವು ಜನಪ್ರಿಯವಾಗಿ ಹಲವು ಲೇಖಕರು ಅದನ್ನು ಬಳಸತೊಡಗಿದ್ದರು. (ನಾನು ನನ್ನ ಕವಿತೆಯೊಂದರಲ್ಲಿ ಅದನ್ನು ಬಳಸಿದ್ದೆ. ಐದು ಮಾತ್ರೆಯ ಒಂದು ಗಣವಾಗಿಯೂ ಅದು ಉಪಯುಕ್ತವೆನಿಸಿತ್ತು.) ಮುಂದೆ ಅದೇ 'ಜಯಂತಿ'ಯಲ್ಲಿ ಬೇಂದ್ರೆಯವರ 'ಕಿಂ' 'ಕಂ' ಎಂಬ ಲೇಖನ ಪ್ರಕಟವಾಯಿತು. ಗಂಭೀರ ಚರ್ಚೆಗೆ ಬೇಂದ್ರೆಯವರ ವಿಡಂಬನೆಯಿಂದ ಕೂಡಿದ ಉತ್ತರ ಸಭ್ಯತನವಲ್ಲವೆಂದು ಭಾವಿಸಿದ ಶಂಬಾ ಅವರು ಸಂಪಾದಕರಾದ ಬೆಟಗೇರಿ ಕೃಷ್ಣಶರ್ಮರಿಗೆ ಈ ಬಗ್ಗೆ ತಮ್ಮ ಅಸಮ್ಮತಿ ಸೂಚಿಸಿದರು. ಯಾವ ಭಾಷಿಕರ ಮೂಲಿಗರು ಯಾರು, ಅವರ ನಾಡು–ನುಡಿ, ಸಂಸ್ಕೃತಿ ಬೆಳೆದುದು ಹೇಗೆ ಎಂಬುದನ್ನು ಅರಿಯಲು ಮಾಡಿದ ಪ್ರಯತ್ನದ ವಿಡಂಬನವು ನಡೆದುದನ್ನು ನೋಡಿಯೂ ಸಮಕಾಲೀನ ಸುಸಂಸ್ಕೃತ ವಿದ್ಯಾವಂತರೆಂಬ ವಿದ್ವಾಂಸರು ಇಂಥದನ್ನು ವಿರೋಧಿಸದಿರುವುದಕ್ಕೆ ಶಂಬಾ ಬೇಸರಪಟ್ಟುಕೊಂಡಿದ್ದರು.

ಅಂದಿನ ವಿಚಾರ ಸಂಕಿರಣದ ಸಂದರ್ಭದಲ್ಲಿ ಶಂಬಾ ಅವರು ಆಡಿದ ಮಾತುಗಳ ಧಾಟಿಗೆ ಇದೂ ಒಂದು ಕಾರಣವಾಗಿತ್ತೆಂದು ತೋರುತ್ತದೆ. ಆದರೂ ಅಂದಿನ ಸಂದರ್ಭಕ್ಕೆ ಅದು ಅನವಶ್ಯವಾಗಿತ್ತು ಎಂಬ ಅಭಿಪ್ರಾಯವನ್ನು ನಾನೂ ಡಾ. ಕೆ. ಕೃಷ್ಣಮೂರ್ತಿಯವರೂ ಶಂಬಾ ಅವರಿಗೆ ಸಭೆಯ ನಂತರ ಹೇಳಿದೆವು. ಒಂದೆರಡು ದಿನಗಳ ತರುವಾಯ ಶಂಬಾ ಅವರು ನನಗೊಂದು ದೀರ್ಘ ಪತ್ರ ಬರೆದು (೨೮–೭–೧೯೬೭) ಕೆಲ ವಿಷಯಗಳನ್ನು ಮುಕ್ತ ಮನಸ್ಸಿನಿಂದ ನಿರೂಪಿಸಿದ್ದರು. ಅವರ ನೋವನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಅದರ ಕೆಲ ಅಂಶಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಬಹುದು.

''ಸದೋಷಮತಿ ನ ತ್ಯಜೇತ್'' ಸ್ವರೂಪದ ಕರ್ತವ್ಯವು ನನ್ನನ್ನು ಎದುರಿಸುವಾಗ ಯಾರ ರಾಗದ್ವೇಷಕ್ಕೆ ಅಥವಾ ಟೀಕೆಗೆ ಅಳುಕದೆ, ಆ ಉರಿಯಲ್ಲಿ ನುಗ್ಗಿ ತನ್ನನ್ನು ಹುರುಪಳಿಸಿಕೊಳ್ಳಲಿಕ್ಕೆ ಹಿಂದೆಗೆಯಲಾಗದು ಎಂಬ ನಿಶ್ಚಿತ

ಅಭಿಪ್ರಾಯದವನಾಗಿದ್ದೇನೆ.... ಸಜ್ಜನ ಹೃದಯಗಳಿಗೆ ಮೊರೆಯಿಡುವ ಹೊರತು ನನ್ನಲ್ಲಿ– ಈ ಅನಿರೀಕ್ಷಿತ ವಿಶ್ವವಿದ್ಯಾಲಯಗಳ ಸೌಭಾಗ್ಯತಿಲಕವಿಲ್ಲದ ಅಸಂಸ್ಕೃತ ವ್ಯಕ್ತಿಗೆ ಬೇರೇನು ದಾರಿ? ಉಪಕುಲಪತಿಗಳೇ ಸಾಕ್ಷಿಯಾಗಿ ನನ್ನ ಈ ವರೆಗಿನ ವ್ಯಾಸಂಗದ ಕಥೆ, ಫಲಿತ ಸಮೀಕ್ಷಿಸಲಿ, ಬೇರೆ ಯಾವ ಸ್ಥಾನ ಮಾನಕ್ಕೂ ನಾನು ಬೆಲೆಗೊಡದೆ ಉಪಕುಲಪತಿ ಡಾ. ಗಾಡಗೀಳರ ಮಿತ್ರ ಡಾ. ಪಾವಟೆ ಅವರೇ ಅಧ್ಯಕ್ಷರಾಗತಕ್ಕದ್ದು, ಇಲ್ಲವಾದರೆ ಈ ಸಮಾರಂಭವೇ ಬೇಡ ಎಂದು ನಿರ್ಧರಿಸಿದೆ. ಈ ನಿರ್ಧಾರದ ಅರ್ಥ ಯಾರು ಏನು ಗ್ರಹಿಸಿರುವರೊ ನಾನರಿಯೆ. ಆದರೆ ನೀವು ಮಾನ್ಯರಿಗೆ ಆಮಂತ್ರಿಸುವಾಗ 'ಸಾಕ್ಷಿ'ಯಾಗಿ ಇದ್ದುದು ನನ್ನ ಸುದೈವ.... ಅವರ ಸ್ಥಾನಮಾನದ ಆದ್ಯತೆಯ ಲವಲವೇಶವೂ ಇಲ್ಲದೆ, ಗೌರವಪೂರ್ವಕವಾಗಿ ಈ ಬಡಪಾಯಿ ಅಶಿಕ್ಷಿತ ಪ್ರಯತ್ನವಾದಿಯನ್ನು ನಡೆಸಿಕೊಂಡು ಆ ೨–೩" ತಾಸಿನ ಅನುಭವ ನನಗೆ ನವಚೈತನ್ಯದಾಯಿಯೆನಿಸಿತು.

''ಮಹಾರಾಷ್ಟ್ರದಲ್ಲಿ ನನ್ನ ಪುಸ್ತಕ ನಿಷೇಧಿಸಿ ಸುಡುವ ಯೋಜನೆಗಳು ಆದವು. ಅಲ್ಲಿಯ ಆಚಾರವಂತ ಪತ್ರಿಕಾಕಾರರು, ವಿಮರ್ಶಕ ವಿದ್ವಾಂಸರು ಈ ಕೃತ್ಯವನ್ನು ನಿಷೇಧಿಸಿದ್ದರಿಂದ ನನ್ನ ಹಾಗೂ ಭಾಗವತರ ನಿಷೇಧಕ ಸಭೆಗಳು ಪ್ರತ್ಯಕ್ಷದಲ್ಲಿ ಬಹಿರಂಗವಾಗಿ ನಡೆಯಲಿಲ್ಲ. ಇದು ೧೯೫೨–೫೩ರಲ್ಲಿ, ೧೯೬೦ರ ಮಧ್ಯಕಾಲದಲ್ಲಿ ಪ್ರೊ. ಬೇಡೇಕರ, ಡಾ. ಗ್ರಾಮೋಪಾಧ್ಯೆ, ಡಾ. ಅ. ನಾ. ದೇಶಪಾಂಡೆ ಪ್ರಭೃತಿ ವಿದ್ವಾಂಸರು ದಿನದಿನಕ್ಕೂ ನನ್ನ ವಿಚಾರಗಳಿಗೆ ಹೆಚ್ಚಿನ ಆಧಾರ ದೊರೆತ ಹಾಗೆ (ಮರಾಠಿ ಸಂಸ್ಕೃತಿ)ಯ ಪಕ್ಷಪಾತಿಗಳಾಗಿರುತ್ತಾರೆ ಎಂಬುದು ವಾಯಿಯ ಪ್ರೊ. ಜೋಶಿಯವರ ಲೇಖನದಿಂದಲೇ ನನಗೆ ಮೊತ್ತ ಮೊದಲು ಗೊತ್ತಾದುದು. ಸಭೆಯಲ್ಲಿ ಡಾ. ಪಾವಟೆ ಅವರ ಬೆಂಬಲ ದೊರೆತಾಗ, ನಮ್ಮಲ್ಲೂ ಇನ್ನು ನನ್ನ ಖಗ್ರಾಸಗ್ರಹಣ ನಿರಾಸವಾಗತೊಡಗಿತೆಂದು ತೋರಿತು... ಅದರಿಂದ ನನಗೆ 'ಕಂ' 'ಕಿಂ' ಎತ್ತಬೇಕಾಯಿತು. ನಮ್ಮ ನಾಡಿನ ಪಟ್ಟಭದ್ರ ಲೇಖಕರು ಒಬ್ಬರೂ ನನ್ನ ಗ್ರಂಥವನ್ನು ವಿಚಾರ ಚರ್ಚೆಗೆ ಎತ್ತಿಲ್ಲ, ನನ್ನ ಗ್ರಂಥದ ಒರತೆಯಿಂದ ನೀರು ಕುಡಿದರೂ ನನ್ನ ಬಾವಿಯಲ್ಲ ಅದು ತಮ್ಮ ಒರತೆ ಎಂದು ಬಗೆಯುತ್ತ ಬಂದಿದ್ದಾರೆ. ಈ ಅನಾಸ್ಥೆ ಅನುಲ್ಲೇಖದಿಂದ ನಡೆದ 'ಖೂನಿ'ನ ರೀತಿ ಸಾರ್ವಜನಿಕವಾಗಿ ಎಲ್ಲರಿಗೂ ತಿಳಿಯುವದು ಅವಶ್ಯವೆಂದೇ ನನಗೆ ಕರ್ಣಾಟ– ಮಹಾರಾಷ್ಟ್ರದ ವಿದ್ವಾಂಸರೊಳಗಿನ ಪ್ರತಿಕ್ರಿಯೆಗಳೊಳಗಿನ ವ್ಯತ್ಯಾಸ ಕಂಡಾಗ ತೋರಿತು....

''ಸಾಹಿತ್ಯ ಕ್ಷೇತ್ರದಲ್ಲಿ ನಡೆದ ಈ ಬಗೆಯ ಅನ್ಯಾಯ, ಕೊಲೆಪಾತಗಳನ್ನು ಕಂಡೂ ಕಂಡೂ ಅವುಗಳ ನಿಷೇಧವು ಸಕಾಲದಲ್ಲಿ ಆಗದೆ ಇದ್ದರೆ ಜೀವನದಲ್ಲಿ ನೈತಿಕ ಮೌಲ್ಯಗಳ ಸಂರಕ್ಷಣೆಯಾಗುವ ಬಗೆಯಾವುದು?.... 'ಉಭಯ ಪಕ್ಷದವರ ತಪ್ಪೂ ಇರದೆ ಜಗಳವಾಗಲು ಶಕ್ಯವಿಲ್ಲ' ಎಂಬ ಗ್ರಹಿಕೆ ತೀರ ಸುಳ್ಳಲ್ಲ, ಆದರೆ ಆ ಜಗಳದ ತಳಪಾಯದಲ್ಲಿ ಇರುವ ಕಾರಣಗಳನ್ನು ಕೇಳಲು ದೊರೆತ ಬಳಿಕಾದರೂ ಅವುಗಳ ಬಗೆಗೆ ನಿರ್ಣಯಕ್ಕೆ ಬರುವ ಪ್ರಯತ್ನವಾಗುವದು ಅವಶ್ಯವಿಲ್ಲವೆ?....''

ಆದರೆ ಬರುಬರುತ್ತ ಶಂಬಾ ಅವರು ಈ 'ಖಗ್ರಾಸಗ್ರಹಣ' ದಿಂದ ಮುಕ್ತರಾದರು. ಅವರು ತಮ್ಮ ವಿದ್ವತ್‌ಪೂರ್ಣ ಚಿಂತನೆಗಳಿಂದ ಕರ್ನಾಟಕದ ಸಾಂಸ್ಕೃತಿಕ ಹಾಗೂ ಬೌದ್ಧಿಕ ಕ್ಷೇತ್ರಕ್ಕೆ ಹೊಸ ಆಯಾಮ ನೀಡಿದವರು ಎಂಬುದನ್ನು ವಿದ್ವಾಂಸರು ಕಂಡುಕೊಂಡರು. ಪ್ರತಿಷ್ಠಿತ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ ನೀಡಿ ಅವರನ್ನು ಗೌರವಿಸಿತು. ಉತ್ಕೃಷ್ಟವಾದ ಅಭಿನಂದನ ಗ್ರಂಥವನ್ನು ಸಮರ್ಪಿಸಿ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ನೀಡಿ ನಾಡಿನ ಜನತೆ ಅವರನ್ನು ಯೋಗ್ಯ ರೀತಿಯಲ್ಲಿ ಸನ್ಮಾನಿಸುವದರೊಂದಿಗೆ ತನ್ನ ಮಾನವನ್ನೂ ಕಾಪಾಡಿಕೊಂಡಿತು. ಕೊನೆಗಾಲದಲ್ಲಿ ಶಂಬಾ ಅವರು ತೃಪ್ತಿಯಿಂದ, ಸಂತೋಷದಿಂದ ಕಾಲ ಕಳೆದರಾದರೂ ಕನ್ನಡಿಗರ ಸೋಮಾರಿತನ ಹಾಗೂ ಅಭಿಮಾನಶೂನ್ಯತೆಯ ಬಗ್ಗೆ ಅತೃಪ್ತರಾಗಿಯೇ ಇದ್ದರು. ತಮ್ಮ 'ಅನ್ವೇಷಣೆ' ಯ ಹಾದಿಯಲ್ಲಿ ಮಾತ್ರ ಅವರು ಯಥಾ ಪ್ರಕಾರ ಮುಂದುವರಿದಿದ್ದರು.

* * *

ಬೆಂಗಳೂರು ದೂರದರ್ಶನದ ಡಾ. ಶ್ರೀನಿವಾಸ ಕುಲಕರ್ಣಿಯವರು ಧಾರವಾಡಕ್ಕೆ ಬಂದಾಗ (೧೯೮೯) ಒಪ್ಪೊತ್ತು ನನ್ನೊಡನಿದ್ದರು. ಮರುದಿನ ಮುಂಜಾನೆ ಕೆಲಗೇರಿ ಕೆರೆ ಹಾಗೂ ಬಳಿಯ ಮಾವಿನತೋಪುಗಳಲ್ಲಿ ಸುತ್ತಾಡಿಕೊಂಡು ಬರುವಾಗ ಶಂಬಾ ಅವರ ಆರೋಗ್ಯವನ್ನು ವಿಚಾರಿಸಿಕೊಂಡು ಬರಲು ಅವರ ಮನೆಗೆ ಹೋದೆವು. ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ. ಬಳಲಿದಂತೆ ಕಂಡುಬಂದರು. ಅಂಥದರಲ್ಲೂ ಅವರ ಮನೆಯವರು ನಮಗೆ ಆತಿಥ್ಯ ನೀಡಿದರು. ಮರುದಿನವೇ ಒಂದು ಸಣ್ಣ ಶಸ್ತ್ರ ಚಿಕಿತ್ಸೆಗಾಗಿ ಶಂಬಾ ಅವರು ಆಸ್ಪತ್ರೆಗೆ ಹೋಗಲಿರುವುದು ತಿಳಿಯಿತು. ದೂರದರ್ಶನಕ್ಕಾಗಿ ಅವರ ಸಂದರ್ಶನ ತೆಗೆದುಕೊಳ್ಳುವ ಕಾರ್ಯಕ್ರಮವೇನೂ ಪೂರ್ವನಿರ್ಧಾರಿತವಾಗಿರಲಿಲ್ಲ. ಆದರೂ ಶ್ರೀನಿವಾಸ ಕುಲಕರ್ಣಿಯವರಿಗೆ ಏನೆನಿಸಿತೊ ಏನೊ, ಆ ಕೆಲಸವನ್ನು ಈಗಲೇ ಪೂರೈಸಿಬಿಡಬೇಕೆಂದು ಮನಸ್ಸಾಯಿತು. ಆದರೆ ಸದ್ಯದ ಸ್ಥಿತಿಯಲ್ಲಿ ಅದು ಹೇಗೆ ಸಾಧ್ಯ? ನಾನು ಬಹಳ ಅನುನಯದಿಂದ ಈ ವಿಷಯವನ್ನು ಶಂಬಾ ಅವರಲ್ಲಿ ಪ್ರಸ್ತಾಪಿಸಿ ಅವರ ಮೂಡನ್ನು ತಿಳಿದುಕೊಳ್ಳಲು ಪ್ರಯತ್ನಿಸಿದೆ. ''ನೀವು ಸಂದರ್ಶನ ತೆಗೆದುಕೊಳ್ಳುವುದಾದರೆ ಆಗಬಹುದು'' ಎಂದರು. ಮನೆಯ ಅಂಗಳದ ಕೈತೋಟದಲ್ಲಿ ಕುರ್ಚಿಯ ಮೇಲೆ ಕೂಡ್ರಿಸಿ ಅವರ ಸಂಶೋಧನೆಗೆ ಸಂಬಂಧಪಟ್ಟಂತೆ ಸುಮ್ಮನೆ ನಾಲ್ಕೈದು ಪ್ರಶ್ನೆಗಳನ್ನು ಕೇಳಿದೆ. ತಮ್ಮ ನೆನಪುಗಳೊಂದಿಗೆ ಆಲೋಚನಾಪರವಾಗಿ ಅವರು ಮಾತಾಡುವದು ನಮಗೆ ಮುಖ್ಯವಾಗಿತ್ತು. ಎಲ್ಲಿಯೂ ಕೊಂಡಿ ತಪ್ಪದಂತೆ ಸಹಜವಾಗಿ ನಿಧಾನವಾಗಿ ಅವರು ಅದನ್ನು ಪೂರೈಸಿದರು. ಮಡದಿ ಪಾರ್ವತಿಬಾಯಿಯವರು ಬಾಗಿಕೊಂಡೇ ಬಂದು ಮತ್ತೆ ಎಲ್ಲರಿಗೂ ಚಹಕೊಟ್ಟರು. ದಿಲ್ಲಿ ದೂರದರ್ಶನದ ಪ್ರಾದೇಶಿಕ ಕಾರ್ಯಕ್ರಮದಲ್ಲಿ ಈ ಸಂದರ್ಶನ ಮೊದಲು ಪ್ರಸಾರಗೊಂಡಿತು. ಅದನ್ನು ನೋಡಿ ತಮಗಾದ ಸಂತಸವನ್ನು ನನಗೆ ದೂರವಾಣಿಯ ಮೂಲಕ ತಿಳಿಸಿದರು.

೨೮–೯–೯೧ರಂದು ಶಂಬಾ ಅವನ ನಿಧನವಾರ್ತೆಯನ್ನು ಕೇಳಿದಾಗ ಎರಡು ವರ್ಷಗಳ ಹಿಂದೆ ಮನೆಗೆ ಹೋದಾಗ ಅವರು ಅಂದ ಮಾತು ನೆನಪಾಯಿತು. 'ಇನ್ನೇನೂ ಬಹಳ ದಿನಗಳಿಲ್ಲ'. ಅವರೆಷ್ಟೇ ಹಣ್ಣಾಗಿದ್ದರೂ ಇನ್ನೂ ಚಟುವಟಿಕೆ ತೋರಿಸುತ್ತಿದ್ದ ಅವರ ಮನೆಯವರನ್ನು ನೆನಸಿಕೊಂಡೆ.

ಅಂತ್ಯದರ್ಶನಕ್ಕೆ ಹೋದಾಗ ಆಶ್ಚರ್ಯ! ಶಂಬಾ ಅವರ ಮಗ್ಗುಲದಲ್ಲಿಯೇ ಅವರ ಸಹಧರ್ಮಿಣಿಯೂ ನಿಶ್ಚಿಂತರಾಗಿ ಮಲಗಿದ್ದರು.

'ಶಂಬಾ ಸ್ಮೃತಿಗಂಧ'
೧೯೯೬

■■

ವಿ. ಸೀ. ಮಾಸದ ನೆನಪು

ವಿದ್ಯಾರ್ಥಿ ದೆಸೆಯಲ್ಲಿ ನನಗೆ ಹಾಗೂ ನನ್ನಂಥವರಿಗೆ ಹೊಸಗನ್ನಡ ಕಾವ್ಯದಲ್ಲಿ ಅಭಿರುಚಿ ಹುಟ್ಟಲು ಕಾರಣವಾದದ್ದು ಶ್ರೀಯವರು ಸಂಪಾದಿಸಿದ 'ಕನ್ನಡದ ಬಾವುಟ', ಆಗಿನ ಪ್ರಮುಖ ಕವಿಗಳ ಆಯ್ದ ರಚನೆಗಳು ಒಂದೆಡೆ ಓದಲು ಅದರಲ್ಲಿ ದೊರೆತವು. ಅವುಗಳಲ್ಲಿ ವಿ.ಸೀ. ಅವರ ಮೂರು ಕವನಗಳಿವೆ. ಸರಳ ಹಾಗೂ ಲಲಿತ ಶೈಲಿಯಲ್ಲಿ 'ಲಾಲ್‌ಬಾಗ್' ಬಣ್ಣಬಣ್ಣವಾಗಿ ಕಣ್ಣಮುಂದೆ ಕಟ್ಟಿದರೆ, 'ಕಸ್ಮೈದೇವಾಯ', 'ಅಭೀಃ' ಕವಿತೆಗಳನ್ನು ನಮ್ಮಷ್ಟಕ್ಕೆ ಗಟ್ಟಿಯಾಗಿ ಓದಿಕೊಳ್ಳುತ್ತ, ಅವುಗಳ ಭಾವ–ಅರ್ಥ ಆ ವಯಸ್ಸಿಗೆ ಎಟುಕದಿದ್ದರೂ ಆ ಪದ್ಯಗಳ ಧೀರವಾದ ನಡೆ ಪ್ರಭಾವಶಾಲಿಯಾಗಿ ಮನಸ್ಸನ್ನು ಸೆಳೆದಿದ್ದವು. ಉಳಿದ ಕವಿಗಳ ಜೊತೆಗೆ ವಿ.ಸೀ. ಹೆಸರು ನಮ್ಮ ಮನಸ್ಸಿನಲ್ಲಿ ನಾಟಿದ್ದು ಹೀಗೆ. ಕಾವ್ಯಗಾಯನ ಕಾರ್ಯಕ್ರಮದಲ್ಲಿ 'ಎಮ್ಮ ಮನೆಯಂಗಳದಿ' ಹಾಗೂ 'ಕಾದಿರುವಳು ಶಬರಿ' ಕವಿತೆಗಳೂ ಆಗಾಗ ಕಿವಿಗೆ ಬಿದ್ದು ಭಾವತರಂಗಗಳನ್ನು ಎಬ್ಬಿಸುತ್ತಿದ್ದವು. ಆಗ ಬಂದ ಗದ್ಯಕೃತಿಗಳನ್ನಂತೂ ಒಂದು ಸಲ ಓದಿದರೆ ಸಾಲದು, ಮತ್ತೆ ಮತ್ತೆ ಓದಬೇಕೆನಿಸುತ್ತಿತ್ತು. 'ಪಂಪಾಯಾತ್ರೆ' ಹತ್ತಾರು ಸಲ ಓದಿಸಿಕೊಂಡು ಸಂತೋಷ ನೀಡಿದ್ದನ್ನು ಇಂದಿಗೂ ಮರೆತಿಲ್ಲ.

* * *

ಧಾರವಾಡಕ್ಕೆ ಹೊರಗಿನಿಂದ ಯಾರಾದರೂ ಸಾಹಿತಿಗಳು ಬಂದಾಗ ಅವರ ಭಾಷಣಗಳನ್ನು ನಾನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಮೇಲಿಂದ ಮೇಲೆ ಧಾರವಾಡಕ್ಕೆ ಬರುತ್ತಿದ್ದವರೆಂದರೆ ಅ.ನ.ಕೃ. ಅವರ ಭಾಷಣಕ್ಕೆ ವಿದ್ಯಾರ್ಥಿಗಳು ಮುಗಿಬೀಳುತ್ತಿದ್ದರು. ಬಿ.ಎಂ.ಶ್ರೀ. ಯವರು ಕೆಲದಿನ ಧಾರವಾಡದಲ್ಲಿಯೇ ನೆಲೆಸಿದ್ದರಿಂದ ೨–೩ಸಲ ಸಾರ್ವಜನಿಕ ಸಭೆಯಲ್ಲಿ ಅವರ ಮಾತುಗಾರಿಕೆಯನ್ನು ಕೇಳುವ ಭಾಗ್ಯ ಒದಗಿತ್ತು. ಬಹಳ ದಿವಸಗಳಿಂದ ನಾನು ನೋಡಬಯಸಿದ ಹಾಗೂ ಕೇಳಬಯಸಿದ ಸಾಹಿತಿಗಳಲ್ಲಿ ವಿ.ಸೀ. ಅವರೂ ಒಬ್ಬರಾಗಿದ್ದರು. ನಾನು. ಬಿ.ಎ. ದಲ್ಲಿದ್ದಾಗ ಆ ಸುಯೋಗವೂ ಒದಗಿ ಬಂದಿತು.

೧೯೪೯–೧೯೫೦ ಮಹಾಕವಿ ರನ್ನನ ಸಹಸ್ರ ಸಾವಂತ್ಸರಿಕೋತ್ಸವದ ನಿಮಿತ್ತ ಕರ್ನಾಟಕ ವಿಶ್ವವಿದ್ಯಾಲಯ ಸಮಾರಂಭವೊಂದನ್ನು ಏರ್ಪಡಿಸಿತ್ತು. ವಿಶ್ವವಿದ್ಯಾಲಯ

ಸ್ಥಾಪನೆಗೊಂಡು ಅದೇ ತಾನೇ ಒಂದು ವರ್ಷವಾಗಿದ್ದಿತು. ಪ್ರೊ. ಮಾಳವಾಡರು ವಿಶೇಷ ಆಸ್ಥೆ ವಹಿಸಿದ್ದರಿಂದ ಕರ್ನಾಟಕ ಕಾಲೇಜಿನ ಬಾಟನಿಹಾಲ್ ಅಂದು ವಿದ್ಯಾರ್ಥಿಗಳಿಂದಲೂ ಸಾಹಿತ್ಯಾಸಕ್ತರಿಂದಲೂ ತುಂಬಿ ತುಳುಕುತ್ತಿತ್ತು. ಅಂದೆ ನನಗೆ ವಿ.ಸೀ. ಯವರ ಪ್ರಥಮ ದರ್ಶನವಾದದ್ದು. ಅಚ್ಚುಕಟ್ಟಾದ ಬಿಳಿರುಮಾಲು, ಅಚ್ಚಬಿಳಿ ಪಂಚೆ, ಮುಚ್ಚುಕೋಟು ಇವು ಅವರ ಮೊದಲ ಆಕರ್ಷಣೆಯಾಗಿದ್ದವು. ಆದರೆ ಉಳಿದೆಲ್ಲವನ್ನೂ ಮರೆಯುವಂತೆ ಮಾಡಿದ್ದು ರನ್ನನ ಕಾವ್ಯವನ್ನು ಕುರಿತು ಅವರು ಅಂದು ಮಾಡಿದ ಉದ್ಬೋಧಕವಾದ ಭಾಷಣ. ಸ್ವಚ್ಛವಾದ, ಸ್ಫುಟವಾದ ಕನ್ನಡದಲ್ಲಿ ಓತಪ್ರೋತವಾಗಿ ಸಾಗುತ್ತಿದ್ದಂತೆಯೇ ತಟ್ಟನೆ ಇಂಗ್ಲಿಷಿಗೆ ಹೊರಳಿ ತಮ್ಮ ಮಾತಿಗೆ ಇನ್ನಷ್ಟು ಪುಷ್ಟಿಯನ್ನು ಒದಗಿಸಿ ವಿಶದಗೊಳಿಸುವ ಅವರ ಭಾಷಣದ ರೀತಿ ಧಾರವಾಡದ ಶ್ರೋತೃಗಳಿಗೆ ಹೊಸ ಅನುಭವವನ್ನು ನೀಡಿತು. ಆಗ ಕರ್ನಾಟಕ ಕಾಲೇಜಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುತ್ತಿದ್ದ ಕನ್ನಡೇತರ ಅಧ್ಯಾಪಕರು ಅಂದಿನ ಭಾಷಣದಿಂದ ಪ್ರಭಾವಿತರಾದದ್ದನ್ನು ಕಂಡು ನಮಗೆ ಒಳಗೊಳಗೇ ಹೆಮ್ಮೆಯೆನಿಸಿತು. ಅತ್ತಿಮಬ್ಬೆಯನ್ನು ಕುರಿತ 'ಬಿಳಿಯರಳೆಯಂತೆ, ಗಂಗಾಜಲದಂತೆ...' ಎಂಬ ರನ್ನನ ಪದ್ಯವನ್ನು ಅಂದು ವಿ.ಸೀ. ಅವರು ಓದಿದ ಧಾಟಿ, ಕಾವ್ಯಾತ್ಮಕವಾಗಿ ವಿಶ್ಲೇಷಿಸಿದ ರೀತಿ, ಆ ಸಂದರ್ಭದ ಅವರ ಭಾವಭಂಗಿ ನನ್ನ ಮನಸ್ಸಿನಲ್ಲಿ ಇನ್ನೂ ಅಚ್ಚೊತ್ತಿ ನಿಂತಿದೆ.

* * *

ನನಗೆ ವಿ.ಸೀ. ಅವರ ಪ್ರತ್ಯಕ್ಷ ಪರಿಚಯವಾದದ್ದು ೧೯೫೫ರಲ್ಲಿ, ಅಷ್ಟೊತ್ತಿಗೆ ನಾನು ಎಂ.ಎ. ಮುಗಿಸಿ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದಲ್ಲಿ ಕೆಲಸಕ್ಕೆ ಸೇರಿದ್ದೆ. ಆಗ ಗೋಕಾಕರು ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಸಾನೆ ಗುರೂಜಿಯವರಿಂದ ಪುಣೆಯಲ್ಲಿ ಸ್ಥಾಪಿಸಲ್ಪಟ್ಟ 'ಅಂತರಭಾರತಿ' ಸಂಸ್ಥೆ ಮುಂಬಯಿ ರಾಜ್ಯದ ಭಾಷಾ ಸಮ್ಮೇಳನವೊಂದನ್ನು ಗದಗಿನಲ್ಲಿ ಏರ್ಪಡಿಸಲು ಯೋಜಿಸಿತ್ತು. ಭಾಗವತ ಎಂಬ ಹಿರಿಯರು ಆ ಸಂಸ್ಥೆಯ ಮುಖ್ಯಸ್ಥರಾಗಿದ್ದರು. ಎರಡು ದಿನಗಳ ಕಾರ್ಯಕ್ರಮವನ್ನು ರೂಪಿಸಲು ಅವರು ಗೋಕಾಕರನ್ನು ಕೇಳಿಕೊಂಡಿದ್ದರು. ಪ್ರೊ. ಮಾಳವಾಡರೂ, ನಾನೂ ಗೋಕಾಕರ ಜೊತೆಗೂಡಿ ಕರ್‍ಯಾಕ್ರಮದ ವಿವರಗಳನ್ನು ತಯಾರಿಸಿ ವಿ.ಸೀ. ಅವರನ್ನು ಅಧ್ಯಕ್ಷತೆ ವಹಿಸಲು ಕೇಳಿಕೊಳ್ಳಲಾಯಿತು. ಅದೇ ಹೊತ್ತಿಗೆ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯ (ಕನ್ನಡ) ರೂ ಆಗಿದ್ದರು. ಕನ್ನಡ, ಮರಾಠಿ, ಗುಜರಾತಿ, ಉರ್ದು ಭಾಷೆಯ ಪ್ರತಿನಿಧಿಗಳಾಗಿ ಬಂದಿದ್ದ ಲೇಖಕರೂ ಕವಿಗಳೂ ವಿಮರ್ಶಕರೂ ಸಾಹಿತ್ಯಕ ಚರ್ಚೆ ಕವಿಗೋಷ್ಠಿಗಳಲ್ಲಿ ಎರಡೂ ದಿನ ಲವಲವಿಕೆಯಿಂದ ಭಾಗವಹಿಸಿದ್ದರು. ವಿ.ಸೀ. ಯವರು ಅಧ್ಯಕ್ಷರಾಗಿ ಆ ಎಲ್ಲ ಕಾರ್ಯಕ್ರಮಗಳನ್ನು ನಡೆಸಿಕೊಟ್ಟ ರೀತಿ ಚೇತೋಹಾರಿಯಾಗಿತ್ತು. ಸ್ವತಃ ಮಾಸ್ತಿಯವರು ಸಮಾರೋಪ ಭಾಷಣದಲ್ಲಿ ಆ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

೧೯೫೬ ರಿಂದ ೫೮ರ ವರೆಗೆ ವಿ. ಸೀ. ಅವರು ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ Producer, Spoken word ಆಗಿದ್ದರಷ್ಟೇ. ಆ ಸಂದರ್ಭದಲ್ಲಿ ಸಾಹಿತ್ಯವನ್ನು ಕುರಿತು ಒಂದು ಚರ್ಚೆಯನ್ನು ಆಕಾಶವಾಣಿಯ ಮೂಲಕ ನಡೆಸಲಾಯಿತು. ಅದರಲ್ಲಿ ಮಾಸ್ತಿ, ಡಿವಿಜಿ, ಕುವೆಂಪು, ಕಾರಂತ, ಅ.ನ.ಕೃ., ಜಿ.ಪಿ. ರಾಜರತ್ನಂ ಭಾಗವಹಿಸಿದ್ದರು. ಜೊತೆಯಲ್ಲಿ ನಿರ್ವಾಹಕರಾಗಿ ವಿ.ಸೀ. ಇದ್ದರು. ಆಗ ಬೆಂಗಳೂರು ಕೇಂದ್ರದಿಂದ ಪ್ರಕಟವಾಗುತ್ತಿದ್ದ 'ಆಕಾಶವಾಣಿ' ಸಂಚಿಕೆಯೊಂದರಲ್ಲಿ ಇವರೆಲ್ಲರ ಭಾವಚಿತ್ರ ಪ್ರಕಟವಾಗಿತ್ತು. ಕನ್ನಡ ಸಾಹಿತ್ಯದ ದಿಗ್ಗಜರೆಲ್ಲ ಒಂದೆಡೆ ಸೇರಿದ ಆ ಅಪರೂಪದ ಭಾವಚಿತ್ರವನ್ನು ನಾನು ಹೇಗೊ ಪ್ರಯತ್ನಪಟ್ಟು ಬೆಂಗಳೂರು ಆಕಾಶವಾಣಿಯವರಿಂದ ತರಿಸಿಕೊಂಡು ಕಟ್ಟು ಹಾಕಿಸಿ ಇಟ್ಟುಕೊಂಡೆ. ಆಗ ಧಾರವಾಡ ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿದ್ದ ಡಾ. ಎಚ್. ಕೆ. ರಂಗನಾಥರು ಭಾವಚಿತ್ರವನ್ನು ದೊರಕಿಸುವಲ್ಲಿ ನನಗೆ ನರವಾಗಿದ್ದರು.

* * *

೧೯೫೭ ಇರಬಹುದು, ಬೆಂಗಳೂರ್ಥು ಆಕಾಶವಾಣಿ ಕೇಂದ್ರ ಕರ್ನಾಟಕದ ಬೇರೆ ಬೇರೆ ಭಾಗಗಳ ಕವಿಗಳಿಂದೊಡಗೂಡಿದ ಕವಿಗೋಷ್ಠಿಯೊಂದನ್ನು ಆಮಂತ್ರಿತ ಶ್ರೋತೃಗಳೆದುರು ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಏರ್ಪಡಿಸಿದ್ದಿತು. ಕವಿಗಳಿಗೆ ಒಂದು ವಿಷಯವನ್ನು ಸೂಚಿಸಲಾಗಿತ್ತು– 'ಬುವಿ ನೀಡಿದ ಸ್ಫೂರ್ತಿ' ಎಂಬುದಾಗಿ. ಇದು ವಿ.ಸೀ.ಯವರ ಯೋಜನೆಯೇ ಆಗಿತ್ತು. ಅವರ ಅಧ್ಯಕ್ಷತೆಯಲ್ಲಿಯೇ ಗೋಷ್ಠಿ ನಡೆಯಿತು. 'ಮಣ್ಣಿನ ಮೆರವಣಿಗೆ' ಎಂಬ ನನ್ನ ಕವಿತೆ ಆ ಸಂದರ್ಭದಲ್ಲಿ ರಚಿತವಾದದ್ದು. ಜೊತೆಗೆ ಶಿವರುದ್ರಪ್ಪ, ರಾಮಚಂದ್ರ ಶರ್ಮ, ಎಕ್ಕುಂಡಿ ಮೊದಲಾದವರು ಗೋಷ್ಠಿಯಲ್ಲಿ ಭಾಗವಹಿಸಿ ತಮ್ಮ ಕವಿತೆಗಳ ವಾಚನ ಮಾಡಿದರು. ಕನ್ನಡದಲ್ಲಿ ನವ್ಯಕಾವ್ಯ ರಭಸದಿಂದ ಪ್ರಾರಂಭಗೊಂಡ ಕಾಲ ಅದು. ವಿ.ಸೀ. ತಮ್ಮ ಅಧ್ಯಕ್ಷ ಭಾಷಣದಲ್ಲಿ ಎಲಿಯಟ್, ಆಡೆನ್, ಸ್ಪೆಂಡರ್, ಲುಯಿ ಮಾಕ್‌ನಿಸ್ ಮೊದಲಾದ ಇಂಗ್ಲೀಷ್ ನವ್ಯ ಕವಿಗಳ ರಚನೆಗಳನ್ನು ಉದಾಹರಿಸುತ್ತ ಕನ್ನಡದಲ್ಲಿ ಬರುತ್ತಿರುವ ನಮ್ಮ ಕವಿತೆಗಳ ಜಟಿಲತೆ ಕ್ಲಿಷ್ಟತೆಯ ಬಗೆಗೂ ವಿವರಿಸಿದರು. ಇಲ್ಲಿಯ ತಳಮಳ ಮೈ ಮೇಲೆ ಬರಿಸಿಕೊಂಡದ್ದೆ? ಎಂಬ ಸಂದೇಹ ವ್ಯಕ್ತಪಡಿಸಿದರು. ಆದರೆ ಅದರಲ್ಲಿ ಸಂಕುಚಿತ ಬಾವನೆಯಾಗಲೀ ಕೊಂಕು ನುಡಿಯಾಗಲಿ ಇರಲಿಲ್ಲ. ಬೇರೆ ಬೇರೆ ದೇಶಗಳಲ್ಲಿಯ ಸಾಹಿತ್ಯದ ಆಗು ಹೋಗುಗಳ ಬಗೆಗಿನ ಅವರ ಅಭ್ಯಾಸ, ತಿಳಿವಳಿಕೆ, ಕಾಣಿಸುವ ಹೊಸ ನೋಟ ನನ್ನನ್ನು ನಿಜಕ್ಕೂ ಅಚ್ಚರಿಗೊಳಿಸಿತು.

ವಿ.ಸೀ. ಅವರನ್ನು ಅವರ ಮನೆಯಲ್ಲಿಯೇ ಕಾಣಬೇಕೆಂಬ ಹಂಬಲ ಮರುದಿನವೇ ಈಡೇರಿತು. ಜೊತೆಯಲ್ಲಿ ಶಿವರುದ್ರಪ್ಪನವರಿದ್ದರು. ನಮ್ಮ ನಮ್ಮ ಹೊಸ ಬರವಣಿಗೆಯ ಬಗ್ಗೆ ಪ್ರೀತಿಯಿಂದ ವಿಚಾರಿಸಿದರು. ಚಾಪೆಯ ಮೇಲೆ ದಿಂಬಿಗೊರಗಿ ಸುತ್ತ ಪುಸ್ತಕಗಳ

ಸಾಲುಗಳ ನಡುವೆ ಕುಳಿತು ಅವರು ಮಾತಾಡುವುದರಲ್ಲಿಯೇ ಒಂದು ಬಗೆಯ ಆತ್ಮೀಯತೆ, ಸೊಗಸು, ಸುಖ ನನಗೆ ಕಂಡುಬಂದವು. ಜೊತೆಗೆ ತಿಂಡಿ, ಕಾಫಿ; ಎಲ್ಲದರಲ್ಲೂ ಒಂದು ಹದ, ರುಚಿ. 'ಸೌಂದರ್ಯ ಸಮೀಕ್ಷೆ'ಯ ಬಗ್ಗೆ ಶಿವರುದ್ರಪ್ಪನವರು ಥೀಸಿಸ್ ಬರೆಯುತ್ತಿರುವುದನ್ನು ತಿಳಿದು ಮಾತು ಆ ಕಡೆಗೆ ಹೊರಳಿತು. ಈ ವಿಷಯಕ್ಕೆ ನೆರವಾಗಬಲ್ಲ ಹಲವಾರು ಇಂಗ್ಲೀಷ್ ಗ್ರಂಥಗಳ ಹೆಸರು ಹೇಳಿದ್ದಲ್ಲದೆ ತಮ್ಮದೇ ಆದ ಕೆಲವು ವಿಚಾರಗಳನ್ನು ತಿಳಿಯಪಡಿಸಲು ಅವರು ಮರೆಯಲಿಲ್ಲ. ಅವರ ಮಾತಿನಲ್ಲಿಯ ಆ ಹಾಸು–ಬೀಸನ್ನು ನಾನು ಉಳಿದೆಡೆಗಳಲ್ಲಿ ಅಷ್ಟರ ಮಟ್ಟಿಗೆ ಕಂಡುದಿಲ್ಲ.

* * *

೧೯೬೫ರಲ್ಲಿ ಏರ್ನಾಕುಲಂದಲ್ಲಿನಡೆದ ಅಖಿಲ ಭಾರತ ಲೇಖಕರ ಸಮ್ಮೇಳನವನ್ನು ಮುಗಿಸಿಕಂಡು ಬರುವಾಗ ವಿ.ಸೀ. ಅವರಲ್ಲಿ ಒಂದು ವಿಜ್ಞಾಪನೆ ಮಾಡಿಕೊಂಡಿದ್ದೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿಶೇಷಪೋನ್ಯಾಸಗಳನ್ನು ನೀಡಬೇಕೆಂದು. ಅವರು ಈಡೇರಿಸಿಕೊಟ್ಟರು. ಆ ಹೊತ್ತಿಗೆ ಅವರು ಹೊನ್ನಾವರ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅದರಿಂದ ಇಡೀ ಉತ್ತರ ಕನ್ನಡ ಜಿಲ್ಲೆಗೇ ಹೊಸ ಚೈತನ್ಯ ಬಂದಂತಾಗಿತ್ತು. ಶೈಕ್ಷಣಿಕವಾಗಿ ಹಾಗೂ ಸಾಹಿತ್ಯಿಕವಾಗಿ ಕುಲಪತಿ ಡಾ. ಡಿ. ಸಿ. ಪಾವಟೆಯವರು ಉದ್ಘಾಟಿಸಿದ ಈ ಉಪನ್ಯಾಸ ಮಾಲೆ ನಾಲ್ಕು ದಿನ ಕೇಳುಗರಿಗೊಂದು ಹಬ್ಬವಾಗಿ ಪರಿಣಮಿಸಿತು. ವಿದ್ಯಾರ್ಥಿಗಳು, ವಿದ್ವಾಂಸರು ಹಾಗೂ ಸಾಹಿತ್ಯಾಸಕ್ತರಿಂದ ಕಿಕ್ಕಿರಿದಿರುತ್ತಿದ್ದ ಈ ಸಭೆಗೆ ಪ್ರತಿದಿನವೂ ಕವಿ ಬೇಂದ್ರೆಯವರೂ ಡಾ. ಕೆ. ಕೃಷ್ಣಮೂರ್ತಿಯವರಂಥ ವಿದ್ವಾಂಸರೂ ಉಪಸ್ಥಿತರಿದ್ದುದು ವಿ.ಸೀ. ಅವರ ಸಂತೋಷವನ್ನು ಹೆಚ್ಚಿಸಿತು. 'ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ' ಎಂಬ ಪುಸ್ತಕರೂಪದಲ್ಲಿ ಈ ಭಾಷಣಗಳು ಅಚ್ಚಾಗಿ ೧೯೬೭ರಲ್ಲಿ ಪ್ರಕಟಗೊಂಡಿತು. ವಿ.ಸೀ. ಅವರ ವಿಮರ್ಶಾ ಕೃತಿಗಳಲ್ಲಿ ಇದನ್ನು ಮಹತ್ವದ ಗ್ರಂಥವಾಗಿ ಇಂದಿಗೂ ಪರಿಗಣಿಸಲಾಗುತ್ತಿದೆ. ಇದರಲ್ಲಿರುವ ಅಡಿಟಿಪ್ಪಣಿಗಳನ್ನು ಗಮನಿಸಿದರೆ, ವಿ. ಸೀ. ಒಂದು ವಿಷಯವನ್ನು ಕುರಿತು ಪ್ರತಿಪಾದಿಸುವಾಗ ಅನುಷಂಗಿಕವಾಗಿ ಬೇರೆ ಎಷ್ಟೊಂದು ಸಂಗತಿಗಳ ಕಡೆಗೆ ಅವರ ವಿಚಾರಗಳು ಹಬ್ಬಿ ಹರಡಿ ಅದರ ವ್ಯಾಪ್ತಿಯನ್ನು ಹೆಚ್ಚಿಸುತ್ತವೆಂಬುದು ವಿದಿತವಾಗುತ್ತದೆ. ''ನನ್ನಲ್ಲಿ ಪ್ರಶ್ನೆಗಳು ಜಾಸ್ತಿ; ಇಲ್ಲದ ಪ್ರಶ್ನೆ ಎತ್ತಿ ಮನಸ್ಸನ್ನು ಅಸ್ವಸ್ಥ್ಯ ಮಾಡಿಕೊಂಡಿದ್ದಾರೆಂದು ನನ್ನ ಬರವಣಿಗೆ ಆಕ್ಷೇಪಣೆಗೆ ಗುರಿಯಾಗಿದೆ. ನನ್ನ ದುರದೃಷ್ಟ''– ಇದು ವಿ.ಸೀ. ಅವರ ಆತ್ಮವಿಮರ್ಶೆಯ ವಿಶಿಷ್ಟ ಬಗೆ. ಈ ಮಾತು ಕೂಡ ಅಡಿಟಿಪ್ಪಣಿಯಲ್ಲಿ ಬಂದದ್ದೆ.

* * *

ಈ ಲೇಖನದ ಪ್ರಾರಂಭದಲ್ಲಿ ವಿ.ಸೀ. ಕರ್ನಾಟಕ ವಿಶ್ವವಿದ್ಯಾಲಯ ಏರ್ಪಡಿಸಿದ ರನ್ನ ಕವಿಯ ಸಾವಿರ ವರುಷದ ಹುಟ್ಟುಹಬ್ಬದಲ್ಲಿ ಭಾಗವಹಿಸಿ ಭಾಷಣ ಮಾಡಿದ್ದರ ಬಗ್ಗೆ

ಹೇಳಿರುವೆನಷ್ಟೆ. ಆಗ ಒಂದು ಸಂಗತಿ ಜರುಗಿತು. ಆಗ ಸಹಾಯಕ ಕುಲಸಚಿವರಾಗಿದ್ದ ಶ್ರೀ ಸದಾಶಿವ ಒಡೆಯರ ಅವರು ನನಗೆ ಇದನ್ನು ಆಮೇಲೆ ಹೇಳಿದರು. ಆ ವಿಷಯ ಇಷ್ಟು : ವಿ.ಸೀ. ಯವರ ಪ್ರಯಾಣ ಭತ್ಯದ ಕಾಗದವನ್ನು ತಯಾರಿಸಿ ವಿತ್ತಾಧಿಕಾರಿಗಳು ಅವರಿಂದ ಸಹಿ ಪಡೆದುಕೊಂಡರು. ಆಗಿನ ನಿಯಮದಂತೆ ಅದೇ ಬಿಲ್ಲಿನಲ್ಲಿ "I generally travel in first class ಎಂದು ಮುಂತಾಗಿ ಒಂದು statement ಗೂ ಅವರ ಸಹಿ ಬೇಕೆಂದು ವಿತ್ತಾಧಿಕಾರಿಗಳು ಕೇಳಿಕೊಂಡಾಗ ವಿ.ಸೀ. ಅದನ್ನು ವಿರೋಧಿಸಿದರು. ಅವರು ಆಗ ಪ್ರಯಾಣಿಸಿದ್ದು ಪ್ರಥಮ ತರಗತಿಯಲ್ಲಿಯೇ ಎಂಬುದು ನಿಜವೇ. ಆದರೆ ಈ ಬಗೆಯ ಸರ್ವಸಾಧಾರಣ ಹೇಳಿಕೆಗೆ ತಾವು ಬದ್ಧರಾಗುವದು ಸಾಧ್ಯವಿಲ್ಲವೆಂದು ಅವರು ಸ್ಪಷ್ಟಪಡಿಸಿದರು. ವಿತ್ತಾಧಿಕಾರಿಗಳು ಈ ನಿಯಮದ ಇಕ್ಕಟ್ಟಿನಲ್ಲಿ ಸಿಕ್ಕು ಒದ್ದಾಡುತ್ತಿರುವಾಗ ಕುಲಪತಿಗಳಾದ ಪಾವಟೆಯವರು ತಮ್ಮ ವಿಶೇಷಾಧಿಕಾರವನ್ನು ಚಲಾಯಿಸಿ ಅವರನ್ನು ಪಾರುಗೊಳಿಸಿದರಂತೆ.

* * *

ಮಾನವನೆತ್ತರ ಆಗಸದೇರಿಗೆ
ಏರುವವರೆಗೂ ಏರೇವು,
ಮಾನವ ಹೃದಯಕೆ ವಿಶ್ವವಿಶಾಲತೆ
ಹಾಯುವವರೆಗೂ ಹಾದೇವು

ವಿ. ಸೀ. ಅವರ ಕವಿತೆಯ ಈ ಸಾಲುಗಳು ಅವರ ವ್ಯಕ್ತಿತ್ವದ ವೈಶಿಷ್ಟ್ಯವನ್ನು, ವೈಶಾಲ್ಯವನ್ನು ಚೆನ್ನಾಗಿ ಪ್ರತಿಬಿಂಬಿಸುತ್ತವೆಂದು ನನ್ನ ಅನಿಸಿಕೆ.

'ವಿ.ಸೀ. ನೂರರ ನೆನಪು'
೧೯೯೯

■■

ಪ್ರೊ. ಶಿ. ಶಿ. ಬಸವನಾಳರು

"ದೈವವನ್ನು ಹಳಿದು ಮೂಲೆಗೊರಗುವ ಮೂಳನಿಗಲ್ಲ ಇಂದಿನ ಜಗತ್ತು. ಸಾಹಸದಿಂದ ಮುನ್ನುಗ್ಗಿ ಕಾರ್ಯ ಮಾಡುವ ಕರ್ಮಶೀಲನಿಗೆ ಮೀಸಲು ಅದು. ಕಾರಣ ನೀವು ಕೈಕೊಳ್ಳಬಹುದಾದ ಜೀವನದ ಪ್ರತಿಯೊಂದು ಹೋರೆಯಲ್ಲಿ ಅಖಿಲ ಕನ್ನಡದ ದೃಷ್ಟಿಯಿರಲಿ, ವಿಚಾರದ ವಿಮರ್ಶೆ ಇರಲಿ; ಸ್ವಾತಂತ್ರ್ಯದ ಉಸಿರಿರಲಿ; ವಿಶ್ವಮಾನವ ಹೃದಯವಿರಲಿ."

೧೯೪೪ರಲ್ಲಿ ಮೈಸೂರಿನ ಶ್ರೀಸುತ್ತೂರು ಮಠದ ಪ್ರಸಾದ ನಿಲಯದಲ್ಲಿ ನೂತನ ಪದವೀಧರರಾದ ವೀರಶೈವ ತರುಣರಿಗೆ ಉಪದೇಶದ ಭಾಷಣ ಮಾಡುವ ಸಂದರ್ಭದಲ್ಲಿ ಪ್ರೊ. ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳ ಅವರು ಹೇಳಿದ ಮಾತಿದು. ಕನ್ನಡನಾಡು, ಕನ್ನಡ ಜನ ಈ ಹಿಂದೆ ಬಾಳಿದಂತೆ ಇನ್ನು ಮುಂದೆಯೂ ಬಾಳಿ, ಬದುಕಿ ಬೆಳಗಬೇಕಾದರೆ ಅವರು ಮಾಡಬೇಕಾಗಿರುವ ಕಾರ್ಯದ ಅರಿವಾಗಬೇಕು. ಈ ಅರಿವು ಪ್ರತಿಯೊಬ್ಬರಲ್ಲಿ ಕರಿಗೊಂಡಷ್ಟು ಕಾರ್ಯರಂಗಕ್ಕಿಳಿದಷ್ಟು ಜನತೆಯ ಕಲ್ಯಾಣ, ದೇಶದ ಮುನ್ನಡೆ ಎಂದು ನಂಬಿ ನಡೆದವರು ಬಸವನಾಳರು. ಶಿಕ್ಷಣ ಸಂಸ್ಥೆಗಳ ಸ್ಥಾಪಕರಾಗಿ, ಪತ್ರಿಕಾಕರ್ತರಾಗಿ, ಸಾಮಾಜಿಕ–ಧಾರ್ಮಿಕ ಚಿಂತಕರಾಗಿ ಅವರು ಗೈದ ನಾಡು–ನುಡಿಯ ಸೇವೆಯ ಹಿಂದಿರುವ ಈ ಕ್ರಿಯಾಶೀಲ ಮನೋಧರ್ಮವನ್ನು ಅರ್ಥಮಾಡಿಕೊಂಡಾಗ ಅವರ ಸಾಧನೆ ವೈಶಿಷ್ಟ್ಯ ಎದ್ದು ಕಾಣುತ್ತದೆ.

೧೮೯೩ನೆಯ ನವೆಂಬರ್ ೭ ರಂದು ಹಾವೇರಿಯಲ್ಲಿ ಜನಿಸಿದ ಶಿವಲಿಂಗಪ್ಪನವರ ತಾಯಿ ಹೆರೂರು ಮನೆತನದ ಸಿದ್ಧಮ್ಮ. ತಂದೆ ಶಿವಯೋಗಪ್ಪ ಬಳ್ಳಾರಿ ಜಿಲ್ಲೆಯ ಕೊಟ್ಟೂರು, ತೋರಣಗಲ್ಲು, ದರೋಜಿ ಮುಂತಾದೆಡೆ ಸ್ಟೇಶನ್ ಮಾಸ್ತರರಾಗಿ ಕೆಲಸಮಾಡುತ್ತಿದ್ದರು. ಪ್ರಾಥಮಿಕ ಶಿಕ್ಷಣ ಮುಗಿಸಿದ್ದು ತೆಲಗು ಮಾಧ್ಯಮದಲ್ಲಿ, ಸುಶಿಕ್ಷಿತರಾದ ತಂದೆಯವರು ಮನೆಯಲ್ಲಿಯೇ ಕನ್ನಡ, ಸಂಸ್ಕೃತ ಕಲಿಸಿದರು. ಬಳ್ಳಾರಿಯ ವಾರ್ಡ್ಲಾ ಹೈಸ್ಕೂಲಿನಿಂದ ಗದಗಿಗೆ ಬಂದು ಮುಂದೆ ಧಾರವಾಡದ ಸರಕಾರಿ ಹೈಸ್ಕೂಲು ಸೇರಿ ಶಿವಲಿಂಗಪ್ಪ ೧೯೧೦ರಲ್ಲಿ ಪುಣೆಯ ಡೆಕ್ಕನ್ ಕಾಲೇಜ ಸೇರಿದರು. ಇವರು ಪ್ರಿನ್ಸಿಪಾಲ್ ಎಫ್.ಡಬ್ಲ್ಯು. ಬೇನ್ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿ ಅವರು ಬೋಧಿಸುತ್ತಿದ್ದ ಇತಿಹಾಸ, ಅರ್ಥಶಾಸ್ತ್ರ ವಿಷಯಗಳನ್ನು ತೆಗೆದುಕೊಂಡು ಬಿ.ಎ. ಆನರ್ಸ್

ಆದರು. ಆ ಸಂತೋಷವನ್ನು ಹಂಚಿಕೊಳ್ಳಲು ಆ ಹೊತ್ತಿಗೆ ತಂದೆತಾಯಿಗಳಿರಲಿಲ್ಲ. ಮನೆತನದ ಪರಿಸ್ಥಿತಿ ಚೆನ್ನಾಗಿರದಿದ್ದರೂ ಬಸವನಾಳರು ಧೃತಿಗೆಡದೆ ಮುಂಬಯಿಯಲ್ಲಿ ಎಂ.ಎ. ಅಭ್ಯಾಸ ಮುಂದುವರಿಸಿ ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ವಿಷಯಗಳನ್ನು ಆಯ್ದುಕೊಂಡು ೧೯೧೯ರಲ್ಲಿ ಪ್ರಥಮ ಶ್ರೇಣಿಯಲ್ಲಿ ಎಂ. ಎ. ಪಾಸಾದರು. ಅದೇ ವರ್ಷ ಎಂ. ಆರ್. ಸಾಖರೆಯವರೂ ಸಂಸ್ಕೃತ, ಧರ್ಮಶಾಸ್ತ್ರ ವಿಷಯಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಎಂ.ಎ. ಮುಗಿಸಿದರು. ಇವರಿಬ್ಬರೂ ಉತ್ತರ ಕರ್ನಾಟಕದಲ್ಲಿ ಮೊಟ್ಟಮೊದಲ ವೀರಶೈವ ಸ್ನಾತಕೋತ್ತರ ಪದವೀಧರರು. ಲಿಂಗಾಯತ ಸಮಾಜದಲ್ಲಿ ಮೊಟ್ಟಮೊದಲು ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗುವವರಿಗೆ ಧಾರವಾಡದ ಲಿಂಗಾಯತ ಫಂಡಿನ ಸಂಘ ೧೨೦೦ ರೂಗಳ ಪಾರಿತೋಷಕವಿಟ್ಟಿದ್ದಿತು. ಬಸವನಾಳರು ತ್ಯಾಗಬುದ್ಧಿಯಿಂದ ಆ ನಿಧಿಯನ್ನು ಸಾಖರೆಯವರೊಂದಿಗೆ ಸಮನಾಗಿ ಹಂಚಿಕೊಡುವಂತೆ ನೋಡಿಕೊಂಡರು. ಇಷ್ಟೇ ಅಲ್ಲ, ಹಣದ ಬದಲು ಅಷ್ಟೇ ಬೆಲೆಯ ಗ್ರಂಥಗಳನ್ನು ಸಮಿತಿಯಿಂದ ಕೋರಿ ಪಡೆದು ತಮ್ಮ ಪುಸ್ತಕ ಪ್ರೀತಿಯನ್ನು ಮೆರೆದರು. ಈ ಎರಡೂ ಸಂಗತಿಗಳು ಅವರ ಬಾಳಿನ ದಿಕ್ಸೂಚಿಗಳೆನ್ನಬಹುದು.

ಎಂ. ಎ. ಪಾಸಾದವರಿಗೆ ಸರಕಾರ ಉನ್ನತೋನ್ನತ ಹುದ್ದೆ ನೀಡುತ್ತಿದ್ದ ಆ ಕಾಲದಲ್ಲಿ ಬಸವನಾಳರು ಅಧಿಕಾರದ ಅವಕಾಶವನ್ನು ತೊರೆದು ತಮ್ಮ ಪ್ರದೇಶದ ಜನಕ್ಕಿದ್ದ ಉಚ್ಚ ಶಿಕ್ಷಣದ ಸೌಲಭ್ಯದ ಕೊರತೆಯನ್ನು ನೀಗಿಸುವ ಮಹತ್ವಾಕಾಂಕ್ಷೆಯಿಂದ ತಮ್ಮಂತೆಯೇ ಆದರ್ಶವಾದಿಗಳಾಗಿದ್ದ ಆರು ಜನ ಸ್ನೇಹಿತರೊಂದಿಗೆ (ಪಂಡಿತ ಚಿಕ್ಕೋಡಿ, ಎಂ. ಆರ್. ಸಾಖರೆ, ಬಿ. ಬಿ. ಮಮದಾಪುರ, ಬಿ. ಎನ್. ಹಂಚಿನಾಳ, ಎಚ್. ಎಫ್. ಕಟ್ಟೀಮನಿ, ಸರದಾರ ವೀರನಗೌಡ ಪಾಟೀಲ), ಸತ್ಯ, ಪ್ರೇಮ, ತ್ಯಾಗದ ಧ್ಯೇಯವಿಟ್ಟುಕೊಂಡು ೧೯೧೬ ಅಕ್ಟೋಬರ್ ೧೧ ರಂದು ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿಯ ಕೇಂದ್ರ ಕಚೇರಿಯನ್ನು ಮರಾಠಿಯ ಪ್ರಭಾವಕ್ಕೆ ಒಳಗಾಗಿದ್ದ ಬೆಳಗಾವಿಯಲ್ಲಿ ಸ್ಥಾಪಿಸಿದ್ದು ಅವರ ದೂರದೃಷ್ಟಿಗೆ ಸಾಕ್ಷಿಯಾಗಿದೆ. ಪುಣೆಯ ಎಜ್ಯುಕೇಷನ್ ಸೊಸಾಯಿಟಿಯ ಮಾದರಿಯಲ್ಲಿಯೇ ಆ ಸಂಸ್ಥೆಯ ಘಟನೆ ರಚನೆಗೊಂಡಿತು. ತಮ್ಮ ತ್ಯಾಗ, ಪರಿಶ್ರಮದ ಬಂಡವಾಳನ್ನೇ ತೊಡಗಿಸಿ ಈ 'ಸಪ್ತರ್ಷಿಗಳು' ಬೆಳಗಾವಿಯಲ್ಲಿ ಗಿಲಗಂಚಿ ಅರಟಾಳ ಹೈಸ್ಕೂಲನ್ನು ಪ್ರಾರಂಭಿಸಿ, ಅಲ್ಲಿ ತೀರ ಕಡಿಮೆ ವೇತನ ತೆಗೆದುಕೊಂಡು ಶಿಕ್ಷಕರಾಗಿ ದುಡಿದರು. ದಾವಣಗೆರೆಯ ಸುಪ್ರಸಿದ್ಧ ವರ್ತಕರಾದ ಸಾವಳಗಿ ನಾಗಪ್ಪನವರ ಮಗಳು ಶಾಂತಾದೇವಿಯೊಡನೆ ೧೯೨೦ರಲ್ಲಿ ಇವರ ಮದುವೆ ನೆರವೇರಿತು.

ಬಸವನಾಳರು ಸ್ವಾಧ್ಯಾಯದಿಂದಲೇ ಕನ್ನಡ ಮತ್ತು ಇಂಗ್ಲೀಷಿನಲ್ಲಿ ಪರಿಣತಿ ಹೊಂದಿದ್ದರು. ಒಮ್ಮೆ ಹೆನ್ಕೆಲ್ ಎಂಬ ಯುರೋಪಿಯನ್ ಶಾಲಾ ಇನ್‌ಸ್ಪೆಕ್ಟರ್ ಇವರ ಹೈಸ್ಕೂಲಿಗೆ ಬಂದಾಗ ಬಸವನಾಳರು ಮ್ಯಾಟ್ರಿಕ್ ವರ್ಗದಲ್ಲಿ ಕಲಿಸುತ್ತಿದ್ದ ಇಂಗ್ಲಿಷ್ ಪಾಠವನ್ನು ಅವಲೋಕಿಸಿ ಒಂದು ಶಬ್ದದ ಉಚ್ಚಾರ ಸರಿಯಿಲ್ಲ, ತಿದ್ದಿಕೊಳ್ಳಬೇಕೆಂದು

ಸಲಹೆಯಿತ್ತರು. ಬಸವನಾಳರು ತಮ್ಮದೇ ಸರಿಯೆಂದು ಪಟ್ಟು ಹಿಡಿದು, ಕೊನೆಗೆ ಆಕ್ಸ್‌ಫರ್ಡ್ ನಿಘಂಟು ತೋರಿಸಿ ಅವರಿಗೆ ಮನವರಿಕೆ ಮಾಡಿಕೊಟ್ಟಾಗ ಅವರೂ ಅಚ್ಚರಿಪಟ್ಟು ಒಪ್ಪಿ ಮೆಚ್ಚಿಕೊಂಡರು. ೧೯೨೨ರಲ್ಲಿ ಧಾರವಾಡದಲ್ಲಿ ರಾಜಾಲಖಮಗೌಡ ಸರದೇಸಾಯಿ ಹೈಸ್ಕೂಲು ಸ್ಥಾಪನೆಗೊಳ್ಳಲು ಬಸವನಾಳರು ಅದರ ಸ್ಥಾಪಕ ಮುಖ್ಯೋಪಾಧ್ಯಾಯರಾಗಿ ೧೯೩೩ರ ವರೆಗೆ ಕೆಲಸ ಮಾಡಿ ಅದಕ್ಕೆ ಭದ್ರ ನೆಲೆಗಟ್ಟು ಒದಗಿಸಿದರು. ಮುಂದೆ ೧೯೩೩ರಲ್ಲಿ ಈಗ ಮುಂಬಯಿ ರಾಜ್ಯದ ವಿದ್ಯಾಮಂತ್ರಿಗಳಾಗಿದ್ದ ಸರ್ ಸಿದ್ಧಪ್ಪ ಕಂಬಳಿಯವರ ಸಹಾಯದಿಂದ ಬೆಳಗಾವಿಯಲ್ಲಿ ಲಿಂಗರಾಜ ಕಾಲೇಜು ಅಸ್ತಿತ್ವಕ್ಕೆ ಬಂದಿತು (೧೯೧೭ರಲ್ಲಿ ಪ್ರಾರಂಭವಾಗಿದ್ದ ಧಾರವಾಡದ ಕರ್ನಾಟಕ ಕಾಲೇಜನ್ನು ಬಿಟ್ಟರೆ ಉತ್ತರ ಕರ್ನಾಟಕದಲ್ಲಿ ಆಗ ಇನ್ನೊಂದು ಕಾಲೇಜಿರಲಿಲ್ಲ). ಅದೇ ತಾನೆ ಇಂಗ್ಲೆಂಡಿನಿಂದ ಡಾಕ್ಟರೇಟ್ ಪಡೆದು ಮರಳಿದ್ದ ಡಾ. ಎಸ್. ಸಿ. ನಂದೀಮಠರನ್ನು ಪ್ರಿನ್ಸಿಪಾಲರನ್ನಾಗಿ ಮಾಡಿ ಬಸವನಾಳರು ತಮ್ಮ ಶಿಷ್ಯನ ಕೆಳಗೆ ಉಪ ಪ್ರಿನ್ಸಿಪಾಲರಾಗಿ ದುಡಿಯಲು ಹಿಂದೆ ಮುಂದೆ ನೋಡಲಿಲ್ಲ. ಬಸವನಾಳರು ಪ್ರಮುಖರಾಗಿದ್ದ ಈ 'ಸಪ್ತರ್ಷಿ'ಗಳ ತ್ಯಾಗದ ಫಲದಿಂದ ಕೆ.ಎಲ್.ಇ. ಸೊಸಾಯಿಟಿ ಇಂದು ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನೊಳಗೊಂಡು ನೂರಕ್ಕೂ ಮಿಕ್ಕಿ ವಿದ್ಯಾಸಂಸ್ಥೆಗಳನ್ನು ವ್ಯವಸ್ಥಿತವಾಗಿ ನಡೆಸುವ ಹಿರಿಮೆಯನ್ನು ಪಡೆದು ಕರ್ನಾಟಕದ ಕೀರ್ತಿಯನ್ನು ಬೆಳಗುತ್ತಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯಲ್ಲಿ ಬಸವನಾಳರು ವಹಿಸಿದ ಪಾತ್ರ ಬಹಳ ಮುಖ್ಯವಾದದ್ದು. ಪ್ರಾದೇಶಿಕ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಮುಂಬಯಿ ವಿಶ್ವವಿದ್ಯಾಲಯ ಸೆನೆಟ್ ಒಪ್ಪಿಕೊಂಡಿದ್ದರೂ ಅದಕ್ಕೆ ಯೋಗ್ಯ ಚಾಲನೆ ದೊರೆತಿರಲಿಲ್ಲ . ಬಸವನಾಳರೂ ಮಾಳವಾಡರೂ ಜೊತೆಗೂಡಿ A case for Karnataka University ಎಂಬ ಚಿಕ್ಕ ಹೊತ್ತಗೆಯನ್ನು ಹೊರತಂದರು. ೧೯೪೪ರಲ್ಲಿ ವಿಶ್ವವಿದ್ಯಾಲಯ ಸಮಿತಿಯ ವ್ಯವಸ್ಥಾಪಕ ಮಂಡಲಿ ಪುನರ್ನಿಯೋಜಿತಗೊಂಡು ಬಸವನಾಳರು ಅದರ ಕಾರ್ಯಾಧ್ಯಕ್ಷರಾದ ಮೇಲೆ ಅವರ ಅವಿರತ ಪ್ರಯತ್ನದಿಂದ ೧೯೪೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನಸು ನನಸಾಯಿತು. ೧೯೫೦ರಲ್ಲಿ ವಿಶ್ವವಿದ್ಯಾಲಯದ ಸೆನೆಟ್, ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್‌ಗಳಿಗೆ ಸದಸ್ಯರಾಗಿ ಅವರು ಆಯ್ಕೆಗೊಂಡರು. ಆದರೆ ಕುಲಪತಿ ಹುದ್ದೆಗೆ ಶ್ರೀ ಸಿ. ಸಿ. ಹುಲಕೋಟಿ ಅವರೊಂದಿಗೆ ಸ್ಪರ್ಧಿಸಿ ಸೋಲನ್ನು ಅನುಭವಿಸಿದಾಗ ಮನಸ್ಸಿಗೆ ಆಘಾತವೆನಿಸಿದರೂ ಅದು ತಾತ್ಕಾಲಿಕ ಮಾತ್ರ. ಅದರಿಂದ ವಿಚಲಿತರಾಗದೆ ಅಂದಿನ ಅದೇ ಸೆನೆಟ್ ಸಭೆಯಲ್ಲಿ ವಿಶ್ವವಿದ್ಯಾಲಯದ ಆಯ–ವ್ಯಯ ಪತ್ರಿಕೆಯನ್ನು ಸಮಾಧಾನ ಚಿತ್ತದಿಂದ ಮಂಡಿಸಿ ತಮ್ಮ ಸಮಚಿತ್ತದ ಮೇಲ್ಮೆಯನ್ನು ಮೆರೆದರು. ಕೊನೆಯವರೆಗೂ ವಿಶ್ವವಿದ್ಯಾಲಯದ ಬೆಳವಣಿಗೆಗಾಗಿ ದಣಿವರಿಯದೆ ದುಡಿದರು. ಅದೇ ರೀತಿ ಕರ್ನಾಟಕ ಏಕೀಕರಣ ಚಳುವಳಿಯ ಎಲ್ಲ ಹಂತಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಆರ್ಥಿಕ ದೃಷ್ಟಿಯಿಂದ ಏಕೀಕೃತ ಕರ್ನಾಟಕವು ಎಂದಿಗೂ ಕೊರತೆಯ ಪ್ರಾಂತವಾಗಲಾರದೆಂದು ಅಂಕಿಸಂಖ್ಯೆಗಳಿಂದ ಸಪ್ರಮಾಣವಾಗಿ ವಿರೋಧಿಗಳಿಗೆ ಮನಗಾಣಿಸಿಕೊಟ್ಟರು.

ಬಸವನಾಳರು ಹಚ್ಚಿಕೊಂಡಿದ್ದ ಮತ್ತೊಂದು ಮಹತ್ವದ ಸಂಸ್ಥೆಯೆಂದರೆ ನಾಡಿನ ಸಂಘ ಸಂಸ್ಥೆಗಳಿಗೆ ಸಾಂಸ್ಕೃತಿಕವಾಗಿ ಮಾತೃಸ್ವರೂಪದಲ್ಲಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘ. ಈ ಸಂಘದ ಕಾರ್ಯಾಧ್ಯಕ್ಷರಾಗಿ ಇವರು ೧೯೨೭–೧೯೩೨, ೧೯೩೯–೪೪ ಹೀಗೆ ಹತ್ತುವರ್ಷಗಳ ಕಾಲ ಅದಕ್ಕೆ ಅಪೂರ್ವ ಸೇವೆ ಸಲ್ಲಿಸಿದರು. ಸಂಘದ ಕಾರ್ಯಕಲಾಪಗಳಲ್ಲಿ ಅವರ ಜೊತೆಗಿದ್ದ ಸಾಹಿತಿ ಶ್ರೀರಂಗರು ಬಸವನಾಳರನ್ನು 'ವಿಶಾಲಹೃದಯದ ವೀರಕನ್ನಡಿಗ' ಎಂದು ಕರೆದು ಅವರ ಬಗ್ಗೆ ಹೀಗೆ ನುಡಿದಿದ್ದಾರೆ; ''ಕೆಲಸಕ್ಕೆ ಮುಂದಾಗುವವರಾದರೂ ಅದರ ಪ್ರತಿಫಲದ ವಿಷಯದಲ್ಲಿ ಹಿಂದೆ ಮರೆಯಾಗುವರು; ಅನುಭವ, ಜ್ಞಾನಗಳಿಂದ ಹಿರಿಯರಾದರೂ ಎಲ್ಲರೊಡನೆ ಬೆರೆತುಕೊಳ್ಳುವರು; ಸ್ವಭಾವದಿಂದ ಶಾಂತರಾದರೂ ಸತ್ಯದ ಹಟವಾದಿಗಳಾದವರು; ಜೊತೆಗೆ ಹಾಸ್ಯರಸದ ಸವಿಗಾರರಾದವರು.... ಬಸವನಾಳರು ಹುಟ್ಟಿನಿಂದಲೇ ಪಕ್ಷಾತೀತ ಪ್ರವೃತ್ತಿಯವರು ಎಂದು ನನ್ನ ದೃಢವಾದ ನಂಬಿಕೆ.'' ಬಸವನಾಳರ ಸಾಂಸ್ಕೃತಿಕ ವ್ಯಕ್ತಿತ್ವದ ಮಹತಿಯನ್ನು ಶ್ರೀರಂಗರ ಈ ನುಡಿಗಳು ಯಥಾವತ್ತಾಗಿ ಎತ್ತಿತೋರಿಸುತ್ತವೆ.

ಕರ್ನಾಟಕದ ಆರ್ಥಿಕ ಪರಿಸ್ಥಿತಿಯು ಸುಧಾರಿಸಬೇಕೆಂದರೆ ಸಹಕಾರಿ ಸಂಸ್ಥೆಗಳು ಬೆಳೆಯಬೇಕೆಂದು ಬಸವನಾಳರು ಸಹಕಾರ ಚಳುವಳಿಯಲ್ಲಿಯೂ ಮನಸ್ಸು ಹಾಕಿದರು. ಶ್ರೀ ಎಸ್. ವಿ. ಮೆಣಸಿನಕಾಯಿ ಹಾಗೂ ರಾ. ಬ. ಆರ್. ಸಿ. ಅರಟಾಳ ಅವರ ಪ್ರಯತ್ನದಿಂದ ೧೯೧೯ರಲ್ಲಿಯೇ ಧಾರವಾಡದಲ್ಲಿ ಕರ್ನಾಟಕ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ಅಸ್ತಿತ್ವಕ್ಕೆ ಬಂದು ಮುನ್ನಡೆಯುತ್ತಿರುವ ಸಂದರ್ಭದಲ್ಲಿ ಬಸವನಾಳರು ೧೯೨೨ರಿಂದ ೧೯೨೫ರ ವರೆಗೆ ಅದರ ಪ್ರಥಮ ಮ್ಯಾನೇಜಿಂಗ್ ಡಾಯರೆಕ್ಟರ್ ಆಗಿ ದಕ್ಷತೆಯಿಂದ ಕಾರ್ಯಗೈದು ಸಹಕಾರ ರಂಗದಲ್ಲಿಯೂ ಹೆಸರು ಗಳಿಸಿದರು. ಕೆಲವು ಕಾಲ ಕರ್ನಾಟಕ ಡಿವಿಜನಲ್ ಕೋ ಆಪರೇಟಿವ್ ಇನ್‌ಸ್ಟಿಟ್ಯೂಟಿನ ಗೌರವ ಕಾರ್ಯದರ್ಶಿಗಳಾಗಿ, ಈ ಸಂಸ್ಥೆಯು ನಡೆಸುತ್ತಿದ್ದ ಸಹಕಾರಿ ತರಬೇತಿ ಕೇಂದ್ರದ ಪ್ರಿನ್ಸಿಪಾಲರಾಗಿಯೂ ಸ್ಮರಣೀಯ ಸೇವೆಗೈದರು. ಮುಂಬಯಿ ಸರಕಾರ ಇವರನ್ನು ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆ್ಯಕ್ಟ್ ೧೯೩೮ರ ಪ್ರಕಾರ ನೌಕರರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಸದಸ್ಯರಾಗಿ ನಾಮಕರಣ ಮಾಡಿದ್ದನ್ನು ಇಲ್ಲಿ ನೆನೆಯಬಹುದು.

ವೀರಶೈವ ಮಹಿಳೆಯರು ಸಂಘಟಿತರಾಗಿ ಸಾಮಾಜಿಕ ಜೀವನದಲ್ಲಿ ಮುಂದುವರಿಯಬೇಕೆಂಬ ಉದ್ದೇಶ ಹಾಗೂ ಧರ್ಮತತ್ತ್ವಗಳನ್ನು ತಿಳಿದಿರಬೇಕೆಂಬ ಮಹದಾಸೆ ಬಸವನಾಳರದಾಗಿದ್ದಿತು. ೧೯೩೮ರಲ್ಲಿ 'ಅಕ್ಕನ ಬಳಗ' ಧಾರವಾಡದಲ್ಲಿ ಪ್ರಾರಂಭವಾಗಲೂ ಇವರೇ ಕಾರಣರಾದರು. ಪ್ರಾರಂಭದ ದಿಸೆಯಲ್ಲಿ ಅವರ ಮನೆಯಲ್ಲಿಯೇ ಬಳಗದ ಕಾರ್ಯಚಟುವಟಿಕೆಗಳ ಬೀಜಾಂಕುರವಾಯಿತು. ಆರು ಜನ ಹೆಣ್ಣುಮಕ್ಕಳು, ನಾಲ್ವರು ಗಂಡುಮಕ್ಕಳನ್ನು ಪಡೆದ ಅವರ ಪರಿವಾರ ದೊಡ್ಡದು. ಕುಟುಂಬವತ್ಸಲರಾದ ಅವರಲ್ಲಿ ಪಿತೃವಾತ್ಸಲ್ಯ, ಮಾತೃವಾತ್ಸಲ್ಯ, ಬಂಧುಪ್ರೇಮ,

ಮಿತ್ರಸ್ನೇಹ ಇವೆಲ್ಲವೂ ಕೇಂದ್ರೀಕೃತವಾಗಿದ್ದುದನ್ನು ಅವರ ಜೊತೆಗೇ ಬಾಳಿದ ಅವರ ತಮ್ಮ ವಿರೂಪಾಕ್ಷಪ್ಪ ಅಂತಃಕರಣಪೂರ್ವಕ ನೆನೆದಿದ್ದಾರೆ.

ಸಾಹಿತ್ಯ–ಸಂಶೋಧನೆ–ಸಂಪಾದನೆಯ ಕ್ಷೇತ್ರದಲ್ಲಿ ಬಸವನಾಳರು ಸಲ್ಲಿಸಿದ ಸೇವೆ ಅತ್ಯಂತ ಪ್ರಮುಖವಾದದ್ದು ಹಾಗೂ ಚಿರಸ್ಥಾಯಿಯಾದದ್ದು. ಅವರ ಸ್ವತಂತ್ರ ಕೃತಿಗಳು ಹಾಗೂ ಕಾವ್ಯಶಾಸ್ತ್ರ ಕೃತಿಗಳ ಪರಿಷ್ಕರಣ ಎಂದು ಎರಡು ಭಾಗಗಳಾಗಿ ಇದನ್ನು ಪರಿಶೀಲಿಸಬಹುದು.

ಶಿಕ್ಷಣ ವ್ಯವಸ್ಥೆಯಲ್ಲಿ ಕನ್ನಡ ದೀನ ಸ್ಥಿತಿಯಲ್ಲಿದ್ದಾಗ ಅದಕ್ಕೆ ಅಗತ್ಯವಾಗಿದ್ದ ಕೆಲವು ಪಠ್ಯಪುಸ್ತಕಗಳ ರಚನೆಗೆ ಬಸವನಾಳರು ಕೈ ಹಾಕಿದರು. ಕನ್ನಡದ ಅಭಿಮಾನ ಮತ್ತು ಮಾತೃಭಾಷಾ ಮಾಧ್ಯಮದ ಔಚಿತ್ಯ ಇವುಗಳನ್ನು ಇವರು ದೃಷ್ಟಿಯಲ್ಲಿಟ್ಟುಕೊಂಡುದು ಸ್ಪಷ್ಟವಾಗುತ್ತದೆ. ಹಲಲಿ ಹಂಪಯ್ಯನವರೊಂದಿಗೆ ಕೂಡಿ ಬರೆದ 'ಇಂಗ್ಲೆಂಡಿನ ಅರ್ವಾಚೀನ ಇತಿಹಾಸ' ಹಾಗೂ 'ಹಿಂದೂಸ್ಥಾನದ ಇತಿಹಾಸ' ಇವು ಅಂದಿನ ಮಹತ್ವದ ಪ್ರಕಟನೆಗಳು. ಪಂಡಿತ ಚೆ. ಎ. ಕವಲಿಯವರ ಸಹಕಾರದೊಂದಿಗೆ ರಚಿಸಿದ 'ಕನ್ನಡ ಚೆನ್ನುಡಿ'ಯ ನಾಲ್ಕು ಭಾಗಗಳು ಕನ್ನಡ ಭಾಷೆಯ ವ್ಯಾಕರಣವನ್ನು ಬೇರೆ ಬೇರೆ ವರ್ಗಗಳಿಗೆ ಬೋಧಿಸುವಂಥವು. ಇವುಗಳಿಗೆ ಬರೆದ ಮೊದಲ ಮಾತಿನಲ್ಲಿ ಪ್ರಸ್ತಾಪಿಸಿದ ವಿಚಾರಗಳು ಇಂದಿಗೂ ಮನನೀಯವಾಗಿವೆ.

ಬಸವನಾಳರ ಮಹತ್ವದ ಸ್ವತಂತ್ರ ಕೃತಿಯೆಂದರೆ 'ವೀರಶೈವದ ಹುಟ್ಟು–ಬೆಳವಣಿಗೆ' (ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಮಾಡಿದ ಮೂರು ಉಪನ್ಯಾಸಗಳ ಸಂಗ್ರಹ). ವೀರಶೈವ ಧರ್ಮದ ಮೂಲ, ಬೆಳವಣಿಗೆ, ಅದರ ಆಧ್ಯಾತ್ಮಿಕ ಸ್ವರೂಪ ಹಾಗೂ ಸಮಾಜ ಚಿಂತನೆಯ ವಿಷಯಗಳನ್ನು ಇದರಲ್ಲಿ ಸಮರ್ಥವಾಗಿ ನಿರೂಪಿಸಲಾಗಿದೆ. ಮೊದಲ ಭಾಗದಲ್ಲಿ 'ವೀರಶೈವ' ಮತ್ತು 'ಲಿಂಗಾಯತ' ಪದಗಳ ವ್ಯುತ್ಪತ್ತಿ ಮತ್ತು ಅರ್ಥಗಳನ್ನು ಕುರಿತು ದೀರ್ಘವಾಗಿ ವಿವರಣೆ ನೀಡಲಾಗಿದೆ. ತುಲನಾತ್ಮಕ ಚರ್ಚೆ, ತಲಸ್ಪರ್ಶಿಯಾದ ವಿಶ್ಲೇಷಣೆಯನ್ನು ಇಲ್ಲಿ ಕಾಣಬಹುದು. 'ತಾತ್ವಿಕವಾಗಿ ವಿವೇಚಿಸುವುದಾದರೆ ಜನಸಾಮಾನ್ಯರಲ್ಲಿ ಬಳಕೆಯಲ್ಲಿರುವ 'ಲಿಂಗಾಯತ' ಎಂಬ ಪದವೇ ಒಟ್ಟು ಅರ್ಥಗರ್ಭಿತವೂ ಪ್ರಶಸ್ತವೂ ಆಗಿದೆ ಎಂದು ಕಂಡುಬರುತ್ತದೆ. ಆದರೆ ಇದನ್ನು ಕಡೆಗಾಣಿಸಿದ ವಿದ್ವಾಂಸರೇ ಬಹಳ' ಎಂದು ಹೇಳುವಲ್ಲಿ ಅವರ ಸ್ಪಷ್ಟವಾದ ಮನೋಭಾವ ವ್ಯಕ್ತವಾಗಿದೆ. 'ಲಿಂಗಮಧ್ಯೇ ಜಗತ್ಸರ್ವಂ' ಎಂಬ ತತ್ತ್ವವನ್ನು ನಂಬಿ ಲಿಂಗದಲ್ಲಿಯೇ ಸಂಪೂರ್ಣ ಮಾರ್ಪಾಟು ಕಂಡಿತೆಂತಲೂ ಅದರಿಂದಾಗಿ ಅದು ಹೊಸ ಸ್ವರೂಪವನ್ನು ಧಾರಣ ಮಾಡಿತೆಂತಲೂ ಅಂತೆಯೇ ಅದನ್ನು ಹೊಸದಾಗಿ ಬಸವಣ್ಣನವರು ಸ್ಥಾಪಿಸಿದರೆಂಬ ಅಭಿಪ್ರಾಯ ವೀರಶೈವ ಸಾಹಿತ್ಯ ಮತ್ತು ಧರ್ಮ ಗ್ರಂಥಗಳಲ್ಲಿ ಕಂಡುಬರಲು ಅವಕಾಶವಾಯಿತು ಎಂಬ ಅವರ ಅಭಿಪ್ರಾಯ ಅತ್ಯಂತ ಸೂಕ್ತವಾಗಿದೆ.

ಬಸವಣ್ಣನವರ ಜೊತೆಗೆ ಸಾಮಾಜಿಕ–ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಚೆನ್ನಬಸವಣ್ಣ, ಅಲ್ಲಮಪ್ರಭು ಮುಂತಾದ ಶರಣರ ಕ್ರಿಯಾ ಸ್ವರೂಪವನ್ನು, ವೀರಶೈವ ಧರ್ಮಕ್ಕೆ ಅವರು ನೀಡಿದ ಕೊಡುಗೆಯನ್ನು ಮೂರನೆಯ ಭಾಗದಲ್ಲಿ ಚರ್ಚಿಸಲಾಗಿದೆ. ಮುಂದೆ, ಪಂಚಾಚಾರ್ಯರು ವೀರಶೈವ ಸಮಾಜದ ಸಂರಕ್ಷಣೆ ಹಾಗೂ ಸಂವರ್ಧನೆಗಳಿಗೆ ಕಟಿಬದ್ಧರಾದುದನ್ನು ಐತಿಹಾಸಿಕವಾಗಿ ವಿವರಿಸಿದ ನಂತರ ವಿಜಯನಗರ ಅರಸರ ಕಾಲದಲ್ಲಿ 'ಶೂನ್ಯಸಿಂಹಾಸನ'ವೆಂಬ ವಿರಕ್ತಪೀಠ ಮುಂದುವರೆದು ಕಾರ್ಯಗೈದುದರ ವಿವರಣೆ ಬಂದಿದೆ. ವಿರಕ್ತ ತೋಂಟದಾರ್ಯರು, ಕೆಳದಿಯರಸರು ಈ ಧರ್ಮದ ವಿಕಾಸಕ್ಕೆ ನೀಡಿದ ಕೊಡುಗೆಯ ಬಗೆಗೂ ನಿರೂಪಿಸಿದ್ದಾರೆ.

ವೀರಶೈವದ ಹುಟ್ಟು ಬೆಳವಣಿಗೆಯನ್ನು ಹೀಗೆ ಸಾರವತ್ತಾಗಿ ಐತಿಹಾಸಿಕವಾಗಿ ವಿವೇಚಿಸಿ ಕೊನೆಯಲ್ಲಿ ಈಚಿನ ಕಾಲದ ಅದರ ಸ್ಥಿತಿಯ ಬಗ್ಗೆ ಹೇಳಿದ ಮಾತು ಗಮನಿಸುವಂತಿದೆ : ''ಬಸವಣ್ಣನವರ ಕಾಲದಿಂದ ಅಷ್ಟಾವರಣ ಸಂಪನ್ನರಾಗಿ, ಪಂಚಾಚಾರ ಪಾರಾಯಣರಾಗಿ, ಷಟ್‌ಸ್ಥಲ ಮಾರ್ಗಾವಲಂಬಿಗಳಾಗಿ, ತ್ಯಾಗ, ಭೋಗ, ಕರ್ಮ, ಜ್ಞಾನ ಎಲ್ಲಾ ಯೋಗಗಳ ಹಾಗೂ ಕಾಶ್ಮೀರ ಶೈವ ಸಿದ್ಧಾಂತ ಹಾಗೂ ಶಾಕ್ತ ಸಿದ್ಧಾಂತ, ದ್ವೈತಾದ್ವೈತ ಮುಂತಾದ ತಾತ್ವಿಕ ಸಮನ್ವಯದ ಸಿದ್ಧಾಂತದಿಂದ ವೀರಶೈವ ಸಮಾಜವು ಭಕ್ತಿ ಮುಖ್ಯವಾಗಿ, ಅನುಭಾವ ಧರ್ಮವಾಗಿ ಕನ್ನಡ ನಾಡಿನಲ್ಲಿ ಕೃಷಿ, ವಾಣಿಜ್ಯ, ಕಾಯಕದ ಸ್ವಾವಲಂಬಿ ತತ್ವದಿಂದ ಬಾಳುತ್ತಿದೆ.'' ಈಗಿರುವ ಸ್ಥಿತಿ ಹೇಗಿದೆಯೆಂಬುದನ್ನು ಹೇಳಬೇಕಾಗಿಲ್ಲ. ಈಗಲೂ ಪ್ರಸ್ತುತವಾಗಿರುವ ಈ ಕೃತಿಯಲ್ಲಿಯ ಎಷ್ಟೋ ವಿಚಾರಗಳಿಗೆ ಬೇರೆ ಬೇರೆ ಮೂಲಗಳಿಂದ ಸಮರ್ಥನೆ ದೊರಕಿರುವುದು ಗಮನಾರ್ಹವಾಗಿದೆ.

ಇನ್ನುಳಿದ ಸುಮಾರು ನಾಲ್ವತ್ತು ಲೇಖನ ಪ್ರಬಂಧಗಳು ಬಸವನಾಳರ ಆಳವಾದ ವೈಚಾರಿಕ ಪ್ರಜ್ಞೆ, ಸಂಶೋಧನ ಮನೋವೃತ್ತಿ, ವಿಮರ್ಶಾದೃಷ್ಟಿ, ಶಾಸ್ತ್ರೀಯ ನಿಖರತೆ ಹಾಗೂ ಲೋಕಾನುಭವಗಳ ದರ್ಶನ ನೀಡುತ್ತಿವೆ.

ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ನಾಡಿನ ಬಹುಜನರಲ್ಲಿ, ಸಮಾಜದಲ್ಲಿ, ೧೨ನೆಯ ಶತಮಾನದ ಕ್ರಾಂತಿಯ ಬಗೆಗಿನ ಅಜ್ಞಾನ, ಅವಜ್ಞೆ, ಅನಾಸ್ಥೆಗಳನ್ನು ಕಂಡು ಅವುಗಳ ನಿವಾರಣೆಗೆ ಪ್ರಯತ್ನಿಸಿ, ಆ ಕ್ರಾಂತಿಯ ಸ್ವರೂಪ, ಅದರ ಫಲವಾದ ಸಾಹಿತ್ಯ ಇವುಗಳ ನೈಜಚಿತ್ರವನ್ನು ನಮ್ಮ ಮನಸ್ಸಿನಲ್ಲಿ ಮೂಡಿಸುವ ಕಳಕಳಿ ಈ ಲೇಖನಗಳ ಹಿಂದಿನ ತುಡಿತವಾಗಿದೆ. 'ವೀರಶೈವರು ಹಿಂದುಗಳೆ?' ''ವೀರಶೈವರೂ ಲಿಂಗಪೂಜೆಯೂ'. 'ವೀರಶೈವರ ಇಂದು–ಮುಂದು', 'ಅಖಿಲಭಾರತ ವೀರಶೈವ ತರುಣ ಸಮ್ಮೇಳನ','ವೀರಶೈವ ತತ್ತ್ವಪ್ರಕಾಶ', 'ವೀರಶೈವ ಸಾಹಿತ್ಯ ಗೋಷ್ಠಿಯ ಅವಶ್ಯಕತೆ' ಮುಂತಾದ ಲೇಖನಗಳು ಅವುಗಳ ಹೆಸರೇ ಸೂಚಿಸುವಂತೆ ವೀರಶೈವ ಧರ್ಮವನ್ನು ಕುರಿತು, ಶಾಸ್ತ್ರೀಯ ಅಧ್ಯಯನದ ವಿವರಗಳು ಹಾಗೂ ಅದರ ಪ್ರಸ್ತುತತೆಯನ್ನು ಮನಗಾಣಿಸಿ ಕೊಡುತ್ತವೆ. ಹಾಗೆಯೇ ಅದು ಇಂದು ಎದುರಿಸುತ್ತಿರುವ ಆತಂಕಗಳ ಕಡೆಗೆ

ನಮ್ಮ ಲಕ್ಷ್ಯವನ್ನು ಸೆಳೆಯುತ್ತವೆ. ಜಗತ್ತಿನಲ್ಲಿ ಸಾರ್ವತ್ರಿಕವಾಗಿ ಮಾನ್ಯವಾಗಿರುವ 'ಲಿಂಗಪೂಜೆ'ಗೂ, ವೀರಶೈವರ 'ಲಿಂಗಪೂಜೆ'ಗೂ ಅಜಗಜಾಂತರ ವ್ಯತ್ಯಾಸವಿರುವುದನ್ನು ಸಾಧಾರವಾಗಿ ಸ್ಪಷ್ಟಪಡಿಸಲಾಗಿದೆ. ವೀರಶೈವರು ಹಿಂದುಗಳೊ ಎಂದು ಪ್ರಶ್ನಿಸಿಕೊಂಡು, ಪ್ರಾಚೀನ ಕಾಲದಿಂದ ಶಿವೋಪಾಸನೆ ಭಾರತದಲ್ಲಿ ಬೆಳೆದು ಬಂದ ಪರಿಯನ್ನು ವಿವೇಚಿಸಿ ವೇದ, ಉಪನಿಷತ್ತು, ಆಗಮ ಹಾಗೂ ತಂತ್ರ ಕೃತಿಗಳಲ್ಲಿ ಅದು ಮೂಡಿ ಬಂದ ಚಿತ್ರ ನೀಡಿ ಈ ಆಧ್ಯಾತ್ಮಿಕ ಚೌಕಟ್ಟಿನ ಪರಂಪರೆಯ ಹಿನ್ನೆಲೆಯಲ್ಲಿ ವೀರಶೈವರೂ ಹಿಂದುಗಳೇ ಎಂದೇ ವಾದಿಸುತ್ತಾರೆ.

'ವೀರಶೈವರ ಇಂದು–ಮುಂದು' ಎಂಬ ಮಹತ್ವದ ಲೇಖನದಲ್ಲಿ (೧೯೩೮ರಲ್ಲಿ ಹುಬ್ಬಳ್ಳಿಯಲ್ಲಿ ಜರುಗಿದ ವೀರಶೈವ ಮಹಾಸಭೆಯ ಅಧ್ಯಕ್ಷ ಭಾಷಣ) ಪ್ರಾಚೀನ ಕಾಲದಿಂದಲೂ ಸಮಾಜ, ಸಂಸ್ಕೃತಿಗಳು ಜೀವಂತವಾಗಿ ಉಳಿದು ಬಂದ 'ವೀರಶೈವ'ವನ್ನು ಪ್ರಸ್ತಾಪಿಸುತ್ತ ಇಂದು ಈ ಜನ ಶಿಕ್ಷಣ, ಉದ್ಯೋಗ, ವ್ಯವಹಾರ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹೇಗೆ ಹೆಜ್ಜೆ ಇಟ್ಟಿದೆ, ಮುಂದಿನ ದಾರಿ ಎಷ್ಟು ಬೀಸಾಗಬೇಕು ಎಂಬುದನ್ನು ವಿವರಿಸಿ, ಇಂಥ ಸಂದರ್ಭದಲ್ಲಿ ವೀರಶೈವ ಮಹಾಸಭೆ ಇಡೀ ಸಮಾಜದ ಕೇಂದ್ರಬಿಂದುವಾಗಿ, ಅದರ ಆಶೋತ್ತರಗಳ ಪ್ರತಿನಿಧಿಯಾಗಿ ಹೇಗೆ ಕೆಲಸ ಮಾಡಬೇಕೆಂಬುದನ್ನು ಸೂಚಿಸುತ್ತಾರೆ. ಸಮಾಜದ ಬಗೆಗಿನ ಕಳಕಳಿ ಹಾಗೂ ಹೊಸಕಾಲದ ಮುಂಧೋರಣೆಗಳು ಈ ಲೇಖನದಲ್ಲಿ ಸ್ಫುಟವಾಗಿ ವ್ಯಕ್ತಗೊಂಡಿವೆ. ಸಮಾಜಮುಖಿಯಾಗಿ ಬೆಳೆದು ಬಂದಿರುವ ಆಚಾರ, ಸಂಸ್ಕೃತಿಯ ವಿವರಗಳೂ ಇಲ್ಲಿ ಮೂಡಿಬಂದಿವೆ.

ಬಸವನಾಳರ ಪ್ರಥಮ ಪ್ರಾಶಸ್ತ್ಯದ ಕ್ಷೇತ್ರಗಳಲ್ಲಿ 'ಗ್ರಂಥಪರಿಷ್ಕರಣ' ಕಾರ್ಯಕ್ಕೆ ಹೆಚ್ಚಿನ ಮಹತ್ವವಿದೆ. ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳನ್ನು ಆಧುನಿಕ ಗ್ರಂಥ ಸಂಪಾದನೆಯ ತತ್ತ್ವವಿಧಾನಗಳಿಗನುಗುಣವಾಗಿ ಪರಿಷ್ಕರಿಸಿ ಪ್ರಕಟಿಸಿ, ಶಾಸ್ತ್ರೀಯವಾದ ಗ್ರಂಥ ಸಂಪಾದನೆಯ ಚರಿತ್ರೆಯಲ್ಲಿ ಪ್ರಮುಖಸ್ಥಾನವನ್ನು ಅವರು ಪಡೆದವರಾಗಿದ್ದಾರೆ. ಹಳಗನ್ನಡದ ಸುಪ್ರಸಿದ್ಧ ವ್ಯಾಕರಣಗಳಾದ ನಾಗವರ್ಮನ ಶಬ್ದಸ್ಮೃತಿ ಪ್ರಕರಣ, ಭಟ್ಟಾಕಳಂಕನ 'ಶಬ್ದಾನುಶಾಸನ'ಗಳನ್ನೂ ಪಂಡಿತರಿಗೆ ಪ್ರಮಾಣಗ್ರಂಥಗಳಾಗುವಂತೆ ಪರಿಷ್ಕರಿಸಿ ಸಂಪಾದಿಸಿಕೊಟ್ಟು 'ಶಬ್ದಾಗಮಪಂಡಿತ'ರೆಂಬ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಶಂಕರ ನಾರಾಯಣರೊಂದಿಗೆ ಪರಿಷ್ಕರಿಸಿದ 'ಕಾವ್ಯಾಲೋಕನಂ' ಗ್ರಂಥವು ಪ್ರಾಚೀನ ಕನ್ನಡ ಸಾಹಿತ್ಯ ವ್ಯಾಸಂಗದ ವಿಸ್ತಾರಕ್ಕೆ, ಪಾಂಡಿತ್ಯ–ಪರಿಶ್ರಮದ ಪರಿಣತಿಗಳಿಗೆ ದ್ಯೋತಕವೆನಿಸಿದೆ. ಪ್ರಸ್ತಾವನೆಯಲ್ಲಿ ೨ನೆಯ ನಾಗವರ್ಮನ ಕಾಲ, ಕೃತಿಗಳ ಪರಿಚಯ, ಕನ್ನಡ ಅಲಂಕಾರ ಗ್ರಂಥಗಳ ಸಮೀಕ್ಷೆ, ಕಾವ್ಯಾವಲೋಕನದ–ವೈಶಿಷ್ಟ್ಯ, ಕವಿರಾಜಮಾರ್ಗ ಕಾವ್ಯಾವಲೋಕನದ ಸಾಮ್ಯ, ಕನ್ನಡ ಸಾಹಿತ್ಯದಲ್ಲಿ ನಾಗವರ್ಮನ ಸ್ಥಾನ, ಇತರ ಶಾಸ್ತ್ರಕಾರರ ಮೇಲೆ ಇವನ ಪ್ರಭಾವ, ಇವೇ ಮೊದಲಾದ ವಿಷಯಗಳನ್ನು ಕುರಿತು ಸಾಧಾರವಾಗಿ ವಿವೇಚಿಸಿದ್ದಾರೆ. ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲೆಂಬ

ಉದ್ದೇಶದಿಂದ ೧೩೪ ಪುಟಗಳ ವಿಸ್ತಾರವಾದ ಟಿಪ್ಪಣಿಯನ್ನು ಸೇರಿಸಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಭಟ್ಟಾಕಳಂಕನ 'ಕರ್ಣಾಟಕ ಶಬ್ದಾನುಶಾಸನ'ಕ್ಕಿರುವ ಮಹತ್ವವನ್ನು ಮನಗಂಡ ಬಸವನಾಳರು ಅಪೂರ್ಣ ಟೀಕೆಯಿಂದ ಈ ಕೃತಿಯ ಅರ್ಧಭಾಗ ಮುದ್ರಣಗೊಳ್ಳದೆ ಉಳಿದಿರುವುದನ್ನು ಗಮನಿಸಿ, ಮ.ಪ್ರ. ಪೂಜಾರ ಅವರ ನೆರವಿನೊಂದಿಗೆ ಏಳುನೂರು ಪುಟಗಳ ಗಾತ್ರದ ಈ ಕೃತಿಯನ್ನು ಪರಿಷ್ಕರಿಸಿ ಪ್ರಕಟಿಸಿರುವುದು ಅವರ ಅಗಾಧ ವಿದ್ವತ್ತಿನ ಅಪೂರ್ವ ಸಾಧನೆಯೆನ್ನಬಹುದು. ಗ್ರಂಥ ಪರಿಷ್ಕರಣವನ್ನು ಸಾಮೂಹಿಕ ಪ್ರಯತ್ನದಿಂದ, ಸಂಯುಕ್ತ ಪ್ರಕ್ರಿಯೆಯಾಗಿ ಮಾಡಿರುವುದು ಈ ದಿಸೆಯಲ್ಲಿ ಉಳಿದವರಿಗೂ ಮಾದರಿಯಾಗಿದೆ.

ಕನ್ನಡದ ಮಹತ್ವದ ಹಾಗೂ ಜನಪ್ರಿಯ ಕಾವ್ಯಗಳಾದ 'ಚೆನ್ನಬಸವಪುರಾಣ', 'ಪ್ರಭುಲಿಂಗಲೀಲೆ', 'ಶಬರ ಶಂಕರವಿಳಾಸ' ಹಾಗೂ 'ಹರಿಹರನ ಮೂರು ರಗಳೆಗಳು', 'ರಕ್ಷಾಶತಕ ಮತ್ತು ಪಂಪಾಶತಕ' ಮೊದಲಾದ ಕೃತಿಗಳನ್ನು ಸಂಪಾದಿಸಿ ಬೆಲೆಯುಳ್ಳ ಪ್ರಸ್ತಾವನೆಗಳನ್ನು ಬರೆದು ಸಾಹಿತ್ಯಾಭ್ಯಾಸಿಗಳ ಮನ್ನಣೆಗೆ ಪಾತ್ರರಾಗಿದ್ದಾರೆ. ಪ್ರಕಟವಾದ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಪರಿಷ್ಕರಣ ದೃಷ್ಟಿಯಿಂದ 'ಚೆನ್ನಬಸವ ಪುರಾಣ'ಕ್ಕೆ ಅಗ್ರಸ್ಥಾನ ಸಂದಿದೆ. ಬಾಲಲೀಲಾ ಮಹಂತ ಶಿವಯೋಗಿಗಳ 'ಕೈವಲ್ಯದರ್ಪಣ', ಸರ್ಪಭೂಷಣ ಶಿವಯೋಗಿಗಳ 'ಕೈವಲ್ಯಕಲ್ಪವಲ್ಲರಿ', 'ಮೈಲಾರ ಬಸವಲಿಂಗ ಶರಣರ ಕೃತಿಗಳು' ಬಸವನಾಳರ ವಿದ್ವತ್ಪೂರ್ಣ ಪ್ರಸ್ತಾವನೆಗಳೊಂದಿಗೆ ಅವರ ಸಂಗೀತಜ್ಞಾನವನ್ನೂ ವಿಶದಗೊಳಿಸುತ್ತವೆ. ಸಾಹಿತ್ಯ ಸಂಗೀತಗಳಿಗಿರುವ ಅನ್ಯೋನ್ಯ ಸಂಬಂಧ, ಕನ್ನಡದಲ್ಲಿ ಹಾಡುಗಬ್ಬದ ಪರಂಪರೆ–ಇತಿಹಾಸವನ್ನು ಸಂಶೋಧನಾತ್ಮಕವಾಗಿ ನಿರೂಪಿಸುತ್ತ ಹಾಡುಗಬ್ಬದ ಪರಂಪರೆ ವೀರಶೈವ ಕವಿಗಳಿಂದಲೇ ಆರಂಭವಾಯಿತೆಂಬುದನ್ನು ಆಧಾರಪೂರ್ವಕ ತೋರಿಸಲಾಗಿದೆ. ಕೈವಲ್ಯ ಪರಂಪರೆಯ ಅನುಭಾವಿ ಕವಿಗಳ ಬಗೆಗೆ ಅದರಲ್ಲೂ ಶುದ್ಧವೀರಶೈವ ದರ್ಶನ ಮತ್ತು ಆಚರಣೆಗಳನ್ನು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿರುವ ಮೈಲಾರ ಬಸವಲಿಂಗ ಶರಣರಲ್ಲಿ ಬಸವನಾಳರು ವಿಶೇಷ ಆಸಕ್ತಿ ಹಾಗೂ ಭಕ್ತಿಯನ್ನು ಹೊಂದಿದ್ದರು. ಇತರ ಅನೇಕ ವೀರಶೈವ ಕವಿಗಳು ತಮ್ಮ ಧೋರಣೆಯಲ್ಲಿ ಮಿಶ್ರವೀರಶೈವವನ್ನೇ ಪ್ರತಿಪಾದಿಸಿದ್ದರೆಂಬುದು ಅವರ ಸ್ಪಷ್ಟ ನಿಲುವಾಗಿದ್ದಿತು.

ಇದಕ್ಕೂ ಮೊದಲೇ ಬಸವನಾಳರು ಸಂಪಾದಿಸಿದ ಮಹತ್ವದ ಕೃತಿಯೊಂದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬೇಕು. ವೀರಶೈವ ಧರ್ಮದ ಸ್ವರೂಪವನ್ನು ಸಮಗ್ರವಾಗಿ ನಿರೂಪಿಸುವ ಪ್ರಮಾಣಭೂತವಾದ ಗ್ರಂಥವೊಂದರ ಕೊರತೆಯನ್ನು ಕಂಡುಕೊಂಡು 'ವೀರಶೈವ ತತ್ತ್ವಪ್ರಕಾಶಿಕೆ'ಯ ಮೂಲಕ ಅದನ್ನು ಪೂರೈಸಿಕೊಟ್ಟರು. ತಮ್ಮ ಸಮಕಾಲೀನ ಅನೇಕ ವೀರಶೈವ ಹಾಗೂ ವೀರಶೈವೇತರ ವಿದ್ವಾಂಸರಿಂದ ವಿದ್ವತ್ಪೂರ್ಣ ಲೇಖನಗಳು ಮತ್ತು ತಮ್ಮ ಸುದೀರ್ಘವಾದ ಪ್ರಸ್ತಾವನೆಯೊಂದಿಗೆ ಪ್ರಕಟವಾದ ಈ ಕೃತಿಯಲ್ಲಿ ಶೈವ

ಮತ್ತು ವೀರಶೈವದ ಪ್ರಾಚೀನತೆ, ಸೈದ್ಧಾಂತಿಕ ಮತ್ತು ಆಚರಣಾತ್ಮಕ ಅಂಶಗಳಲ್ಲಿಯ ಸಾಮ್ಯವೈಷಮ್ಯಗಳು, ವೀರಶೈವಕ್ಕೆ ವಿಶಿಷ್ಟವೆನಿಸಿರುವ ತತ್ತ್ವಗಳ ಖಚಿತವಾದ ವಿವರಣೆಗಳನ್ನೊಳಗೊಂಡ ಲೇಖನಗಳಿವೆ. ಇದು ಸಾಂಪ್ರದಾಯಿಕ ಗ್ರಂಥವಾಗಿರದೆ ವೀರಶೈವ ಧರ್ಮದ ಸ್ವರೂಪವನ್ನು ಸಮಗ್ರವಾಗಿ ಚಾರಿತ್ರಿಕ ವಿವರಗಳ ಹಿನ್ನೆಲೆಯಲ್ಲಿ ಮತ್ತು ತೌಲನಿಕ ದೃಷ್ಟಿಕೋನದಿಂದ ನಿರೂಪಿಸುವ ಪ್ರೌಢ ಆಕರ ಗ್ರಂಥವಾಗಿದೆ.

ಬಸವನಾಳರ ಹೆಸರು ಗ್ರಂಥಸಂಪಾದನೆಯ ಕ್ಷೇತ್ರವನ್ನೊಳಗೊಂಡಂತೆ ಒಟ್ಟಾರೆ ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಿದ ಮೇರು ಕೃತಿ 'ಬಸವಣ್ಣನವರ ಷಟ್‌ಸ್ಥಳದ ವಚನಗಳು'. ಇದು ಅವರ ಹತ್ತು ವರ್ಷದ ಪರಿಶ್ರಮದ ಫಲ. ಹಿಂದಿನ ಕೈ ಬರೆಹದ ಪ್ರತಿಗಳಲ್ಲಿ ಅಕ್ಷರ ಸ್ಖಾಲಿತ್ಯ, ಶಬ್ದಪಾತ, ಪುನರುಕ್ತಿ ಮೊದಲಾದ ದೋಷಗಳು ವಿಪುಲವಾಗಿದ್ದವು. ಇವನ್ನೆಲ್ಲ ನಿವಾರಿಸಿ, ಸಮರ್ಪಕ ಪರಿಷ್ಕರಣ ಕೈಗೊಳ್ಳಲು ಲಭ್ಯವಿರುವ ಎಲ್ಲ ಕೈ ಬರಹದ ಪ್ರತಿಗಳು, ಐದು ಟೀಕಿನ ವಚನಗಳ ಕಟ್ಟುಗಳು, ಎರಡು ಕೋರಿ ಕಾಗದದ ಪ್ರತಿಗಳು, ಹದಿನೈದು ತಾಡೋಲೆಯ ಪ್ರತಿಗಳು–ಇವನ್ನು ಮುಂದಿಟ್ಟುಕೊಂಡು ಬಸವಣ್ಣನವರ ವಚನಗಳ ಶುದ್ಧಹಾಗೂ ಅಧಿಕೃತ ಆವೃತ್ತಿಯನ್ನು ಹೊರತಂದರು. ಹಿಂದೆ ಕಣ್ತಪ್ಪಿನಿಂದಾದ, ಅಜ್ಞಾನ, ಅವಜ್ಞಾನದಿಂದಾದ ಪಾಠದೋಷಗಳನ್ನು ನಿವಾರಿಸಿ ಶುದ್ಧರೂಪ ಕಾಯ್ದುಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸಿ ಬಹುಮಟ್ಟಿಗೆ ಯಶಸ್ವಿಯಾದರು. ವಚನಗಳನ್ನು ಲಯಾನ್ವಿತವಾಗಿ ವಿಂಗಡಿಸಿ, ಪಾದ ವಿನ್ಯಾಸದೊಂದಿಗೆ ಮುದ್ರಿಸಿ, ಅವುಗಳಿಂದ ಹೊರಡುವ ಹೊಸ ಅರ್ಥ ಪ್ರಕಾಶವನ್ನು ಎತ್ತಿ ತೋರಿಸಿ, ವಿಸ್ತಾರವಾದ ಪ್ರಸ್ತಾವನೆಯಲ್ಲಿ ವಚನಸಾಹಿತ್ಯದ ಲಕ್ಷಣ, ಹಿರಿಮೆ ಗರಿಮೆ, ವೈಶಿಷ್ಟ್ಯಗಳನ್ನು ಎತ್ತಿತೋರಿಸಿ, ಅನುಬಂಧದಲ್ಲಿ ವಚನಗಳ ಆಕಾರಾದಿ, ಕಠಿಣಶಬ್ದಗಳ ಅರ್ಥ, ಅವಶ್ಯವಿರುವ ಬೇರೆ ಬೇರೆ ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಈ ಎಲ್ಲ ವಿಶೇಷತೆಗಳಿಂದ 'ಬಸವಣ್ಣನವರ ಷಟ್‌ಸ್ಥಳದ ವಚನಗಳು' ಕೃತಿ ವಿನೂತನವೆನಿಸಿ ಮುಂದಿನವರಿಗೆ ಮಾರ್ಗದರ್ಶಕವಾಯಿತು. ಇದರ ತರುವಾಯ ಅನೇಕರು ಈ ಕೃತಿಯನ್ನು ಸಂಪಾದಿಸಿದ್ದರೂ ಬಸವನಾಳರ ಈ ಆವೃತ್ತಿಗೆ ಚ್ಯುತಿ ಬರದಿರುವುದು ಅದರ ಶಾಸ್ತ್ರಶುದ್ಧಿಗೆ ಸಾಕ್ಷಿಯಾಗಿದೆ. ಅದರ ಸಾಂಸ್ಕೃತಿಕ ಮಹತ್ವವನ್ನೂ, ಆಧುನಿಕ ಸೃಜನಶೀಲ ಪರಂಪರೆಗೆ ಅದು ನೀಡಿರುವ ಪ್ರೇರಣೆಯನ್ನೂ ವಿದ್ವಾಂಸರು ನೆನೆದುಕೊಳ್ಳುತ್ತಾರೆ. 'ಶೂನ್ಯ ಸಂಪಾದನೆ' ಮತ್ತಿತರ ಗ್ರಂಥಗಳನ್ನೂ ಹೀಗೆಯೇ ಪರಿಷ್ಕರಿಸಿ ಪ್ರಕಟಿಸಬೇಕೆಂಬ ಬಯಕೆ ಅವರದಾಗಿತ್ತು. ವಚನ ಸಂಪಾದನೆಯ ಅವರ ಉದ್ದೇಶ ಕೇವಲ ಧಾರ್ಮಿಕ, ಸಾಹಿತ್ಯಿಕ ಅಥವಾ ಭಾಷಿಕವಾಗಿರದೆ ಧರ್ಮ–ತತ್ತ್ವ ಸಮಾಜ–ಸಂಸ್ಕೃತ–ಭಾಷೆ ಎಲ್ಲವನ್ನೂ ಸಮರಸಗೊಳಿಸಿಕೊಂಡದ್ದಾಗಿದ್ದಿತು.

ಸುಪ್ರಸಿದ್ಧ ಇಂಗ್ಲಿಷ್ ಲೇಖಕ ಹಾಗೂ ವಿಮರ್ಶಕರಾದ ಪ್ರೊ. ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಅವರ ಸಹಯೋಗದೊಂದಿಗೆ ಬಸವನಾಳರು ಅನುವಾದಿಸಿ ಪ್ರಕಟಿಸಿದ "Musings of Basava" ಕೃತಿಯಲ್ಲಿ ಬಸವಣ್ಣವರ ಆಯ್ದ ೧೨೦ ವಚನಗಳನ್ನು

ಅಳವಡಿಸಲಾಗಿದೆ. ಪ್ರಸ್ತಾವನೆಯಲ್ಲಿ ವಚನ ಸಾಹಿತ್ಯದ ಮೇಲೆ, ಬಸವಣ್ಣನವರ ವ್ಯಕ್ತಿತ್ವ ವಿವೇಚನೆಗಳ ವಿಶ್ವಮಾನ್ಯ ಮೌಲ್ಯಗಳನ್ನು ಎತ್ತಿ ಹೇಳಲಾಗಿದೆ. ವೀರಶೈವ ತತ್ತ್ವ, ವಚನಗಳ ತಾತ್ವಿಕ ಹಾಗೂ ಸಾಹಿತ್ಯಿಕ ನೆಲೆ–ಬೆಲೆ ಹಾಗೂ ಕನ್ನಡ–ಇಂಗ್ಲಿಷ್ ಭಾಷೆಗಳಲ್ಲಿ ಬಸವನಾಳರು ಪಡೆದಿದ್ದ ಪ್ರಭುತ್ವವೇ ಇದರ ಯಶಸ್ಸಿಗೆ ಕಾರಣವೆನ್ನಬಹುದು. ಈ ಕೃತಿ ಪಾಶ್ಚಾತ್ಯ ವಿದ್ವಾಂಸರನ್ನು ಆಕರ್ಷಿಸಿದ್ದಲ್ಲದೆ, "Wisdom of the East" ಮಾಲೆಯಲ್ಲಿ ಅದರ ಸಂಪಾದಕರಾದ Mr. Cranmer-Byng ಈ ಕೃತಿಯನ್ನು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ "Mystic Poets of South India" ಹೆಸರಿನಲ್ಲಿ ಪ್ರಕಟಿಸುವ ಸಿದ್ಧತೆ ನಡೆಸಿರುವುದು ಪ್ರೊ. ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಬಸವನಾಳರಿಗೆ ತಿಳಿಸಿ ಆ ಬಗ್ಗೆ ಪತ್ರವ್ಯವಹಾರವೂ ನಡೆದಿದ್ದಿತು. ಆದರೆ ಬಸವನಾಳರ ಆಕಾಲ ಮರಣದಿಂದ ಆ ಕೆಲಸ ಮುಂದುವರಿಯಲಿಲ್ಲ.

ಬಸವನಾಳರು ಡೆಕ್ಕನ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಕಾಲೇಜಿನ ತ್ರೈಮಾಸಿಕದ ಕನ್ನಡ ವಿಭಾಗದ ಸಂಪಾದನೆಯ ಹೊಣೆ ನಿರ್ವಹಿಸಿದರು. ವೀರಶೈವ ಸಂಘದ ಸಮ್ಮೇಳನದಲ್ಲಿ ಹಾಕಿದ ಯೋಜನೆಯಂತೆ ‘ಪ್ರಬೋಧ’ ಮಾಸ ಪತ್ರಿಕೆ ೧೯೨೨ರಲ್ಲಿ ಬಸವನಾಳರ ಸಂಪಾದಕತ್ವದಲ್ಲಿ ಹೊರಬಂದಿತು. ಅವರ ಲೇಖನ ವ್ಯವಸಾಯ ಅಲ್ಲಿಂದಲೇ ಪ್ರಾರಂಭವಾಗಿ ವರ್ಧಿಸುತ್ತ ‘ಜಯ ಕರ್ನಾಟಕ’ದವರೆಗೆ ಕ್ರಮಿಸಿದ ದಾರಿಯನ್ನು ಅವಲೋಕಿಸಿದಾಗ ಪತ್ರಿಕಾ ವ್ಯವಸಾಯವೂ ಅವರ ಸಾಮಾಜಿಕ ವ್ಯಕ್ತಿತ್ವದ ಒಂದು ಪ್ರಮುಖ ಅಂಗವಾಗಿ ಗೋಚರಿಸದಿರದು. ಕರ್ನಾಟಕ ವಿದ್ಯಾವರ್ಧಕ ಸಂಘದ ಮುಖಪತ್ರಿಕೆ ‘ವಾಗ್ಭೂಷಣ’ದ ಸಂಪಾದಕರಾಗಿ ಕನ್ನಡ ನಾಡು–ನುಡಿ–ಸಂಸ್ಕೃತಿ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟಂತೆ ಅದನ್ನು ಪ್ರಥಮದರ್ಜೆಯ ಪತ್ರಿಕೆಯನ್ನಾಗಿ ರೂಪಿಸುವಲ್ಲಿ ಬಸವನಾಳರು ಸಾಕಷ್ಟು ಪರಿಶ್ರಮಪಟ್ಟದ್ದುಂಟು. ಕರ್ನಾಟಕ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ‘ಸಾಹಿತ್ಯ ಸಮಿತಿ’ಯ ತ್ರೈಮಾಸಿಕ ಪತ್ರಿಕೆ ಅವರ ಸಂಪಾದಕತ್ವದಲ್ಲಿ ವಿದ್ವಾಂಸರ ಗಮನವನ್ನು ಬಹುವಾಗಿ ಸೆಳೆದುಕೊಂಡಿತು. ವೀರಶೈವ ಮತ–ತತ್ತ್ವ ಸಾಹಿತ್ಯ–ಸಂಸ್ಕೃತಿಗಳ ಸೂಕ್ತ ಪರಿಚಯವನ್ನು ಕನ್ನಡೇತರರಿಗೂ ತಿಳಿಸುವ ಅವಶ್ಯಕತೆಯನ್ನು ಮನಗಂಡು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲೂ ಲೇಖನಗಳನ್ನೊಳಗೊಂಡು ಪ್ರಕಟಗೊಂಡ (೧೯೪೧) ಈ ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಬಸವನಾಳರೇ ಪ್ರಮುಖರು. ಸಂಪಾದಕೀಯದ ಜೊತೆಗೆ ಕನ್ನಡ ಲೇಖನಗಳ ಸಾರವನ್ನು ಇಂಗ್ಲಿಷಿನಲ್ಲಿ ಹಾಗೂ ಇಂಗ್ಲಿಷ್ ಲೇಖನಗಳ ಸಾರವನ್ನು ಕನ್ನಡದಲ್ಲಿ ಕೊಡುವ ಕಾರ್ಯವನ್ನೂ ಇವರೇ ವಹಿಸಿಕೊಂಡಿದ್ದರು. ನಾಡಿನ ಪ್ರಸಿದ್ಧ ವಿದ್ವಾಂಸರು ಇದರ ಲೇಖಕರ ಬಳಗದಲ್ಲಿದ್ದರು. ಪುಸ್ತಕ ವಿಮರ್ಶೆಗಾಗಿ ಕೆಲವು ಪುಟಗಳು ಮೀಸಲಾಗಿದ್ದವು. ‘ಶೂನ್ಯಸಂಪಾದನೆ’ಯ ಇಂಗ್ಲಿಷ್ ಅನುವಾದ ಕೂಡ ಧಾರವಾಹಿಯಾಗಿ ಇದರಲ್ಲಿ ಪ್ರಕಟಗೊಂಡು ಪತ್ರಿಕೆಯ ಮಹತ್ವವನ್ನು ಹೆಚ್ಚಿಸಿತು.

ಬೆಳಗಾವಿಯಿಂದ ನಿವೃತ್ತಿಹೊಂದಿ ಧಾರವಾಡಕ್ಕೆ ಬರುತ್ತಲೇ ೧೯೪೩ರಲ್ಲಿ 'ಜಯ ಕರ್ನಾಟಕ' ಮಾಸಿಕವನ್ನು ಬೆಳಗಾವಿ ರಾಮಚಂದ್ರ ರಾಯರಿಂದ ಕೊಂಡು ಕೊಂಡು ಅದನ್ನು ಉತ್ತಮ ಸಾಹಿತ್ಯಿಕ ಪತ್ರಿಕೆಯಾಗಿಸುವ ಪ್ರಯತ್ನದಲ್ಲಿ ತೊಡಗಿದರು. ೧೯೪೩ರಿಂದ ಅದು ಸಾಪ್ತಾಹಿಕವಾಗಿಯೂ ಬರತೊಡಗಿತು. ಇದರಲ್ಲಿ ಆರ್ಥಿಕ ವಿಷಯಕ್ಕೆ, ಕೃಷಿಗೆ, ಬ್ಯಾಂಕಿಂಗ್ ಹಾಗೂ ಉದ್ದಿಮೆಗಳಿಗೆ ಸಂಬಂಧಪಟ್ಟ ಜನೋಪಯೋಗಿ ಲೇಖನಗಳಿಗೆ ಹೆಚ್ಚಿನ ಪುರಸ್ಕಾರ ದೊರೆಯಿತು. 'ಜಯ ಕರ್ನಾಟಕ' ಪ್ರತಿಷ್ಠಿತ ಬರಹಗಾರರಂತೆಯೇ ಅನೇಕ ಉದಯೋನ್ಮುಖ ಲೇಖಕರಿಗೂ ಅವಕಾಶವಿತ್ತು, ಅದು ಅವರನ್ನು ಬೆಳಕಿಗೆ ತರುವಲ್ಲಿ ಯಶಸ್ವಿಯಾಯಿತು.

ಆಲ್ ಇಂಡಿಯಾ ರೇಡಿಯೊ ಕೇಂದ್ರದ ಮೂಲಕ ವಚನಗಳನ್ನು ಹಾಡಬೇಕೊ? ಬೇಡವೊ? ಎಂಬ ವಾದ ವಿವಾದ ಎದ್ದಾಗ ಆ ಬಗ್ಗೆ 'ಜಯ ಕರ್ನಾಟಕ'ದ ಮೂಲಕ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಿ, ಸಮರ್ಥರಾದ ಸಂಗೀತಜ್ಞರು ವಚನಗಳನ್ನು ಹಾಡಬಹುದೆಂಬ ಸಂಪಾದಕೀಯ ಬರಹದಿಂದ ಸಂಗೀತಕಲಾವಿದರಿಗೂ ತನ್ಮೂಲಕ ವಚನ ಸಾಹಿತ್ಯಕ್ಕೂ ಮಹದುಪಕಾರ ಮಾಡಿದರೆಂಬುದನ್ನು ಸಂಗೀತರತ್ನ ಪಂಡಿತ ಮಲ್ಲಿಕಾರ್ಜುನ ಮನಸೂರ ಕೃತಜ್ಞತೆಯಿಂದ ನೆನೆದಿದ್ದಾರೆ. ವಚನಗಳ ಹಾಡುಗಾರಿಕೆಯಲ್ಲಿ ಅದ್ವಿತೀಯರೆನಿಸಿದ ಮನಸೂರರು ತಾವು ಬಸವನಾಳರಿಗೆ ಈ ವಿಷಯದಲ್ಲಿ ಎಷ್ಟೊಂದು ಋಣಿಯಾಗಿದ್ದೇವೆಂಬುದನ್ನು ಹೀಗೆ ಹೇಳಿದ್ದಾರೆ: 'ವಚನಗಳನ್ನು ಸಂಗೀತ ಕಲೆಗನುಸರಿಸಿ ಹಾಡಲು ಪ್ರಚೋದಿಸಿದವರು ಗೆಳೆಯ ಅ.ನ. ಕೃಷ್ಣರಾಯರು. ಆದರೆ ವಚನಗಳ ಘನತೆಯನ್ನು, ಅರ್ಥಸ್ವಾರಸ್ಯವನ್ನು ನಾನು ಕಂಡುಕೊಂಡುದು ಪ್ರೊ. ಬಸವನಾಳರಿಂದ. ಬಸವನಾಳರು ವಚನಗಳನ್ನೂ, ಕೆಲವು ಹಳೆಗನ್ನಡ ಕಾವ್ಯಗಳನ್ನೂ ಅದರಲ್ಲಿಯೂ ಮಹಾಕವಿ ಹರಿಹರೇಶ್ವರನ ರಗಳೆಗಳನ್ನು ವಿವರಿಸಿ, ಗಣ ಮಾತ್ರೆಗಳಾಗಿ ವಿಭಜಿಸಿ ಛಂದಸ್ಸನ್ನು ತಿಳಿಸಿ ಅವುಗಳನ್ನು ರಾಗತಾಳಗಳಿಗೆ ಹೊಂದಿಸಿ ಸಂಗೀತದಲ್ಲಿ ಮೇಳೈಸುವ ಮಾರ್ಗದರ್ಶನ ಮಾಡಿದರು.''

ವೀರಶೈವ ಸಮಾಜದಲ್ಲಿ ಶಿಕ್ಷಣ, ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಪ್ರಸಾರ ಕಾರ್ಯದಲ್ಲಿ ಧಾರವಾಡದ ಶ್ರೀಮುರುಘಾಮಠ ಹಾಗೂ ಪೂಜ್ಯ ಮೃತ್ಯುಂಜಯ ಮಹಾಸ್ವಾಮಿಗಳ ಪಾತ್ರ ಮತ್ತು ಸೇವೆ ಅಮೋಘವಾದದ್ದು. ಅಂದಿನ ದಿನಗಳಲ್ಲಿ ಶ್ರೀಮಠದಲ್ಲಿ ಜರುಗುತ್ತಿದ್ದ ಶಿವಾನುಭವಗೋಷ್ಠಿ, ಶಿವಾನುಭವ ತರಬೇತಿ ಮತ್ತು ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆಯ ಎಲ್ಲ ಚಟುವಟಿಕೆಗಳಿಗೆ ಬಸವನಾಳರು ಆಧಾರಸ್ತಂಭವೆನಿಸಿದ್ದರು. ಮೃತ್ಯುಂಜಯ ಸ್ವಾಮಿಗಳು ಅವರನ್ನು 'ಬಸವನ ಆಳು' ಎಂದು ಭಾವಿಸಿದ್ದರು. ಸಮಾಜದ ಸರ್ವತೋಮುಖ ಪ್ರಗತಿಗಾಗಿ ಸತತ ಚಿಂತನೆ ಹಾಗೂ ರಚನಾತ್ಮಕ ಕಾರ್ಯವೈಖರಿಗಳಿಂದಾಗಿ ನಾಡಿನಾದ್ಯಂತ ಗಣ್ಯವ್ಯಕ್ತಿಗಳ, ಖ್ಯಾತ ಸಾಹಿತಿಗಳ, ವಿದ್ವಾಂಸರ, ಮಠಾಧಿಪತಿಗಳ ಮತ್ತು ಮತಾತೀತವಾದ ಅನೇಕ ಸಂಘ ಸಂಸ್ಥೆಗಳ ಒಡನಾಟ ಬಸವನಾಳರಿಗೆ ಬೆಳೆದು ಬಂದಿತ್ತು. ೧೯೪೫ರಲ್ಲಿ ನವಿಲಗುಂದದಲ್ಲಿ

ಜರುಗಿದ ಸರ್ವಧರ್ಮ ಪರಿಷತ್ತಿನ ಅಧ್ಯಕ್ಷ ಭಾಷಣದಲ್ಲಿ ಹಲವಾರು ಧರ್ಮಗಳನ್ನು ಅಭ್ಯಸಿಸಿದ ಬಸವನಾಳರು–ಎಲ್ಲ ಧರ್ಮಗಳ ಸಾರವು, ಶಾಂತಿ, ಸಹಜೀವನ, ತ್ಯಾಗ, ಪ್ರೇಮ, ಇತರರನ್ನು ಗೌರವಿಸುವದೇ ಆಗಿದ್ದು, ಧರ್ಮದ ಈ ಮಾನವೀಯ ಮೌಲ್ಯಗಳ ಅನುಷ್ಠಾನದಿಂದ ಪ್ರಾದೇಶಿಕ, ರಾಷ್ಟ್ರಮಟ್ಟ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಶಾಂತಿಸ್ಥಾಪನೆ ಸಾಧ್ಯವೆಂಬ ವಿಚಾರವನ್ನು ಪ್ರತಿಪಾದಿಸಿದರು. ಈ ವಿಶಾಲ ಮನೋಧರ್ಮದಿಂದಾಗಿಯೇ ಬಸವನಾಳರು ನಾನಾ ಕ್ಷೇತ್ರಗಳ, ನಾನಾ ಮತಧರ್ಮಗಳ ಗಣ್ಯರ ಗೌರವಕ್ಕೆ ಪಾತ್ರರಾಗಿದ್ದರು.

ಬಸವನಾಳರು ಕೊನೆಯವರೆಗೆ ಸತ್ಯಶುದ್ಧ ಕಾಯಕಗೈಯುತ್ತಲೆ ಮರಣವನ್ನಪ್ಪಿದರು. ಡಿಶೆಂಬರ್ ೨೨, ೧೯೫೧ರಂದು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಹಲವಾರು ವಿಷಯಗಳ ಗಂಭೀರ ಚರ್ಚೆಯಲ್ಲಿ ಪಾಲ್ಗೊಂಡ ಬಸವನಾಳರು ಮಧ್ಯದಲ್ಲಿಯೇ ಯಾರಿಗೂ ತೊಂದರೆಯಾಗದಂತೆ ಎದ್ದು ಹೊರಬಂದರು. ಎದೆಯಲ್ಲಿ ನೋವು ಕಾಣಿಸಿಕೊಂಡಿತ್ತು. ನೇರವಾಗಿ ಡಾಕ್ಟರರಲ್ಲಿ ಹೋಗಿ ಇಂಜೆಕ್ಷನ್ ತೆಗೆದುಕೊಂಡು ಮನೆಗೆ ಬಂದು ಹೆಂಡತಿ ಶಾಂತಮ್ಮನವರ ಬಳಿ ಕ್ಷಣ ಕುಳಿತು, ಅವರ ಎದೆ ನೋವನ್ನು ತಾವೇ ತೆಗೆದುಕೊಂಡಿದ್ದಾಗಿ ನಗುಮುಖದಿಂದಲೇ ಹೇಳಿ, ಹಾಸಿಗೆಯ ಮೇಲೆ ಒರಗಿಕೊಂಡಂತೆಯೇ ಕಣ್ಣು ಮುಚ್ಚಿದವರು ಮತ್ತೆ ತೆರೆಯಲಿಲ್ಲ. ಸಹಸ್ರಾರು ಜನ ಶೋಕತಪ್ತರಾಗಿ ಭಾಗವಹಿಸಿದ್ದ ಅವರ ಅಂತ್ಯ ಯಾತ್ರೆ, ಜನತೆ ಬಸವನಾಳರ ಬಗೆಗೆ ಇರಿಸಿದ್ದ ಗೌರವಾದರಗಳಿಗೆ ಭವ್ಯ ಸಂಕೇತವಾಗಿತ್ತು.

ಅಕಾಲ ಮರಣದಿಂದಾಗಿ ಬಸವನಾಳರು ಹಾಕಿಕೊಂಡಿದ್ದ ಕೆಲವೊಂದು ಯೋಜನೆಗಳು ಹಾಗೂ ಕೃತಿರಚನೆ ಅಷ್ಟಕ್ಕೆ ಉಳಿದುಬಿಟ್ಟವು. ಬಸವಣ್ಣನವರನ್ನು ಕುರಿತು ನಾಟಕ ಬರೆದು ಅದನ್ನು ಚಲನಚಿತ್ರಕ್ಕೆ ಅನುಗೊಳಿಸಲು ಅವರನ್ನು ಮಲ್ಲಿಕಾರ್ಜುನ ಮನಸೂರರು ಕೇಳಿಕೊಂಡ ಪ್ರಕಾರ ಅದರ ರೂಪರೇಷೆಗಳನ್ನು ಹಾಕಿ ಕೆಲವು ಭಾಗ ಬರೆದರು. ಕನ್ನಡ–ಕನ್ನಡ ನಿಘಂಟು ರಚನೆ ಅವರ ಮಹತ್ವಾಕಾಂಕ್ಷೆಗಳಲ್ಲಿ ಒಂದಾಗಿತ್ತು. ''ಅದಕ್ಕಾಗಿ ಅವಕಾಶ ದೊರೆತಾಗಲೆಲ್ಲ ಕಾರ್ಯತತ್ಪರರಾಗುತ್ತಿದ್ದರು. ರೆ. ಕಿಟಲ್ ಸಾಹೇಬರು ಆ ಕಾರ್ಯ ಮಾಡಿದ ಮೇಲೆ ಬಸವನಾಳರದೇ ಬಹು ದೊಡ್ಡ ಕಾರ್ಯವೆಂದು ಭಾವಿಸಿದ್ದೆನು. ಇದುವರೆಗೆ ಪ್ರಕಟವಾದ ಕನ್ನಡ ಗ್ರಂಥಗಳಲ್ಲಿ ದೊರೆಯುವ ಕಠಿಣ ಶಬ್ದಗಳು, ಗಂಗಾಧರ ಮಡಿವಾಳೇಶ್ವರ ತುರುಮರಿಯವರ 'ಕರ್ನಾಟಕ ಶಬ್ದಕಲ್ಪದ್ರುಮ'ದ ನಂತರ ದೊರೆಯಬಹುದಾದ ಹಾಗೂ ಆಗಬಹುದಾದ ಅರ್ಥ, ಸ್ವಾರಸ್ಯದ ನಿರ್ಣಯಗಳನ್ನು ಶ್ರೀ ಬಸವನಾಳರು ತಮ್ಮ ಆಳವಾದ ಅನುಭವದಿಂದ ಮಾಡುತ್ತಿದ್ದರು. ಅದಕ್ಕಾಗಿ ಅನೇಕ ಪಂಡಿತರನ್ನು, ವಿದ್ವಾಂಸರನ್ನು ಕೂಡಿಕೊಂಡು ಕೆಲಸ ಮಾಡುತ್ತಿದ್ದರು. ಆ ಕಾರ್ಯದಲ್ಲಿ ನಾನೂ ಸಹಭಾಗಿಯಾಗಿ ಅರ್ಥೈಸುವ ಅವಕಾಶ ದೊರೆತಿತ್ತು. ಅದು ಪೂರ್ಣಗೊಳ್ಳುವುದಕ್ಕೆ ಸ್ವಲ್ಪ ಭಾಗ ಉಳಿದಿತ್ತು. ಅದು ಅವರ ನಂತರ ಹಾಗೆಯೇ ಉಳಿದು ಹೋಯಿತು'' ಎಂದು ಉತ್ತಂಗಿ ಚೆನ್ನಪ್ಪನವರು ಹಳಹಳಿಸಿದ್ದಾರೆ. ಸುಮಾರು ೧೨

ವರ್ಷಗಳ ಕಾಲ ಅವರ ಒಡನಾಟದಿಂದ ತಮ್ಮ ಅನುಭವ ಸಂಪತ್ತು ಬೆಳೆದದ್ದನ್ನು ಉತ್ತಂಗಿಯವರು ನೆನೆದುಕೊಂಡಿದ್ದಾರೆ.

ಬಸವನಾಳರನ್ನು ಗುರುಸ್ಥಾನದಲ್ಲಿಟ್ಟುಕೊಂಡಿದ್ದ ಡಾ. ಎಸ್. ಸಿ. ನಂದೀಮಠರು ಅವರ ಸ್ವಭಾವದ ಬಗ್ಗೆ ಹೀಗೆ ಹೇಳುತ್ತಾರೆ: ''ಶ್ರೀ ಬಸವನಾಳರಂತಹ ಸರಳ ಸ್ವಭಾವದ ಪ್ರೇಮಮಯ ಮೂರ್ತಿಯು ದೊರೆಯುವದು ಅತಿ ದುರ್ಲಭ. ಅವರ ಹೃದಯ ಅತಿ ಕೋಮಲವಾದುದು. ಅವರು ತಮ್ಮ ಆಯುಷ್ಯದಲ್ಲಿ ಯಾರಿಗೂ ಬಿರುಸು ಮಾತಾಡಿದುದನ್ನು ನಾನು ಕಂಡಿಲ್ಲ, ಕೇಳಿಲ್ಲ..... ವಿರೋಧಿಗಳ ಸಂಗಡವೂ ಪ್ರೀತಿಯಿಂದ ಮತ್ತುಸ್ವಾಭಾವಿಕ ಸರಳತೆಯಿಂದ ನಡೆದುಕೊಳ್ಳುತ್ತಿದ್ದ ಇವರು ಪರರನ್ನು ದ್ವೇಷಿಸುವುದನ್ನು ನಾನು ಕಂಡರಿಯೆ. ದ್ವೇಷ, ಈರ್ಷೆ ಅಸೂಯಾದಿಗಳನ್ನು ಗೆದ್ದ ಯೌಗಿಕ ಪುರುಷನಂತೆ ಇವರ ನಿಜವಾದ ಆಚರಣೆಯಾಗಿದ್ದಿತು. ಸಮುದ್ರದಂತೆ ಅತಿ ಗಂಭೀರ ಸ್ವಭಾವದವರು. ತಮ್ಮ ಕೌಟುಂಬಿಕ ಕಷ್ಟನಷ್ಟಗಳನ್ನು ಸ್ವಲ್ಪ ಕೂಡ ವ್ಯಕ್ತಪಡಿಸಿದುದನ್ನು ನಾನರಿಯೆ. ಇವರ ಮನೋದಾರ್ಢ್ಯ ಕಂಡು ನನಗೇ ಅನೇಕ ಸಲ ಅಚ್ಚರಿಯಾಗುತ್ತಿತ್ತು.''

ಬಿ. ಎಂ. ಶ್ರೀಕಂಠಯ್ಯನವರಂತೆ ಬಸವನಾಳರೂ ಕನ್ನಡದ ಗೌರವ ಪ್ರೊಫೆಸರರಾಗಿ ಕಾರ್ಯ ಮಾಡಿದರು ಎನ್ನುವ ಪ್ರೊ. ಮಾಳವಾಡರು, ಸ್ವಮತದ ಬಗೆಗೆ ಅಸ್ಥೆ, ಕರ್ನಾಟಕದ ಬಗೆಗೆ ವ್ಯಾಪಕವಾದ ಕಲ್ಪನೆ ಇಟ್ಟುಕೊಂಡ ಬಗೆಯಲ್ಲಿ ಆಲೂರು ವೆಂಕಟರಾಯರಿಗೂ, ಸ್ವಭಾವದ ಸವಿಯಲ್ಲಿ ಟಿ. ಎಸ್. ವೆಂಕಣ್ಣಯ್ಯನವರಿಗೂ ಬಸವನಾಳರನ್ನು ಹೋಲಿಸಿ ನುಡಿದಿದ್ದಾರೆ. ಬಸವನಾಳರ ಗ್ರಂಥ ಪ್ರೀತಿಯ ಕುರಿತು ಅವರ ಸಹೋದ್ಯೋಗಿ ಮಿತ್ರರಾದ ಎಚ್. ಎಫ್. ಕಟ್ಟೀಮನಿವರು ಹೀಗೆ ಬಣ್ಣಿಸಿದ್ದಾರೆ: ''ಅವರ ವಾಚನಾಭಿರುಚಿ ಅನುಪಮವಾದದ್ದು. ಪ್ರೊ. ಬಸವನಾಳರಿಗೆ ಗ್ರಂಥಗಳ ಮೇಲೆ ಇನ್ನಿಲ್ಲದ, ಅನಿರ್ವಚನೀಯ ಪ್ರೇಮ. ಅವರು ಗ್ರಂಥಗಳನ್ನು ಕೊಳ್ಳುವುದರಲ್ಲಿ ತಮ್ಮ ಶಕ್ತಿಮೀರಿ ಹಣವನ್ನು ವೆಚ್ಚಮಾಡುತ್ತಿದ್ದರು. ಅವರಲ್ಲಿ ವಿವಿಧ ಭಾಷೆಗಳ ಅಮೂಲ್ಯ ಪುಸ್ತಕಗಳನ್ನೊಳಗೊಂಡ ಉತ್ತಮವಾದ ಗ್ರಂಥಭಂಡಾರವಿದೆ. ಅವರ ಗ್ರಹಣ ಶಕ್ತಿಹಾಗೂ ಸ್ಮರಣಶಕ್ತಿಎರಡೂ ಅಗಾಧವಾಗಿದ್ದವು.''

ನಾಡಿನ ಸಾಂಸ್ಕೃತಿಕ ಜೀವನ ರೂಪುಗೊಳಿಸಿದ ಶಿಲ್ಪಿಯೆಂದೂ, ಸರ್ವತೋಮುಖ ಅಭಿರುಚಿಯುಳ್ಳ ಕನ್ನಡ ಕುಲರಸಿಕರಲ್ಲಿ ಶಿ.ಶಿ. ಬಸವನಾಳರೊಬ್ಬರು ಎಂದೂ ಅ.ನ. ಕೃಷ್ಣರಾಯರು ಆದರಿಸಿದರೆ, ಅವರು ವಿವಿಧ ಕ್ಷೇತ್ರಗಳಲ್ಲಿಸಲ್ಲಿಸಿದ ಸೇವೆಯ ಬಹುಮುಖ ವ್ಯಕ್ತಿತ್ವದ ಚಿತ್ರವನ್ನು ಬೆಳಗಿಸಿದುದು ಆ ಮಹನೀಯರಲ್ಲಿದ್ದ ಸತ್ಯಶುದ್ಧವಾದ ವೀರಶೈವಾನುಭವವೇ ಎಂಬುದು ಸರ್ವದರ್ಶನ ತೀರ್ಥ ಶ್ರೀ ನಾಗೇಶಶಾಸ್ತ್ರಿಗಳ ದೃಢವಾದ ನಂಬಿಕೆ. ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಬಸವನಾಳರ ಆಪ್ತ ಸ್ನೇಹಿತರಾಗಿದ್ದ, ಮುಂದೆ ಆಂಧ್ರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರಸಿದ್ಧ ಇಂಗ್ಲಿಷ್ ಲೇಖಕ ಹಾಗೂ ವಿಮರ್ಶಕ ಪ್ರೊ. ಕೆ. ಆರ್.

ಶ್ರೀನಿವಾಸ ಅಯ್ಯಂಗಾರ್ ಬಸವನಾಳರ ನಿಧನದ ಸುದ್ದಿಯನ್ನು ಕೇಳಿ ಬರೆದ ಪತ್ರದಲ್ಲಿ ತಮ್ಮ ಹೃದಯವನ್ನೇ ತೆರೆದಿಟ್ಟಿದ್ದಾರೆ. *"Although I was many years his junior, although I must have often caused annoyance to him, still he treated me as an younger brother all along with indulgence and affection.... His vast learning in different fields of knowledge, his unfailing sense of humour, his acute observation of men and things, the noble serenity of his bearing, his strong refusal to take a mean advantage over others, these made me more and more his admirer. Right from beginning I was his friend and neighbour. To gain his approbation and appreciation was perhaps the chief incentive I had in those days for literary works... Without seeking money or power he served Karnataka for a life-time, and generations will reap what he has sown."*

ಶಿಕ್ಷಣ, ಸಾಹಿತ್ಯ, ಸಂಶೋಧನ, ಪತ್ರಿಕಾವ್ಯವಸಾಯ ಮೊದಲಾದ ಅನೇಕ ಸಾಂಸ್ಕೃತಿಕ ಕ್ಷೇತ್ರಗಳಿಗೆ ಕರ್ನಾಟಕ ಇಂದು ಹಿರಿಮೆಯ ಸ್ಥಾನದಲ್ಲಿರುವುದನ್ನು ಕಂಡಾಗ ಬಹುಮುಖ ವ್ಯಕ್ತಿತ್ವದ ಪ್ರೊ. ಶಿ. ಶಿ. ಬಸವನಾಳರಂಥವರು ಅರ್ಧಶತಮಾನದ ಹಿಂದೆ ಗೈದ ಸೇವೆ, ಮಾಡಿದ ತ್ಯಾಗದ ಫಲವನ್ನೇ ನಾವೀಗ ಅನುಭವಿಸುತ್ತಿರುವುದು ಎಂಬುದನ್ನು ಕನ್ನಡಿಗರು ಮರೆಯಲಾರರು.

'ಸ್ಮರಣೀಯರು'
೨೦೦೪

■■

ತೀ. ನಂ. ಶ್ರೀ : ನೆನಪಿನಂಗಳದಲ್ಲಿ

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಪ್ರಥಮ ಕನ್ನಡ ಪ್ರಾಧ್ಯಾಪಕರಾಗಿ ತೀ.ನಂ. ಶ್ರೀಕಂಠಯ್ಯನವರು ಬಂದಾಗ ನಾನು ಎಂ.ಎ. ಕೊನೆಯ ವರ್ಷದಲ್ಲಿದ್ದೆ. ಕನ್ನಡ ಸ್ನಾತಕೋತ್ತರ ವಿಭಾಗ ಇನ್ನೂ ಸ್ವಯಂಪೂರ್ಣವಾಗಿ ಬೆಳೆದಿರಲಿಲ್ಲ. ಸ್ಥಳೀಯ ಕಾಲೇಜುಗಳ ಕನ್ನಡ ಪ್ರಾಧ್ಯಾಪಕರೂ ನಮ್ಮ ಪಾಠಪ್ರವಚನಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಹೀಗಾಗಿ ಕೇವಲ ಮೂರು ನಾಲ್ಕು ತಿಂಗಳು ಮಾತ್ರ ತೀ.ನಂ. ಶ್ರೀಯವರ ಸಾನ್ನಿಧ್ಯ ನಮಗೆ ದೊರೆಯಿತು. ಆ ಸಂದರ್ಭದಲ್ಲಿ ಅವರು ನೀಡಿದ ಕೆಲವು ಉಪನ್ಯಾಸಗಳು ನೇರವಾಗಿ ಪಠ್ಯಕ್ಕೆ ಸಂಬಂಧಪಟ್ಟವುಗಳಾಗಿರಲಿಲ್ಲ . ಹೇಳುವ ವಿಷಯವನ್ನು ತಲಸ್ಪರ್ಶಿಯಾಗಿ ತಿಳಿಸಿಕೊಡುವುದು, ಆದಷ್ಟು ಶುಷ್ಕವೆನಿಸದಂತೆ ರಸವತ್ತಾಗಿ ನಿರೂಪಿಸುವುದು ಅವರ ಬೋಧನಕ್ರಮವಾಗಿತ್ತೆಂದು ನನಗೆ ತೋರಿತು.

೧೯೫೨ರಲ್ಲಿ ನಾನು ಎಂ.ಎ. ಪದವಿ ಪಡೆದು, ಅದೇ ವರ್ಷ ಸಪ್ಟೆಂಬರ್‌ನಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟಣ ವಿಭಾಗದಲ್ಲಿ (ಈಗಿನ ಪ್ರಸಾರಾಂಗ) ಅದರ ಪ್ರಥಮ ಕಾರ್ಯದರ್ಶಿಯಾಗಿ ನೇಮಕಗೊಂಡೆ. ಆ ವಿಭಾಗದ ಸಲಹಾಸಮಿತಿಯ ಸದಸ್ಯರಾಗಿ ತೀ.ನಂ. ಶ್ರೀಯವರು ನನಗೆ ನೀಡಿದ ಮಾರ್ಗದರ್ಶನವನ್ನು ನಾನೂ ಎಂದಿಗೂ ಮರೆಯಲಾರೆ. ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಹಾಗೂ ಪ್ರಕಟನೆಗಳ ತಮ್ಮ ಅನುಭವದಿಂದ ಇಲ್ಲಿಯ ಅವಶ್ಯಕತೆಗಳಿಗನುಸಾರವಾಗಿ ಅದನ್ನು ರೂಪುಗೊಳಿಸುವಲ್ಲಿ ಅವರು ಹೃತ್ಪೂರ್ವಕವಾಗಿ ನೆರವಾದರು.

ವಿಶ್ವವಿದ್ಯಾಲಯವನ್ನು ಸಾಮಾನ್ಯ ಜನತೆಯ ಬಳಿಗೆ ಕೊಂಡೊಯ್ಯುವ ನಮ್ಮ ಮೊಟ್ಟ ಮೊದಲನೆಯ ಉಪನ್ಯಾಸ ಶಿಬಿರ ೧೯೫೨ರ ಡಿಸೆಂಬರನಲ್ಲಿ ಗದಗಿನಲ್ಲಿ ನೆರವೇರಿತು. ಅಲ್ಲಿಯ ಮುನಿಸಿಪಲ್ ಹಾಯಸ್ಕೂಲಿನ ವಿಶಾಲವಾದ ಬಯಲಿನಲ್ಲಿ ಸಾವಿರಾರು ಜನರ ಮಧ್ಯೆ ನಡೆದ ಅಂದಿನ ಸಮಾರಂಭ ಒಂದು ಅಪೂರ್ವ ಅನುಭವ. ಆಗಿನ ಉಪಕುಲಪತಿ ಶ್ರೀ ಸಿ. ಸಿ. ಹುಲಕೋಟೆಯವರಿಂದ ಉದ್ಘಾಟನೆಯಾದ ನಂತರ ಶಿಬಿರದ ಮೊಟ್ಟ ಮೊದಲನೆಯ ಉಪನ್ಯಾಸವೇ ತೀ.ನಂ. ಶ್ರೀ. ಯವರದು. ಕುಮಾರವ್ಯಾಸ ಕವಿಯನ್ನು ಕುರಿತು ಅವರ ಒಂದೂವರೆ ಗಂಟೆಯ ಉಪನ್ಯಾಸ ಕುತೂಹಲದಿಂದ ಕೂಡಿದ

ಜನಸ್ತೋಮವನ್ನು ತಣಿಸಿತು. ಉತ್ತರ ಕುಮಾರನ ಪಾತ್ರವನ್ನು ಕುರಿತು ಅವರು ವಿವರಿಸುತ್ತಿರುವಾಗ ಸಭೆಯಲ್ಲೆಲ್ಲ ಹಾಸ್ಯದ ಹೊನಲು ಹರಿಯುತ್ತಿದ್ದಂತೆ ಕುಲಪತಿ ಶ್ರೀ ಹುಲಕೋಟಿಯವರೂ ಹೊಟ್ಟೆ ಹುಣ್ಣಾಗುವಂತೆ ನಕ್ಕು ಸಂತೋಷಪಟ್ಟದ್ದು ಇನ್ನೂ ನನ್ನ ಕಣ್ಣು ಮುಂದೆ ಕಟ್ಟಿದಂತಿದೆ. ಎರಡು ದಿನ ನಡೆದ ಆ ಉಪನ್ಯಾಸ ಮಾಲೆಯಲ್ಲಿ ಆಗ ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾಗಿದ್ದ ವಿ. ಕೃ. ಗೋಕಾಕರು, ಪ್ರೊ. ಎಚ್. ವಿ. ಕಾಶ್ಯಪ ಅವರು ಹಾಗೂ ಒಕ್ಕಲುತನ ಕಾಲೇಜಿನ ಡಾ. ಎಸ್. ಪಿ. ಪಾಟೀಲ ಅವರೂ ಅನುಕ್ರಮವಾಗಿ 'ಸರ್ವಜ್ಞಕವಿ', 'ಡಾರ್ವಿನ್‌ನ ವಿಕಾಸವಾದ 'ಹತ್ತಿಯ ಬೆಳೆ' ವಿಷಯಗಳ ಬಗ್ಗೆ ಉಪನ್ಯಾಸವಿತ್ತರು. ವಿಶ್ವವಿದ್ಯಾಲಯದ ಈ ವಿನೂತನ ಕಾರ್ಯಕ್ರಮ ಪ್ರಾರಂಭದಲ್ಲಿಯೇ ಅಷ್ಟೊಂದು ಯಶಸ್ಸು ಪಡೆದದ್ದು ನನಗೆ ಹೆಚ್ಚಿನ ಧೈರ್ಯವನ್ನು ತಂದುಕೊಟ್ಟಿತು.

ಉಪನ್ಯಾಸಕ್ಕಾಗಿ ವಿಷಯಗಳ ಆಯ್ಕೆ, ಶಿಬಿರಕ್ಕೆ ಅತಿಥಿಗಳನ್ನು ಕರೆದೊಯ್ಯುವುದು, ಅಲ್ಲಿ ಅವರಿಗೆ ಇಳಿದುಕೊಳ್ಳುವ ವ್ಯವಸ್ಥೆ, ಕಾರ್ಯಕ್ರಮದ ನಿರ್ವಹಣೆ, ಸ್ಥಳೀಯ ಸಂಘ ಸಂಸ್ಥೆಗಳ ಸಂಪರ್ಕ, ಮರುಪ್ರಯಾಣ ಹೀಗೆ ಪ್ರತಿಯೊಂದು ವಿಷಯವನ್ನೂ ನಾನು ಲಕ್ಷ್ಯಗೊಟ್ಟು ನೋಡಿಕೊಳ್ಳುವಂತೆ ಅವರು ಮಾಡಿದರು. ಸಣ್ಣ ಸಣ್ಣ ವಿಷಯದಲ್ಲೂ ಅವರು ವಹಿಸುತ್ತಿದ್ದ ಜಾಗರೂಕತೆ, ಅವರ ಬಗ್ಗೆ ನನ್ನ ಗೌರವವನ್ನು ಹೆಚ್ಚಿಸಿದಂತೆಯೇ ಒಳಗೊಳಗೆ ಅಂಜಿಕೆಯನ್ನು ಹುಟ್ಟಿಸುತ್ತಿತ್ತು. ಈ ಉಪನ್ಯಾಸ ಮಾಲೆಗೆ ತೀ.ನಂ. ಶ್ರೀಯಂಥವರು ಶ್ರೀಕಾರ ಹಾಕಿದ್ದರಿಂದಲೊ ಏನೋ ಈ ಕಾರ್ಯಕ್ರಮ ಅಂದಿನಿಂದ ಇಂದಿನವರೆಗೂ ಎಡೆಬಿಡದೆ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ.

ಈ ಉಪನ್ಯಾಸಗಳನ್ನು ಕಿರುಹೊತ್ತಿಗೆಯಾಗಿ ಉಪನ್ಯಾಸ ಗ್ರಂಥಮಾಲೆಯಲ್ಲಿ ಪ್ರಕಟಿಸಲು ಪ್ರಾರಂಭಿಸಿದಾಗಲೂ ತೀ.ನಂ.ಶ್ರೀಯವರಿಂದ ಪಡೆದ ಪ್ರಯೋಜನ ಅಷ್ಟಿಷ್ಟಲ್ಲ. ಈ ಮಾಲೆಯಲ್ಲಿ ಪ್ರಕಟಗೊಂಡ ಮೊದಲನೆಯ ಪುಸ್ತಕ ಡಾ. ಕೆ. ಕೃಷ್ಣಮೂರ್ತಿಯವರ 'ಭವಭೂತಿ'. ಆಗ ಕುಮಟೆಯ ಕ್ಯಾನರಾ ಕಾಲೇಜಿನಲ್ಲಿದ್ದ ಡಾ. ಕೃಷ್ಣಮೂರ್ತಿಯವರು ಧಾರವಾಡಕ್ಕೆ ಬಂದ ಸಂದರ್ಭದಲ್ಲಿ ಅವರ ಹಸ್ತಪ್ರತಿಯನ್ನು ಪರಿಶೀಲಿಸಿ, ಅವರೊಡನೆ ಚರ್ಚಿಸಿ, ಹಸ್ತಪ್ರತಿಯಲ್ಲಿ ಮಾಡಬೇಕಾಗಿದ್ದ ಸಣ್ಣಪುಟ್ಟ ಬದಲಾವಣೆಗಳನ್ನು ಅವರಿಂದ ಮಾಡಿಸಿದ್ದಲ್ಲದೆ, ಕರಡು ತಿದ್ದುವವರೆಗೂ ತೀ.ನಂ.ಶ್ರೀ. ಅದರಲ್ಲಿ ಆಸ್ಥೆ ವಹಿಸಿ ಅಚ್ಚುಕಟ್ಟಿಗೆ ಮಾದರಿಯನ್ನೂ ಒದಗಿಸಿ ಕೊಟ್ಟರು. ಹೀಗೆ ತಾವು ವಹಿಸಿಕೊಂಡ ಎಂಥ ಕಾರ್ಯದಲ್ಲಿಯೂ ಯಾವ ದೋಷವೂ ಉಂಟಾಗದಂತೆ ಅವರು ವಹಿಸುತ್ತಿದ್ದ ಕಾಳಜಿ ಆಶ್ಚರ್ಯಕರವಾಗಿತ್ತು. ಚಿಕ್ಕ ಸಮಾರಂಭವೊಂದರಲ್ಲಿ ಆ ಪುಸ್ತಿಕೆಯನ್ನು ಅವರು ಬಿಡುಗಡೆಗೊಳಿಸುತ್ತ 'ಈ ಪುಸ್ತಕ ಹೊರಬರುವುದರಲ್ಲಿ ನಾನು ಮಾಡಿದ ಕೆಲಸವೇನಿದ್ದರೂ ಅದು ಸೂಲಗಿತ್ತಿಯ ಕೆಲಸವಿದ್ದಂತೆ, ಅಷ್ಟೆ' ಎಂದು ಹೇಳಿದ ಮಾತು ಇನ್ನೂ ನನ್ನ ನೆನಪಿನಲ್ಲಿದೆ. ಈ ಮಾಲೆಯ ಪ್ರಕಟಣೆ ಇಂದಿಗೂ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿದೆ.

ತೀ.ನಂ.ಶ್ರೀ. ಬರಹದಲ್ಲಿ ತೋರುತ್ತಿದ್ದ ನಿಖರತೆ, ಸ್ಪಷ್ಟತೆ ಅನುಪಮವಾದದ್ದು. ಒಂದು ಸಂಗತಿ ನೆನಪಾಗುತ್ತದೆ. ೨೬-೧೦-೧೯೫೩ರಂದು ವಿಶ್ವವಿದ್ಯಾಲಯದ ನೂತನ ಆಡಳಿತ ಕಚೇರಿ ಕಟ್ಟಡದ ಉದ್ಘಾಟನೆ ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್ ಅವರಿಂದ ನೆರವೇರಲಿತ್ತು. ಕಟ್ಟಡದ ಮುಂಬಾಗದಲ್ಲಿ ಹಾಲುಗಲ್ಲಿನ ಮೇಲೆ ಅದನ್ನು ಕೆತ್ತಿಸಬೇಕಾದ ಸಂದರ್ಭದಲ್ಲಿ 'ಸರ್ವಪಲ್ಲಿ ರಾಧಾಕೃಷ್ಣನ್ ಅವರಿಂದ' ಎಂಬ ಮಾತಿತ್ತು, ಆಗ ತೀ.ನಂ.ಶ್ರೀ. ಅದನ್ನು ತಡೆಹಿಡಿದು ತಮ್ಮ ಸಂಶಯವನ್ನು ನಿವಾರಿಸಿಕೊಂಡು ಮರುದಿನ ಅದು 'ಸರ್ವಪಲ್ಲಿ' ಅಲ್ಲ, 'ಸರ್ವೇಪಲ್ಲಿ' ಎಂದು ತಿದ್ದಿಸಿದರು.

''ಕನ್ನಡ ಸಾಹಿತ್ಯದ ಇತಿಹಾಸ'' ರಚನೆಯ ಒಂದು ಹೊಸ ಯೋಜನೆಯನ್ನು ತೀ.ನಂ.ಶ್ರೀ.ಯವರು ಕಷ್ಟಪಟ್ಟು ತಯಾರಿಸಿ ವಿಶ್ವವಿದ್ಯಾಲಯದ ಸಿಂಡಿಕೇಟಿನ ಅನುಮತಿಯನ್ನು ಪಡೆದು ೧೯೫೫ರಲ್ಲಿ ಕಾರ್ಯಾರಂಭ ಮಾಡಿದ್ದರು. ಅದರ ಸಾಮಾನ್ಯ ರೂಪರೇಖೆಯನ್ನು ಆಯ್ಕೆ ಮಾಡಿದ ಲೇಖಕರಿಗೆಲ್ಲ ಕಳಿಸಿಕೊಡಲಾಗಿತ್ತು. 'ಕನ್ನಡ ಸಾಹಿತ್ಯದ ಇತಿಹಾಸ'ವನ್ನು ಸವಿಸ್ತಾರವಾಗಿ ಸಮಪ್ರಮಾಣವಾಗಿ ಬರೆಸಬೇಕೆಂದೂ, ಈ ಇತಿಹಾಸದಲ್ಲಿ ಕನ್ನಡ ಸಾಹಿತ್ಯದ ಹಲವು ಶಾಖೆಗಳ ಬೆಳವಣಿಗೆಯನ್ನು ಮಾತ್ರವಲ್ಲದೆ ಆಯಾ ಕಾಲಾವಧಿಯ ಭಾಷಾ ಸ್ವರೂಪ, ರಾಜಕೀಯ ಚರಿತ್ರೆ, ಮತದರ್ಮ ಪರಿಸ್ಥಿತಿ, ಜನಜೀವನ ರೀತಿ ಮೊದಲಾದವುಗಳ ಹಿನ್ನೆಲೆಯೂ ನಿರೂಪಿತವಾಗಬೇಕೆಂದೂ ಇದರ ರಚನೆಯಲ್ಲಿ ಕನ್ನಡನಾಡಿನ ಎಲ್ಲ ಭಾಗಗಳ ವಿದ್ವಾಂಸರ ಸಹಾಯ ಸಹಕಾರಗಳನ್ನು ಪಡೆಯಬೇಕೆಂದೂ ಅವರು ಇಚ್ಛಿಸಿದ್ದರು. ಮುಂದೆ ಎರಡು ವರ್ಷಗಳಲ್ಲಿ ಅವರು ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕಗೊಂಡು ಮೈಸೂರಿಗೆ ಹಿಂತಿರುಗಿದ್ದರಿಂದ ಆ ಕೆಲಸ ಇಲ್ಲಿ ಮುಂದುವರಿಯದೆ ಹೋದದ್ದು ವಿಷಾದದ ಸಂಗತಿ. ಆ ಕಾರ್ಯ ಪೂರ್ತಿಗೊಂಡಿದ್ದರೆ ಒಂದು ಹೊಸ ಕನ್ನಡ ಸಾಹಿತ್ಯದ ಇತಿಹಾಸವನ್ನು ಪ್ರಕಟಿಸಿದ ಶ್ರೇಯಸ್ಸು ಕರ್ನಾಟಕ ವಿಶ್ವವಿದ್ಯಾಲಯದ್ದಾಗುತ್ತಿತ್ತು. ಈಚೆಗೆ ಬೆಂಗಳೂರು ವಿಶ್ವವಿದ್ಯಾಲಯ ರೂಪಿಸಿ ಪ್ರಕಟಿಸುತ್ತಿರುವ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ತೀ.ನಂ.ಶ್ರೀ.ಯವರ ಈ ಯೋಜನೆಯ ಪ್ರಯೋಜನವನ್ನು ಕೆಲಮಟ್ಟಿಗೆ ಪಡೆದಿರುವಂತೆ ತೋರುತ್ತದೆ.

ಮೈಸೂರು, ಬೆಂಗಳೂರು ಕಡೆಗಳಿಂದ ಹಲವಾರು ವಿದ್ಯಾರ್ಥಿಗಳು ಎಂ.ಎ. ಅಭ್ಯಾಸಕ್ಕಾಗಿ ಆಗ ಧಾರವಾಡಕ್ಕೆ ಬಂದದ್ದುಂಟು. ಅವರಲ್ಲಿ ಕ.ವೆಂ. ರಾಜಗೋಪಾಲ, ಸಿಂಧುವಳ್ಳಿ ಅನಂತಮೂರ್ತಿ ಮೊದಲಾದವರು ನನಗೆ ಇಂದಿಗೂ ಆಪ್ತಸ್ನೇಹಿತರಾಗಿದ್ದು ಅಂದಿನ ದಿನಗಳನ್ನು ನೆನಪಿಗೆ ತರುತ್ತಾರೆ. ಧಾರವಾಡದಲ್ಲಿದ್ದ ನಾಲ್ಕೈದು ವರುಷಗಳ ಅವಧಿಯಲ್ಲಿ ತೀ.ನಂ.ಶ್ರೀ. ಅವರು ಈ ಭಾಗದ ಅನೇಕ ಕಡೆಯ ಸಭೆ ಸಮಾರಂಭಗಳಿಗೆ, ವಿದ್ಯಾಸಂಸ್ಥೆಗಳಿಗೆ ಅತಿಥಿಗಳಾಗಿ ಆಮಂತ್ರಿತರಾಗಿ ತಮ್ಮ ವಿದ್ವತ್‌ಪೂರ್ಣವಾದ ಭಾಷಣಗಳಿಂದ ಜನರ ಮನಸ್ಸನ್ನು ಸಂತೋಷಗೊಳಿಸಿದರು. ಅಬ್ಬರವಿಲ್ಲದೆ ಕನ್ನಡದ ಪ್ರೇಮವನ್ನು ಉಕ್ಕಿಸಿದರು. ಉತ್ತರ ಕರ್ನಾಟಕದಲ್ಲಿಯ ಪ್ರಾಚೀನ ಕವಿಗಳ ಸ್ಥಳಗಳನ್ನೆಲ್ಲ

ಅವರು ಇದೇ ಸಂದರ್ಭದಲ್ಲಿ ಸಂದರ್ಶಿಸಿದರು. ಪಾಂಡಿತ್ಯ ಹಾಗೂ ವಿನಯ ಸಮನ್ವಯಗೊಂಡ ತಮ್ಮ ಸುಸಂಸ್ಕೃತ ವ್ಯಕ್ತಿತ್ವದ ಸಾತ್ವಿಕ ಪ್ರಭಾವವನ್ನು ಅವರು ಹೋದಲ್ಲೆಲ್ಲ ಬೀರಿದರು.

ಅವರ ಉಪನ್ಯಾಸಗಳದೇ ಒಂದು ಸೊಗಸು. ಹೇಳುವ ವಿಷಯ ಮೊದಲೇ ಕರತಲಾಮಲಕವಾಗಿರುತ್ತಿತ್ತು. ತಾವು ಮೆಚ್ಚಿದ ಕವಿ ಕಾವ್ಯದ ವಿಷಯವಾಗಿದ್ದರಂತೂ ತೀರಿಯೇ ಹೋಯಿತು, ಅದರ ಸ್ವಾರಸ್ಯವೆಲ್ಲ ತಕ್ಕ ಹಾವಭಾವಗಳಿಂದ ಧ್ವನಿಯ ಸಾಂದರ್ಭಿಕ ಏರಿಳಿತಗಳಿಂದ ತುಂಬಿ ಹೊರಸೂಸುವಂತೆ ಮಾಡುತ್ತಿದ್ದರು. ವಿಮರ್ಶೆಯ ಗಾಂಭೀರ್ಯದೊಂದಿಗೆ ರಸಿಕತೆಯ ಮೆರುಗನ್ನು ಅದು ಪಡೆದಿರುತ್ತಿತ್ತು. ಉಪನ್ಯಾಸದ ಆರಂಭ, ಮಧ್ಯ ಹಾಗೂ ಕೊನೆ ಮೂರೂ ಕಲಾತ್ಮಕವಾಗಿ ಅಲ್ಲಿ ಸಂಯೋಜನೆಗೊಂಡಿರುತ್ತಿದ್ದವು. ಔಚಿತ್ಯ ತಾನೇತಾನಾಗಿರುತ್ತಿತ್ತು.

* * *

ಹತ್ತು ವರುಷಗಳ ಹಿಂದೆಯೇ ಅಚ್ಚಿಗೆ ಹೋಗಿದ್ದ ಅವರ 'ಭಾರತೀಯ ಕಾವ್ಯ ಮೀಮಾಂಸೆ' ಪ್ರಕಟವಾದದ್ದು ೧೯೫೩ರಲ್ಲಿ, ಅವರು ಧಾರವಾಡದಲ್ಲಿದ್ದಾಗ. ಅದರ ಹಿಂದಿನ ವರ್ಷ ನಾನು ಎಂ.ಎ. ದಲ್ಲಿದ್ದಾಗ ಅದರ ಅಚ್ಚಾದ ಫಾರ್ಮುಗಳನ್ನು ಅವರಿಂದ ಪಡೆದು, ಓದಿ ಹಿಂದಿರುಗಿಸಿದ್ದೆ. ಈಗ ಆ ಗ್ರಂಥದ ಪ್ರತಿಯನ್ನು ಅವರ ಮೂಲಕವೇ ತರಿಸಿಕೊಂಡೆ. ೧೯೩೦ರಲ್ಲಿ ಪ್ರಕಟವಾಗಿದ್ದ ಅವರ 'ಒಲುಮೆ' ಕವನ ಸಂಗ್ರಹದ ಎರಡನೆಯ ಮುದ್ರಣ 'ಭಾರತೀಯ ಕಾವ್ಯ ಮೀಮಾಂಸೆ' ಪ್ರಕಟವಾದ ವರುಷವೇ ಹೊರಬಂದದ್ದು ನನಗೆ ಔಚಿತ್ಯಪೂರ್ಣವಾಗಿ ತೋರುತ್ತದೆ. ಆಗ ಅವರು 'ವಿಶ್ವಾಸದೊಡನೆ' ಕೊಟ್ಟ 'ಒಲುಮೆ'ಯ ಕ್ಯಾಲಿಕೊ ಪ್ರತಿಯನ್ನು ನಾನು ಜೋಪಾನವಾಗಿ ಕಾಯ್ದಿರಿಸಿದ್ದೇನೆ.

ಅವರು ಧಾರವಾಡದಲ್ಲಿದ್ದಾಗ ಬರೆದದ್ದು ಎರಡೇ ಕವಿತೆಗಳೆಂದು ತೋರುತ್ತದೆ. ಒಂದು ಆಕಾಶವಾಣಿಯ ಕವಿಸಮ್ಮೇಳನಕ್ಕಾಗಿ ಬರೆದ 'ಯುಗಾದಿ', ಇನ್ನೊಂದು ಅವರು ಅಮೇರಿಕಾಕ್ಕೆ ಹೋಗುವ ಮುಂಚೆ ಬರೆದ 'ನೀಡು ಪಾಥೇಯವನು'. ಎರಡೂ 'ಜಯ ಕರ್ನಾಟಕ'ದಲ್ಲಿ ಅಚ್ಚಾದವು. ''ನನ್ನ ಕವಿತನದ ವಿಷಯದಲ್ಲಿ ನನಗೆ ಯಾವ ಭ್ರಮೆಯೂ ಉಳಿದಿಲ್ಲ'' ಎಂದು ಅವರು ಪು.ತಿ.ನ. ಅವರಿಗೆ ಬರೆದ ಪತ್ರದಲ್ಲಿ (೪-೪-೧೯೫೭) ಕಾಣಿಸಿದ್ದುಂಟು. ಆದರೂ ಅವೆರಡೂ ಒಳ್ಳೆಯ ಕವನಗಳೇ. 'ಒಲುಮೆ' ಕನ್ನಡದ ಪ್ರೇಮಗೀತೆಗಳ ಮೊದಲನೆಯ ಸಂಗ್ರಹವಷ್ಟೇ ಅಲ್ಲ, ಅಲ್ಪ ಪ್ರಮಾಣದಲ್ಲಾದರೂ ಕನ್ನಡದ ಅತ್ಯಂತ ಚೆಲುವಾದ ಪ್ರೇಮಗೀತೆಗಳ ಸಾಲಿನಲ್ಲಿ ನಿಲ್ಲಬಲ್ಲ ಕವನಗಳನ್ನು ಒಳಗೊಂಡ ಸಂಗ್ರಹ.

* * *

ಧಾರವಾಡದಲ್ಲಿದ್ದಾಗ ತೀ.ನಂ.ಶ್ರೀ.ಯವರು ಎರಡು ಸಲ ಮನೆ ಬದಲಿಸಬೇಕಾಯಿತು. ನಾನೂ ಬೇರೆ ಕಾರಣಗಳಿಂದ ಎರಡು ಸಲ ಮನೆ ಬದಲಿಸಿದೆ. ಆಶ್ಚರ್ಯದ ಹಾಗೂ ಸಂತೋಷದ ಸಂಗತಿಯೆಂದರೆ, ಎರಡು ಸಲವೂ ನನಗೆ ಅವರ ಮನೆಯ ಎದುರಿನ ಸಾಲಿನ ಮನೆಯಲ್ಲಿಯೇ ವಾಸಿಸುವ ಪ್ರಸಂಗ ಒದಗಿತ್ತು. ಮೊದಲು ಮಾಳಮಡ್ಡಿ, ಆಮೇಲೆ ಸಾರಸ್ವತಪುರದಲ್ಲಿ. ಹೀಗಾಗಿ ಅವರ ಕುಟುಂಬದ ಸದಸ್ಯರೊಡನೆ ನಮಗೆ ಹೆಚ್ಚಿನ ಬಾಂಧವ್ಯ ಬೆಳೆಯಿತು. ಇನ್ನೂ ಚಿಕ್ಕವನಾಗಿದ್ದ ನಾಗಭೂಷಣ ಹೈಸ್ಕೂಲಿಗೆ ಹೋಗುತ್ತಿದ್ದ. ನಾಗರತ್ನ ಕಾಲೇಜಿಗೆ ಹೋಗುತ್ತಿದ್ದಳು. ಶ್ರೀಮತಿ ಜಯಲಕ್ಷ್ಮಮ್ಮ ಅವರು ಬೇಸರವೆನಿಸಿದಾಗಲೆಲ್ಲ, ನಮ್ಮ ಮನೆಗೆ ಬರುತ್ತಿದ್ದರು. ನಮ್ಮ ಮನೆಯವರು ಬಿಸಿಬಿಸಿ ಜೋಳದ ರೊಟ್ಟಿ, ಪಲ್ಯ, ಚಟ್ನಿಗಳ ತಾಟನ್ನು ಆಗೀಗ ಊಟದ ಹೊತ್ತಿಗೆ ಅವರ ಮನೆಗೆ ಕಳಿಸಿಕೊಡುತ್ತಿದ್ದರು. ಮರುದಿನವೇ ತೀ.ನಂ. ಶ್ರೀ.ಯವರು ಬಿಳಿಜೋಳದ ರೊಟ್ಟಿಯ ರುಚಿಯ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದು, ಇಷ್ಟು ತೆಳ್ಳಗೆ ರೊಟ್ಟಿ ಹೇಗೆ ಮಾಡುತ್ತೀರಿ ಎಂದು ಜಯಲಕ್ಷ್ಮಮ್ಮ ಅವರು ಕುತೂಹಲಗೊಳ್ಳುತ್ತಿದ್ದರು.

ಸ್ನೇಹಿತರನ್ನು ತಮ್ಮ ಮನೆಗೆ ಮೇಲಿಂದ ಮೇಲೆ ಬರಮಾಡಿಕೊಂಡು ಆತಿಥ್ಯ ನೀಡುವುದರಲ್ಲಿ ಅವರಿಬ್ಬರಿಗೂ ಎಲ್ಲಿಲ್ಲದ ಸಂತೋಷ, ಮೈಸೂರು ಬೆಂಗಳೂರು ಕಡೆಗಳಿಂದ ಅವರ ಮಿತ್ರರು, ಬಂಧುಗಳು ಯಾರು ಬಂದರೂ ಅವರಿಗೆ ತೀ.ನಂ.ಶ್ರೀ.ಯವರ ಮನೆಯಲ್ಲಿಯೇ ಆತಿಥ್ಯ ಒದಗುತ್ತಿತ್ತು. ಅಂಥ ಸಂದರ್ಭಗಳಲ್ಲಿ ನಮಗೂ ಆಮಂತ್ರಣ ಇದ್ದೇ ಇರುತ್ತಿತ್ತು. ಊಟವಾಗಲಿ, ಉಪಹಾರವಾಗಲಿ ಯಾವುದರಲ್ಲೂ ಅವರು ತುಂಬ ಧಾರಾಳ, ಅಷ್ಟೇ ಶುಚಿ-ರುಚಿ-ಶಿಸ್ತು. ಇಂಥ ಸಂದರ್ಭದಲ್ಲಿ ಹೆಚ್ಚು ಜನರಿದ್ದಷ್ಟೂ ಅವರಿಗೆ ಹೆಚ್ಚಿನ ಸಂತೋಷ. ಅಂಥ ಸಂತೋಷಕ್ಕೆ ಅವರು ಯಾವಾಗಲೂ ಕಾದುಕೊಂಡಿರುವಂತೆ ತೋರುತ್ತಿತ್ತು.

ಪು.ತಿ.ನ., ಎ. ಎನ್. ಮೂರ್ತಿರಾಯರು, ಎಲ್. ಗುಂಡಪ್ಪ ಹಾಗೂ ಅವರ ಮಕ್ಕಳು ಸುಮಿತ್ರ, ವಿಮಲ ಮೊದಲಾದವರ ನಿಕಟ ಪರಿಚಯ ನಮಗಾದದ್ದು ಅವರ ಮನೆಯಲ್ಲಿಯೇ. ಆ ಸಂದರ್ಭದಲ್ಲಿ ಕಾವ್ಯಶಾಸ್ತ್ರ ವಿನೋದಕ್ಕೆ ಪೂರ ಬಂದಂತಿರುತ್ತಿತ್ತು. ಆ ಸೊಗಸಿನ ಸಂಜೆಗಳನ್ನು ಈಗ ಮೆಲುಕುಹಾಕುವುದೇ ಒಂದು ಸಂತೋಷ. ದಂಪತಿಗಳಿಗೆ ಅದರಲ್ಲಿ ವಿಶೇಷವಾದ ಆದರಾತಿಥ್ಯವಿರುತ್ತಿತ್ತು. ನೂತನ ದಂಪತಿಗಳಿಗೆ ಅದರ ಪ್ರಮಾಣ ಇನ್ನೂ ಹೆಚ್ಚುತ್ತಿತ್ತು. ಅಮೇರಿಕಾ, ಇಂಗ್ಲೆಂಡ್ ಪ್ರವಾಸದಿಂದ ಅವರು ಧಾರವಾಡಕ್ಕೆ ಮರಳಿದ ಮೇಲೆ ಒಂದು ದಿನ ಎಂಟು-ಹತ್ತು ಜೋಡಿ ದಂಪತಿಗಳನ್ನು ತಮ್ಮ ಮನೆಗೆ ಊಟಕ್ಕೆ ಕರೆದದ್ದು ನನಗೆ ನೆನಪಿದೆ.

* * *

ತೀ.ನಂ.ಶ್ರೀ.ಯವರ ಸಹೃದಯತೆಗೆ ನಾನು ನಿಜಕ್ಕೂ ಮಾರು ಹೋಗಿದ್ದೆ. ಆಕಾಶವಾಣಿಯಲ್ಲಿ ನಾನು ಕಾವ್ಯಾವಾಚನ ಮಾಡಿದಾಗ ಅವರು ಮರೆಯದೆ

ಕೇಳಿರುತ್ತಿದ್ದರು. 'ನೋಡಿ, ನಿನ್ನೆ ಓದಿದ ಆ ಮೂರು ಪದ್ಯಗಳು ತುಂಬ ಚೆನ್ನಾಗಿದ್ದವು' ಎಂದು ಹೇಳುತ್ತಿದ್ದರಲ್ಲದೆ ಕೆಲವು ಸಾಲುಗಳನ್ನು ಕೂಡ ನೆನಪಿನಲ್ಲಿಟ್ಟುಕೊಂಡಿರುತ್ತಿದ್ದರು. 'ಜೀವನ'ದಲ್ಲಿ ನನ್ನ 'ಮಗುವಿಗೆ' ಎಂಬ ಕವಿತೆ ಪ್ರಕಟವಾದಾಗ ಅದರಲ್ಲಿ ಬರುವ ನೂತನ ಉಪಮೆ ರೂಪಕಗಳನ್ನು ಅವರು ಎತ್ತಿ ತೋರಿಸಿ ತಮ್ಮ ಸಂತೋಷವನ್ನು ಸೂಚಿಸಿದ್ದರು. ಅವರದು ತುಂಬ ಪರಿಶುದ್ಧವಾದ ಕಾವ್ಯಾಭಿರುಚಿ.

೧೯೫೩ರಲ್ಲಿ ಅವರು ಕುಮಟಾ ಸಾಹಿತ್ಯ ಸಮ್ಮೇಳನಕ್ಕೆ ಹೋಗಿ ಬಂದರು. ಮೊಟ್ಟ ಮೊದಲಿಗೆ ಅಲ್ಲಿ ನವ್ಯ ಕಾವ್ಯದ ಬಗ್ಗೆ ನಡೆದ ಗೋಷ್ಠಿ ಸ್ವಲ್ಪ ತುರುಸಿನದಾಗಿತ್ತೆಂದು ತೋರುತ್ತದೆ. ಆ ಗೋಷ್ಠಿಯಲ್ಲಿ ಭಾಗವಹಿಸಿದ ಕೆಲವು ಮಿತ್ರರು ಸಮ್ಮೇಳನ ಮುಗಿಸಿಕೊಂಡು ಹೋಗುವಾಗ ಧಾರವಾಡಕ್ಕೂ ಬಂದರು. ಆಗ ತೀನಂಶ್ರೀಯವರ ಮನೆಯಲ್ಲಿ ಮತ್ತೊಂದು ಗೋಷ್ಠಿ ನಡೆಯಿತು. ಅಲ್ಲಿ ನಡೆದ ಚರ್ಚೆ ಇಲ್ಲಿ ಇನ್ನಿಷ್ಟು ಬಿಸಿಯಾಗಿ, ಆದರೆ ಆತ್ಮೀಯವಾಗಿ ಮುಂದುವರಿದಂತಿತ್ತು. ನವ್ಯಕಾವ್ಯದ ಕೆಲವು ಅಂಶಗಳನ್ನು ತೀನಂಶ್ರೀ ಮೆಚ್ಚಿಕೊಂಡಿದ್ದರಾದರೂ ಅದರ ಬಗ್ಗೆ ಹೆಚ್ಚಿನ ಒಲವನ್ನು ಅವರು ಮುಂದೆಯೂ ತೋರಿದಂತೆ ಕಂಡು ಬರಲಿಲ್ಲ.

* * *

ತೀನಂಶ್ರೀ ಮೈಸೂರಿಗೆ ಹಿಂತಿರುಗುವ ಮುನ್ನ ಒಂದು ದಿನ ನನ್ನನ್ನು ತಮ್ಮ ಮನೆಗೆ ಕರೆಕಳುಹಿಸಿದರು. ನಾನು ಉಪನ್ಯಾಸ ಶಿಬಿರಕ್ಕಾಗಿ ಯಾವುದೋ ಊರಿಗೆ ಹೋದವನು ಅದೇ ಬಂದಿದ್ದೆ. ಅವರ ಮನೆಗೆ ಹೋದಾಗ ಹೇಳಿದರು: ''ನೀವಿಲ್ಲದಾಗ ನಿಮಗೆ ತಿಳಿಸದೆ ನಾನೊಂದು ತೀರ್ಮಾನ ತೆಗೆದುಕೊಂಡಿದ್ದೇನೆ'' ಎಂದರು. ನಾನು, ''ನಿಮ್ಮಲ್ಲಿ ನನಗೆ ತುಂಬ ವಿಶ್ವಾಸ ಎಂಬುದು ನಿಮಗೆ ಗೊತ್ತೇ ಇದೆ, ಹೇಳಿ'' ಎಂದೆ ಕುತೂಹಲದಿಂದ. ಅವರು ಹೇಳಿದರು; ''ನಾನು ಇಷ್ಟರಲ್ಲಿಯೇ ಮೈಸೂರಿಗೆ ಹಿಂತಿರುಗಲಿರುವುದರಿಂದ ಇಲ್ಲಿಯ ಕನ್ನಡ ವಿಭಾಗದ ಮುಂದಿನ ವ್ಯವಸ್ಥೆಯ ಬಗ್ಗೆ ನನ್ನ ಸೂಚನೆಗಳನ್ನು ಡಾ. ಪಾವಟೆಯವರು ಕೇಳಿದರು. ನಾನು ನಿಮ್ಮನ್ನು ಲೆಕ್ಚರರ್ ಎಂದು ತೆಗೆದುಕೊಳ್ಳುವುದು ತುಂಬ ಸೂಕ್ತ ಎಂಬ ಶಿಫಾರಸ್ಸು ಬರೆದುಕೊಟ್ಟಿದ್ದೇನೆ. ಅವರೂ ಅದಕ್ಕೆ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದರು''. ಈ ಅನಿರೀಕ್ಷಿತ ಘಟನೆ ನನ್ನನ್ನು ಅಚ್ಚರಿಗೊಳಿಸಿತು. ನಾನು ಅವರಿಗೆ ಕೃತಜ್ಞತೆ ಸೂಚಿಸಿ ಮನೆಗೆ ಬಂದೆ.

ಸ್ವಲ್ಪ ದಿನಗಳಲ್ಲಿ ಅವರು ಧಾರವಾಡವನ್ನು ಬಿಟ್ಟು ಮೈಸೂರಿಗೆ ತೆರಳಿದರು. ಮುಂದೆ ಇಲ್ಲಿ ಏನೇನೊ ಕಾರಣಗಳಿಂದಾಗಿ ಅವರು ನನ್ನ ಬಗ್ಗೆ ಮಾಡಿದ ಶಿಫಾರಸ್ಸು ಕಾಗದದಲ್ಲಿಯೇ ಉಳಿಯಿತು. ತೀನಂಶ್ರೀ ಇದರಿಂದ ತುಂಬಾ ಬೇಸರಪಟ್ಟುಕೊಂಡರು. ಆದರೆ ಆ ಬಗ್ಗೆ ನಾನು ಹೆಚ್ಚು ಹಚ್ಚಿಕೊಂಡಿರಲಿಲ್ಲ. ''ವ್ಯಾಸಂಗ ವಿಸ್ತರಣ, ಪ್ರಕಟಣ ವಿಭಾಗಕ್ಕೆ ನನ್ನನ್ನು ಸಂಪೂರ್ಣ ಅರ್ಪಿಸಿಕೊಂಡುಬಿಟ್ಟಿದ್ದೇನೆ. ನನಗೇನೂ ಚಿಂತೆಯಿಲ್ಲ'' ಎಂದು ನಾನೇ ಅವರಿಗೆ ಸಮಾಧಾನ ಹೇಳಬೇಕಾಯಿತು.

ಮುಂದೆ ಇಪ್ಪತ್ತೈದು ವರ್ಷಗಳ ನಂತರ, ನಾನು ಪ್ರಸಾರಾಂಗದ ನಿರ್ದೇಶಕತ್ವದಿಂದ ನಿವೃತ್ತನಾಗುವ ಮುನ್ನ ಕನ್ನಡ ಅಧ್ಯಯನ ಪೀಠದಲ್ಲಿ ಎರಡು ವರ್ಷ ಗೌರವ ಸಂದರ್ಶಕ ಪ್ರಾಧ್ಯಾಪಕನಾಗಿ ವಿದ್ಯಾರ್ಥಿಗಳಿಗೆ ಪಾಠ ಹೇಳುವ ಅವಕಾಶ ಅಯಾಚಿತವಾಗಿ ಒದಗಿತ್ತು. ಆ ಸಂದರ್ಭದಲ್ಲಿ ನನಗೆ ತೀನಂಶ್ರೀಯವರ ನೆನಪಾಗದೆ ಹೋಗಲಿಲ್ಲ.

* * *

೧೯೫೭ರ ದಸರಾ ಕವಿಸಮ್ಮೇಳನದಲ್ಲಿ ಭಾಗವಹಿಸಲು ಮೈಸೂರಿಗೆ ಹೋದಾಗ ತೀನಂಶ್ರೀಯವರ ಮನೆಗೆ ನಾನು ಮನೆಯವರ ಜೊತೆಗೆ ಹೋಗಿದ್ದೆ. ಆಗ ಅವರ ಮನೆಮಂದಿಯೆಲ್ಲ ಧಾರವಾಡದ ಬಗ್ಗೆ ಕೇಳಿದ್ದೇ ಕೇಳಿದ್ದು. ನಾಲ್ಕೈದು ವರ್ಷಗಳಲ್ಲಿಯೇ ಅವರು ಇಲ್ಲಿ ಪಡೆದಿದ್ದ ಸ್ನೇಹಿತರ ಬಳಗ ಅಷ್ಟು ದೊಡ್ಡದಾಗಿತ್ತು. ಅಂದು ನಮ್ಮಿಬ್ಬರ ಅತಿಥಿ ಸತ್ಕಾರದಲ್ಲಿ ಅವರು ಧಾರವಾಡದ ಮೇಲಿನ ಪ್ರೀತಿಯನ್ನೆಲ್ಲ ತೀರಿಸಿಕೊಳ್ಳುತ್ತಿರುವಂತೆ ತೋರಿತು. ತಮ್ಮ ಮನೆಯ ಅಂಗಳದಲ್ಲಿ ನನ್ನನ್ನೂ ನನ್ನ ಶ್ರೀಮತಿಯನ್ನೂ ಜೊತೆಯಾಗಿ ನಿಲ್ಲಿಸಿ, ಸ್ವತಃ ತೀನಂಶ್ರೀಯವರೇ ಫೋಟೋ ತೆಗೆದುಕೊಂಡಿದ್ದನ್ನು ಹೇಗೆ ಮರೆಯುವುದು?

* * *

೧೯೬೧ರಲ್ಲಿ ಗದಗಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಾ ಬಾಂಧವ್ಯ ಗೋಷ್ಠಿಯ ಅಧ್ಯಕ್ಷರಾಗಿ ತೀ.ನಂ.ಶ್ರೀ ಬಂದಾಗ ಕೆಲವೇ ಕ್ಷಣಗಳನ್ನು ಅವರ ಜೊತೆಗೆ ಕಳೆಯಬೇಕಾಯಿತು. ಯಾಕೆಂದರೆ ಅಂದೇ ಅವರು ಯಾವುದೋ ತುರ್ತು ಕೆಲಸದ ನಿಮಿತ್ತ ಮೈಸೂರಿಗೆ ತೆರಳಬೇಕಾಗಿತ್ತು. ನಾನು ಕವಿಗೋಷ್ಠಿಯ ಅಧ್ಯಕ್ಷನಾದದ್ದಕ್ಕೆ ನನ್ನನ್ನು ಅಭಿನಂದಿಸಿ ನನ್ನ ಭಾಷಣದ ಎರಡು ಪ್ರತಿಗಳನ್ನು ಪಡೆದುಕೊಂಡುದರ ಉದ್ದೇಶ ಮುಂದೆ ಪು.ತಿ.ನ. ಅವರು ೩೦–೧೨–೬೧ರಲ್ಲಿ ನನಗೆ ಬರೆದ ಪತ್ರದಿಂದ ಗೊತ್ತಾಯಿತು. ಪು.ತಿ.ನ. ಅವರ ಪತ್ರದಲ್ಲಿಯ ಮಾತುಗಳನ್ನು ಇಲ್ಲಿ ಉದ್ಧರಿಸುತ್ತಿದ್ದೇನೆ :

''ತಾವು ಈ ಸಲದ ಕವಿಗೋಷ್ಠಿ ಅಧ್ಯಕ್ಷರಾದದ್ದು ತುಂಬ ಹರುಷದ ಸಂಗತಿ. ನನ್ನ ಅಭಿನಂದನೆಗಳು. ತಮ್ಮ ಭಾಷಣದ ಪ್ರತಿಯೊಂದನ್ನು ತೀನಂಶ್ರೀಯವರು ನನ್ನಲ್ಲಿ ಬಿಟ್ಟುಹೋದರು. ತುಂಬ ಕುತೂಹಲದಿಂದ ಓದಿದೆ. ನಿಜ, ನನ್ನ ಪುಸ್ತಕದ ವಿಚಾರವಾಗಿ ಹೇಳಿರುವ ಮಾತು. ಈಗೀಗ ಮನಸ್ಸು ಹಿಮ್ಮೊಗವಾಗಿ ತಿರುಗಹತ್ತಿದೆ. ಅಂತ್ಯಪ್ರಾಸವನ್ನು ಬಿಟ್ಟು ಆದಿಪ್ರಾಸಕ್ಕೂ ಕಂದವೃತ್ತಗಳಿಗೂ ಒಲಿಯುತ್ತಿದೆ. ನನ್ನ ಸೆಳವು ಮೊದಲಿನಿಂದಲೂ ಸಂಸ್ಕೃತದತ್ತ ಈಗೀಗ ಇದು ತುಂಬ ಹೆಚ್ಚು. ಅವರವರ ಮಾಳ್ಕೆಯಂತೆ ಅವರವರ ಲೋಕ.... ಬಹು ಪ್ರಚೋದಕವಾಗಿದೆ ನಿಮ್ಮ ಭಾಷಣ, ಅಭಿನಂದನೆಗಳು.''

* * *

ತೀ.ನಂ. ಶ್ರೀಯವರನ್ನು ನೆನೆದಾಗ ಹೊಳಪುಗಣ್ಣಿನ, ಮಂದಸ್ಮಿತದ, ಸ್ನಿಗ್ಧ ನೋಟದ, ಅವರ ಪ್ರಶಾಂತಮುಖ ಕಣ್ಣೆದುರು ನಿಲ್ಲುತ್ತದೆ. ಯಾವುದರ ಬಗೆಗಾದರೂ ಅಸಮಾಧಾನವೆನಿಸಿದಾಗ ಸ್ವಲ್ಪ ಹುಬ್ಬುಗಂಟಿಕ್ಕಿ ಪುನಃ ಮೊದಲಿನ ಕಳೆಯನ್ನು ಅದು ಪಡೆಯುತ್ತಿತ್ತು. ಸಂಸಾರದ ಸೌಖ್ಯ, ಮಿತ್ರರ ಒಲವು, ಸಾಹಿತ್ಯದ ಸವಿ ಅವರ ವೈಯಕ್ತಿಕ ನೋವುಗಳನ್ನು ಮರೆಸಿ ಗೆಲುವನ್ನು ಸಾಧಿಸಿದ್ದವು.

ಧಾರವಾಡದಲ್ಲಿಆಗ ಸಿಟಿ ಬಸ್ಸುಗಳಿರಲಿಲ್ಲ, ಸಾರಸ್ವತಪುರದ ತಮ್ಮಮನೆಯಿಂದ ಟ್ರೈನಿಂಗ್ ಕಾಲೇಜಿನವರೆಗೆ (ವಿಶ್ವವಿದ್ಯಾಲಯದ ಕನ್ನಡ ವಿಭಾಗ ಆಗ ಅಲ್ಲಿಯೇ ಇತ್ತು.) ಬಿಸಿಲಿನಲ್ಲಿ ಅವರು ನಡೆದುಕೊಂಡೇ ಹೋಗುತ್ತಿದ್ದರು. ತೆಳ್ಳಗಿನ ಬೆಳ್ಳಗಿನ ನೀಟಾದ ಪಂಚೆಯುಟ್ಟು ಕ್ಲೋಸ್‌ಕಾಲರ್ ಕೋಟು ತೊಟ್ಟು, ಇರುವಷ್ಟು ತಲೆಗೂದಲನ್ನು ಒಪ್ಪಾಗಿಬಾಚಿ, ಎಡಗೈಯಲ್ಲಿ ಪುಸ್ತಕಗಳನ್ನು, ಬಲಗೈಯಲ್ಲಿ ಕೊಡೆಯನ್ನು ಹಿಡಿದುಕೊಂಡು,ಮೈಯನ್ನು ಸ್ವಲ್ಪ ಓಲಾಡಿಸುತ್ತ, ಎತ್ತರದ ನಿಲುವಿನ ಸಹಜ ಸೌಮ್ಯ ಠೀವಿಯೊಂದಿಗೆ ಅವರು ನಡೆದು ಹೋಗುತ್ತಿದ್ದ ದೃಶ್ಯ ಇನ್ನೂನನ್ನ ಕಣ್ಣ ಮುಂದೆ ಕಟ್ಟಿದಂತಿದೆ.

ಈಗ್ಗೆ ಕೆಲವರ್ಷಗಳ ಹಿಂದೆ ನಾಗಭೂಷಣ ತನ್ನ ಪತ್ನಿಯೊಂದಿಗೆ ದಾರವಾಡದ ನಮ್ಮ ಮನೆಗೆ ಬಂದಾಗ ಅವನ ತುಂಬು ಮೊಗದಲ್ಲಿ ನಾನು ತೀ.ನಂ.ಶ್ರೀಯವರನ್ನೇ ಕಂಡಂತಾಯಿತು.

'ಲಂಕೇಶ ಪತ್ರಿಕೆ'

■■

ಹಲವು ಹೋರಾಟಗಳ ಕಲಿ : ಅ.ನ.ಕೃ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅ.ನ.ಕೃ. ಒಂದು ಅದ್ಭುತ ಚೇತನ. ಅವರನ್ನು ಅವರ ಸಾಹಿತ್ಯವನ್ನು ಮೆಚ್ಚಿಕೊಂಡು ಸ್ಫೂರ್ತಿ ಪಡೆದ ತರುಣರ ಸಂಖ್ಯೆ ಅಪಾರ. ಅವರ ಚಾಕಚಕ್ಯತೆಯನ್ನು, ಮಾತಿನ ಚತುರತೆಯನ್ನು, ಸೃಜನಾತ್ಮಕ ಪ್ರತಿಭೆಯನ್ನು, ಉದಾರ ಮನೋಧರ್ಮವನ್ನು ಬಲ್ಲ ಹಿರಿಯರೂ ನಾಡಿನಲ್ಲಿ ಅಲ್ಲಲ್ಲಿ ಇದ್ದಾರೆ. ''ಹಿರಿಯರ ಪೈಕಿ ಬಿ.ಎಂ.ಶ್ರೀ. ಮತ್ತಿತರರು ದುಡಿದ ರೀತಿಯಲ್ಲಿ ಅ.ನ.ಕೃ. ದುಡಿದರು'' ಎಂದು ಅವರ ಸಾಹಿತ್ಯ ಸೇವೆಯನ್ನು ಸ್ಮರಿಸುತ್ತ ನುಡಿದ ಕುವೆಂಪು ನಿಜಕ್ಕೂ ದೊಡ್ಡ ಗೌರವವನ್ನು ಅವರಿಗೆ ಸಲ್ಲಿಸಿದ್ದಾರೆ. ಸದಾ ತಾರುಣ್ಯದ ಪ್ರತೀಕವಾಗಿದ್ದ ಅ.ನ.ಕೃ. ತಮ್ಮ ದೃಢವಾದ ನಿಲುಮೆ, ನಿರಂತರ ಹೋರಾಟದ ಮನೋಭಾವದಿಂದ ಕನ್ನಡದ ದೀಪವನ್ನು ಉಜ್ವಲವಾಗಿ ಬೆಳಗಿಸುವ ಧ್ಯೇಯವಾದಿತ್ವದಲ್ಲಿ ಎಣ್ಣೆ, ಬತ್ತಿ ಎರಡೂ ಆದರು. ಸರಸವಾದ ಸುಭಗವಾದ ತಮ್ಮ ಬರವಣಿಗೆಯಿಂದ ಸಹಸ್ರ ಸಹಸ್ರ ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಹುಟ್ಟಿಸಿದರು. ಈ ಹುಟ್ಟು ಕಥೆಗಾರ ನಾಡಿನ ಹಿತರಕ್ಷಣೆಯ ಸಂದರ್ಭದಲ್ಲಿ ಯಾರ ಅಡೆತಡೆಯನ್ನೂ ಲೆಕ್ಕಿಸದೆ, ಯಾರ ಮಾತಿಗೂ ಸೊಪ್ಪು ಹಾಕದೆ, ಯಾವ ಸಂಘ ಸಂಸ್ಥೆ ಸಂಪ್ರದಾಯಗಳಿಗೂ ಶರಣಾಗದೆ ಎದೆಗಾರಿಕೆಯಿಂದ ಮುನ್ನುಗ್ಗಿ ಹೋರಾಡಿದರು. ಆ ಧೈರ್ಯ ಆ ಕನ್ನಡತನದ ಕೆಚ್ಚು ಅ.ನ.ಕೃ. ಅವರಿಗೇ ಮೀಸಲು. ಅನೇಕ ಪ್ರಸಂಗಗಳಲ್ಲಿ ಎದುರು ಪಕ್ಷದವರ ಧ್ಯೇಯಧೋರಣೆಗಳನ್ನು, ಅಭಿಪ್ರಾಯ, ಅನುಮಾನಗಳನ್ನು ಅವರು ಟೀಕಿಸುತ್ತಿದ್ದರೇ ವಿನಃ ವ್ಯಕ್ತಿದ್ವೇಷವಾಗಲಿ, ಪೂರ್ವಗ್ರಹಗಳಾಗಲಿ ಅವರನ್ನು ಮುಟ್ಟುತ್ತಿದ್ದಿಲ್ಲ . ಎಂಥ ವೈರಿಯೂ ಮೆಚ್ಚಬಹುದಾದ ಸ್ನೇಹ ಔದಾರ್ಯಗಳ ಬಂಗಾರದ ಖನಿಯಾಗಿದ್ದರು. ''ಮಾನವ ರೂಪದ ಮಾನವೀಯ ಗುಣಗಳ ಡೈನಮೊ ಅ.ನ.ಕೃ.'' ಎಂದು ಅವರನ್ನು ಮಿತ್ರರೊಬ್ಬರು (ಎಲ್.ಎಸ್. ಶೇಷಗಿರಿರಾವ್) ಕರೆದಿರುವಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಇಂಥ ವ್ಯಕ್ತಿಯ ಕಣ್ಮರೆಯಿಂದ ಕನ್ನಡ ನಾಡು–ನುಡಿಗಳಿಗಾದ ನಷ್ಟ ಅಪಾರ ಎಂದರೆ ಎಳ್ಳಷ್ಟೂ ಔಪಚಾರಿಕವೆನಿಸದು. ಕನ್ನಡತನದ ಜನ್ಮಗುದುರೆಯಾಗಿ ಕೈಕೊಂಡ ಕಾರ್ಯದಲ್ಲೆಲ್ಲ ಸಾಹಸವನ್ನು ಮೆರೆದು, ನಿಸ್ಸಂಕೋಚವಾದ ಬಾಳನ್ನು ಬಾಳಿ, ಜನಾನುರಾಗದ ಶಿಖರವನ್ನು ತಲುಪಿ, ಬಹುಮುಖವಾದ ವರ್ಣಮಯ ವ್ಯಕ್ತಿತ್ವವನ್ನು ಪಡೆದಿದ್ದ ಅ.ನ.ಕೃ.ರಂಥ ವ್ಯಕ್ತಿ ಇನ್ನೂ ಬಹಳ ಕಾಲ ನಮ್ಮ ಮಧ್ಯದಲ್ಲಿರಬೇಕಾಗಿತ್ತು ಎಂದು ಯಾರು ಬಯಸರು?

ಈ ಸಂದರ್ಭದಲ್ಲಿ ಅ.ನ.ಕೃ. ಅವರೊಂದಿಗೆ ಸಂಪರ್ಕ ಒದಗಿದ ಹಲವಾರು ಸನ್ನಿವೇಶಗಳು ನನ್ನ ಮನಸ್ಸಿನೆದುರು ಮೂಡಿನಿಲ್ಲುತ್ತಿವೆ. ಅ.ನ.ಕೃ. ಧಾರವಾಡಕ್ಕೆ ಬಂದಾಗ ಹೆಚ್ಚಾಗಿ ಟಿ.ಡಿ. ಶಿವಲಿಂಗಯ್ಯನವರಲ್ಲಿಯೇ ವಾಸ ಮಾಡುತ್ತಿದ್ದರು. ಸಂಜೆಯ ಹೊತ್ತು ಅವರ ಪುಸ್ತಕದಂಗಡಿ 'ಸಾಹಿತ್ಯ ಮಂದಿರ'ದಲ್ಲಿ ಗೆಳೆಯರೊಡನೆ ಹರಟೆ ಹೊಡೆಯುತ್ತ ಅ.ನ.ಕೃ. ಕುಳಿತುಕೊಳ್ಳುವ ರೂಢಿ. ಒಮ್ಮೆ ಯಾವುದೋ ಪುಸ್ತಕವನ್ನು ಕೊಳ್ಳಲು 'ಸಾಹಿತ್ಯ ಮಂದಿರ'ಕ್ಕೆ ನಾನು ಹೋದಾಗ ಅವರ ಪರಿಚಯವಾಯಿತು. (ನಾನು ಹಾಯಸ್ಕೂಲ ವಿದ್ಯಾರ್ಥಿಯಿದ್ದಾಗಲೇ ಅವರನ್ನು ನೋಡಿದ್ದೇನಾದರೂ ಅವರೊಡನೆ ಮಾತನಾಡಿ ಪರಿಚಯವಿರಲಿಲ್ಲ. ನಾನಾಗ ಬಿ.ಎ.ದಲ್ಲಿ ಓದುತ್ತಿದ್ದೆ (೧೯೫೦). ಆ ಹೊತ್ತಿಗೆ ಪ್ರಕಟವಾಗಿದ್ದ ನನ್ನ ಕವಿತೆಗಳಲ್ಲಿ ಕೆಲವನ್ನವರು ಓದಿದ್ದರು. ಅದೇ ವಾರ 'ಜನಪ್ರಗತಿ' ಯಲ್ಲಿ ಪ್ರಕಟವಾಗಿದ್ದ ನನ್ನ 'ಶ್ವೇತಪುತ್ರಿ' ಕವಿತೆಯ ಬಗ್ಗೆ ಮೆಚ್ಚುಗೆ ಸೂಚಿಸಿದರು. ಅದು ಸಿಗರೇಟನ್ನು ಕುರಿತದ್ದಾಗಿತ್ತು. ಮರುದಿನ ಅವರು ಮಾಳಮಡ್ಡಿಯಲ್ಲಿದ್ದ ನನ್ನ ಅಭ್ಯಾಸದ ಕೋಣೆಗೆ ಬಂದು ಮೂರು–ನಾಲ್ಕು ತುಸು ಹರಟೆಹೊಡೆದರು. ನಾನು ಸ್ಟೋವಿನ ಮೇಲೆ ಚಹಾ ಮಾಡಿಕೊಟ್ಟೆ. ಅಂದಿನ ಮಾತುಕತೆಯಲ್ಲಿ ಹಳಗನ್ನಡ ಕಾವ್ಯ, ಬಸವಣ್ಣ, ಪ್ರಗತಿಶೀಲ ಸಾಹಿತ್ಯ, ಕಥೆ–ಕಾದಂಬರಿ, ನಾಡಹಬ್ಬದಲ್ಲಿ ಕನ್ನಡ ನಾಡಿನ ಸುತ್ತಾಟ, ರಬಕವಿ ಸಾಹಿತ್ಯ ಸಮ್ಮೇಳನ, ಮಲ್ಲಿಕಾರ್ಜುನ ಮನ್ಸೂರರ ಸಂಗೀತ, ಕಲೆ– ಇತ್ಯಾದಿ ಹಲವಾರು ವಿಷಯಗಳು ಹಾಯ್ದು ಹೋದವು. ಕಿರಿಯರೊಡನೆ ಕಿರಿಯರಾಗಿ ಸ್ನೇಹದಿಂದ, ಅಸ್ವಾಭಾವಿಕತೆಗೆ ಎಡೆಯಿರದಂತೆ ವರ್ತಿಸಿದ ಅವರ ಬಗ್ಗೆ ನಿಜವಾಗಿಯೂ ನನ್ನಲ್ಲಿ ಪ್ರೀತಿ ಗೌರವಗಳುಂಟಾದವು. ಅವರು ತಿರುಗಿ ಬೆಂಗಳೂರಿಗೆ ಹೋದ ಮೂರು ನಾಲ್ಕು ದಿನಗಳಲ್ಲಿ ಕೃತಜ್ಞತೆ ಸೂಚಿಸಿ ಕಾಗದ ಬರೆದಿದ್ದರು. ಇದು ಅ.ನ.ಕೃ. ಅವರ ಹಿರಿಯ ಗುಣ.

೧೯೬೦ರಲ್ಲಿ ಮಣಿಪಾಲದಲ್ಲಿ ನೆರವೇರಲಿದ್ದ ಕನ್ನಡ ಸಾಹಿತ್ಯ ಸಮ್ಮೇಳನದ ೪೨ನೆಯ ಅಧಿವೇಶನದ ಅಧ್ಯಕ್ಷಪದದ ಆಯ್ಕೆಗೆ ಸಂಬಂಧಿಸಿ ಪತ್ರಿಕೆಗಳಲ್ಲಿ ತುಂಬ ವಾದ, ಚರ್ಚೆ ನಡೆಯಿತು. ಈ ಹಿಂದೆ ಯಾವ ಸಮ್ಮೇಳನದ ಕಾಲಕ್ಕೂ ಜನತೆ ಈ ಬಗೆಯ ವಿಶಿಷ್ಟ ಪ್ರತಿಕ್ರಿಯೆ ವ್ಯಕ್ತಪಡಿಸಿರಲಿಲ್ಲ. ಅಂತೂ ಅ.ನ. ಕೃಷ್ಣರಾಯರು ಸರ್ವಾನುಮತದ ನಿರ್ಣಯದಿಂದ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾದುದು ಅವರ ಅಭಿಮಾನಿಗಳಿಗಷ್ಟೇ ಅಲ್ಲದೆ ಸರ್ವ ಕನ್ನಡಿಗರಿಗೂ ಸಂತೋಷದ ಸಂಗತಿಯೆನಿಸಿತು. ಅದುವರೆಗೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠಕ್ಕೇರಿದವರಲ್ಲಿ ಡಿ.ವಿ.ಜಿ. ಅವರ ಅನಂತರ ಅ.ನ.ಕೃ. ಅವರೇ ವಯಸ್ಸಿನಿಂದ ಕಿರಿಯರು. ಸಮ್ಮೇಳನಾಧ್ಯಕ್ಷರಾದವರಿಗೆ ಪೌರಸನ್ಮಾನ ದೊರಕುತ್ತಿರುವುದೂ ಅದೇ ಮೊದಲ ಬಾರಿ. ಅ.ನ.ಕೃ. ಪಡೆದಿದ್ದ ಜಪ್ರಿಯತೆಗೆ ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ . ಆ ಸಂದರ್ಭದಲ್ಲಿ ಹುಬ್ಬಳ್ಳಿ–ಧಾರವಾಡಗಳಲ್ಲಿ ಏರ್ಪಟ್ಟ ಸತ್ಕಾರ ಸಮಾರಂಭಗಳಲ್ಲಿ ಮಾತನಾಡುತ್ತ ಅ.ನ.ಕೃ. ಒಂದು ಮಾತನ್ನು ಹೇಳಿದರು : ''ನಮ್ಮ ಜನಜೀವನದಲ್ಲಿ ಒಂದು ಅಧ್ಯಕ್ಷ ಪದವಿ ಬಂದರೆ, ಒಂದು ಪಾರಿತೋಷಕ

ಬಂದರೆ ಕಥೆ ಮುಗಿದು ಹೋಯಿತು. ಆದರೆ ನಾನು ಅಧ್ಯಕ್ಷನಾಗಿ ಸಾಯುವುದಕ್ಕಿಂತ ಲೇಖಕನಾಗಿ ಬದುಕಬೇಕೆಂದಿದ್ದೇನೆ.'' ಕ್ರಿಯಾಶೀಲ ಲೇಖಕನಿಗೆ ಒಪ್ಪತಕ್ಕ ಮಾತುಗಳೇ. ಅ.ನ.ಕೃ. ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟಂದಿನಿಂದಲೂ ಒಂದಲ್ಲ ಒಂದು ರೀತಿಯಿಂದ ತಮ್ಮ ಕಲಿತನವನ್ನು ತೋರಿಸುತ್ತಲೇ ಬಂದಿದ್ದಾರೆ. 'ನನ್ನನ್ನು ನಾನೇ ಕಂಡೆ' ಎಂಬ ಹೊತ್ತಿಗೆಯಲ್ಲಿ ಅವರು ತಮ್ಮನ್ನು 'ಹಲವು ಹೋರಾಟಗಳ ಕಲಿ' ಎಂದು ಕರೆದುಕೊಂಡಿರುವುದು ಯಥಾರ್ಥವಾಗಿದೆ.

ಅ.ನ.ಕೃ. ತಮ್ಮ ಮೊಟ್ಟಮೊದಲನೆಯ ಕೃತಿ 'ಮದುವೆಯೋ ಮನೆ ಹಾಳೋ' ಎಂಬ ನಾಟಕದಿಂದ ೧೯೨೪ರಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟರು. ಆಗ ಅವರದು ೧೬ನೆಯ ವಯಸ್ಸು. ಅಂದಿನಿಂದ ತಮ್ಮ ಕೊನೆಗಾಲದವರೆಗೂ ನಾಡುನುಡಿಗಳ ಸೇವೆಯನ್ನು ಅವರು ಅಖಂಡವಾಗಿ ಸಾಗಿಸಿಕೊಂಡು ಬಂದರು. ಬಾಲ್ಯದಿಂದಲೇ ಕನ್ನಡ ರಂಗಭೂಮಿಯ ಸಾಮ್ರಾಟ ವರದಾಚಾರ್ ಹಾಗೂ ಬಹುಮುಖ ಪ್ರತಿಬೆಯ ಪಂಡಿತ ತಾರಾನಾಥರಿಂದ ಅ.ನ.ಕೃ. ಪ್ರಭಾವಿತರಾಗಿದ್ದರು. ''ಹಾಯಸ್ಕೂಲ್ ಮುಗಿಸುವ ವೇಳೆಗೆ ಇಂಗ್ಲಿಷ್, ಫ್ರೆಂಚ್, ಗ್ರೀಕ್, ಪರ್ಶಿಯನ್, ಕನ್ನಡ ಸಾಹಿತ್ಯಗಳ ಸಾಕಷ್ಟು ಪರಿಚಯ ನನಾಗಿತ್ತು'' ಎಂದು ಒಂದೆಡೆ ಅವರು ಹೇಳಿದ್ದಾರೆ. ಜೊತೆಯಲ್ಲಿ ''ಇಂಗ್ಲಿಷ್ ಸಾಹಿತ್ಯವನ್ನನುಕರಿಸದೆ ಅದರ ಸತ್ವದಂಥ ಸತ್ವವನ್ನು ಕನ್ನಡ ಸಾಹಿತ್ಯಕ್ಕೆ ತಂದುಕೊಡಬೇಕು. ಗಗನದಲ್ಲಿ ವಿಹರಿಸುತ್ತಿರುವ ಸಾಹಿತ್ಯ ಭದ್ರವಾದ ಬುನಾದಿಯ ಮೇಲೆ ಇಹಲೋಕದಲ್ಲಿಯೂ ನಿಲ್ಲಬೇಕು'' ಎಂಬ ಪಣ ಅವರದಾಗಿತ್ತು. ಅವರ ಆಸ್ಥೆ ಸಾಹಿತ್ಯವೊಂದಕ್ಕೆ ಮೀಸಲಾಗಿರಲಿಲ್ಲ. ಇಂಗ್ಲಿಷಿನಲ್ಲಿ ಹಾಗೂ ಇತರ ಭಾರತೀಯ ಭಾಷೆಗಳಲ್ಲಿಯ ಸಾಹಿತ್ಯೇತರ ವಿಷಯಗಳ ಅನೇಕ ಗ್ರಂಥಗಳನ್ನು ಅವರು ತಿರುವಿ ಹಾಕಿದರು. ಸ್ವಾಮಿ ವಿವೇಕಾನಂದರ ವೀರವಾಣಿಯಿಂದ ಸ್ಫೂರ್ತಿ ಪಡೆದ ಅ.ನ.ಕೃ. ತಮ್ಮ ಅವ್ಯಾಹತವಾದ ಲೇಖನಿಯಿಂದಲೂ ವಾಗ್ವೈಖರಿಯಿಂದಲೂ ಜನತೆಯನ್ನು ಬಡಿದೆಬ್ಬಿಸಿ ಗುರಿಯ ಕಡೆಗೆ ಮುನ್ನಡೆಸಲು ಅಣಿಯಾದರು. ಕನ್ನಡದಲ್ಲಿ ಬರೆಯವುದು ಒಂದು ರೀತಿ ಅಗೌರವ ಎಂಬ ಭಾವನೆ ಹರಡಿದ್ದ ಕಾಲ ಹಾಗೂ ಕನ್ನಡಿಗರಲ್ಲಿ ಓದುವ ಹವ್ಯಾಸ ಬೆಳೆದಿರದಿದ್ದ ಕಾಲದಲ್ಲಿ ಅವರು ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದರು. ತಮ್ಮ ವಿಚಾರಗಳಲ್ಲಿಯೇ ಆಸಕ್ತರಾದ ಸಂಪ್ರದಾಯವಾದಿಗಳ ರೂಢಿಬದ್ಧ ಶೃಂಖಲೆಯಿಂದ ಆಧುನಿಕ ಕನ್ನಡ ಸಾಹಿತ್ಯವನ್ನು ಮುಕ್ತಗೊಳಿಸಿ ಮುನ್ನಡೆಸಿದ ಶ್ರೇಯಸ್ಸು ಅ.ನ.ಕೃ. ಅವರಿಗೆ ಸಲ್ಲುತ್ತದೆ. ಕನ್ನಡ ಸಾಹಿತ್ಯ ಶೈಲಿಯನ್ನು ನಿರ್ಮಲವಾಗಿ ಸುಭಗವಾಗಿ ರೂಪುಗೊಳಿಸಿದ ಕೆಲವೇ ಗಣ್ಯ ಲೇಖಕರಲ್ಲಿ ಅವರೊಬ್ಬರು. ಹಿಂದಿನ ಕವಿಗಳ ಮೇಲೆಯೇ ಕೈಯೂರಿ ಹೆಮ್ಮೆ ಪಟ್ಟುಕೊಳ್ಳುತ್ತ ಅರೆನಿದ್ದೆಯಲ್ಲಿದ್ದ ಕನ್ನಡ ಸಾಹಿತ್ಯಾಭಿಮಾನಿಗಳಿಗೆ ತಮ್ಮದೇ ಆದ ಹೊಸ ಗಳಿಕೆಯನ್ನು ಅವರು ಕನ್ನಡಕ್ಕೆ ನೀಡಿದರು.

ಕಾದಂಬರಿ ಸಾರ್ವಭೌಮರೆಂದು ಹೆಸರಾಗಿದ್ದರೂ ಸಣ್ಣಕತೆ, ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ಕಲಾವಿವೇಚನೆ ಇತ್ಯಾದಿ ಸಕಲ ಪ್ರಕಾರಗಳಲ್ಲಿಯೂ ಕೃಷಿಗೈದು ಸುಮಾರು

ಇನ್ನೂರು ಗ್ರಂಥಗಳನ್ನು ಅವರು ಕನ್ನಡಕ್ಕೆ ನೀಡಿದ್ದಾರೆ. ಇವುಗಳಲ್ಲಿ ಅರ್ಧಕ್ಕೂ ಮಿಕ್ಕಿ ಕಾದಂಬರಿಗಳೇ ಆಗಿರುವುದು ಅವರ ಕಲೆಯ ಹಾಗೂ ಜೀವನಾನುಭವದ ಸರ್ವತೋಮುಖ ಅಭಿವ್ಯಕ್ತಿಗೆ ಕಾದಂಬರಿಯೇ ಪ್ರಮುಖ ಸಾಧನವಾಗಿದ್ದನ್ನು ಎತ್ತಿ ತೋರಿಸುತ್ತದೆ. ಅ.ನ.ಕೃ. ವ್ಯಕ್ತಿಯೋ ಅಥವಾ ಕಾದಂಬರಿಗಳ ಒಂದು ಕಾರಖಾನೆಯೋ ಎಂದು ಹಲವರು ದಂಗುಬಡಿದದ್ದುಂಟು. ಯಂತ್ರ ಒಂದೇ ಕಾಲಕ್ಕೆ ನಿಯತಗೊಂಡು ಒಂದೇ ಕೆಲಸ ಮಾಡಬಲ್ಲದು. ಆದರೆ ಅ.ನ.ಕೃ. ಏಕಕಾಲಕ್ಕೆ ಸಾಮಾಜಿಕ, ಐತಿಹಾಸಿಕ ವಸ್ತುಗಳನ್ನೊಳಗೊಂಡ ಮೂರು ಕಾದಂಬರಿಗಳನ್ನು ಬರೆದು ಅಚ್ಚಿಗೆ ಕಳಿಸುತ್ತಿದ್ದುದನ್ನು ಅವರ ಮಿತ್ರರನೇಕರು ಬಲ್ಲರು. ಈ ದಿಶೆಯಲ್ಲಿ ಅ.ನ.ಕೃ. ಕನ್ನಡ ಸಾಹಿತ್ಯದಲ್ಲಿಯೇ ಅದ್ವಿತೀಯರು.

ಹಾಯಸ್ಕೂಲಿನಲ್ಲಿ ಓದುತ್ತಿದ್ದಾಗ ನನ್ನ ಮನಸ್ಸನ್ನು ವಿಶೇಷವಾಗಿ ಸೆಳೆದ ಕನ್ನಡ ಕಾದಂಬರಿಗಳಲ್ಲಿ 'ಸಂಧ್ಯಾರಾಗ' ಮತ್ತು 'ಮಂಗಳಸೂತ್ರ' ಪ್ರಮುಖವಾಗಿದ್ದವು. ಆಗ (ಈಗಲೂ) ವಿದ್ಯಾರ್ಥಿಗಳಿಗೆ ಅ.ನ.ಕೃ. ಕೃತಿಗಳೆಂದರೆ ಹುಚ್ಚು. ಅವರ ಯಾವುದೇ ಬರವಣಿಗೆಯಲ್ಲೂ ಮೋಹಕವಾದ ಶೈಲಿ, ಪ್ರಗತಿಪರ ಮನೋಭಾವ, ಖಾರವಾದ ವಾಸ್ತವಿಕ ವಿಮರ್ಶೆ, ಅದಮ್ಯವಾದ ಉತ್ಸಾಹ ಯುವಕರ ಮನಸ್ಸನ್ನು ಆಕರ್ಷಿಸಲು ಇನ್ನೇನು ಬೇಕು? ೧೯೪೪ರಲ್ಲಿ ಮೊಟ್ಟ ಮೊದಲು ನಾನು ಅವರ ಭಾಷಣವನ್ನು ಧಾರವಾಡದಲ್ಲಿ ಕೇಳಿದ್ದು. ವಿದ್ಯಾರ್ಥಿಗಳಿಂದ ಕಿಕ್ಕಿರಿದ ಸಭೆಯಲ್ಲಿ ನಿಲ್ಲಲು ಹೇಗೊ ಜಾಗ ಮಾಡಿಕೊಂಡು ಆ ವ್ಯಕ್ತಿಯನ್ನು ಕಂಡದ್ದು. ಬಿಳಿಯ ಖಾದಿಬಟ್ಟೆ, ಷೇರವಾನಿ, ಪಾಯಿಜಾಮ, ತಲೆಯ ಮೇಲೆ ಟೊಪ್ಪಿಗೆಯೂ ಇತ್ತೆಂದು ತೋರುತ್ತದೆ. ಕನ್ನಡ ಸಾಹಿತ್ಯ–ಕಲೆ–ಸಂಸ್ಕೃತಿಯ ಬಗ್ಗೆ ನಿರರ್ಗಳವಾಗಿ (ನಡುನಡುವೆ ನೀರೂ ವೆಗ್ಗಳವಾಗಿ) ಮೂರು ಗಂಟೆಗಳ ಕಾಲ ಅಂದು ಅವರು ಮಾತನಾಡಿದುದು, ದೇಶ ವಿದೇಶಗಳ ನೂರಾರು ಸಾಹಿತಿ, ಕಲಾವಿದರ ಹೆಸರುಗಳನ್ನೂ ಅರಳು ಹುರಿದಂತೆ ಉಚ್ಚರಿಸುತ್ತಿದ್ದುದು ಇಂದಿಗೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ಭಾಷಣ ಮಾಡುತ್ತಿದ್ದಾಗಿನ ಹೊರತು ಉಳಿದೆಲ್ಲ ಹೊತ್ತಿನಲ್ಲಿ ಸಿಗರೇಟು ಅವರ ಕೈಯಲ್ಲಿ ಜೀವಂತವಾಗಿರುತ್ತಿತ್ತು. ಅದೇ ಆಗ ಪ್ರಕಟವಾದ ಅವರ 'ನನ್ನನ್ನು ನಾನೇ ಕಂಡೆ' ಎಂಬ ಸ್ವಯಂಸಂದರ್ಶನವನ್ನೊಳಗೊಂಡ ಪುಸ್ತಕದಲ್ಲಿ ಸಾಹಿತ್ಯಸೇವೆ, ಹಿಂದೀ ಸಮಸ್ಯೆ, ಪಾಕಿಸ್ತಾನ, ಕೋಮುವಾರು ಭೂತ, ಪ್ರಗತಿಶೀಲ ಸಾಹಿತ್ಯ, ವಿದ್ಯಾರ್ಥಿಗಳು, ಕನ್ನಡ ಮಾಧ್ಯಮ, 'ಸಾಹಿತ್ಯ ರತ್ನ' ಮುಂತಾದವುಗಳ ಬಗ್ಗೆ ಹರಿಯಿಸಿದ ವಿಚಾರಧಾರೆಯ ಸೆಳವಿನಲ್ಲಿ ಸಿಕ್ಕಿ ವಿದ್ಯಾರ್ಥಿಗಳಿಗೆ ಅ.ನ.ಕೃ. 'ಹೀರೊ' ಆಗಿ ಪರಿಣಮಿಸಿದ್ದಲ್ಲಿ ಆಶ್ಚರ್ಯವೇನು? ಅವರ ಭಾಷಣವೆಂದರೆ ಆಣೆಕಲ್ಲಿನ ಸುರಿಮಳೆ, ನೀರು ಕೂಡಲೇ ರಭಸದಿಂದ ಹರಿದು ಹೋಗುತ್ತದೆ. ನೆಲ ಸಾಕಷ್ಟು ಹಸಿ ಹಿಡಿಯದೆ ಹೋಗಬಹುದು. ಆದರೂ ಏನಂತೆ? ಕೊಳೆ ಕಸವಾದರೂ ಕೊಚ್ಚಿಕೊಂಡು ಹೋಗುತ್ತದಲ್ಲ.

೧೯೫೫ರಲ್ಲಿ ಕಾರಂತರ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ಸಾಹಿತ್ಯ ಸಮ್ಮೇಳನಕ್ಕೆ ಹೋದಾಗ ಅಲ್ಲಿ ಅ.ನ.ಕೃ. ಅವರನ್ನು ಕಾಣಲಿಲ್ಲ. ಅಲ್ಲಿಂದ ತಿರುಗಿ ಬರುವಾಗ ನಾನೂ ಗೆಳೆಯ ಬಸವರಾಜ ಕಟ್ಟೀಮನಿಯವರೂ ಬೆಂಗಳೂರಿಗೆ ಹೋಗಿ 'ಅನ್ನಪೂರ್ಣ'ದಲ್ಲಿ ಅ.ನ.ಕೃ. ಅವರನ್ನು ಕಂಡೆವು. ಆಗ ಅವರ ಆರೋಗ್ಯ ಅಷ್ಟೊಂದು ಚೆನ್ನಾಗಿರದಿದ್ದರೂ ಸಾಕಷ್ಟು ಉತ್ಸಾಹದಿಂದಲೇ ನಮ್ಮೊಡನೆ ಮಾತನಾಡಿದರು. ನಾವು ಅಲ್ಲಿಂದ ಹೊರಡುತ್ತಿರುವಂತೆಯೇ ಕಟ್ಟೀಮನಿ ಅ.ನ.ಕೃ. ಅವರನ್ನು 'ಸಾಹಿತ್ಯ ಸಮ್ಮೇಳನಕ್ಕೆ ನೀವು ಅಧ್ಯಕ್ಷರಾಗುವುದು ಯಾವಾಗ?' ಎಂದು ಕೊಂಚ ಭಾವನಾವಶರಾಗಿಯೆ ಕೇಳಿದರು. ಆಗ ಅ.ನ.ಕೃ. ತಮಗೆ ಸಹಜವಾದ ಮುಗುಳ್ನಗೆ ಬೀರಿ, ಆತ್ಮೀಯತೆಯಿಂದ ಅವರ ಹೆಗಲ ಮೇಲೆ ಕೈ ಹಾಕಿ, 'ನೀನು ಅಧ್ಯಕ್ಷನಾಗುವುದನ್ನು ನಾನು ಕಾಣಬೇಕು'' ಎಂದು ನುಡಿದರು. ಹಿಂದೆ ಅ.ನ.ಕೃ. ಅವರ ಪ್ರಗತಿಶೀಲ ಸಾಹಿತ್ಯದ ಆಂದೋಲನಕ್ಕೆ ಕಟ್ಟೀಮನಿ ಸಂಪಾದಕರಾಗಿದ್ದ 'ಉಷಾ' ಮುಖಪತ್ರಿಕೆಯಾದಂತಿತ್ತು ಕೆಲವು ಕಾಲ. ಆದರೆ ಮುಂದೆ ಕೆಲವು ಕಾರಣಗಳಿಂದ ಅವರವರಲ್ಲಿ ಭಿನ್ನಾಭಿಪ್ರಾಯವುಂಟಾಗಿ ತೀಕ್ಷ್ಣವಾದ ಲೆಕ್ಕಣಿಕೆಯ ಕಾಳಗ ನಡೆದದ್ದೂ ಉಂಟು. ಆದರೂ ಅದು ವೈಯಕ್ತಿಕ ದ್ವೇಷಕ್ಕೆ ಎಡೆಗೊಟ್ಟಿರಲಿಲ್ಲವೆಂಬುದು ಅ.ನ.ಕೃ. ಅವರ ಔದಾರ್ಯಕ್ಕೆ ಹಿರಿಯ ಸಾಕ್ಷಿ. ಅವರದು ನಿಜವಾಗಿಯೂ ದೊಡ್ಡ ಮನಸ್ಸು, ಅನೇಕ ಹಿರಿಯ ಸಾಹಿತಿಗಳೆಂಬವರಲ್ಲಿ ಕಂಡುಬರುವ ಸಣ್ಣತನ, ಸಂಕುಚಿತ ಮನೋಭಾವನೆಗಳು ಅ.ನ.ಕೃ. ಅವರ ಸಮೀಪ ಕೂಡ ಸುಳಿಯಲಿಲ್ಲ. ತರುಣ ಲೇಖಕರ ಬೆನ್ನು ತಟ್ಟಿ ಪ್ರೋತ್ಸಾಹ ನೀಡುವುದರಲ್ಲಿ ಅವರು ಮೇಲ್ಪಂಕ್ತಿಯಾಗಿದ್ದರು.

ಅ.ನ.ಕೃ. ಅವರನ್ನು ಒಂದೆರಡು ವರ್ಷಗಳ ನಂತರ ಮತ್ತೆ ಧಾರವಾಡದಲ್ಲಿ ಕಂಡೆ. ಅದೇ ನಿಲುವು, ಅದೇ ವೇಷಭೂಷಣ, ಅದೇ ಆತ್ಮೀಯವಾದ ಸಂಭಾಷಣೆ. ಅವರಿಗೆ ಆಗ ೫೭ ವರ್ಷ ಎಂದರೆ ನಂಬುವಂತಿರಲಿಲ್ಲ. ಅವರು ಜನಿಸಿದ್ದು ೧೯೦೮ರಲ್ಲಿ, ವೈಶಾಖ ಶುದ್ಧ ನವಮಿಯ ದಿನ. ಅವರ ಮುಂಬರುವ ಗ್ರಂಥಗಳ ಪಟ್ಟಿಯಲ್ಲಿ 'ವೈಶಾಖ ಶುದ್ಧ ನವಮಿ' ಎಂಬ ಹೆಸರನ್ನಿಟ್ಟುಕೊಂಡ ಆತ್ಮಚರಿತ್ರೆಯೂ ಒಂದಾಗಿತ್ತು. ಉತ್ತರ ಕನ್ನಡ ಜಿಲ್ಲೆಯನ್ನು ಸುತ್ತಿಬಂದ ಪ್ರವಾಸದ ಆಯಾಸದಿಂದ ಅ.ನ.ಕೃ. ಅವರು ತುಂಬ ದಣಿದಿದ್ದರು. ಆದರೂ ಸತ್ಕಾರಕ್ಕೆ ಜುಲುಮೆಯಿಂದ ಒಪ್ಪಿಕೊಂಡು ವಿದ್ಯಾವರ್ಧಕ ಸಂಘದಲ್ಲಿ–ಧ್ವನಿ ಒಡೆದು ಹೋಗಿದ್ದರೂ ಸ್ವಲ್ಪ ಹೊತ್ತು ಮಾತನಾಡಿದರು. ಮಾತಿನಲ್ಲಿ ಅದೇ ಮೊದಲಿನ ತೀಕ್ಷ್ಣತೆ, ಅದೇ ಖಂಡಿತವಾದಿತ್ವ. ''ಇಂದು ಎಲ್ಲೆಲ್ಲೂ ರಾಜಕಾರಣಿಗಳ ಹಾವಳಿಯೆ ಆಗಿದೆ. ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಯಲ್ಲೂ ಅವರು ದಾಳಿ ಮಾಡಿದರೆ ಅವರನ್ನು ಮೊದಲು ಒದ್ದು ಹೊರಗೆ ಹಾಕಬೇಕು.'' ಕನ್ನಡದ ಬಗ್ಗೆ ಅದೇ ಅಭಿಮಾನ: ''ಅಮೇರಿಕೆಯಲ್ಲೊ ಅಥವಾ ಬೇರೆಲ್ಲಿಯೊ ನನಗೆ ಮರಣವೊದಗಿದರೂ ಕನ್ನಡ ನೆಲದಲ್ಲಿಯೇ ಬಂದು ಜೀವ ಬಿಟ್ಟೇನು.'' ಭಾಷಣ ಮೊದಲಿನಂತೆಯೇ ಖಾರವಾಗಿಯೇ ಇದ್ದರೂ ಅವರ ಮನಸ್ಸು ಹಣ್ಣಾಗಿರುವುದನ್ನು ನಾನು ಗುರುತಿಸಿದೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅ.ನ.ಕೃ. ಅವರದು ಸಮೃದ್ಧವಾದ ಬೆಳೆ. ದಿನಕ್ಕೆ ಹನ್ನೆರಡು ತಾಸಿಗಿಂತಲೂ ಹೆಚ್ಚು ಕಾಲವನ್ನು ಅವರು ಬರವಣಿಗೆಯಲ್ಲಿ ಕಳೆಯುತ್ತಿದ್ದರಂತೆ. ಅವರ ಬರೆವಣಿಗೆಯ ಗತಿಯೂ ಶೀಘ್ರವಾಗಿದ್ದು ಅವರ ಎಷ್ಟೋ ಕಾದಂಬರಿಗಳು ಹದಿನೈದು ದಿನಗಳೊಳಗೇ ಬರೆದು ಮುಗಿಸಿದವುಗಳಾಗಿವೆ. ಚತುರ ಸಂಭಾಷಣಾ ಶೈಲಿ ಅವುಗಳ ಮೊದಲ ಆಕರ್ಷಣೆ. ಆ ಕಲೆ ಅವರಿಗೆ ನೀರು ಕುಡಿದ ಹಾಗೆ. ಎರಡನೆಯದಾಗಿ, ನಿತ್ಯ ಜೀವನದ ಘಟನೆಗಳನ್ನೇ ಘರ್ಷಣೆಯನ್ನೇ ಕಥಾವಸ್ತುವಿಗೆ ಅರ್ಥವತ್ತಾಗಿ ಬಳಸಿದ ರೀತಿ, ಮೂರನೆಯದಾಗಿ ಕತೆಯ ಶೀಘ್ರಗತಿ. 'ಸಂಧ್ಯಾರಾಗ' ದಿಂದ 'ಸಂಜೆಗತ್ತಲು' ವರೆಗೆ 'ಮಂಗಳಸೂತ್ರ' ದಿಂದ 'ಕಣ್ಣೀರಿ'ನವರಿಗೆ ಈ ಮೂರು ಅಂಶಗಳು ಏಕಪ್ರಕಾರವಾಗಿ ಮೂಡಿವೆ. ಅದರ ಜೊತೆಗೆ ಕಾದಂಬರಿ ಸತ್ವವೂ ಪೋಷಕವಾಗಿ, ಕೆಲವೆಡೆ ಭಾಷೆ, ಸನ್ನಿವೇಶಗಳಲ್ಲಿಯ ನಾಟಕೀಯತೆ ಕಡಿಮೆಯಾಗಿ, ಮನಸ್ಸಿನ ಪದರುಗಳನ್ನೆಲ್ಲ ಅದು ಮುಟ್ಟಿಬರುವಂತಾಗಿದ್ದರೆ ಬಹುಶಃ ಈ ದಿಶೆಯಲ್ಲಿ ಅವರ ಕೈ ಹಿಡಿದವರೇ ಇರುತ್ತಿರಲಿಲ್ಲವೇನೋ. ಪ್ರಾರಂಭದಲ್ಲಿಯೇ 'ಸಂಧ್ಯಾರಾಗ ಪ್ರಶಸ್ತಿ' ಪಡೆದ ಅ.ನ.ಕೃ. ಅವರ ಮುಂದಿನ ಎಲ್ಲ ಕಾದಂಬರಿಗಳೂ ಒಂದೇ ಉನ್ನತಮಟ್ಟದವಾಗಿರಲಿಲ್ಲ. ಸಾಹಿತ್ಯವನ್ನೇ ವ್ಯವಸಾಯವನ್ನಾಗಿ ಮಾಡಿಕೊಂಡಾಗ ಹಾಗಾಗುವುದೂ ಸಹಜ. ಆದರೆ ಅಂಥ ಕಡಿಮೆ ತರಗತಿಯ ಕಾದಂಬರಿಯಲ್ಲೂ ಅವರು ಮಾನವ ಹಿತನಿಷ್ಠೆಯನ್ನೂ, ಮಾನವೀಯ ಮೌಲ್ಯಗಳನ್ನೂ ಎತ್ತಿಹಿಡಿದಿರುವುದನ್ನು ನಾವು ಕಾಣಬಹುದು. ಅವರ ಇತ್ತೀಚಿನ ಸಾಮಾಜಿಕ ಕಾದಂಬರಿಗಳಲ್ಲಿಯ ವಸ್ತು–ಪಾತ್ರ–ಚಿತ್ರಣಗಳು 'ತಿರುಗಾಮುರಗ ಹರಗೋಣ' ಎಂಬಂತಿದ್ದರೂ ಐತಿಹಾಸಿಕ ವಸ್ತುವನ್ನು ಅಳವಡಿಸಿಕೊಂಡು ಅರಳಿರುವ ಕೃತಿಗಳಲ್ಲಿ ಅವರ ಲೇಖನಿಗೆ ಕೆಲಮಟ್ಟಿಗೆ ಗರಿಮೂಡಿದೆಯೆಂದೇ ಹೇಳಬಹುದು. ಅವರು ಬರೆಬರೆದಂತೆ ಅವರ ಕೃತಿಗಳ ಬಗ್ಗೆ ವಾದವಿವಾದಗಳೂ ನಡೆಯುತ್ತಿದ್ದವು. ಆದರೂ ಅವರು ಬರೆಯುತ್ತಲೇ ಇದ್ದರು. ಅಂಥ ಜಿಗುಟುತನ ಅವರ ಸ್ವಭಾವದಲ್ಲಿಯೇ ಮೈಗೂಡಿತ್ತು. ಹೀಗೆ ಕನ್ನಡದಲ್ಲಿ 'ಕಾದಂಬರಿ ಸಾರ್ವಭೌಮ' ಪದವಿಯನ್ನು ಪಡೆಯಲು ಕಾರಣರಾದ ನಾಲ್ಕೈದು ಜನ ಕಾದಂಬರಿಕಾರರಲ್ಲಿ ಅ.ನ.ಕೃ. ಸ್ಥಾನ ಹಿರಿಯದು. ''ವಿಸ್ತಾರದಲ್ಲಿ, ವೈವಿಧ್ಯದಲ್ಲಿ, ಜನಪ್ರಿಯತೆಯಲ್ಲಿ ಈ ಸಾಹಿತ್ಯ ಪ್ರಕಾರ ಕಳೆದ ಮೂರು ದಶಕಗಳಲ್ಲಿ ಸಾಧಿಸಿದ ಪ್ರಗತಿ ಆಶ್ಚರ್ಯಕರವಾದದ್ದು, ಇಂಥ ಆಶ್ಚರ್ಯಕರವಾದ ಪ್ರಗತಿಯನ್ನು ಸಾಧ್ಯವಾಗಿಸಿದವರಲ್ಲಿ ಮೊದಲ ಸ್ಥಾನ ಕೃಷ್ಣರಾಯರದು'' ಎಂದಿರುವ ಪ್ರೊ. ವಿ. ಎಂ. ಇನಾಮದಾರರ ಮಾತು ಸತ್ಯವಾದದ್ದು.

ಕನ್ನಡ 'ಸಣ್ಣಕತೆ'ಗೆ ನೀರೆರೆದು ಅದಕ್ಕೆ ದೊಡ್ಡ ಬೆಲೆಯನ್ನು ತಂದುಕೊಟ್ಟ ಮೊದಲಿಗರಲ್ಲಿ ಅ.ನ.ಕೃ. ಒಬ್ಬರು. 'ಕಥಾಂಜಲಿ', 'ವಿಶ್ವವಾಣಿ'ಗಳ ಸಂಪಾದಕರಾಗಿಯೂ ಅವರು 'ಸಣ್ಣಕತೆ'ಯನ್ನು ಪೋಷಿಸಿದರು. ಅಂದು ಅವರು ಸಂಪಾದಿಸಿಕೊಟ್ಟ 'ಕಾಮನಬಿಲ್ಲು' (ಭಾಗ೧–೨) ಕನ್ನಡ ಕಥಾಸಂಕಲನಗಳಲ್ಲಿ ಇಂದಿಗೂ ತನ್ನ ಬಣ್ಣವನ್ನು ಮೋಹಕವಾಗಿ ಉಳಿಸಿಕೊಂಡಿದೆ. ಕಾದಂಬರಿ ಪ್ರವಾಹದ ಸೆಳವಿನಲ್ಲಿಯೇ

ಅವರು ಇರುತ್ತಿದ್ದರೂ ಆಗಾಗ ಸಣ್ಣಕತೆಯ ಸುಂದರ ನಡುಗಡ್ಡೆಯಲ್ಲಿ ಅವರು ದಣಿವಾರಿಸಿಕೊಳ್ಳುತ್ತಿದ್ದರು. ಸಣ್ಣಕತೆಯ ವಸ್ತುವಿನ ವಿಸ್ತಾರ–ವೈವಿಧ್ಯಗಳನ್ನು ಹೆಚ್ಚಿಸುವುದರಲ್ಲಿ ಅವರ ಹಿರಿಮೆ ಹೇಳಿಕೊಳ್ಳುವಂಥದು. ನಮ್ಮ ನಾಡಿನ 'ಕುಲರಸಿಕರು', 'ಕರ್ನಾಟಕ ಕಲಾವಿದರು' ವ್ಯಕ್ತಿಚಿತ್ರಗಳನ್ನೂ, ಅಲ್ಲಮಪ್ರಭು, ಕೈಲಾಸಂ, ಕಬೀರ, ವಿವೇಕಾನಂದ ಮೊದಲಾದ ಮಹಾನುಭಾವರ ಜೀವನ ಚರಿತ್ರೆಗಳನ್ನೂ ಅವರು ಅಭಿಮಾನದಿಂದಲೂ ಆದರದಿಂದಲೂ ಚಿತ್ರಿಸಿದ್ದಾರೆ. ನಾಟಕಗಳಲ್ಲಿಯೂ ಮೊದಲಿನಿಂದಲೂ ಆಧುನಿಕ ದೃಷ್ಟಿಯನ್ನು ಮೆರೆದಿದ್ದಾರೆ.

ಈಗ್ಗೆ ಮೂರು ದಶಕಗಳ ಹಿಂದೆ ಕನ್ನಡದಲ್ಲಿ ಬೀಸಿದ ಪ್ರಗತಿಶೀಲ ಸಾಹಿತ್ಯದ ಆಂದೋಲನಕ್ಕೆ ಅ.ನ.ಕೃ. ಅಧ್ವರ್ಯುಗಳಾಗಿ ನಿಂತರು. ಆಂದೋಲನ ಅಲ್ಪಾಯುಷಿಯಾಗಿ ಪರಿಣಮಿಸಿದರೂ ಅಂದಿನ ತರುಣ ಲೇಖಕರಲ್ಲಿ ಅದು ಹೊಸ ದೃಷ್ಟಿಕೋನವನ್ನು ಮೂಡಿಸಿತೆಂದು ಧಾರಾಳವಾಗಿ ಹೇಳಬಹುದು. ಪ್ರಗತಿಶೀಲತೆ ಪ್ರಯೋಗಶೀಲತೆಗೂ ಕೆಲಮಟ್ಟಿಗೆ ಎಡೆಮಾಡಿಕೊಟ್ಟಿತು. 'ಪ್ರಗತಿಶೀಲ ಸಾಹಿತ್ಯ', 'ಮ್ಯಾಕ್ಸಿಂಗಾರ್ಕಿ', 'ಭಾರತೀಯ ಕಥಾ ಸಾಹಿತ್ಯ', ಇವು ಅ.ನ.ಕೃ. ಸಂಪಾದಿಸಿ ನೀಡಿದ ಆ ಕಾಲದ ಮಹತ್ವದ ಕೊಡುಗೆಗಳು. ಕನ್ನಡ ಸಾಹಿತ್ಯದ ವಿಕಾಸಕ್ಕೆ ಪ್ರಗತಿಶೀಲ ಸಾಹಿತ್ಯದ ಆಂದೋಲನದಿಂದ ಸಾಕಷ್ಟು ಸಹಾಯವಾಯಿತೆಂದೇ ಅ.ನ.ಕೃ. ಕೊನೆಯವರೆಗೂ ನಂಬಿದ್ದರು. ಅವರ ಕೃತಿಗಳಲ್ಲಿ ಮುಖ್ಯವಾಗಿ ಕಾದಂಬರಿಗಳ ಬಗ್ಗೆ ವಿಮರ್ಶಕರಿಂದ ಅಶ್ಲೀಲತೆಯ ಆರೋಪವನ್ನು ಅವರು ಆಗಾಗ ಎದುರಿಸಬೇಕಾಯಿತು. 'ಸಾಹಿತ್ಯ ಮತ್ತು ಕಾಮ ಪ್ರಚೋದನೆ' ಗ್ರಂಥದಲ್ಲಿ ಅದಕ್ಕೆ ಉತ್ತರ ನೀಡಲು ತಮ್ಮ ವಾದವನ್ನು ಎತ್ತಿಹಿಡಿಯಲು ಅವರು ಪ್ರಯತ್ನಿಸಿದ್ದಾರೆ. ಎಷ್ಟೋ ಪಿಎಚ್.ಡಿ. ಪ್ರಬಂಧಗಳಿಗಾಗುವಷ್ಟು ವಿಷಯ ಸಂಗ್ರಹವನ್ನು ಅದರಲ್ಲಿ ಕೊಟ್ಟಿರುವುದಾಗಿಯೂ ಹೇಳಿಕೊಂಡಿದ್ದಾರೆ. ಈ ಬಗ್ಗೆ ತಮ್ಮ ಪ್ರತಿವಾದವನ್ನು ಮಂಡಿಸುತ್ತ ಶ್ರೀ ಕೆ. ಡಿ. ಕುರ್ತಕೋಟಿಯವರು 'ಪ್ರಣಯದ ಬಗ್ಗೆ ಮುಚ್ಚುಮರೆಯಿಂದ ಮಾತಾಡುವುದು ಸಭ್ಯ, ಬಿಚ್ಚಾಗಿ ಹೇಳುವುದು ಅಶ್ಲೀಲ ಎಂಬ ವಾದವನ್ನು ತಳಹದಿಯಾಗಿಟ್ಟುಕೊಂಡು ಅವರು ಅದಕ್ಕೆ ಉತ್ತರ ಕೊಡುತ್ತಾರೆ. ಆದರೆ ಯಾವುದೇ ರೀತಿಯ ಭಾವಸಂಕರ ಅಶ್ಲೀಲವಾಗಿದೆಯೆಂಬುದನ್ನು ಮರೆಯಲಾಗದು. ಭಾವನೆಗಳ ಅಗ್ಗದ ಬಳಕೆ ಅಶ್ಲೀಲವಲ್ಲದೆ ಮತ್ತೇನು?'' ಎಂದು ಕೇಳಿದ್ದಾರೆ. ಇತ್ತೀಚೆಗೆ ಪ್ರಕಟವಾದ 'ಭಾರತೀಯ ಕಲಾದರ್ಶನ' ಹಾಗೂ 'ಭಾರತೀಯ ಸಂಸ್ಕೃತಿ ದರ್ಶನ' ಎಂಬೆರಡು ಮಹತ್ವದ ಹೆಬ್ಬೊತ್ತಿಗೆಗಳು ಅ.ನ.ಕೃ. ಅವರ ಗ್ರಂಥ ಸಂಪಾದನಾ ಕಾರ್ಯದ ಉತ್ತಮಿಕೆಯನ್ನು ಎತ್ತಿತೋರಿಸುತ್ತಿವೆ.

ಬಾಲ್ಯದಲ್ಲಿ ಸ್ವಾಮಿ ವಿವೇಕಾನಂದರ ಜೀವನದಿಂದ ಸ್ಫೂರ್ತಿ ಪಡೆದ ಅ.ನ.ಕೃ. ಅವರಿಗೆ ವೀರಶೈವ ಸಾಹಿತ್ಯ ಸಂಸ್ಕೃತಿಗಳಲ್ಲಿ ಆಸ್ಥೆ ಹುಟ್ಟಿದುದು ಅಚ್ಚರಿಯ ಮಾತಲ್ಲ. ಆ ಸಾಹಿತ್ಯದಲ್ಲಿ ಕಂಡುಬರುವ 'ಕನ್ನಡತನ'ವನ್ನೂ ಪ್ರಗತಿಪರ ಧೋರಣೆಯನ್ನೂ. ಅವರು

ತಮ್ಮದನ್ನಾಗಿ ಮಾಡಿಕೊಂಡರು. 'ಬಸವಣ್ಣನವರ ಅಮೃತವಾಣಿ', 'ವೀರಶೈವ ಸಾಹಿತ್ಯ ಸಂಸ್ಕೃತಿ' ಗ್ರಂಥಗಳು ಅವರ ಶ್ರದ್ಧೆಯ ಫಲಗಳು. ಸಮಕಾಲೀನ ಸಾಹಿತ್ಯ ವಿಮರ್ಶೆಯನ್ನು ಇವರು ತಮ್ಮ 'ಸಾಹಿತ್ಯ ಮತ್ತು ಜೀವನ', 'ಸಾಹಿತ್ಯ ಮತ್ತು ಯುಗಧರ್ಮ', 'ಸಾಹಿತ್ಯ ಸಮಾರಾಧನೆ', 'ನಾಟಕ ಕಲೆ' ಇತ್ಯಾದಿ ಗ್ರಂಥಗಳಲ್ಲಿ ಕೊಡುತ್ತ ಬಂದಿದ್ದಾರೆ. ಇಲ್ಲಿಯೂ ಚರ್ಚೆಗೆ ಅವಕಾಶವಿಲ್ಲದಿಲ್ಲ. 'ಕಾವ್ಯ ಬರೆಯುವುದು ಸುಲಭ.... ಗದ್ಯ ಕೆಟ್ಟರೆ ಪದ್ಯವಾಗುತ್ತದೆ...'' ಇತ್ಯಾದಿ ಮಾತುಗಳು ಇದಕ್ಕೆ ಉದಾಹರಣೆಯಾಗಿದ್ದರೂ ಅವರು ಕವಿ–ಕಾವ್ಯ ದ್ವೇಷಿಗಳಲ್ಲ. ಉಮರನ ರುಬಾಯಿಯಾತನ್ನು ತಾವೂ ಪದ್ಯದಲ್ಲಿ ಅನುವಾದಿಸಲು ಹೆಣಗಿರುವುದನ್ನು ನಾವು ಕಂಡಿದ್ದೇವೆ. ಕನ್ನಡದಲ್ಲಿ 'ಪ್ರಣಯಗೀತೆ'ಗಳ ಪ್ರಥಮ ಸಂಕಲನವನ್ನು ಸಂಪಾದಿಸಿಕೊಟ್ಟವರು ಅವರು ಎಂಬುದು ನಮ್ಮಲ್ಲಿ ಎಷ್ಟು ಜನರಿಗೆ ಗೊತ್ತಿದೆ? ಅವರೇ ಸಂಪಾದಿಸಿರುವ 'ರಸ ಋಷಿ' ಪ್ರಗತಿಶೀಲ ಕವನಗಳ ಒಂದು ಒಳ್ಳೆಯ ಕವನ ಸಂಕಲನ. ಶ್ರೀಗೋಕಾರು ಅದನ್ನು ಕುರಿತು ಹೀಗೆ ಬರೆದಿದ್ದಾರೆ.

"The 'progressive' movement of the thirties gathered strength about this time and left a strong impress on the literature of this period. It also became a pivotal point for the rise of the younger literary generation. 'Rasarishi' was a collection of lyrics which testified to their new awareness." (Contermporary Indian Literature', page : 101.)

ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಧಕ್ಕೆಯೊದಗುವ ಪ್ರಸಂಗಗಳು ಬಂದಾಗಲೆಲ್ಲ ಅ.ನ.ಕೃ. ಧೀರತನದಿಂದ ಮುಂಚೂಣಿಯಲ್ಲಿ ನಿಂತು ತಮ್ಮ ಕತ್ತಿಯನ್ನು ಝಳಪಿಸಿದ್ದಾರೆ. ಕನ್ನಡಕ್ಕೆ ಅಪಚಾರ, ಅವಮಾನ ಯಾರಿಂದಲೇ ಆದರೂ ಅದನ್ನವರು ಸಹಿಸರು. ಹಿಂದೆ ಅವರು 'ಕನ್ನಡನುಡಿ', 'ಸಾಹಿತ್ಯ ಪರಿಷತ್ಪತ್ರಿಕೆ'ಗಳ ಸಂಪಾದಕರಾಗಿದ್ದಾಗ ಹಿಂದೀ ಭಾಷೆಯ ದಾಳಿಯನ್ನು ಪ್ರತಿಭಟಿಸಿ ನಿಂತ ಪ್ರಸಂಗವನ್ನು ನಾವಿಲ್ಲಿ ನೆನೆದುಕೊಳ್ಳಬಹುದು. ನಾಡಿನ ಏಕೀಕರಣಕ್ಕಾಗಿ ಅವರು ಗೆಳೆಯರೊಡನೆ ಅಖಂಡ ಕರ್ನಾಟಕವನ್ನೆಲ್ಲ ಸುತ್ತಾಡಿ ಜನತೆಯಲ್ಲಿ ಜಾಗೃತಿಯನ್ನುಂಟುಮಾಡಿದರು. 'ಅಖಂಡ ಕರ್ನಾಟಕ', 'ಕನ್ನಡದ ದಾರಿ', 'ಕನ್ನಡದ ಹಿತಚಿಂತನೆ' ಮುಂತಾದ ಗ್ರಂಥಗಳು ಅವರ ಕನ್ನಡದ ಹೋರಾಟವನ್ನು ಚಿತ್ರಿಸುತ್ತವೆ. 'ಕನ್ನಡ ನಾಡು ಒಂದಾದ ಮೇಲೂ ಕನ್ನಡ ಜನರ ಮನಸ್ಸನ್ನು ಒಡೆಯುವ ಪ್ರಯತ್ನ ಪುನಃ ನಡೆದರೆ ಆಶ್ಚರ್ಯವೇನಿಲ್ಲ. ಮೈಸೂರು ಬೇರೆ, ಉತ್ತರ ಕರ್ನಾಟಕ ಬೇರೆ ಎನ್ನುವಂಥ ಚಳುವಳಿ ಮತ್ತೆ ನಡೆದರೆ ಸೋಜಿಗವೇನಲ್ಲ'' ಎಂದು ಅವರು ಇತ್ತೀಚೆಗೆ ತಮ್ಮ ಭಾಷಣಗಳಲ್ಲಿ ಎಚ್ಚರಿಕೆ ಕೊಡುತ್ತಲೇ ಇದ್ದರು. ಅ.ನ.ಕೃ. ಅವರ ಮಾತಿನಲ್ಲಿ, ಬರೆಹದಲ್ಲಿ, ಸಾಹಿತ್ಯ ಸೃಷ್ಟಿಯಲ್ಲಿ ಒಮ್ಮೊಮ್ಮೆ ಪರಸ್ಪರ ವಿರೋಧಾಭಾಸವನ್ನು ನಾವು ಕಂಡಿರಬಹುದು. ಆದರೆ ಕನ್ನಡದ ಬಗೆಗಿರುವ ಅವರ ಅಭಿಮಾನ, ಕೆಚ್ಚು ಯಾವಾಗಲೂ ಒಂದೇ ಬಗೆಯಾಗಿದ್ದಿತು. ಈ ಹುಟ್ಟು ಸೇನಾನಿಯ ಬಗ್ಗೆ ಶ್ರೀ ಜಿ. ಪಿ. ರಾಜರತ್ನಂ ಅವರು ಒಂದೆಡೆ ಬರೆಯುತ್ತ ''ಈ ನಲವತ್ತು ವರ್ಷಗಳ ಕಾಲದಲ್ಲಿ ಅವರು ಎದುರಿಸಬೇಕಾಗಿ ಬಂದಿರುವ

ವಿರೋಧಗಳಿಗೆ ಬೇರಾರಾದರೂ ಸಿಕ್ಕಿದ್ದರೆ ಪುಡಿ ಪುಡಿಯಾಗಿ ಹೋಗುತ್ತಿದ್ದರು. ಹಾಗಾಗಿ ಕೃಷ್ಣರಾಯರ ಕೆಲವು ಮುಖಗಳನ್ನು ಸಹಿಸದೆ ಆಡಿಕೊಳ್ಳುವವರು ಕೂಡ ಈ ಧೀರ ಮುಖವನ್ನು ನಿಸ್ಸಂಕೋಚವಾಗಿ ಮೆಚ್ಚಿಕೊಳ್ಳುತ್ತಾರೆ'' ಎಂದು ಮುಕ್ತಮನಸ್ಸಿನ ಪ್ರಶಂಸೆ ನೀಡಿದ್ದಾರೆ.

'ಅನ್ನಪೂರ್ಣ'ದ ಈ ಅಖಂಡ ಚೈತನ್ಯನಿಧಿ ಇಂದಿಲ್ಲವೆನಿಸಿದರೂ ಅವರು ಪ್ರೀತಿಸಿದ ಈ ನಾಡಿನಲ್ಲಿ, ಜನತೆಯ ಹೃದಯದಲ್ಲಿ ಅ.ನ.ಕೃ. ಹೆಸರು ಚಿರಂತನವಾಗಿ ಪ್ರತಿಧ್ವನಿಗೊಳ್ಳುತ್ತದೆ.

'ಕರ್ನಾಟಕ ಭಾರತಿ'
೧೯೭೨

■■

ಕ್ರಾಂತಿಕಾರಿ ಕಾದಂಬರಿಕಾರ ಬಸವರಾಜ ಕಟ್ಟೀಮನಿ

೧೯೪೬–ಅಂದರೆ ಇಪ್ಪತ್ತೆರಡು ವರ್ಷಗಳ ಹಿಂದಿನ ಮಾತು. 'ಉಷಾ' ಮಾಸಪತ್ರಿಕೆಯ ದೀಪಾವಳಿ ವಿಶೇಷ ಸಂಚಿಕೆಗಾಗಿ ಕಾಯುತ್ತಿದ್ದೆವು. ಅದೇ ಮ್ಯಾಟ್ರಿಕ್ ಮುಗಿಸಿ ಕಾಲೇಜಿಗೆ ಸೇರಿದ ನನಗೂ ನನ್ನ ಗೆಳೆಯರಿಗೂ ಆ ಪತ್ರಿಕೆಯ ಬಗ್ಗೆ ವಿಶೇಷ ಅಭಿಮಾನವುಂಟಾಗಿತ್ತು. ಅದರಲ್ಲಿ ಪ್ರಕಟವಾಗುತ್ತಿದ್ದ ಪ್ರಗತಿಶೀಲ ಕಥೆ–ಲೇಖನಗಳೂ, ನಿರ್ದಾಕ್ಷಿಣ್ಯವಾದ ಟೀಕೆ–ಟಿಪ್ಪಣಿಗಳೂ, ಕೆಚ್ಚಿನ ಸಂಪಾದಕೀಯ ಬರೆವಣಿಗೆಯೂ ನಮ್ಮನ್ನು ಆಕರ್ಷಿಸಿದ್ದವು. ಹಾಗೆಯೇ ಸಂಪಾದಕರ ಬಗ್ಗೆ ಕುತೂಹಲವನ್ನೂ ಕೆರಳಿಸಿದ್ದವು. ಧಾರವಾಡಕ್ಕೆ ಆ ಪತ್ರಿಕೆ ಬಂದ ಒಂದೆರಡು ದಿನಗಳಲ್ಲಿಯೇ ಪ್ರತಿಗಳು ಮಾರಾಟವಾಗಿ ಹೋಗುತ್ತಿದ್ದವು. ದೀಪಾವಳಿ ಸಂಚಿಕೆ ತಡವಾದದ್ದಕ್ಕೆ ತಡೆಯಲಾರದೆ ಒಂದು ದಿನ ಏಜಂಟರಲ್ಲಿ ಹೋಗಿ ಕೇಳಿದಾಗ, 'ಅದರ ಸಂಪಾದಕರೇ ಬಂದಿದ್ದಾರೆ. ಇದೀಗ ಚಹಾ ಕುಡಿಯಲು ಹೋಗಿದ್ದಾರೆ. ಸ್ವಲ್ಪ ತಡೆಯಿರಿ' ಎಂದರು. ನನಗೆ ಹಿಡಿಸಲಾರದಷ್ಟು ಸಂತೋಷ. ಕುತೂಹಲ ತಡೆಯದೆ ಎದುರಿಗಿದ್ದ ರೆಸ್ಟಾರೆಂಟಿಗೆ ಹೋಗಿ ಗೆಳೆಯನೊಂದಿಗೆ ಅತ್ತಿತ್ತ ಹುಡುಕು ನೋಟ ಬೀರಿದೆ. ಖಾದಿ ಪಾಯಜಾಮ ಹಾಗೂ ಜುಬ್ಬಾ ಧರಿಸಿದ್ದ ವ್ಯಕ್ತಿಯೊಂದು ಮೂಲೆಯ ಕುರ್ಚಿಯೊಂದರಲ್ಲಿ ಸಿಗರೇಟು ಸೇದುತ್ತ ಜನದ ಗದ್ದಲದ್ದಲ್ಲಿಯೂ ಯೋಚನಾಮಗ್ನವಾಗಿ ಕುಳಿತಿದ್ದನ್ನು ಕಂಡೆವು. ಚೂಪಾದ ಮೂಗು, ಹೊಳೆಯುವ ಕಣ್ಣುಗಳು, ತೆಳ್ಳಗಿನ ತೆಳುಗೆಂಪು ದೇಹದ ಹುಡುಗನಂತೆ ಕಂಡ ಅವರೇ ಬಸವರಾಜ ಕಟ್ಟೀಮನಿ ಇರಬಹುದೆ? ಎನಿಸಿತು. ಏನೇ ಆಗಲಿ ಎಂದು ಹೋಗಿ ಮಾತನಾಡಿಸಿಯೇ ಬಿಟ್ಟೆವು. ಹೌದು, ಅವರೇ ಕಟ್ಟೀಮನಿ! ಪರಸ್ಪರ ಪರಿಚಯವಾದ ಮೇಲೆ ನಮಗೂ ಬಾಸುಂದಿ, ಉಪ್ಪಿಟ್ಟು, ಚಹಾ ಬಂದಿತು. 'ಉಷಾ' ಪತ್ರಿಕೆಯನ್ನು ಬಿಟ್ಟು ಬಂದೆ ಎಂದು ಅವರು ಹೇಳಿದಾಗ ನಮ್ಮ ಉತ್ಸಾಹವೆಲ್ಲ ಇಳಿದುಹೋಯಿತು. ಅವರು ಮುಷ್ಟಿಯನ್ನು ಸ್ವಲ್ಪ ಮೇಲಕ್ಕೆತ್ತಿ 'ಇಂದಿಲ್ಲ ನಾಳೆ ಸ್ವತಂತ್ರವಾಗಿ ಒಂದು ಪತ್ರಿಕೆ ಮಾಡೋಣ' ಎಂದಾಗ ನಮಗೆ ಮತ್ತೆ ಹುರುಪು ಬಂದಿತು. ವಿದ್ಯಾರ್ಥಿಗಳ ಬಗ್ಗೆ, ತರುಣ ಲೇಖಕರ ಬಗ್ಗೆ ತೋರಿಸಿದ ಪ್ರೀತಿಯಿಂದ ಅವರ ಬಗ್ಗೆ ಆತ್ಮೀಯತೆಯುಂಟಾಯಿತು. ಅವರ ಅದಮ್ಯವಾದ ಆಶಾವಾದವನ್ನೂ, ಉಕ್ಕುತ್ತಿರುವ ದೇಶ ಪ್ರೇಮವನ್ನೂ, ಹೋರಾಟದ ಛಲವನ್ನೂ ಕಂಡು ಅವರ ಬಗ್ಗೆ ವಿಶೇಷ ಮೆಚ್ಚಿಕೆಯುಂಟಾಯಿತು. ಅಂದಿನಿಂದಲೂ ನಮ್ಮ

ನಡುವೆ ಸ್ನೇಹ ಬೆಳೆಯುತ್ತ ಬಂದಿತು. ಬಸವರಾಜರು ಸ್ನೇಹದಲ್ಲಿ ಎಂದೂ ಎರಡು ಬಗೆದವರಲ್ಲ. ವಯಸ್ಸು ಐವತ್ತರ ಅಂಚಿಗೆ ಬಂದು ನಿಂತಾಗಲೂ ಕಟ್ಟೀಮನಿಯವರಲ್ಲಿ ಅಂದು ಕಂಡ ಗುಣಗಳೇ ಇಂದಿಗೂ ಅಚ್ಚಳಿಯದೆ ಉಳಿದಿವೆ. ಬಾಳಿನ ಹೋರಾಟದಲ್ಲಿ ತಲೆಗೂದಲು ಬೆಳ್ಳಗಾಗಿದ್ದರೂ ಸೆಟೆದು ನಿಲ್ಲುವುದನ್ನು ಮರೆತಿಲ್ಲ. ಶ್ರುತಿಮಾಂದ್ಯವಿದ್ದರೂ ಸೂಕ್ಷ್ಮವೂ ತೀಕ್ಷ್ಣವೂ ಆದ ನಿರೀಕ್ಷಣಾ ಶಕ್ತಿ ಬಲಗೊಳ್ಳುತ್ತಲೇ ಇದೆ. ಇತ್ತೀಚೆಗೆ ಓದುವಾಗ ಕನ್ನಡಕ ಬೇಕೆನಿಸಿದರೂ ದೃಷ್ಟಿ ಮೊದಲಿನಷ್ಟೇ ಹರಿತವಾಗಿದೆ. ಅಂದಿನ ರೊಚ್ಚು, ರಭಸ, ದುಡುಕು ಕಡಿಮೆಯಾಗಿದ್ದರೂ ತನ್ನತನದ ಕೆಚ್ಚು, ಸೋಲರಿಯದ ಶಕ್ತಿ ಎಂದಿನಂತೆಯೇ ಇವೆ. ಸಮಸ್ಯೆಯ ಪೂರ್ವಾಪರಗಳನ್ನೆಲ್ಲ ಕೂಲಂಕಷವಾಗಿ ವಿವೇಚಿಸಿ ನೋಡುವ ತಾಳ್ಮೆ ಹೆಚ್ಚಿದೆ. ಸುತ್ತುಮುತ್ತಿನ ಜಗತ್ತಿನಲ್ಲಿ, ನಿತ್ಯದ ಸಮಾಜ ಜೀವನದಲ್ಲಿ ಎಷ್ಟೇ ಕೊಳೆಯನ್ನೂ, ಕೆಡುಕನ್ನೂ ಕಂಡರೂ ಮೊದಲಿನಂತೆ ಉದ್ವೇಗಗೊಳ್ಳದೆ ಜಗತ್ತಿನ ರೀತಿಯ ಬಗ್ಗೆ, ಜನದ ದೌರ್ಬಲ್ಯದ ಬಗ್ಗೆ ಅವರಲ್ಲಿ ಅನುಕಂಪ, ಸಹಾನುಭೂತಿ ಬೆಳೆಯುತ್ತಿದೆ. ಅವರನ್ನು ಕಂಡಾಗಲೆಲ್ಲ ನನಗೆ ವಿ.ಸೀ. ಅವರ 'ಅಭೀಃ' ಕವಿತೆಯ ನಾಲ್ಕು ಸಾಲುಗಳ ನೆನಪಾಗುತ್ತವೆ :

''ಮಣಿಯದಿಹ ಮನವೊಂದು ಸಾಧಿಸುವ ಹಟವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರ ತೆರೆದ ಎದೆಯೊಂದು''

ಈ ಒದೊಂದೂ ಕಟ್ಟೀಮನಿಯವರ ವ್ಯಕ್ತಿತ್ವದಲ್ಲಿ ಕಂಡರಿಸಿದಂತಿವೆ.

ಹಳ್ಳಿಗಳ ಹಾಗೂ ನಗರಗಳ ನಾನಾ ಬಗೆಯ ಅಂತಸ್ತಿನ ಜನರ ಜೀವನದ ಗಾಢವಾದ ಅನುಭವ, ಸಮಾಜದ ಸೂಕ್ಷ್ಮ ನಿರೀಕ್ಷಣೆ, ಸ್ವಂತ ಬದುಕಿನ ಸಂಕಷ್ಟಗಳು ಹಾಗೂ ಸಂಚಾರೀ ಜೀವನ ಅವರ ಸಾಹಿತ್ಯ ನಿರ್ಮಿತಿಗೆ ವಿಫುಲವಾದ ವಸ್ತುವನ್ನೊದಗಿಸಿವೆ. ಇದುವರೆಗೆ ಪ್ರಕಟವಾಗಿರುವ ಒಂಬತ್ತು ಕಥಾ ಸಂಗ್ರಹಗಳು, ಮೂವತ್ತೆರಡು ಕಾದಂಬರಿಗಳು, ಕ್ರಾಂತಿಕಾರಿ ಮನೋಧರ್ಮದಿಂದ, ವಸ್ತು–ಪಾತ್ರ ವೈವಿಧ್ಯದಿಂದ, ಜೀವನದ ವಾಸ್ತವ ಚಿತ್ರಣದಿಂದ ಹಾಗೂ ಅನುಭವದ ಪ್ರಾಮಾಣಿಕ ನಿರೂಪಣೆಯಿಂದ ನಮ್ಮ ನಾಡಿನ ನಾಲ್ಕೈದು ಜನ ಗಣ್ಯ ಕಾದಂಬರಿಕಾರರಲ್ಲಿ ಅವರ ವೈಶಿಷ್ಟ್ಯವನ್ನು ಎತ್ತಿ ಸಾರುತ್ತವೆ. ಲೇಖನ ವ್ಯವಸಾಯದಿಂದಲೇ ಜೀವನವನ್ನು ನಿರ್ವಹಿಸುತ್ತಿರುವ ಅವರ ಕೃತಿಗಳಲ್ಲಿ ಹಲವು ಅವಸರದಿಂದ ನಿರ್ಮಿತವಾಗಿರಬಹುದು. ಅದು ಅನಿವಾರ್ಯವೇ. ಆದರೆ ಸ್ವಕೀಯತೆ ಹಾಗೂ ನೈಜತೆಗೆ ವೀಳ್ಯವೆತ್ತಿರುವ ಹತ್ತಾರು ಕಾದಂಬರಿಗಳು, ಹಲವಾರು ಸಣ್ಣ ಕತೆಗಳು ಕನ್ನಡ ಸಾಹಿತ್ಯಕ್ಕೆ ಅವರ ವಿಶಿಷ್ಟ ಕೊಡುಗೆಯಾಗಿ ನಿಲ್ಲಬಲ್ಲವು. ಅಲ್ಲದೆ, ಅವರ ವ್ಯಕ್ತಿತ್ವದ ಅರ್ಧ ಭಾಗದಂತಿರುವ ಪತ್ರಿಕೋದ್ಯಮಕ್ಕೆ ಅವರು ಸಲ್ಲಿಸಿದ ಸೇವೆ ಸಣ್ಣದೇನೂ ಅಲ್ಲ. ಏನಿದ್ದರೂ ಇಂದು ಕಟ್ಟೀಮನಿಯವರ ಹೆಸರು ಮನೆಮಾತಾಗಿರುವುದು ಅವರ ಕಾದಂಬರಿಗಳ ಮೂಲಕ.

ಈಗ ಎರಡು ವರ್ಷಗಳ ಹಿಂದೆ ಧಾರವಾಡದ ಸಾಧನಕೇರಿಯಲ್ಲಿ ಅವರೊಂದು ಪುಟ್ಟ ಮನೆಯನ್ನು ಕಟ್ಟಿಕೊಂಡಿದ್ದಾರೆ. ಆ ಮನೆಯ ಹೆಸರು 'ಕಾದಂಬರಿ'.

ಕಟ್ಟೀಮನಿಯವರ ಕಾದಂಬರೀ ಭಕ್ತರು ಅವರನ್ನು ಕಾಣಲು ಹಾತೊರೆಯುತ್ತಿರುವುದನ್ನು ನಾನು ಅನೇಕ ಸಲ ಕಂಡಿದ್ದೇನೆ. ಆದರೆ ಅವರು ಬೇಗ ಗದ್ದಲದಿಂದ ಪಾರಾಗಿಬಿಟ್ಟಿರುತ್ತಾರೆ. ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ವೇದಿಕೆಯ ಮೇಲೆ ವಿಶೇಷವಾಗಿ ಕಾಣಿಸಿಕೊಳ್ಳುವ ವ್ಯಕ್ತಿಯಲ್ಲ ಅವರು. ಬಂದರೆ ಯಾವುದೋ ಮೂಲೆಯಲ್ಲಿ ಸಭಿಕರ ಮನೋಭಾವಗಳನ್ನು ಅಭ್ಯಾಸ ಮಾಡುವವರಂತೆ ಕುಳಿತುಕೊಳ್ಳುತ್ತಾರೆ. ಯಾವಾಗಲೋ ಎದ್ದು ಹೋಗಿರುತ್ತಾರೆ. ಒಂದು ಹಿಡಿತಕ್ಕೆ, ಕಟ್ಟಿಗೆ ಒಳಪಡುವ ಚೇತನ ಅಲ್ಲ ಅವರದು. ಅಪರಿಚಿತರೊಡನೆ ಎಷ್ಟು ಗಂಭೀರವೂ ಗೆಳೆಯರೊಡನೆ ಅಷ್ಟೇ ಸಲಿಗೆಯಿಂದ ಅವರು ಹರಟೆ ಹೊಡೆಯಬಲ್ಲರು, ಹಾಸ್ಯವನ್ನು ಮನಸಾ ಸವಿಯುತ್ತ ಕಣ್ಣಲ್ಲಿ ನೀರು ಬರುವವರೆಗೂ ನಗಬಲ್ಲರು.

ಕಟ್ಟೀಮನಿ ಜನಿಸಿದ್ದು ಬೆಳಗಾಂವಿ ಜಿಲ್ಲೆಯ ಗೋಕಾಕದಲ್ಲಿ(೧೯೧೯). ಗೋಕಾಕ ಗಟ್ಟಿ ಬಣ್ಣಕ್ಕೂ, ಜಿಗುಟುತನಕ್ಕೂ ಹೆಸರಾಗಿದ್ದಿತು. (ಇಂದಿಗೂ ಅಲ್ಲಿಯ ಕರದಂಟು ಪ್ರಸಿದ್ಧವಾಗಿದೆ.) ಕಟ್ಟೀಮನಿವರ ಸ್ವಭಾವದಲ್ಲಿ ಬಹುಶಃ ಇವೆರಡೂ ಗುಣಗಳು ಸೇರಿರಬೇಕು. (ಡಾ. ಪಾವಟೆ, ಡಾ. ನಂದೀಮಠ, ಬೆಟಗೇರಿ ಕೃಷ್ಣಶರ್ಮ ಅವರೂ ಇದೇ ತಾಲೂಕಿನವರು) ಬೆಳೆದದ್ದು ಮಾತ್ರ ತಾಯಿಯ ಊರಾದ ಅದೇ ತಾಲೂಕಿನ ಮಲಾಮರಡಿಯಲ್ಲಿ. ಇಪ್ಪತ್ತೈದು–ಮೂವತ್ತು ಮನೆಗಳ ಆ ಚಿಕ್ಕ ಹಳ್ಳಿಯಲ್ಲಿ ಮೂರಂಕಣದ ಮನೆ ಇವರದು. ಒಂದು ಭಾಗದಿಂದ ಊರನ್ನು ಸುತ್ತುವರಿದು ಹರಿಯುವ ಬಳ್ಳಾರಿ ಹಳ್ಳ, ಸುತ್ತಲೂ ಹೊಲ–ತೋಟಗಳು, ದೂರದಲ್ಲಿ ಕೋಟೆಯಂತೆ ಕಾಣುವ ಗುಡ್ಡದ ಸಾಲು, ಕಣ್ದಿಟ್ಟಿ ಹರಿಯುವವರೆಗೂ ಬೆಳುವಲ ನಾಡಿನ ಭಾಗ್ಯದ ತೆನೆಗಳು. ಬೆಳಗಾಂವಿಯಿಂದ ಪುಣೆಗೆ ಹೋಗುವ ರೈಲು ಮಾರ್ಗದಲ್ಲಿ ಮೂರನೆಯ ನಿಲ್ದಾಣವಾದ ಸುಲಧಾಳದಲ್ಲಿ ರೈಲು ಸಿಳ್ಳು ಹಾಕಿದರೆ ಮಲಾಮರಡಿಗೆ ಕೇಳಿಸುತ್ತದೆ.

ರೈತ ಮನೆತನವಾದರೂ ಸ್ವಂತದ ಭೂಮಿಯಿಲ್ಲದ್ದರಿಂದ ತಂದೆ ಪೋಲೀಸ್ ಖಾತೆಗೆ ಸೇರಿದ್ದರು. ಹಳ್ಳಿಯ ಬಡತನದ ಜೀವನ, ಆದರೆ ತನ್ನ ಮಕ್ಕಳು ತನ್ನಂತೆ ಅಶಿಕ್ಷಿತರಾಗದೆ ಕಲಿತು ಜಾಣರಾಗಬೇಕೆಂದು ತಾಯಿಯ ಹಂಬಲ. ಇವರಿಗೆ ಒಬ್ಬ ಅಣ್ಣ. ಇಬ್ಬರು ತಮ್ಮಂದಿರು. ಆಕೆಯೇ ಕಷ್ಟಪಟ್ಟು ದುಡಿದು ಇವರೆಲ್ಲರನ್ನೂ ಓದಿಸಿದಳು. ಚಿಕ್ಕವನಿದ್ದಾಗಿನಿಂದಲೂ ಕಥೆ ಕಾದಂಬರಿಗಳನ್ನು ಓದುವ ಗೀಳು ಬಸವರಾಜನಿಗೆ. ತಂದೆ ಲಹರಿ ವ್ಯಕ್ತಿ 'ಸಾಲೀ ಪುಸ್ತಕ ಓದೋದು ಬಿಟ್ಟು ಕಥೀ ಕಾದಂಬರಿ ಓದಿ ಹುಡುಗ ಉಡಾಳ ಆಗತಾನ' ಎಂದು ಅವರು ಬೈದರೆ, 'ಉಡಾಳ ಯಾಕಾದಾನು? ಕಥೆ ಕಾದಂಬರಿ ಬರದು ನಾಳೆ ಅವನೂ ದೊಡ್ಡ ಲೇಖಕ ಆಗತಾನ' ಎಂದು ತಾಯಿ ವಾದಿಸುತ್ತಿದ್ದಳು. 'ಕಥೆ–ಕಾಂದಬರಿ ಬರದರ ಹೊಟ್ಟೆ ತುಂಬತದೇನು?' ಎನ್ನುವರು ತಂದೆ. ''ತಾಯಿಯ ಮಾತೇ ಸತ್ಯವಾಗಿ ಪರಿಣಮಿಸಿತು. ನಾನು 'ದೊಡ್ಡ' ಲೇಖಕನಾದೆನೊ ಇಲ್ಲವೊ ಗೊತ್ತಿಲ್ಲ.

ಲೇಖಕನಾದದ್ದು ಮಾತ್ರ ನಿಜ. ಕಥೆ–ಕಾದಂಬರಿಗಳ ರಚನೆಯಿಂದಲೇ ಜೀವನನಿರ್ವಾಹ ಮಾಡುತ್ತಿರುವುದೂ ನಿಜ'' ಎಂದು ತಾಯಿಯ ಪ್ರೋತ್ಸಾಹವನ್ನು ಕಟ್ಟೀಮನಿ ಕೃತಜ್ಞತೆಯಿಂದ ನೆನೆಯುತ್ತಾರೆ.

ರಜಾ ಕಾಲದಲ್ಲಿ ತಮ್ಮಂದಿರೆಲ್ಲ ಹಳ್ಳಿಗೆ ಬಂದಾಗ ರಾತ್ರಿ ಅಂಗಳದಲ್ಲಿ ಚಾಪೆಯ ಮೇಲೆ ಸುತ್ತಲೂ ಮಕ್ಕಳನ್ನು ಕೂಡಿಸಿಕೊಂಡು ತಾಯಿ ನಿದ್ರೆ ಬರುವವರೆಗೂ ಕಥೆ ಹೇಳುತ್ತಿದ್ದಳು. ಆಕೆಗೆ ಗೊತ್ತಿದ್ದ ಜಾನಪದ ಕಥೆ ಕವಿತೆಗಳ ಸಂಗ್ರಹ ದೊಡ್ಡದು. ''ಬೇಸಗೆಯ ನಿರಭ್ರನಿರ್ಮಲ ಆಗಸದಲ್ಲಿ ತಾರೆಗಳು ಥಳಥಳಿಸುತ್ತಿದ್ದಂತೆ, ಬೀಸುಗಾಳಿಗೆ ಮೈಯೊಡ್ಡಿ ಕುಳಿತು ತಾಯಿ ಬಣ್ಣಿಸುತ್ತಿದ್ದ ಸೀತಾ–ರಾಮರ, ಸುಭದ್ರಾ–ಅರ್ಜುನರ, ರುಕ್ಮಿಣೀ–ಕೃಷ್ಣರ, ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣರ ರಮಣೀಯ ಕಥೆಗಳನ್ನಾಲಿಸುತ್ತ ನಾವು ಕಲ್ಪನಾಲೋಕದಲ್ಲಿ ವಿಹರಿಸುತ್ತಿದ್ದೆವು'' ಎಂದು ಬಸವರಾಜ ತಮ್ಮ ಬಾಲ್ಯವನ್ನು ನೆನೆದು ಹೇಳುತ್ತಾರೆ. ಶಾಲೆಯ ಗ್ರಂಥಾಲಯದಲ್ಲಿದ್ದ ಕಥೆ ಕಾದಂಬರಿಗಳನ್ನು ಮನೆಗೆ ತೆಗೆದುಕೊಂಡು ಬಂದು ಎರಡು ಮೂರು ತಾಸು ತಾಯಿಯೆದುರು ಕುಳಿತು ಅವುಗಳನ್ನೋದಿ ಹೇಳಬೇಕಾಗುತ್ತಿತ್ತು. ಗಳಗನಾಥರ, ವೆಂಕಟಾಚಾರ್ಯರ, 'ಇಂದಿರಾ'ದಿಂದ ಪ್ರಭಾವಿತರಾಗಿ 'ಚಂದಿರಾ' ಎಂಬ ಇನ್ನೂರು ಪುಟಗಳ ಕಾದಂಬರಿಯೊಂದನ್ನು ಬರೆದು ಯಾರಿಗೂ ತೋರಿಸದೆ ಪೆಟ್ಟಿಗೆಯಲ್ಲಿ ಮುಚ್ಚಿ ಇಟ್ಟಿದ್ದರಂತೆ. ಆಗ ಇವರ ವಯಸ್ಸು ಹದಿಮೂರು!

ಇವರ ಪ್ರಾಥಮಿಕ ಶಾಲೆಯ ಅಭ್ಯಾಸವೆಲ್ಲ ಅಲೆದಾಟದಲ್ಲಿಯೇ ನಡೆಯಿತು. ತಂದೆಗೆ ವರ್ಗವಾದಲ್ಲೆಲ್ಲ ಇವರೂ ಗುಳೇ ಹೊರಡಬೇಕು. ಗೋಕಾಕ, ಮುನವಳ್ಳಿ, ಬೆಳಗಾವಿ, ಚಿಕ್ಕೋಡಿ, ನಿಪ್ಪಾಣಿ, ತಿರುಗಿ ಬೆಳಗಾವಿ ಹೀಗೆ. ಆಗ ನಿಪ್ಪಾಣಿಯಲ್ಲಿ ಕನ್ನಡ ಶಾಲೆ ಇರದ್ದರಿಂದ, ಒಂದು ವರ್ಷ ಹಾಗೇ ಹೋಯಿತು. ಬೆಳಗಾವಿಯ ಎರಡನೇ ನಂಬರ ಶಾಲೆಯಿಂದ ಇವರು ಮುಲ್ಕೀ ಪರೀಕ್ಷೆ ಪಾಸಾದರು. ಆಗ ಪ್ರ.ಗೋ. ಕುಲಕರ್ಣಿಯವರಿಂದ ವಾಚನ, ಲೇಖನಕ್ಕೆ ಪ್ರೋತ್ಸಾಹ ದೊರೆಯಿತು. ತಂದೆ ಪುಣೆ ರೈಲ್ವೇ ಸ್ಟೇಷನ್ನಿನಲ್ಲಿ ಕೆಲಸ ಹಿಡಿದಾಗ ಎರಡು ವರ್ಷ ಪುಣೆಯ ಧನರಾಜಗಿರಿ ಹೈಸ್ಕೂಲ್ ಸೇರಿ ಮರಾಠಿಯನ್ನೂ ಕಲಿತದ್ದಾಯಿತು. ಪ್ರಸಿದ್ಧ ಲೇಖಕ ಪಿ. ಕೆ. ಅತ್ರೆ ಆಗ ಆ ಹೈಸ್ಕೂಲಿನ ಪ್ರಿನ್ಸಿಪಾಲ್ ಆಗಿದ್ದರು. ತಂದೆ ಅಲ್ಲಿಯ ನೌಕರಿ ಬಿಟ್ಟು ತಿರುಗಿ ಊರಿಗೆ ಬಂದು ಜಡ್ಡಿನಿಂದ ತಮ್ಮ ೫೫ನೆಯ ವಯಸ್ಸಿನಲ್ಲಿ ತೀರಿಕೊಂಡರು. ತಾಯಿಯೇ ಮನೆತನದ ಅರಭಾರವನ್ನೆಲ್ಲ ಹಿಡಿಯಬೇಕಾಯಿತು. ಬೆಳಗಾಂವಿಯ ಸೆಟ್ಟಿಗಲ್ಲಿಯಲ್ಲಿ ಮನೆಮಾಡಿ ಗಿಲಗಂಚಿ ಅರ್ಟಾಳ ಹೈಸ್ಕೂಲಿನಲ್ಲಿ ಅಭ್ಯಾಸ ಮುಂದುವರಿಯಿತು. ಆಗ ಶಾಲೆಯ ಕೈ ಬರೆಹದ ಪತ್ರಿಕೆಗೆ ಕಥೆ, ಲೇಖನ ಬರೆದು 'ಭಲೆ' ಎನಿಸಿಕೊಂಡಾಯಿತು. ಅನಂತಶಯನ ಗಲ್ಲಿಯ 'ನಾಡನರಿಗಳ ಸಂಘ'ದಲ್ಲಿ ಸೇರಿ ಕನ್ನಡದ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಆ ಸಂದರ್ಭದಲ್ಲಿಯೇ ಬ್ರಾಹ್ಮಣ–ಬ್ರಾಹ್ಮಣೇತರ ದ್ವೇಷ ಭಾವನೆಯ ಪ್ರತ್ಯಕ್ಷ ಅನುಭವ ಇವರಿಗಾಯಿತು. ಅದೇ ಕಾಲಕ್ಕೆ ಮನೆತನದ ಕಠಿಣ ಪರಿಸ್ಥಿತಿಯಿಂದಾಗಿ ಬಡತನದ ಬವಣೆಯನ್ನೂ ಸಾಕಷ್ಟು

ಅನುಭವಿಸಿಯಾಯಿತು. ಒಪ್ಪೊತ್ತು ಊಟ, ಹರಿದ ಅಂಗಿ, ಚೊಣ್ಣಕ್ಕೆ ಹತ್ತು ಕಡೆ ತೇಪೆ ಹಚ್ಚಿದ ಹೊಲಿಗೆ (ಅವರ ಕಥೆ ಕಾದಂಬರಿಗಳಲ್ಲಿ ಬಡತನದ ಯಥಾರ್ಥ ಚಿತ್ರಣ ಯಶಸ್ವಿಯಾಗಿರುವುದಕ್ಕೆ ಈ ಅನುಭವ ಸಾಮಗ್ರಿಯೂ ಕಾರಣ). ಒಂದೆಡೆ ಬಡತನ, ಇನ್ನೊಂದೆಡೆ ಲೇಖನ ಕಲೆಯಲ್ಲಿ ಆಸ್ಥೆ, ಬಸವರಾಜರು ಹದಿನಾರನೆಯ ವರ್ಷದಲ್ಲಿಯೇ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತುಕೊಳ್ಳದೆ ಅಲ್ಜಿಬ್ರಾ, ಜಾಮೆಟ್ರಿಗಳಿಗೆ ಶರಣು ಹೊಡೆದು ಸಾಹಿತ್ಯ ಕ್ಷೇತ್ರದಲ್ಲಿ ಪ್ರವೇಶಿಸಿದರು. ಅವರೊಡನೆ ವಿಶೇಷ ಸಂಭಾಷಣೆ ನಡೆಸಿದಾಗ ಮುಂದೆ ಕಾಣಿಸಿದಂತೆ ಇನ್ನೂ ಹಲವು ವಿಷಯಗಳು ತಿಳಿದು ಬಂದವು.

'ಬಸವರಾಜರೆ, ನೀವು ಪತ್ರಿಕೋದ್ಯಮಕ್ಕೆ ಹೇಗೆ ಹೊರಳಿದಿರಿ'?

'೧೯೩೬–೩೭ರ ಕಾಲ. ಆಗ ಕನ್ನಡದಲ್ಲಿ ಕಥೆ ಬರೆಯುತ್ತಿದ್ದವರೂ ಕಡಿಮೆ. ಕಾದಂಬರಿಕಾರರ ಸಂಖ್ಯೆಯಂತೂ ಬೆರಳನಿಂದೆಣಿಸುವಷ್ಟಿದ್ದಿತು. ಇಂದಿನಂತೆ ಅಂದು ಲೇಖಕರಿಗೆ ಸಂಭಾವನೆಯೂ ಸಿಕ್ಕುತ್ತಿರಲಿಲ್ಲ. ಎಂತಲೇ ಆರಂಭದಲ್ಲಿ ನಾನು ಪತ್ರಿಕೋದ್ಯಮದಲ್ಲಿ ದುಡಿಯುವುದು ಅನಿವಾರ್ಯವಾಯಿತು.''

ಅಂದಿನಿಂದ ಬಸವರಾಜರ ಬಾಳಿನ ಮತ್ತೊಂದು ಅಧ್ಯಾಯ ಪ್ರಾರಂಭವಾಯಿತು. ಆಗ 'ಸಂಯುಕ್ತಕರ್ನಾಟಕ' ಬೆಳಗಾವಿಯಿಂದ ಪ್ರಕಟವಾಗುತ್ತಿತ್ತು. ಶ್ರೀಗಳಾದ ಮೊಹರೆ, ಪುರೋಹಿತರ ಪರಿಚಯ ಮೊದಲಿನಿಂದಲೂ ಇತ್ತು. ದಿವಾಕರರು ಆಗತಾನೆ ಜೇಲಿನಿಂದ ಬಿಡುಗಡೆ ಹೊಂದಿ ಬೆಳಗಾವಿಗೆ ಬಂದಿದ್ದರು. ಮೊಹರೆಯವರ ಮುಖಾಂತರ ಅವರ ಪರಿಚಯವಾಯಿತು. ಹದಿನಾರು ವರ್ಷದ ಈ ಲಂಡ ಚೊಣ್ಣದ ಹುಡುಗನನ್ನು ಸರಿಯಾಗಿ ಪರೀಕ್ಷೆ ಮಾಡಿಯೇ 'ಸಂಯುಕ್ತ ಕರ್ನಾಟಕ'ದಲ್ಲಿ ಉದ್ಯೋಗಕ್ಕೆ ಸೇರಿಸಿಕೊಳ್ಳಲಾಯಿತು.ಹಗಲೆಲ್ಲ ಕರಡು ತಿದ್ದುವ ಕೆಲಸ, ಖಾನಾವಳಿಯಲ್ಲಿ ಊಟದ ಏರ್ಪಾಡು. ರಾತ್ರಿ ಆಫೀಸಿನಲ್ಲಿಯೇ ಮಲಗುವುದು. ವಾರದ ಸಂಚಿಕೆಗೆ 'ಏನಾದರೂ ಕಥೆ ಬರಿಪಾ' ಎನ್ನುತ್ತಿದ್ದರು ಪುರೋಹಿತರು. ದಿವಾಕರರ ಪರಿಚಯದಿಂದಾಗಿ ಕಾಂಗ್ರೆಸ್ ಸಂಸ್ಥೆಯಲ್ಲಿ ವಿಶ್ವಾಸ ಬೆಳೆಯಿತು. ರಾಷ್ಟ್ರಭಕ್ತಿ ಮೈಗೂಂಡಿತು. ಆ ಕಾಲದ ಪೋಲೀಸ್ ಖಾತೆಯಲ್ಲಿ ದುಡಿಯುತ್ತಿದ್ದವರ ಮಗ ನಿಷ್ಠಾವಂತ ಕಾಂಗ್ರೆಸಿಗನಾದ. ಅಂದು ತೊಡತೊಡಗಿದ ಶುಭ್ರ ಖಾದಿ ಬಟ್ಟೆ ಇಂದಿಗೂ ಕಟ್ಟೀಮನಿವರ ಆಪ್ತತ್ವವನ್ನು ಪಡೆದಿದೆ. ಸಣ್ಣವರೆನ್ನದೆ ದೊಡ್ಡವರೆನ್ನದೆ ಎಲ್ಲರೊಡನೆ ಒಂದಾಗಿ ನಡೆದುಕೊಳ್ಳುತ್ತಿದ್ದ, ಅಂದಿನ ಕರ್ನಾಟಕದ ನಾಯಕರಾದ ದಿವಾಕರರ ಬಗ್ಗೆ ಇವರಿಗೆ ಆತ್ಮೀಯತೆ, ಅಭಿಮಾನ ಉಂಟಾಯಿತು.

ಅಲ್ಲಿ ಆರು ತಿಂಗಳು ಕೆಲಸಮಾಡಿ ಕಟ್ಟೀಮನಿಯವರ ಕಾರವಾನ್ ಮುಂದೆ ಸಾಗಿತು. ('ಕಾರವಾನ್' ಎಂಬ ಕಥಾಸಂಗ್ರಹ ಮುಂದೆ ೧೯೪೫ರಲ್ಲಿ ಪ್ರಕಟವಾಯಿತು.) ಹುಬ್ಬಳ್ಳಿಯ 'ತರುಣ ಕರ್ನಾಟಕ'ದಲ್ಲಿ ಉಪಸಂಪಾದಕರಾಗಿ ಒಂದು ವರ್ಷ ಕೆಲಸ ಮಾಡಿ, ಸಂಪಾದಕರ ನಡವಳಿಕೆ ಮನಸ್ಸಿಗೆ ಬರದೆ ರಾತ್ರಿ ಹೇಳದೆ ಕೇಳದೆ ಬ್ಯಾಗು, ಹಾಸಿಗೆ ಸುರುಳಿ ಹೊತ್ತುಕೊಂಡು ಧಾರವಾಡಕ್ಕೆ ಪ್ರಯಾಣ. 'ಸಮಾಜ' ಮಾಸಪತ್ರಿಕೆಯಲ್ಲಿ ಕೆಲಸ.

ಘಾಣೇಕರರು 'ಪ್ರಜಾಮತ' ಸೇರಿಕೊಂಡ ಮೇಲೆ ಇವರೂ ಬೆಂಗಳೂರಿಗೆ ಹೋದರು. ಆಗಲೇ ಅ.ನ.ಕೃ. ಪರಿಚಯ. ಅಲ್ಲಿಂದ ತಿರುಗಿ ಹಳ್ಳಿಗೆ ಮತ್ತೆಹುಬ್ಬಳ್ಳಿಯ 'ಲೋಕಮತ' ದಿನಪತ್ರಿಕೆಯ ಎರಡು ತಿಂಗಳು ಸಂಬಳವಿಲ್ಲದೆ ದುಡಿತ, ಮುಂದೆ ಮೂರು ವರ್ಷ ಗದುಗಿನ 'ಕರ್ನಾಟಕ ಬಂಧು' ವಾರಪತ್ರಿಕೆಯ ಸಂಪಾದಕ ವರ್ಗದಲ್ಲಿ ಸೇರಿ ಅದನ್ನು ಯಶಸ್ವಿಯಾಗಿ ನಡೆಸಿ ಮೂವತ್ತು ಸಾವಿರದವರೆಗೂ ಪ್ರತಿಗಳನ್ನು ಹೆಚ್ಚಿಸಿದ್ದು–ರಾತ್ರಿ ಎರಡು ಗಂಟೆಯವರೆಗೂ ಬಿಡುವಿಲ್ಲದ ದುಡಿತ. ಬರವಣಿಗೆ ಕುದುರಿ ಲೇಖನಿ ಹರಿತಗೊಂಡದ್ದು ಇಲ್ಲಿಯೇ. ಜೊತೆಗಿದ್ದ 'ಪ.ವಿ.' ಯವರನ್ನು ನಿಷ್ಕಾರಣವಾಗಿ ಹೊರಗೆ ಹಾಕಿದ್ದರಿಂದ ಅವರೊಡನೆ ಇವರೂ ಹೊರಬಿದ್ದರು.

ಬೆಂಗಳೂರಿನಲ್ಲಿ ಬಿ. ಶಿವಮೂರ್ತಿಶಾಸ್ತ್ರಿಗಳ 'ಸ್ವತಂತ್ರ ಕರ್ನಾಟಕ' ವಾರಪತ್ರಿಕೆಯಲ್ಲಿ ಸೇರಿದಾಗ (೧೯೪೧) ಸಂಸ್ಥಾನದಲ್ಲಿಯೂ ಕಾಂಗ್ರೆಸ್ ಚಳವಳಿ ಜೋರಾಗಿತ್ತು. ಪತ್ರಿಕೆಯಲ್ಲಿನ ಲೇಖನವೊಂದರ ಬಗೆಗೆ ಭಿನ್ನಾಭಿಪ್ರಾಯದ ಕಾರಣ ಸಂಪಾದಕರು ಇವರಿಗೆ ನಮಸ್ಕಾರ ಹೇಳಿದರು. ಸರಿ; ಮುಂದೆ ಆರು ತಿಂಗಳು ಮತ್ತೆ ತಿರುಗಿ 'ಕರ್ನಾಟಕ ಬಂಧು'. ಆಗ ವೀರಭದ್ರಪ್ಪ ಬಳ್ಳಾರಿ ಅವರ ಪರಿಚಯ. ಅವರೊಡನೆ ಬೆಂಗಳೂರಿಗೆ ಹೋಗಿ 'ವಾಣಿ' ಮಾಸಪತ್ರಿಕೆ ಪ್ರಾರಂಭಿಸಿ ಮೊದಲ ಸಂಚಿಕೆ ಬರುವುದರಲ್ಲಿಯೇ ಇವರಿಗೆ ಅಲ್ಲಿಂದ ಬಿಡುಗಡೆ. ಆಗಲೇ ಸಿದ್ಧವನಹಳ್ಳಿ ಕೃಷ್ಣಶರ್ಮರ ಪರಿಚಯ. ೧೯೪೨ರಲ್ಲಿ ಧಾರವಾಡದ 'ವಿಶಾಲ ಕರ್ನಾಟಕ' ದಿನಪತ್ರಿಕೆಯಲ್ಲಿ ಕೆಲಸ ಮಾಡುವಾಗ ಸ್ವಾತಂತ್ರ್ಯ ಚಳವಳಿಯಲ್ಲಿ ಸೇರಿ ಒಂಬತ್ತು ತಿಂಗಳು ಜೈಲುವಾಸ. ಬೆಂಗಳೂರಿಗೆ ಹೋಗಿ ಎಸ್. ನಂಜಪ್ಪನವರೊಂದಿಗೆ ಹೊಸದಾಗಿ 'ಉಷಾ' ಮಾಸಪತ್ರಿಕೆಯ ಪ್ರಾರಂಭ; ಅದೇ ಹೊತ್ತಿಗೆ ಅವರ ಮದುವೆಯೂ ಆಯಿತು (೧೯೪೪). ಅದು ಪ್ರಗತಿಶೀಲ ಸಾಹಿತ್ಯದ ಆಂದೋಲನ ನಡೆದ ಕಾಲ. 'ಉಷಾ' ಪ್ರಗತಿಶೀಲ ಲೇಖಕರ ಪರೇಡನ್ನೇ ನಡೆಸಿತು. ಆ ಸಂದರ್ಭದಲ್ಲಿ ಅನೇಕ ತರುಣ ಲೇಖಕರನ್ನು, ಕವಿಗಳನ್ನು ಬೆಳಕಿಗೆ ತಂದ ಶ್ರೇಯಸ್ಸು ಕಟ್ಟೀಮನಿಯವರಿಗಿದೆ. ಕಟ್ಟೀಮನಿ ಆ ಪತ್ರಿಕೆಯ ಸಂಪಾದಕತ್ವ ವಹಿಸಿದ್ದು ಎರಡೇ ಎರಡು ವರ್ಷ. ಆದರೆ ಆ ಸ್ವಲ್ಪ ಕಾಲದಲ್ಲಿಯೇ ಅದು ನಾಡಿನ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಕ್ರಾಂತಿ ಅಗಾಧವಾದುದು.

ಅಲ್ಲಿಂದ ಮತ್ತೆ 'ಕರ್ನಾಟಕ ಬಂಧು' – ನಂತರ ಬೆಂಗಳೂರಿಗೆ, ಆರ್. ಬಸವರಾಜ ಮತ್ತು ಜಿ. ಬಸವರಾಜ ಅವರೊಂದಿಗೆ 'ಸ್ವತಂತ್ರ' ಮಾಸ ಪತ್ರಿಕೆ. ಅದರಿಂದ ಖರ್ಚು ಮೈಮೇಲೆ ಬಂದದ್ದರಿಂದ ದಾವಣಗೆರೆಗೆ ಬಂದು ಲಿಮಿಟೆಡ್ ಕಂಪನಿ ಮಾಡಿ ಅದೇ ಪತ್ರಿಕೆಯನ್ನು ಇಲ್ಲಿ ಹೊರಡಿಸಲಾಯಿತು. ಆ ಸಮಯದಲ್ಲಿ ಬಂಡವಾಳಗಾರ–ಕೂಲಿ● ಗಾರರ ಸಮಸ್ಯೆಯ ಹಲವಾರು ಅನುಭವಗಳ ಅರಿವಾಯಿತು. ಬಂಡವಾಳಗಾರರ ಕೈವಾಡದಿಂದಾಗಿ ಪತ್ರಿಕೆ ನಿಂತಿತು. (೧೯೪೮). ('ಜ್ವಾಲಾಮುಖಿಯ ಮೇಲೆ'– ಕಾದಂಬರಿಗೆ ಇಲ್ಲಿಯ ಅನುಭವವೇ ವಸ್ತುವಾಗಿದೆ). ಧಾರವಾಡಕ್ಕೆ ಬಂದು 'ಸಮಾಜ' ಮಾಸ ಪತ್ರಿಕೆಯ ಪುನರುಜ್ಜೀವನ– 'ಪ್ರಗತಿಶೀಲ ಸಾಹಿತ್ಯ ಮಾಲೆ' ಯನ್ನು ಪ್ರಾರಂಭಿಸಿ ನಾಲ್ಕಾರು ಪುಸ್ತಕಗಳನ್ನು ಪ್ರಕಟಿಸಿ ಮರಳಿ ಮಲಾಮರಡಿಗೆ ಪ್ರಯಾಣ.

ಹತ್ತು–ಹನ್ನೆರಡು ವರ್ಷ ಇಷ್ಟೆಲ್ಲ ಸುತ್ತಾಡಿ ಪತ್ರಿಕೆಯ ಮಾಲಿಕರ–ಕೆಲಸಗಾರರ, ಬಂಡವಾಳಗಾರರ–ಕೂಲಿಗಾರರ, ನಾನಾ ಸ್ವಭಾವದ ಕವಿಗಳ–ಲೇಖಕರ, ಸಮಾಜ–ಸರಕಾರದ ಕಟು–ಮಧುರ ಅನುಭವಗಳನ್ನು ಹೊತ್ತು, ಬಂದುದನ್ನು ಬಂದಂತೆಯೇ ಸ್ವೀಕರಿಸುತ್ತ, ಆಗಿ ಹೋದ ಸಂಗತಿಗಳಿಗೆ ಅನುತಾಪಗೊಳ್ಳದೆ ಕಟ್ಟೀಮನಿಯವರ ಕಾರವಾನ್ ಮರಳಿ ಮನೆಗೆ ಬಂದಿತು.

''ಅಲ್ರೀ ಕಟ್ಟೀಮನಿ, ಪತ್ರಿಕಾ ವ್ಯವಸಾಯದಿಂದ ಇಷ್ಟೆಲ್ಲ ಕಟು ಅನುಭವ ಪಡೆದಿದ್ದರೂ ನಿಮಗೆ ಈಗಲೂ ಆ ವ್ಯವಸಾಯದಲ್ಲಿ ಆಸ್ಥೆ ಉಳಿದಿದೆಯೇ?'' ಎಂಬ ನನ್ನ ಪ್ರಶ್ನೆಗೆ ಅವರು ಉತ್ತರಿಸಿದರು.

''ಹೌದು, ನನಗೆ ಈಗಲೂ ಅದರ ಬಗ್ಗೆ ಪ್ರೇಮವಿದೆ. ಪತ್ರಿಕಾ ವ್ಯವಸಾಯದಲ್ಲಿ ಜೀವಂತಿಕೆಯಿದೆ, ಶಕ್ತಿಯಿದೆ. ಸಂಪಾದಕನಿಗೂ ತುಂಬ ಪ್ರಭಾವವಿರುತ್ತದೆ. ಶಕ್ತಿಪೂರ್ಣ ಶೈಲಿಯ ಲೇಖಕ ಖಂಡಿತವಾಗಿಯೂ ಜನಮನದ ಮೇಲೆ ಪರಿಣಾಮವುಂಟು ಮಾಡಬಲ್ಲ. ಸರಿಯಾದ ಅವಕಾಶ ಸಿಕ್ಕರೆ ಈಗಲೂ ಪತ್ರಿಕೆ ಹೊರಡಿಸುವ ವಿಚಾರವಿದೆ. ಈಚೆಗೆ ಅನೇಕ ಪತ್ರಿಕೆಗಳು ಬಂಡವಾಳಗಾರರ ಕೈಯಲ್ಲಿ ಸಿಕ್ಕಿಕೊಂಡು ಶ್ರೀಸಾಮಾನ್ಯನ ಪ್ರಗತಿಗಾಗಿ ಅವುಗಳಿಂದ ಪರಿಣಾಮಕಾರಿಯಾದ ಕಾರ್ಯ ನಡೆಯದಂತಾಗಿದೆ.''

ಈ ಜಂಜಾಟದಲ್ಲಿಯೂ ಅವರು ಕಥೆ ಬರೆಯುವುದನ್ನು ನಿಲ್ಲಿಸಿರಲಿಲ್ಲ. 'ಕಾರವಾನ್', 'ಗುಲಾಬಿ ಹೂ', 'ಅಗಸ್ಟ್ ಒಂಬತ್ತು' ಈ ಕಥಾ ಸಂಗ್ರಹಗಳೂ ಪ್ರಕಟವಾಗಿದ್ದವು. ಬಡತನ, ಪತ್ರಿಕಾ ವ್ಯವಸಾಯ, ಸ್ವಾತಂತ್ರ್ಯ ಚಳುವಳಿಗಳ ಅನುಭವವೇ ಇಲ್ಲಿಯ ಹಲವಾರು ಕಥೆಗಳಿಗೆ ವಸ್ತುವಾಗಿದೆ. ಸಾಹಿತ್ಯ ರಾಜಕೀಯ ಪ್ರಚಾರವಾಗುವ ಅಪಾಯ ಇರುವೆಡೆಯಲ್ಲೆಲ್ಲ ಕಲೆ ಅದರಿಂದ ಪಾರುಗೊಳಿಸಿತು. 'ಸೆರೆಯಿಂದ ಹೊರಗೆ' ಸಂಗ್ರಹ ಪ್ರಕಟವಾಗುವ ವೇಳೆಗೆ ಕಟ್ಟೀಮನಿ ಸಣ್ಣಕತೆಯ ಕಲಾತ್ಮಕ ಸಿದ್ಧಿಯನ್ನು ಕೈವಶ ಮಾಡಿಕೊಂಡಿದ್ದರು. ಅವರ ಮೊದಲ ಕಾದಂಬರಿ 'ಸ್ವಾತಂತ್ರ್ಯದೆಡೆಗೆ' ೧೯೪೭ರಲ್ಲಿ ಹೊರಬಂದಿತು. ಹಿಂಡಲಗಿ ಸೆರೆಮನೆಯಲ್ಲಿದ್ದಾಗಲೇ ಆ ಕಾದಂಬರಿಯ ಯೋಜನೆ ಸಿದ್ಧವಾಗಿತ್ತು. ಪತ್ರಿಕೆಗಳ ಸಹವಾಸ ತ್ಯಜಿಸಿ ಧಾರವಾಡಕ್ಕೆ ಬಂದು ಕುಳಿತಾಗಲೇ ಅದರ ಎರಡನೆಯ ಭಾಗ 'ಮಾಡಿ ಮಡಿದವರು' ರಚಿಸಲು ಇವರಿಗೆ ಶಕ್ಯವಾಯಿತು.

ಧಾರವಾಡದಿಂದ ಮಲಾಮರಡಿಗೆ ಮರಳಿದ ಮೇಲೆ ಕಾದಂಬರಿ ರಚನೆಗೆ ಬಿರುಸಾಗಿ ತೊಡಗಿದರು. 'ಮಾಡಿ ಮಡಿದವರು' ಕಾದಂಬರಿಗೆ ಲಭಿಸಿದ ಸ್ವಾಗತವೇ ಅವರನ್ನು ಪೂರ್ಣ ಸಮಯದ ಕಾದಂಬರಿಕಾರರನ್ನಾಗಿಸಿತು. ಅವರ ಬಾಳಿನ ಮೂರನೆಯ ಅಧ್ಯಾಯಕ್ಕೆ ಅದೇ ನಾಂದಿಯಾಯಿತು. ಸ್ವಾತಂತ್ರ್ಯ ಚಳುವಳಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡು ಸಾಮಾನ್ಯ ಜನತೆಯ ಜೀವನದ ಹಿನ್ನೆಲೆಯಲ್ಲಿ ಕಲಾತ್ಮಕವಾಗಿ ಮೂಡಿದ ಕಾದಂಬರಿ 'ಮಾಡಿ ಮಡಿದವರು'. ಪಠ್ಯಪುಸ್ತಕವಾಗಿ ಎಂಟು ಮುದ್ರಣಗಳನ್ನು ಕಂಡ ಆ ಕಾದಂಬರಿಯನ್ನು ಅಸಂಖ್ಯ ವಿದ್ಯಾರ್ಥಿಗಳು ಈಗಲು ಪ್ರೀತಿಯಿಂದ ಓದುತ್ತಾರೆ.

ಮಲಾಮರಡಿಯ ಬಿದಿರು ತಟ್ಟಿಯ ಆ ಚಿಕ್ಕ ಕೋಣೆಯನ್ನು ಕಂಡವರಿಗೆ ಕಟ್ಟೀಮನಿ ಇಲ್ಲಿ ಕುಳಿತೇ 'ಜ್ವಾಲಾಮುಖಿಯ ಮೇಲೆ', 'ಮೋಹದ ಬಲೆಯಲ್ಲಿ', 'ಖಾನಾವಳಿಯ ನೀಲಾ', 'ಮಣ್ಣುಮತ್ತುಹೆಣ್ಣು' ಮೊದಲಾದ ಉತ್ಕೃಷ್ಟ ಕೃತಿಗಳನ್ನು ರಚಿಸಿದರೇ ಎಂದು ಆಶ್ಚರ್ಯವಾಗುತ್ತದೆ. ಅದುವರೆಗೆ ಹದಗೊಂಡ ಜೀವನದ ಅನುಭವಗಳನ್ನೆಲ್ಲ ಪಾಕಗೊಳಿಸಿ, ವಸ್ತುವಿಗೆ ಉಚಿತವಾದ ವಿಧಾನವಾದ ಕಾದಂಬರಿಯ ಚೌಕಟ್ಟಿನಲ್ಲಿ ಜೀವಂತ ಪಾತ್ರಗಳ ಮೂಲಕ ನೀಡಿದ ಆ ಕಾಲ ಕಟ್ಟೀಮನಿಯವರ ಕಾದಂಬರಿ ಸೃಷ್ಟಿಯ ಪರ್ವಕಾಲ. ಆನಂದಕಂದರ ತರುವಾಯ ಉತ್ತರ ಕರ್ನಾಟಕದ ಹಳ್ಳಿಯ ಜೀವನವನ್ನು ಹುಲುಸಾಗಿ ಚಿತ್ರಿಸಿದವರು ಕಟ್ಟೀಮನಿಯವರೇ ಎಂದು ಹೇಳಿದರೆ ತಪ್ಪಾಗದು. 'ಮಣ್ಣು ಮತ್ತು ಹೆಣ್ಣು', 'ಹೆಂಡತಿ' ಮೊದಲಾದ ಕಾದಂಬರಿಗಳಲ್ಲಿ ಹಳ್ಳಿಯ ಜೀವನವನ್ನು ಹಸುರಾಗಿ, ಅದರ ಒಳಿತು–ಕೆಡಕು, ಮೋಜು–ಮುಗ್ಧತೆ, ಸುಖ–ದುಃಖ, ಪ್ರೇಮ–ದ್ವೇಷ ಹೀಗೆ ಹಲವಾರು ಮುಖಗಳೊಂದಿಗೆ ಯಶಸ್ವಿಯಾಗಿ ಕೊಟ್ಟಿದ್ದಾರೆ. ನೋವಿನ ಬುತ್ತಿಯುಂಡು ಬದುಕುತ್ತಿರುವ ಕಷ್ಟಜೀವಿಗಳ ಕತೆಯನ್ನು, ಅವರ ಆಸೆ ಆಕಾಂಕ್ಷೆಗಳನ್ನು ಅತ್ಯಂತ ಆತ್ಮೀಯತೆಯಿಂದ ಇವರು ತಮ್ಮ ಕೃತಿಗಳಲ್ಲಿ ಮೂಡಿಸಿದ್ದಾರೆ.

ಸುಸಂಸ್ಕೃತವೆಂದು ಹೇಳಿಕೊಳ್ಳುವ ಸಮಾಜದಲ್ಲಿ ತಾಂಡವವಾಡುತ್ತಿರುವ ನೈತಿಕ ಅಧಃಪತನವನ್ನು, ಡಾಂಭಿಕತನವನ್ನು, ವೇಷಗಾರಿಕೆಯನ್ನು, ಜಾತೀಯತೆಯ ಅನಾಹುತವನ್ನು, ಧ್ಯೇಯಶೂನ್ಯ, ಪ್ರವಾಹಪತಿತ, ದ್ವಿಮುಖ ಬಾಳನ್ನು 'ಮೋಹದ ಬಲೆಯಲ್ಲಿ', 'ಜರತಾರಿ ಜಗದ್ಗುರು', 'ಬೀದಿಯಲ್ಲಿಬಿದ್ದವಳು', 'ನೀ ನನ್ನ ಮುಟ್ಟಬೇಡ', 'ಜನಿವಾರ ಮತ್ತು ಶಿವದಾರ', 'ಪಾತರಗಿತ್ತಿ' ಮೊದಲಾದ ಕಾದಂಬರಿಗಳಲ್ಲಿ ನೈಜವಾಗಿ ಚಿತ್ರಿಸಿ, ಕಲೆಯ ಮುಖಾಂತರ ಸತ್ಯದ ದರ್ಶನ ಮಾಡಿಸಿದ್ದಾರೆ. ವರ್ಗಸಮರದ ಕತೆಯನ್ನು 'ಜ್ವಾಲಾಮುಖಿಯ ಮೇಲೆ' ಮೂಲಕ ಕನ್ನಡದಲ್ಲಿ ಮೊಟ್ಟ ಮೊದಲು ಮನದಟ್ಟಾಗುವಂತೆ ನೀಡಿದ ಶ್ರೇಯಸ್ಸು ಕಟ್ಟೀಮನಿಯವರದು. ನಮ್ಮ ಸಮಾಜ ಜೀವನದ ಎಲ್ಲ ಅಂಗಗಳಲ್ಲಿಯೂ ರಾಜಕೀಯ ಹಾಸುಹೊಕ್ಕಾಗಿ ಬೆರೆತುಕೊಂಡಿರುವಾಗ ಇದು ರಾಜಕೀಯ ಕಾದಂಬರಿ, ಇದು ಸಾಮಾಜಿಕ ಕಾದಂಬರಿ ಎಂದು ಬೇರ್ಪಡಿಸುವದನ್ನು ಅವರು ಒಪ್ಪಲಾರರು.

ಪೂರ್ವ ಯೌವನದ ನಾನಾ ಬಗೆಯ ಅನುಭವಗಳ ಭಾವಜೀವನ ಚಿತ್ರಣ 'ಜಲತರಂಗ'ದಲ್ಲಿ ಸುಂದರವಾಗಿ ಅಭಿವ್ಯಕ್ತಿಗೊಂಡಿದೆ. 'ಗಿರಿಯ ನವಿಲು' ಅಕ್ಕಮಹಾದೇವಿಯ ಜೀವನವನ್ನು ವಿಶುದ್ಧವಾದ ವೈಚಾರಿಕ ದೃಷ್ಟಿಯಿಂದ ನೋಡಿದ್ದರೂ ಆದರ್ಶವನ್ನೂ ಶ್ರದ್ಧೆಯನ್ನೂ ಕಳೆದುಕೊಳ್ಳದ ಚಾರಿತ್ರಿಕ ಕೃತಿ. ಸಾಹಿತ್ಯ ಕೃತಿಗೆಂದು ಜೀವನವನ್ನು ಆಯ್ದುಕೊಳ್ಳುವ ರೀತಿ, ಅದನ್ನು ನಿರೂಪಿಸುವ ವಿಧಾನ, ಬಳಸುವ ತಂತ್ರ ಮೊದಲಾದ ಕಲೆಗೆ ಸೇರಿದ ಅಂಶಗಳನ್ನು ಗಮನಿಸಿಯೂ ಕಲಾಕೃತಿಯಲ್ಲಿ ಕಾಣಿಸಿಕೊಳ್ಳುವ ಜೀವನಕ್ಕೇ ಅವರು ತಮ್ಮ ಕೃತಿಗಳಲ್ಲಿ ಪ್ರಾಶಸ್ತ್ಯ ಕೊಟ್ಟಿರುವುದನ್ನು ಕಾಣುತ್ತೇವೆ. ವಾಸ್ತವವಾಗಿ ಸಾಹಿತ್ಯ ನಿರ್ಮಾಣದ ಕ್ರಾಂತಿಕಾರಿ ಮನೋಧರ್ಮದೊಂದಿಗೆ ಅಲ್ಲಲ್ಲಿ

ಆದರ್ಶ ಪ್ರಿಯತೆಯನ್ನೂ ಅವರು ತೋರಿಸದೆ ಇಲ್ಲ. ('ನಿನ್ನ ದೇಹವನ್ನಲ್ಲ ನಾನು ಪ್ರೀತಿಸುವುದು ರತ್ನಾ, ನಿನ್ನ ಆ ಅದ್ಭುತ ವ್ಯಕ್ತಿತ್ವವನ್ನು. ಅನ್ಯಾಯಗಳಿಗೆಲ್ಲ ಧೈರ್ಯದಿಂದ ಎದುರಾಗಿ ನಿಂತಿರುವ ನಿನ್ನ ಸ್ಫೂರ್ತಿಯನ್ನು'– ಜ್ವಾಲಾಮುಖಿ, ಕಾದಂಬರಿಯ ನಾಯಕ ಚಂದ್ರಣ್ಣ ಹೇಳುವ ಮಾತಿದು.)

ಕಟ್ಟೀಮನಿಯವರ ಶಕ್ತಿಪೂರ್ಣವಾದ ಶೈಲಿ ವಸ್ತುವಿಗೆ ತಕ್ಕಂತೆ ಬಾಗಿ ಬೀಗಿ ಸಾಗುತ್ತದೆ. ಜೀವನದ ಉತ್ಸಾಹ, ಮಾರ್ದವ, ಕಾವು ನೋವುಗಳನ್ನೂ ಅಷ್ಟೇ ಸಮರ್ಥವಾಗಿ ಅದು ನಿರೂಪಿಸಬಲ್ಲದು. ನಿಸರ್ಗದ ಚೆಲುವನ್ನು ಮನಸ್ಸಿನ ಆನಂದ ಉಲ್ಲಾಸಗಳನ್ನೂ ಬಣ್ಣಿಸುವಾಗ ಅದು ಕಾವ್ಯಮಯವಾಗುತ್ತದೆ–ಇವರೂ ಮೊದಲು ಕವಿತೆಗಳನ್ನು ಬರೆದಿರಬಾರದೇಕೆ?

''ಅಂದ ಹಾಗೆ, ಕಟ್ಟೀಮನಿಯವರೆ ನೀವು ಕವಿತೆಗಳನ್ನೂ ಬರೆದಿರಬೇಕು ಎನ್ನಿಸುತ್ತದೆ. ಅವು ಎಲ್ಲಿಯಾದರೂ ಪ್ರಕಟವಾಗಿವೆಯೆ?''

''ಪೂರ್ವಯೌವನದ ದಿನಗಳಲ್ಲಿ ನಾನೂ ಕವಿತೆ ಬರೆಯುತ್ತಿದ್ದೆ. ಮೊದಲು ಹಲವು ವರ್ಷ (೧೯೩೪–೩೮) ಕವಿತೆಯ ಹುಚ್ಚೇ ಹಿಡಿದಿತ್ತು. ಆದರೆ ಅದೇಕೋ ಅವು ನನಗೆ ತೃಪ್ತಿ ನೀಡಲಿಲ್ಲ. ಎಂತಲೇ ಅದುವರೆಗೆ ಬರೆದಿದ್ದ ನೂರಾರು ಕವಿತೆಗಳನ್ನು ಒಂದು ದಿನ ಹರಿದುಹಾಕಿಬಿಟ್ಟೆ. ಬೆಳಗಾಂವಿಯ ಕಿರಿಯರ ಬಳಗದ 'ತುಂಬಿ' ಸಂಗ್ರಹದಲ್ಲಿ 'ಕೂಲಿಯವನ ಕುದಿತ' ಎಂಬ ಕವಿತೆ ಪ್ರಕಟವಾಯಿತು.''

ಆದರೆ ಕಟ್ಟೀಮನಿ ಕಾವ್ಯಪ್ರೇಮಿ. ಯಾರೇ ಬರೆದಿರಲಿ. ಎಲ್ಲಿಯಾದರೂ ಒಳ್ಳೆಯ ಕವಿತೆ ಕಣ್ಣಿಗೆ ಬಿದ್ದರೆ ಅದನ್ನು ಮೆಚ್ಚಿಕೊಳ್ಳುತ್ತಾರೆ. ಇತರರಿಗೂ ಓದಿ ಹೇಳುತ್ತಾರೆ. ಕುವೆಂಪು ಅವರ ಹಿಂದಿನ ಕವಿತೆಗಳ ಸಾಲುಗಳನ್ನೂ ಲಹರಿ ಬಂದಾಗ ಹೇಳುತ್ತಿರುವುದುಂಟು. ಬಳ್ಳಾರಿ ಸಾಹಿತ್ಯ ಸಮ್ಮೇಳನದ (೧೯೫೮) ಕವಿಮೇಳದಲ್ಲಿ ಭಾಗವಹಿಸಿ ತಮ್ಮ ಒಂದು ಹೊಸ ಕವಿತೆ ಓದಿ ಎಲ್ಲರನ್ನೂ ಅಚ್ಚರಿಗೊಳಿಸಿದರು.

''ಸಣ್ಣಕಥೆಯ ರಚನಾಕ್ರಮದಲ್ಲಿ ನೀವು ಕೈ ಕೊಂಡಿರುವ ವಿಧಾನ ಯಾವುದು?''

''ಸಣ್ಣಕಥೆಯನ್ನು ರಚಿಸಲು ಒಂದು ಶಿಸ್ತು, ಒಂದು ಸಂಯಮ, ಒಂದು ಯೋಜನೆ, ಒಂದು ರೂಪು ಅತ್ಯಗತ್ಯ. ಆದಿ, ಬೆಳವಣಿಗೆ, ಅಂತಿಮ ರಸಾವೇಶ, ಅಂತ್ಯ–ಎಲ್ಲವೂ ಸಮಪರ್ಕವಾಗಿರಬೇಕು. ಅಗತ್ಯವಿದ್ದಷ್ಟೇ ಪಾತ್ರಗಳು, ಅವುಗಳ ಪರಸ್ಪರ ಸಂಬಂಧ ಸಂಭಾಷಣೆ, ಸ್ನೇಹ–ವೈರ ಎಲ್ಲವೂ ಅತ್ಯಂತ ಕೌಶಲ್ಯದಿಂದ ರೂಪುಗೊಳ್ಳಬೇಕಾಗುತ್ತದೆ. ಒಮ್ಮೊಮ್ಮೆ ಹತ್ತಿಪ್ಪತ್ತು ವರ್ಷಗಳವರೆಗೆ ತಲೆಯಲ್ಲೇ ಸುತ್ತುತ್ತಿದ್ದ ಕಥೆ ಥಟ್ಟನೆ ಯಾವುದೋ ಒಂದು ಸ್ಫೂರ್ತಿಯಲ್ಲಿ ಕಾಗದಕ್ಕಿಳಿಯುತ್ತದೆ. ಪಾತ್ರ–ಸನ್ನಿವೇಶ, ಆದಿ–ಅಂತ್ಯ ಎಲ್ಲವೂ ತಲೆಯಲ್ಲಿಯೇ ಹಲವು ವರ್ಷ ತಿರುಗಿದ್ದುದರಿಂದ ಇಂಥ ಕಥೆ ಖಂಡಿತವಾಗಿಯೂ ಯಶಸ್ವಿಯಾಗುತ್ತದೆ. 'ಗಂಡುಬೀರಿ', 'ಕುಂಭಕರ್ಣ', 'ಪೈಲವಾನನ ಪ್ರೇಯಸಿ'–ಇತ್ಯಾದಿ ನನ್ನ ಕಥೆಗಳು ಹಾಗೆ ಮೂಡಿದವು.''

‘‘ಕಾದಂಬರಿ ರಚನೆ ಸಣ್ಣಕಥೆಗಿಂತ ಸುಲಭವೆಂದು ಕೆಲವರ ಭಾವನೆ...’’

‘‘ಅದು ಸರಿಯಲ್ಲ. ಕಾದಂಬರಿಗೂ ಆದಿ–ಬೆಳವಣಿಗೆ ಅಂತ್ಯ ಎಲ್ಲ ಇರಬೇಕು. ಪಾತ್ರಗಳು ಜೀವಂತವಾಗಿ ಬರಬೇಕು. ಕಥೆಯಲ್ಲಿ ಓಟವಿರಬೇಕು. ವಾಸ್ತವತೆಯಿರಬೇಕು. ತಿಂಗಳಿಗೊಂದು ಕಾದಂಬರಿ ಬರೆದರೆ ಇದೆಲ್ಲ ಆಗುವಂತಿಲ್ಲ . ಒಮ್ಮೊಮ್ಮೆ ಒಂದೇ ಕಾದಂಬರಿಯ ಮೇಲೆ ನಾಲ್ಕೈದು ವರ್ಷ ಕೆಲಸ ಮಾಡಬೇಕಾಗುತ್ತದೆ. ‘ಮಣ್ಣುಮತ್ತು ಹೆಣ್ಣು’ ಅದನ್ನು ನಾನು ಐದು ಸಲ ಪುನಃ ಹರಿದು, ತಿದ್ದಿ ಬರೆದದ್ದುಂಟು.’’

ಅಂತೆಯೇ ಅವರ ಕಾದಂಬರಿಗಳಲ್ಲಿಯೇ ಅದು ಅತ್ಯಂತ ಕಲಾಸಂಯಮದಿಂದ ಕೂಡಿದೆ. ಅವರಿಗೆ ನಿಜವಾಗಿಯೂ ತೃಪ್ತಿಯನ್ನು ನೀಡಿದ ಕೃತಿ ಅದು.

‘‘ನೀವು ಜೀವಂತ ವ್ಯಕ್ತಿಗಳನ್ನು ಇದ್ದಕ್ಕಿದ್ದಂತೆ ಕಥೆ ಕಾದಂಬರಿಗಳಲ್ಲಿ ತರುತ್ತೀರೆಂದು ಕೆಲವರ ಟೀಕೆ.’’

‘‘ಅದು ಸಾಧುವಾದ ಟೀಕೆಯಲ್ಲ. ‘ಜರತಾರಿ ಜಗದ್ಗುರು’ ವಿನಂತಹ ನೂರಾರು ಸ್ವಾಮಿಗಳು ಇಂದು ಕರ್ನಾಟಕದಲ್ಲಿದ್ದಾರೆ. ಗಂಗಾಧರ ಶಾಸ್ತ್ರಿಯಂಥ ಶಾಸ್ತ್ರಿಗಳು ನೂರಾರು ಮಂದಿ ಇದ್ದಾರೆ. ಆ ಅನೇಕರ ಪ್ರತಿನಿಧಿಯಂತಿರುವ ಪಾತ್ರಗಳನ್ನು ನಾನು ಸೃಷ್ಟಿಸಿದ್ದೇನೆ ಅಷ್ಟೆ. ಸಾಮರಸೆಟ್ ಮಾಮ್, ಅಪ್ಟನ್ ಸಿಂಕ್ಲೇರ್, ಫಾಕ್ನರ್ ಇತ್ಯಾದಿ ಕಾದಂಬರಿಕಾರರು ಪಾತ್ರ ಸೃಷ್ಟಿಸಿದ್ದು ಹೀಗೆಯೇ. ವಾಸ್ತವ ಸೃಷ್ಟಿಯಲ್ಲಿರುವ ಸಾವಿರ ವ್ಯಕ್ತಿಗಳನ್ನು ನಿರೀಕ್ಷಿಸಿಯೇ ನಾವು ನಮ್ಮ ಪಾತ್ರ ತಯಾರಿಸಬೇಕು ತಾನೆ. ‘ಮಣ್ಣುಮತ್ತು ಹೆಣ್ಣು’, ‘ಪ್ರಪಾತ’ ಇತ್ಯಾದಿ ಕೃತಿಗಳಲ್ಲಿಯ ಪಾತ್ರಗಳು ರೂಪುಗೊಂಡದ್ದು ಹೀಗೆಯೇ.’’

‘‘ನವ್ಯ ಕಥೆ, ನವ್ಯ ಕಾದಂಬರಿಗಳು ಈಚೆಗೆ ಸೃಷ್ಟಿಗೊಳ್ಳುತ್ತಿವೆಯಲ್ಲ. ಅವುಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯೇನು?’’

‘‘ಸಾಹಿತ್ಯದಲ್ಲಿ ಹೊಸ ಪ್ರಯೋಗಗಳು ನಡೆದಿವೆ; ನಡೆಯಲೇಬೇಕು. ಆದರೆ ಈ ಬರೆಹಗಾರರಿಗೆ ವಿಷಯ ವೈವಿಧ್ಯವಿಲ್ಲ. ಬರೀ ‘ಸೆಕ್ಸ್’ನ ಸುತ್ತಮುತ್ತು ತಿರುಗುತ್ತಿದ್ದಾರೆ. ‘ನವ್ಯ’ದ ಗುಂಪುಗಳನ್ನು ಕಟ್ಟಿಕೊಂಡು, ತಮ್ಮದು ಮಾತ್ರವೇ ಶ್ರೇಷ್ಠ ಸಾಹಿತ್ಯ ಅಂತ ಪ್ರಚಾರ ಮಾಡುತ್ತ ಹೊರಟಿದ್ದಾರೆ. ಇದೊಂದು ಇಂಗ್ಲಿಷ್ ಪ್ರೊಫೆಸರುಗಳ ಕ್ಲಿಕ್ಕು. ಆದರೆ ಈ ‘ಸ್ವಪ್ರಚಾರ’ ಬಹಳ ದಿನ ನಡೆಯುವುದಿಲ್ಲ. ಯಾವ ಲೇಖಕನ ಯೋಗ್ಯತೆ ಎಷ್ಟು ಎಂಬುದು ವಾಚಕರಿಗೂ ಗೊತ್ತಿದೆ.’’

‘‘ಈ ಟೀಕೆ ಕಟುವಾಯಿತೋ ಏನೊ...’’

‘‘ಇರಬಹುದು. ಆದರೆ ಇದು ನನ್ನ ಖಂಡಿತವಾದ ಅಭಿಪ್ರಾಯ.’’

‘‘ಅದಿರಲಿ, ಪ್ರಗತಿಶೀಲ ಸಾಹಿತ್ಯದ ಆಂದೋಲನದಲ್ಲಿ ನೀವೂ ಭಾಗವಹಿಸಿದ್ದಿರಷ್ಟೆ, ‘ಉಷಾ’ ಸಂಪಾದಕರಾಗಿದ್ದಾಗ. ಕನ್ನಡ ಸಾಹಿತ್ಯಕ್ಕೆ ಅದರಿಂದ ಏನಾದರೂ ಪ್ರಯೋಜನವಾಯಿತೆ?’’

''ಆ ಆಂದೋಲನದಿಂದ ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಚೈತನ್ಯದ ಸಂಚಾರವಾಯಿತು. ಅದುವರೆಗೆ ಕೇವಲ ಮಧ್ಯಮವರ್ಗದ ಜೀವನಚಿತ್ರಣಕ್ಕೇ ಮೀಸಲಾಗಿದ್ದಕ್ಷೇತ್ರದಲ್ಲಿಕೆಳತರಗತಿಯ ಜನರ ಜೀವನ ಕಾಣಿಸಿಕೊಂಡಿತು. ಆದರೆ ಅದಕ್ಕೆ ಮುಖ್ಯ ಕಾರಣ– ಆ ಜೀವನವನ್ನು ಚೆನ್ನಾಗಿ ಬಲ್ಲವರು (ನನ್ನಂಥವರು)– ಕಥೆ, ಕಾದಂಬರಿ ರಚಿಸಿದ್ದು. ಆ ಚಳವಳಿ ಎಬ್ಬಿಸಿ ಹಿರಿಯ ಸಾಹಿತಿಗಳನ್ನು ಟೀಕಿಸಿದ್ದು ಮಾತ್ರ ಸರಿಯಲ್ಲವೆಂಬುದು ನನಗೆ ಆಗಲೇ ಗೊತ್ತಾಯಿತು. ನಾನು ಆ ವಾದಕ್ಕೆ ಹೋಗದೆ ಸುಮ್ಮನೆ ಕೃತಿ ರಚನೆ ಮಾಡುತ್ತ ಬಂದೆ. ಪ್ರಗತಿಶೀಲ ಸಾಹಿತ್ಯ ಎಂದರೇನು? ಎನ್ನುವುದಕ್ಕೆ 'ಜ್ವಾಲಾಮುಖಿಯ ಮೇಲೆ', 'ಕಾರವಾನ್' ಇವೇ ಉತ್ತರ ಎಂದು ವಿಮರ್ಶಕರೇ ಹೇಳಿದರು.''

''ವಿಮರ್ಶೆಯಿಂದ ಲೇಖಕರಿಗೆ ಮಾರ್ಗದರ್ಶನವಾಗುತ್ತದೆಂದು ಹೇಳುವುದರಲ್ಲಿ ನಿಮಗೆ ನಂಬಿಕೆ ಇದೆಯೆ?''

''ನಿಜವಾದ ವಿಮರ್ಶೆಯಿಂದ ಲೇಖಕನಿಗೆ ಖಂಡಿತ ಮಾರ್ಗದರ್ಶನ ಲಭಿಸುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ ಎಲ್.ಎಸ್. ಶೇಷಗಿರಿರಾಯರ ವಿಮರ್ಶೆಗಳಿಂದ ನಾನು ಬಹಳ ಉಪಕೃತನಾಗಿದ್ದೇನೆ.''

''ಜೀವನದ ಯಾವ ಒಳ್ಳೆಯ ಅಂಶವನ್ನೂ ನಿಮ್ಮ ಬರವಣಿಗೆ ಸಂಶಯದಿಂದ ನೋಡುತ್ತದೆಯೆಂದು ವಿಮರ್ಶಕರೊಬ್ಬರ ಅಭಿಪ್ರಾಯ. ಈ ಬಗ್ಗೆ ನೀವೇನಾದರೂ ಹೇಳುವುದಿದೆಯೆ?''

''ಒಳ್ಳೆಯದನ್ನು ಮೆಚ್ಚದಿರುವವನು ಲೇಖಕನಾಗುವುದೇ ಶಕ್ಯವಿಲ್ಲ . ಆದರೆ ಒಳ್ಳೆಯದೆಂದು ಹೊರಗೆ ಕಾಣಿಸಿ ಒಳಗೆ ಕುಟಿಲವಾಗಿರುವ ಅಂಶವನ್ನು ಎಕ್ಸರೇ ಹಾಯಿಸಿ ಕಂಡುಹಿಡಿಯಬೇಕಾದುದು ಲೇಖಕನ ಕರ್ತವ್ಯ. ಬಸವಣ್ಣ– ಅಲ್ಲಮರು ಮಾಡಿದ್ದು ಇದೇ ಅಲ್ಲವೇ? ಮಂತ್ರಿಮಾನ್ಯರಿಂದ ಬಡಕೂಲಿಗಾರರವರೆಗೆ ಜೀವನದ ಎಲ್ಲ ಅಂತಸ್ತುಗಳಲ್ಲಿರುವ ವ್ಯಕ್ತಿಗಳನ್ನು ನಾನು ಸಮೀಪದಿಂದ ಸೂಕ್ಷ್ಮವಾಗಿ ನೋಡಿದ್ದುಂಟು. ಬಹಳ ಒಳ್ಳೆಯವರೆಂದು ನಾವು ತಿಳಿದುಕೊಂಡಿರುವವರಲ್ಲೂ ಬಹಳ ಕೆಟ್ಟ ಅಭ್ಯಾಸಗಳಿರುವುದಂಟು. ಅವುಗಳನ್ನು ಮರೆಯಿಸಲು ಅವರು ಆಧ್ಯಾತ್ಮ, ಧರ್ಮ, ವೇದಾಂತಗಳ ಬುರುಡೆ ಹೊಡೆಯುತ್ತಾರೆ. ಈ ಕಪಟ ನಾಟಕದಿಂದ ಸಾಮಾನ್ಯ ಜನರು ಮರುಳಾದರು. ನಮ್ಮಂಥ ಲೇಖಕರು ಹೇಗೆ ತಾನೆ ಮರುಳಾಗುವುದು ಸಾಧ್ಯ? ನನ್ನ ಅನುಭವದಲ್ಲಿ ಮಾನವಜೀವಿಯಲ್ಲಿ ಒಳ್ಳೆಯ ಮತ್ತು ಕೆಟ್ಟ ಅಂಶಗಳೆರಡೂ ಇರುವುದುಂಟು. ಒಳ್ಳೆಯದನ್ನು ಮಾತ್ರ ನೋಡಿ ಮೋಸ ಹೋಗಬಾರದು. ಕೆಟ್ಟದ್ದನ್ನು ಕಂಡು ತಿರಸ್ಕರಿಸಬಾರದು. A writer should be like God. ವ್ಯಕ್ತಿಗಳ ಬಗ್ಗೆ ನಿರ್ಲಿಪ್ತನಾಗಿದ್ದುಕೊಂಡು ಕೃತಿ ರಚನೆ ಮಾಡಬೇಕು.''

''ಹಾಗಾದರೆ ಸಾಹಿತಿಯ ಹೊಣೆಗಾರಿಕೆಯೇನು?''

''ಸಾಹಿತಿಗಳೂ ಸಮಾಜಜೀವಿಗಳಾದ್ದರಿಂದ ಅವರ ಮೇಲೆ ದೊಡ್ಡ ಹೊಣೆಗಾರಿಕೆ ಇದೆ. ಜೀವನವನ್ನು ಒಂದೇ ದೃಷ್ಟಿಯಿಂದ ನೋಡುತ್ತ ಸಿನಿಕತನ ನಿರ್ಮಿಸುವಂಥ ಸಾಹಿತ್ಯವನ್ನು ನಾವು ಖಂಡಿತ ರಚಿಸಬಾರದೆಂದೇ ನನ್ನ ಅಭಿಪ್ರಾಯ.''

''ನಿಮ್ಮ ಕಾದಂಬರಿಗಳಲ್ಲಿ ಕೆಲವನ್ನು, ಚಲನಚಿತ್ರಕ್ಕೆ ಉಪಯೋಗಿಸಿದರೆ ತುಂಬ ಯಶಸ್ವಿಯಾಗಬಹುದೆಂದು ನನಗನಿಸುತ್ತದೆ.''

''ಹೌದು; ಆದರೆ ಇಂದಿನ ಕನ್ನಡ ಚಿತ್ರಪ್ರಪಚಂದಲ್ಲೂ ಹಲವು ಕ್ಲಿಕ್ ಉಂಟಾಗಿದ್ದು ಅವರು ನನ್ನ ಕಾದಂಬರಿಗಳತ್ತ ಕಣ್ಣೆತ್ತಿ ನೋಡುತ್ತಲಿಲ್ಲ. 'ಮಾಡಿ ಮಡಿದವರು' ಚಿತ್ರಿಸಲು ಸಾಗರದ ಉತ್ಸಾಹಿ ನಿರ್ಮಾಪಕರೊಬ್ಬರು ಮುಂದೆ ಬಂದಿದ್ದಾರೆ.''

ಕಟ್ಟೀಮನಿ ಈಗ ಧಾರವಾಡದ ನಿವಾಸಿಗಳಾಗಿದ್ದರೂ ಹಳ್ಳಿಯ ಮೇಲೆ ಅವರಿಗೆ ಪ್ರೇಮ ಕಡಿಮೆಯಾಗಿಲ್ಲ. ಮಲಾಮರಡಿಯಲ್ಲಿ ನೆಲಸಿದಾಗ ಜನತೆಯ ಹಾಗೂ ಸರಕಾರದ ಸಹಾಯದಿಂದ ಕುಡಿಯುವ ನೀರಿನ ಬಾವಿ, ಬೀದಿಗಳಿಗೂ ಕಲ್ಲಿನ ಪರಸಿ, ಮಕ್ಕಳಿಗಾಗಿ ಶಾಲೆ ಮಾಡಿಸಿದರು. ಲೇಖಕನು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಿದಷ್ಟೂ ಅವನ ಅನುಭವ ವಿಶಾಲವಾಗುತ್ತದೆ, ಜೀವಂತವಾಗುತ್ತದೆ. ನಮ್ಮ ಲೇಖಕರಲ್ಲಿ ಅನುಭವದ ವಿಸ್ತಾರ ಕಡಿಮೆ ಎನ್ನುವುದು ಎಲ್ಲರ ಬಗೆಗೂ ಸರಿಯಲ್ಲ. ನೂರು ಊರು ತಿರುಗಿ ಹತ್ತಿಪ್ಪತ್ತು ಊರುಗಳಲ್ಲಿ ನೆಲಸಿ, ಹಲವಾರು ಸಾಮಾಜಿಕ–ರಾಜಕೀಯ ಚಟುವಟಿಕೆಗಳಲ್ಲಿ ಆತ್ಮೀಯತೆಯಿಂದ ಭಾಗವಹಿಸುವ ಲೇಖಕನಿಗೆ ಅವನು ಸಾಯುವವರೆಗೆ ಬರೆದರೂ ಮುಗಿಯದಷ್ಟು ಅನುಭವ ಸಂಪತ್ತು ಲಭಿಸುತ್ತದೆ. ಕಟ್ಟೀಮನಿಯವರ ಮಟ್ಟಿಗಂತೂ ಈ ಮಾತು ನಿಜ.

''ಲೇಖನ ವೃತ್ತಿಯಿಂದಲೇ ಜೀವನ ನಡೆಸಿದವರು ಕನ್ನಡದಲ್ಲಿ ತೀರ ಸ್ವಲ್ಪ ಜನ, ಈ ಬಗ್ಗೆ ನಿಮ್ಮ ಅನುಭವವೇನು?''

''ಲೇಖನ ವೃತ್ತಿಯಿಂದಲೇ ಜೀವನ ನಡೆಸುವುದು ಸಾಧ್ಯವಿದೆಯೆಂಬುದಕ್ಕೆ ನಾನು ಇಂದು ತುಸುವಾದರೂ ನೆಮ್ಮದಿಯಿಂದ ಜೀವಿಸುತ್ತಿರುವುದೇ ಸಾಕ್ಷಿ. ಆದರೆ, ಮೊದಮೊದಲು ಬಹಳ ಕಷ್ಟವಾಗುತ್ತದೆ. ಒಮ್ಮೆ ಕೀರ್ತಿ, ಜನಪ್ರಿಯತೆ ಬಂದರೆ ಆಮೇಲೆ ಸುಲಭ.''

ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮತ್ತೆ ಧಾರವಾಡದಲ್ಲಿ ಮನೆ ಮಾಡಿರುವ (ಕಟ್ಟಿರುವ) ಕಟ್ಟೀಮನಿಯವರಿಗೆ ಇಬ್ಬರು ಗಂಡು ಹಾಗೂ ಮೂವರು ಹೆಣ್ಣುಮಕ್ಕಳು. ತಾಯಿ ೮೦ ವರ್ಷದ ತುಂಬು ಬಾಳನ್ನು ನಡೆಸಿ ಕಳೆದ ವರ್ಷ ಡಿಸೆಂಬರ್‌ನಲ್ಲಿ ಸಂತೋಷದಿಂದ ಕಣ್ಣು ಮುಚ್ಚಿದಳು. ಉಪ–ಉದ್ಯೋಗವೊಂದನ್ನು ಇದೀಗ ಅವರು ಪ್ರಾರಂಭಿಸಿದ್ದಾರೆ. ಅದೇ ಚಿಕ್ಕ ಪ್ರಮಾಣದ 'ಸಂಗಮ ಮುದ್ರಣಾಲಯ', ಅವರ ಬಾಳಿನ ನಾಲ್ಕನೆಯ ಅಧ್ಯಾಯಕ್ಕೆ ಪ್ರಾರಂಭ. ಕಾದಂಬರಿಗಳನ್ನು ಬರೆಯುತ್ತ ಅವರು ವ್ಯವಹಾರದೊಡನೆ ಹೊಸ ಪತ್ರಿಕೆಯನ್ನು ಹೊರಡಿಸಿದರೂ ಆಶ್ಚರ್ಯವಿಲ್ಲ. (ಧಾರವಾಡದ ಸಾಂಸ್ಕೃತಿಕ ಜೀವನಕ್ಕೆ ತಕ್ಕ ಪತ್ರಿಕೆಯೊಂದರ ಕೊರತೆ ಇದ್ದೇ ಇದೆ.)

''ಕಟ್ಟೀಮನಿಯವರೆ, ನೀವು ಬರೆಯುವುದು ಹೆಚ್ಚಾಗಿ ಯಾವ ವೇಳೆಯಲ್ಲಿ?''

''ಹೆಚ್ಚಾಗಿ ಬರೆಯುವುದು ಬೆಳಿಗ್ಗೆ ಸ್ನಾನಮಾಡಿ, ಕಾಫಿ ಕುಡಿದು ಸಿಗರೇಟು ಹೊತ್ತಿಸಿ ಎಂಟರಿಂದ ಹನ್ನೊಂದರವರೆಗೆ. ಸಂಜೆ ಬರೀ ವಾಚನ ಇಲ್ಲವೆ ಅಲೆದಾಟ.''

''ಅಂದ ಹಾಗೆ ನೀವು ಸಿಗರೇಟು ಬಹಳ ಸೇದುತ್ತೀರಿ. ಅದರಿಂದ ಸ್ಫೂರ್ತಿ ಗೀರ್ತಿ ಏನಾದರೂ....''

''ಸೀಗರೇಟಿನಿಂದ ಸ್ಫೂರ್ತಿ? ಛೆ, ಅದೊಂದು ಮಾಯಾಜಾಲ; ದುರಭ್ಯಾಸ. ನಡುವೆ ಎರಡು ವರ್ಷ ಅದರಿಂದ ತಪ್ಪಿಸಿಕೊಂಡಿದ್ದೆ. ಆದರೆ ದಿವಂಗತ ಆನಂದರು ಗೇಲಿಮಾಡಿ, ಮತ್ತೆಸಿಗರೇಟು ದೀಕ್ಷೆ ಕೊಟ್ಟರು.''

''ನಮ್ಮ ಸರಕಾರ ಲೇಖಕರಿಗೆ ಯಾವ ಅನುಕೂಲತೆಗಳನ್ನು ಒದಗಿಸಿ ಕೊಡಬೇಕೆನ್ನುತ್ತೀರಿ?''

''ವರ್ಷಕ್ಕೆ ನಾಲ್ಕು ಲೇಖಕರಿಗೆ ಐದೈದುನೂರು ರೂಪಾಯಿ ಹಾಗೂ ಶಾಲುಕೊಟ್ಟು 'ಗೌರವಿಸುವ' ಹುಚ್ಚುಚ್ಚಾರವನ್ನು ಸರಕಾರ ಬಿಡಬೇಕು. ಕುವೆಂಪು ಬೇಂದ್ರೆ, ಗೊರೂರರಿಗೆ ಕೊಟ್ಟಂತೆ ಇನ್ನೂ ಹತ್ತು ಮಂದಿ ಪ್ರತಿಭಾವಂತ ಲೇಖಕರಿಗೆ ತಿಂಗಳಿಗೆ ನಾಲ್ಕೈದು ನೂರರಂತೆ ಮಾಸಾಶನ ಕೊಟ್ಟರೆ ಅವರು ನೆಮ್ಮದಿಯಿಂದ ಕುಳಿತು ಕೃತಿ ರಚನೆ ಮಾಡಬಹುದು.''

ಬಹುದಿನಗಳಿಂದಲೂ ಕಟ್ಟೀಮನಿಯವರ ತಲೆಯಲ್ಲಿ ಸುಳಿಯುತ್ತಿದ್ದುದು ಕಿತ್ತೂರಿನ ಇತಿಹಾಸ. ಅದರ ಬಗ್ಗೆ ಸಾಕಷ್ಟು ಅಭ್ಯಾಸವನ್ನು ಮಾಡಿ ಸಂಗತಿಗಳನ್ನು ಕಲೆಹಾಕಿದ್ದಾರೆ. 'ಕಿತ್ತೂರ ಚೆನ್ನಮ್ಮ'ನನ್ನು ಕುರಿತ ಬೃಹತ್ ಕಾದಂಬರಿ ರಚನೆಯಲ್ಲಿ ಅವರೀಗ ತೊಡಗಿದ್ದಾರೆ. 'ಪೌರುಷ ಪರೀಕ್ಷೆ', 'ದ್ರೋಹಿ', 'ಸಮರಭೂಮಿ', 'ರಾಯನಾಯಕ;' ಮೊದಲಾದ ಐತಿಹಾಸಿಕ ಕಾದಂಬರಿಗಳನ್ನು ಬರೆದು ಈ ದಿಸೆಯಲ್ಲಿ ಅವರ ಕೈ ಆಗಲೇ ಪಳಗಿದೆ. ಒಂದು ಸಾಮಾಜಿಕ ಮಹಾಕಾದಂಬರಿ ಅವರ ತಲೆಯಲ್ಲಿದೆ. ತಮ್ಮ ಆತ್ಮಕಥೆಯನ್ನು ಬರೆಯಬೇಕೆಂದಿದ್ದಾರೆ. ಅದೆಲ್ಲ ನಿಧಾನವಾಗಿ ಆಗಬೇಕಾದ ಕೆಲಸ. ಅವು ಕೃತಿ ರೂಪದಲ್ಲಿ ಬಂದಾಗ ಕನ್ನಡ ಸಾಹಿತ್ಯದ ಶ್ರೀಮಂತಿಕೆ ಹೆಚ್ಚುವುದರಲ್ಲಿ ಸಂದೇಹವಿಲ್ಲ.

'ಮಯೂರ'
೧೯೬೮

■■

ಜೊತೆಗಾರ ಜಿಎಸ್‌ಎಸ್

ಗೆಳೆಯ ಜಿ. ಎಸ್. ಶಿವರುದ್ರಪ್ಪನವರೂ ನಾನೂ ಸ್ನೇಹಭಾವದಲ್ಲಿ ಎಷ್ಟೊಂದು ಸಮರಸರಾಗಿದ್ದೇವೆಂದರೆ ನಮ್ಮಿಬ್ಬರ ಮೊದಲ ಪರಿಚಯ ಎಂದು ಮತ್ತು ಹೇಗೆ ಆಯಿತೆಂಬುದನ್ನು ಕೂಡ ಅದು ಮರೆಸಿಬಿಟ್ಟಿದೆ. ಆದರೆ ಇಷ್ಟು ಮಾತ್ರ ನಿಜ; ನಾವಿಬ್ಬರೂ ಇದ್ದ ಮೈಸೂರು, ಧಾರವಾಡಗಳ ಅಂತರವನ್ನು ಕಡಿಮೆ ಮಾಡಿ ಸ್ನೇಹ ಸೇತುವೆಯನ್ನು ನಿರ್ಮಿಸಿದ್ದು ಮಾತ್ರ ಕಾವ್ಯವೇ. ಇನ್ನೂ ವಿದ್ಯಾರ್ಥಿಗಳಾಗಿದ್ದಾಗ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಕವಿತೆಗಳನ್ನು ಮೆಚ್ಚಿಕೊಂಡು ನಾವು ಪರಸ್ಪರ ಪತ್ರ ಬರೆಯಲು ಪ್ರಾರಂಭಿಸಿದೆವೆಂದು ತೋರುತ್ತದೆ. 'ಜಯಂತಿ'ಯಲ್ಲಿ ಪ್ರಕಟವಾದ ನನ್ನ 'ಮೇಘೋಪಾಸನೆ' ಕವಿತೆಯ ಬಗ್ಗೆ ಅವರು ಅಂಥ ಒಂದು ಪತ್ರ ಬರೆದದ್ದು (೧೯೪೮) ನನಗೆ ನೆನಪಿದೆ. ಆಮೇಲೆ ಅವರೊಮ್ಮೆ ಧಾರವಾಡಕ್ಕೆ ಬಂದು ಒಂದೆರಡು ದಿನ ನನ್ನ ಕೋಣೆಯಲ್ಲಿಯೇ ಇದ್ದರು. ನಾನು ಊಟ ಮಾಡುತ್ತಿದ್ದ ಖಾನಾವಳಿಯ ಜೋಳದ ರೊಟ್ಟಿ ಅವರಿಗೆ ರುಚಿಕೊಟ್ಟಿತು. ಈಗಲೂ ಧಾರವಾಡಕ್ಕೆ ಬಂದಾಗ ರೊಟ್ಟಿಯ ಊಟವನ್ನೇ ಅವರು ಹೆಚ್ಚು ಪ್ರೀತಿಸುತ್ತಾರೆ.

ಬಿ.ಎ. (ಪ್ರಥಮ ದರ್ಜೆಯಲ್ಲಿ) ಪಾಸಾಗಿ ದಾವಣಗೆರೆಯ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ಶಿವರುದ್ರಪ್ಪನವರು ಕೆಲಸ ಮಾಡುತ್ತಿರುವಾಗ (೧೯೪೯–೫೧) ಕಾಲೇಜಿನ ಸುಪರಿಂಟೆಂಡೆಂಟ್‌ರಾಗಿದ್ದ ದಿವಂಗತ ನಾ. ಕಸ್ತೂರಿಯವರೊಂದಿಗೆ ಅವರೊಮ್ಮೆ ಧಾರವಾಡಕ್ಕೆ ಬಂದರು. ಜೊತೆಗೆ ನಾಲ್ಕೈದು ಜನ ಅವರ ಸಹೋದ್ಯೋಗಿಗಳೂ ಇದ್ದರು. (ಅವರಲ್ಲಿ ಜಿ. ಬ್ರಹ್ಮಪ್ಪನವರೂ ಒಬ್ಬರು.) ಕರ್ನಾಟಕ ಕಾಲೇಜಿನ ಹಾಸ್ಟೆಲ್ಲೊಂದರಲ್ಲಿ ಪ್ರೊ. ಮಾಳವಾಡರು ಅವರಿಗೆಲ್ಲ ಏರ್ಪಾಡು ಮಾಡಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ವಿಭಾಗದ ಕಟ್ಟಡಕ್ಕೆ ಅಡಿಗಲ್ಲನ್ನಿಡುವ ಸಮಾರಂಭ ಅದೇ ಸಂದರ್ಭದಲ್ಲಿ ಡಾ. ರಾಜೇಂದ್ರ ಪ್ರಸಾದರಿಂದ ನೆರವೇರಿತು. (೧೯೫೦). ಆ ಸಂದರ್ಭಕ್ಕಾಗಿಯೇ ನಾ. ಕಸ್ತೂರಿಯವರು ತಮ್ಮ ಈ ಪ್ರವಾಸವನ್ನು ಯೋಜಿಸಿಕೊಂಡಿದ್ದರೆಂದು ತೋರುತ್ತದೆ. ಆಗ ಶಿವರುದ್ರಪ್ಪನವರು ತಮ್ಮ ಮಿತ್ರರೊಂದಿಗೆ ನನ್ನ ಕೋಣೆಗೆ ಬಂದರು. ನಾನು ಸ್ಟೋವ್ ಹೊತ್ತಿಸಿ ಚಹ ಮಾಡಿಕೊಟ್ಟೆ.

ಆ ಸಂದರ್ಭದಲ್ಲಿ ಜಿ. ಬ್ರಹ್ಮಪ್ಪನವರನ್ನು ನಿಮಿತ್ತಮಾಡಿಕೊಂಡು ಪರಸ್ಪರರು ಹಾಸ್ಯದ ಚಟಾಕಿಗಳನ್ನು ಹಾರಿಸುತ್ತವಿನೋದವಾಡಿದ್ದು ನನಗೆ ಚೆನ್ನಾಗಿ ನೆನಪಿದೆ. ಹೋಗುವಾಗ ನನಗೂ ದಾವಣಗೆರೆಗೆ ಬರಲು ಶಿವರುದ್ರಪ್ಪನವರು ಆಮಂತ್ರಣ ನೀಡಲು ಮರೆಯಲಿಲ್ಲ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಬಿ.ಎ. ಮಾಡಿದ ಎಚ್. ಎಸ್. ಯೋಗೀಶ ಕನ್ನಡ ಎಂ.ಎ. ಮಾಡಲು ಧಾರವಾಡಕ್ಕೆ ಬಂದು ನನ್ನ ಜೊತೆಗಿದ್ದರು. ಅವರೂ ದಾವಣಗೆರೆಯವರಾಗಿದ್ದು ಶಿವರುದ್ರಪ್ಪನವರ ಪರಿಚಯ ಮೊದಲೇ ಆಗಿತ್ತು. ಹೀಗಾಗಿ ನಾವು ದಾವಣಗೆರೆಯ ಪ್ರವಾಸ ಕೈಕೊಳ್ಳಲು (೧೯೫೧) ಅನುಕೂಲವಾಯಿತು. ಶಿವರುದ್ರಪ್ಪನವರೂ ಅದೇ ತಾನೆ ಅಲ್ಲಿ ಮನೆ ಮಾಡಿ ಸಂಸಾರ ಹೂಡಿದ್ದರು. ಒಂದು ದಿನ ಅವರ ಆ ಚಿಕ್ಕ, ಚೊಕ್ಕ ಮನೆಯಲ್ಲಿ ನಮಗೆಲ್ಲ ಸೊಗಸಾದ ಊಟವಾಯಿತು. ಅವರ ಕಾಲೇಜಿಗೆ ಕರೆದುಕೊಂಡು ಹೋದದ್ದಲ್ಲದೆ ತಮ್ಮ ವಿದ್ಯಾರ್ಥಿಗಳೆದುರು ನನ್ನಿಂದ ಒಂದು ಚಿಕ್ಕ ಭಾಷಣವನ್ನೂ ಮಾಡಿಸಿಬಿಟ್ಟರು. ಅಲ್ಲಿದ್ದ ಎರಡು ಮೂರು ದಿನ ತುಂಬ ಸಂತೋಷವಾಗಿ ಕಳೆದವು. ಊರಾಚೆಯ ಬಯಲಲ್ಲಿ ಸಂಜೆ ತಿರುಗಾಡಲು ನಾವು ಮೂವರೂ ಹೋಗಿ ಒಂದು ದಿಬ್ಬದ ಮೇಲೆ ಕುಳಿತಾಗ, ತಾವೂ ಪ್ರಭುಪ್ರಸಾದರೂ ದಿನವೂ ಇದೇ ದಿಬ್ಬದ ಮೇಲೆ ಬಂದುಕೂಡುವುದಾಗಿ ಶಿವರುದ್ರಪ್ಪನವರು ಹೇಳಿದರು. (ಅವರು ಬರೆದ ಹಾಸ್ಯ ಕವನಗಳಿಗಾಗಿ 'ದಿಬ್ಬಯ್ಯ' ಎಂಬ ಕಾವ್ಯನಾಮವನ್ನು ಕಸ್ತೂರಿಯವರು ಸೂಚಿಸಲು ಈ ದಿಬ್ಬವೇ ಕಾರಣವಂತೆ.)

ದಾವಣಗೆರೆಯಲ್ಲಿ ಶಿವರುದ್ರಪ್ಪನವರ ಆತ್ಮೀಯ ಗೆಳೆಯರಲ್ಲಿ ಜಯದೇವ ಸ್ಟುಡಿಯೋದ ಜಯದೇವ ಒಬ್ಬರಾಗಿದ್ದರು. ನಾವು ಅವರಲ್ಲಿ ಒಂದು ಫೋಟೋ ತೆಗೆಸಿದ ಹಾಗೆ ನೆನಪು. ಆದರೆ ಆ ಸ್ಟುಡಿಯೋದ ಅಟ್ಟದ ನೆನಪು ನನಗುಳಿದಿರುವುದು ಬೇರೆ ಕಾರಣದಿಂದ. ತಾವು ಬರೆದ ಕೆಲವು ಕವಿತೆಗಳನ್ನು ಶಿವರುದ್ರಪ್ಪನವರು ಆ ಅಟ್ಟದ ಮೇಲೆ ಕುಳಿತಾಗ ಹಾಡಿ ತೋರಿಸಿದರು.

ಅಂಧಕಾರ ಮುತ್ತುತಿದೆ
ಚಂದದ ಬೆಳಕಾರುತಿದೆ

* * *

ಜೀವ ಜಾತ್ರೆಯಲಿ
ಪ್ರಾಣ ಪಾತ್ರೆಯಲಿ ತುಂಬಿ ಬಾ
ರಸದುಂಬಿ ಬಾ, ಮೈದುಂಬಿ ಬಾ

* * *

ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ
ನಾಲ್ಕು ಹನಿಯ ಚೆಲ್ಲಿ

* * *

ಇದಾವ ರಾಗ
ಮತ್ತೆ -ಇದಾವ ರಾಗ?
ಎದೆಯಾಳದಿಂದೆದ್ದು ನಭನೀಲಿಗೇರುತಿದೆ

ತಮ್ಮದೇ ಆದ ರಾಗ–ಧಾಟಿಯಲ್ಲಿ ಅಂದು ಅವರು ಹಾಡಿ ತೋರಿಸಿದ ಪದ್ಯಗಳ ನೋವಿನ ಸಾಲುಗಳು ಇನ್ನೂ ನನ್ನ ಕಿವಿಯಲ್ಲಿ ಗುಣುಗುಣಿಸುತ್ತಿವೆ. (ಈ ಕವಿತೆಗಳು ಅವರ 'ಸಾಮಗಾನ' ಸಂಕಲನದಲ್ಲಿ ಆಮೇಲೆ ಪ್ರಕಟವಾದವು). ಗೆಳೆಯ ಯೋಗೀಶ ಭಾವಗೀತಗಳನ್ನು ಹಾಡುವುದರಲ್ಲಿ ಸ್ವಲ್ಪ ಉತ್ಸಾಹಿ. ಧಾರವಾಡಕ್ಕೆ ಬಂದ ಮೇಲೂ ಅವರು ಈ ಕವಿತೆಗಳನ್ನು ಆಗಾಗ ಹಾಡಿಕೊಳ್ಳುತ್ತಿದ್ದರು. ಜಯದೇವ ಸ್ಟುಡಿಯೋದ ಅಟ್ಟದ ಮೇಲೆ ಶಿವರುದ್ರಪ್ಪನವರು ಆಗಾಗ ಹೋಗಿ ಕುಳಿತುಕೊಳ್ಳುತ್ತಿದ್ದಾಗ ಸಮೀಪದ ಹೋಟೆಲಿನಿಂದ ಕೇಳಿ ಬರುತ್ತಿದ್ದ ಕೆಲವು ಒಳ್ಳೇ ಹಿಂದೀ ಸಿನಿಮಾ ಹಾಡುಗಳಿಗೆ ಕಿವಿಗೊಡುತ್ತಿದ್ದರಂತೆ. ಮುಂದೆ ತಾವು ಬರೆದ ಕವಿತೆಗಳಲ್ಲಿ ಆ ಧಾಟಿಯನ್ನೇ ಹಿಡಿದಿಡುತ್ತಿದ್ದರಂತೆ – ಹೀಗೆಂದು ಸ್ಟುಡಿಯೋದ ಜಯದೇವ ಹಾಸ್ಯ ಮಾಡಿ ಹೇಳುತ್ತಿದ್ದರು.

೧೯೫೧ರ ವೇಳೆಗೆ ದಾವಣಗೆರೆಯಿಂದ ಮೈಸೂರಿನ ಯುವರಾಜಾ ಕಾಲೇಜಿಗೆ ವರ್ಗವಾಗಿ ಅವರು ಹೋದಮೇಲೆ ನಮ್ಮ ನಡುವೆ ಏಳೆಂಟು ವರುಷ ಪತ್ರವ್ಯವಹಾರ ನಿರಂತರವಾಗಿ ನಡೆಯಿತು. ಪತ್ರಗಳು ಆದಷ್ಟು ದೀರ್ಘವಾಗಿಯೇ ಇರುತ್ತಿದ್ದವು. ಹೊಸದಾಗಿ ಬರೆದ ಕವಿತೆಗಳನ್ನು ಪರಸ್ಪರರು ಕಳಿಸಿ ಅಭಿಪ್ರಾಯ ಪಡೆಯುತ್ತಿದ್ದೆವು. ಅವರ ಕೆಲವು ಕವಿತೆಗಳು ಧಾರವಾಡದ 'ಜಯಂತಿ', 'ಜಯಕರ್ನಾಟಕ'ದಲ್ಲಿ ಪ್ರಕಟಗೊಳ್ಳಲು ನಾನು ನೆರವಾಗಿದ್ದರೆ, ನನ್ನ ಒಂದೆರಡು ಕವನಗಳು 'ಪ್ರಬುದ್ಧ ಕರ್ಣಾಟಕ'ದಲ್ಲಿ ಅದೂ ಮುಖಪುಟದಲ್ಲಿ ಪ್ರಕಟಗೊಳ್ಳಲು ಅವರು ಕಾರಣರಾಗಿದ್ದರು.

೧೯೬೩ರಲ್ಲಿ ಶಿವರುದ್ರಪ್ಪನವರು ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಹೋದ ಮೇಲೆ ನಮ್ಮ ಪತ್ರಗಳ ನಡಿಗೆ ನಿಧಾನವಾಯಿತು. ಮೊನ್ನೆ ಹಿಂದಿನ ಫೈಲೊಂದನ್ನು ತಿರುವಿ ಹಾಕುತ್ತಿರುವಾಗ ೧೯೫೧ರಿಂದ ೧೯೫೬ರವರೆಗಿನ ಅವರ ಏಳೆಂಟು ಪತ್ರಗಳು ಸಿಕ್ಕಾಗ ಹಿಡಿಸಲಾರದಷ್ಟು ಸಂತೋಷವಾಯಿತು. ಮೂರು ದಶಕಗಳಿಗೂ ಹಿಂದಿನ ನೆನಪುಗಳು ಮತ್ತೆ ಮರುಕಳಿಸಿದವು. ಪತ್ರಗಳಲ್ಲಿಯೂ ತಮ್ಮ ವ್ಯಕ್ತಿತ್ವವನ್ನು ಪಡಿಮೂಡಿಸುವ ಬರವಣಿಗೆ ಅವರದು. ತಮ್ಮ ಅಂತರಂಗದ ಅನಿಸಿಕೆಗಳನ್ನು ಸಂಕೋಚವಿಲ್ಲದೆ ಪತ್ರಗಳಲ್ಲಿ ಅವರು ವ್ಯಕ್ತಪಡಿಸುವುದುಂಟು. ನಿಸರ್ಗಪ್ರೇಮ, ಸೌಂದರ್ಯಾನುಭೂತಿ, ಕಾವ್ಯವಿಮರ್ಶೆ, ತತ್ತ್ವನಿಷ್ಠೆ, ಎರಡಿಲ್ಲದ ಸ್ನೇಹ, ಅಲ್ಲಲ್ಲಿ ವಿನೋದ–ಹೀಗೆ ಹಲವಾರು ಅಂಶಗಳು ಅವುಗಳಲ್ಲಿ ವ್ಯಕ್ತಗೊಂಡಿರುವುದನ್ನು ನೋಡಿದಾಗ ಇಂದಿಗೂ ಅದೇ ವ್ಯಕ್ತಿತ್ವ ಇನ್ನಷ್ಟು ದೃಢವಾಗಿ ಮೈದುಂಬಿಕೊಂಡು ಬೆಳೆದು ನಿಂತಿರುವುದು ಕಂಡುಬರುತ್ತದೆ.

ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಕೈಕೊಳ್ಳುವುದು ಅವರ ಪ್ರಿಯವಾದ ಹವ್ಯಾಸಗಳಲ್ಲಿ ಒಂದು. ('ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' 'ಗಂಗೆಯ ಶಿಖರಗಳಲ್ಲಿ',

'ಅಮೇರಿಕದಲ್ಲಿ ಕನ್ನಡಿಗ'– ಈ ಪ್ರವಾಸ ಕಥನಗಳಲ್ಲಿ ಅವರ ಬರವಣಿಗೆಯ ಸೊಗಸನ್ನು ಸವಿಯಬಹುದು.) ಒಂದು ದಸರಾ ರಜೆಯಲ್ಲಿ ಕೊಡಗಿನ ರಸವಿಹಾರವನ್ನು ಮುಗಿಸಿಕೊಂಡು ಬಂದುದನ್ನು ಒಂದು ಪತ್ರದಲ್ಲಿ (೧೬–೧೦–೧೯೫೧) ಬಣ್ಣಿಸುತ್ತ ಮಡಿಕೇರಿಯ ಬಗ್ಗೆ ಬರೆದಿದ್ದರು.

''ಹೊಸದಾಗಿ ಕಂಡವರಿಗೆ ಅದು ಅಲಕಾವತಿಯೇ. ಏಕೆಂದರೆ ನಮ್ಮ ಕಾಲು ನೆಲದಲ್ಲಿದ್ದರೆ ನಮ್ಮ ತಲೆ ಆಕಾಶದಲ್ಲಿರುತ್ತದೆ ಅಷ್ಟು ಹತ್ತಿರ ಅಲ್ಲಿ ಆಕಾಶ–ಅದು ಮೋಡವಾದಾಗ, ಮೋಡ ಚದುರಿ ಬಾನು ತಿಳಿಯಾದಾಗ ಬಲು ದೂರ''. ತಮ್ಮ ಮುಂದಿನ ಪತ್ರದ ಜೊತೆಗೆ ಆಗ ಬರೆದ 'ಮಡಿಕೇರಿಯ ರಾಜಾಸೀಟ್' ಕವಿತೆಯನ್ನು ಕಳಿಸಿಕೊಟ್ಟರು. ಇದು ಅವರ ಯಾವ ಕವನಸಂಗ್ರಹದಲ್ಲಿಯೂ ಬಂದಂತಿಲ್ಲ.

ಮಾನವ ಸಂಬಂಧಗಳಲ್ಲಿಯೂ ಗುಣಗೌರವದ ಆಯ್ಕೆ ಇದ್ದೇ ಇರುತ್ತದೆ. ಪು.ತಿ.ನ. ಅವರೊಡನೆ ತಮ್ಮ ಪ್ರಥಮ ದರ್ಶನದ ಬಗ್ಗೆ ಅದೇ ಪತ್ರದಲ್ಲಿ (೧೬–೧೦–೫೧) ಹೀಗೆ ಬರೆದಿದ್ದಾರೆ : ''ಮಡಿಕೇರಿಯಿಂದ ಬಂದವನೇ ಬೆಂಗಳೂರಿಗೆ ಹೋದೆ ನನ್ನ ಗೆಳೆಯರೊಡನೆ. ಅಲ್ಲಿ ಕವಿ ಶ್ರೀ ಪು.ತಿ. ನರಸಿಂಹಾಚಾರ್ಯರ ದರ್ಶನವಾಯಿತು. ಅವರ ಮನೆಯಲ್ಲೇ ರಸದೂಟವೂ ಆಯಿತು ಒಂದು ದಿನ. ಎಂತೆಂತಹ ಹಿರಿಯ ವ್ಯಕ್ತಿಗಳು ಇದ್ದಾರೆ ಅಲ್ಲಲ್ಲಿ ಎನಿಸಿತು. ಅವರು ಒಳಗೂ ಮೃದು : ಹೊರಗೂ ಮೃದು. ತರುಣ ಲೇಖಕರ ಮೇಳೆ ಅಮಿತ ವಾತ್ಸಲ್ಯ. ಅವರಿಗೆ ನಮ್ಮನ್ನು ಕಂಡು ಏನೊ ಒಂದು ಭರವಸೆ, ನಿಮ್ಮ ಹೆಸರನ್ನು ಹೇಳಿದರು. ನಿಮ್ಮನ್ನು ಆಗಲೇ ಹಿಂದೊಮ್ಮೆ ನೋಡಿದ್ದರಂತೆ. ನನಗೆ ನನ್ನ ಕವನಗಳನ್ನು (ಇತ್ತೀಚಿನ) ಓದಿ ಅಮೂಲ್ಯವಾದ ಸಲಹೆಗಳನ್ನು ಕೊಟ್ಟರು.'' ಹೌದು, ಪು.ತಿ.ನ. ಅವರನ್ನು ಮೊದಲ ಸಲ ಕಂಡಾಗ ಧಾರವಾಡದಲ್ಲಿ (೧೯೫೦) ನನಗೂ ಇದೇ ಅನುಭವವಾಯಿತು.

ನಮ್ಮ ಕವನಸಂಗ್ರಹಗಳು ಪ್ರಕಟವಾದೊಡನೆಯೇ ಪರಸ್ಪರ ವಿನಿಮಯಗೊಳ್ಳುತ್ತಿದ್ದವು. ನಮ್ಮ ನಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಮುಕ್ತಮನಸ್ಸಿನಿಂದ ಪತ್ರಗಳಲ್ಲಿ ಬರೆಯುತ್ತಿದ್ದೆವು. ನನ್ನ 'ಆಕಾಶ ಬುಟ್ಟಿ', 'ಮಧುಚಂದ್ರ' ಹಾಗೂ ದೀಪಧಾರಿ' ಸಂಗ್ರಹಗಳನ್ನು ಕುರಿತು ಅವರು ತಮ್ಮ ದಿ. ೨೫–೫–೫೨, ೨೨–೧೧–೫೪ ಹಾಗೂ ೨೪–೭–೫೭ರ ಪತ್ರಗಳಲ್ಲಿ ಬರೆದ ವಿಮರ್ಶಾತ್ಮಕ ನುಡಿಗಳಿಂದ ನಾನು ಪ್ರಯೋಜನ ಪಡೆದದ್ದುಂಟು. ಅವರ 'ಸಾಮಗಾನ'ದ ಬಗ್ಗೆ ಬರೆಯುತ್ತ ಕುವೆಂಪು ಪ್ರಭಾವದಿಂದ ಬೇಗ ಪಾರಾಗಬೇಕೆಂಬ ನನ್ನ ವಿಚಾರವನ್ನು ಸೂಚಿಸಿದ್ದೆನೆಂದು ತೋರುತ್ತದೆ. ಅವರು ತಮ್ಮ ಉತ್ತರದಲ್ಲಿ (೨೦–೧–೧೯೫೨) ಹೀಗೆ ಬರೆದರು: ''ಓದಿದೆ, ಸ್ನೇಹಪೂರ್ವಕವಾದ ನಿಮ್ಮ ನಿರ್ದೇಶವಾಣಿಗೆ ಮಣಿದೆ; ಒಪ್ಪಿದೆ. ನಿಜ, ನೀವು ಹೇಳುವುದೆಲ್ಲವೂ ನಿಜ. 'ಸಾಮಗಾನ' ಪ್ರಥಮಕೃತಿ ಎಂಬುದು ನಿಮಗೂ ಗೊತ್ತು, ಮುಂದೆ ಎಚ್ಚರಿಕೆಯಿಂದ ಅನ್ಯಪ್ರಭಾವದ 'ರಾಹು'ವಿನಿಂದ ವಿಮುಕ್ತನಾಗಲು ಪ್ರಯತ್ನಿಸುತ್ತೇನೆ. ಮನಸ್ಸಿಗೂ ಒಂದು ಬೆಳವಣಿಗೆ ಉಂಟು. ಮಿತ್ರರ ಎಚ್ಚರಿಕೆಯಿಂದ, ಹಿರಿಯರ ಹರಕೆಯಿಂದ ಸೂಕ್ಷ್ಮವಾದ

ಆತ್ಮನಿರೀಕ್ಷೆಯಿಂದ 'ತನ್ನ ವ್ಯಕ್ತತೆಯಲ್ಲಿ ತನ್ನ ಮುಕ್ತಿಯ ಕಂಡು ಈ ಜೀವ ಸಫಲತೆಯ ಪಡೆಯಬಹುದು' ಎಂಬ ಆಶೆಯುಂಟು. ನಮ್ಮ ಪ್ರಯತ್ನಗಳ ಹಿಂದೆ ನಮ್ಮ ಏಳು ಬೀಳುಗಳ ಸೂತ್ರವನ್ನು ಹಿಡಿದ ಶಕ್ತಿಯೊಂದು ಉಂಟಲ್ಲ! ಯಾರು ಶಕ್ತಿಯೋ ಅದೇ ದಾರಿಯೂ ಆಗಿ ಬೆಳಕೂ ಆದೀತು.'' ಆಗಲೇ ಎಂಥ ಆಳವಾದ ವಿವೇಚನೆ! ಮುಂದುವರಿದು ಅದೇ ಪತ್ರದಲ್ಲಿ, ''ಜೀವನದ ಕಹಿ ನನ್ನ ಅನುಭವಕ್ಕೆ ಧಾರಾಳವಾಗಿ ದಯಮಾಡಿಸಿದೆ. ಮೊದಲಿನಿಂದ ಇದುವರೆಗೂ ಸಿಹಿಗಿಂತ ಕಹಿಯನ್ನೇ ಹೆಚ್ಚಾಗಿ ಸವಿದರೂ ನನ್ನ ಕವನಗಳಲ್ಲಿ ಆ ತುಮುಲ ಅಷ್ಟು ಸ್ಪಷ್ಟವಾಗಿ ಮೂಡಿ ಬಂದಂತೆ ತೋರದಿರುವುದು ನನಗೇ ಆಶ್ಚರ್ಯ. ಬಹುಶಃ ಅದೆಲ್ಲವೂ 'ಮುಂದೆ ಕಟ್ಟಿಹುದು ಬುತ್ತಿ ಸರ್ವಜ್ಞ' ಎಂಬ ರೀತಿಯದೋ?'' ಅಂದ ಹಾಗೆ ಅವರ ಮುಂದಿನ ಕವನಸಂಗ್ರಹಗಳಲ್ಲಿ ಆ 'ಕಟ್ಟಿದ ಬುತ್ತಿ'ಯನ್ನು ಅವರು ಧಾರಾಳವಾಗಿ, ಆದರೆ ಕಾವ್ಯದ ದೃಷ್ಟಿಯಿಂದ ರುಚಿಕರವಾಗಿ ಹಾಗೂ ಆರೋಗ್ಯಕರವಾಗಿ ಹಂಚಿಕೊಂಡಿದ್ದಾರೆಂಬುದನ್ನು ಕಾವ್ಯಪ್ರೇಮಿಗಳೆಲ್ಲರೂ ಬಲ್ಲರು.

ಕನ್ನಡ ಕಾವ್ಯದಲ್ಲಿ ನವ್ಯತೆ ಕಾಲಿಟ್ಟ ಕಾಲ ಅದು. ಪತ್ರಗಳಲ್ಲಿ ಆ ಬಗ್ಗೆ ನಮ್ಮ ವಿಚಾರಗಳನ್ನು ವಿನಿಮಯ ಮಾಡಿಕೊಂಡದ್ದುಂಟು. ನನ್ನ ಕಾವ್ಯದಲ್ಲಿಯ ನವ್ಯತೆಯನ್ನು ಅವರು ಗುರುತಿಸಿದ್ದು ಹೀಗೆ : (೨೫–೫–೫೩) ''ಪ್ರಕೃತಿಲೋಕ ಹೇಗೆ ನಿತ್ಯ ನವ್ಯವೋ ಅಂತೆಯೇ ನಿಮ್ಮ ಕವಿತೆ ಪ್ರಕೃತಿಯನ್ನು ಕುರಿತು ಬರೆದ ಇಂದಿನ ಹಲವು ಹಿರಿಯ ಕವಿಗಳ ಉಕ್ತಿಯಿಂದ ಅನ್ಯವಾಗಿ ವಿಶಿಷ್ಟತೆಯನ್ನು ಪಡೆದಿವೆ. ಆದುದರಿಂದ ವಿಶಿಷ್ಟತೆಯೇ ನವ್ಯತೆ ಎನಿಸಿದೆ ನನಗೆ'' ನವ್ಯತೆಯ ಬಗ್ಗೆ ಅವರ ಧೋರಣೆ ಅಂದಿನಿಂದಲೂ ತನ್ಮತನವನ್ನು ಕಾಪಾಡಿಕೊಂಡು ಗಟ್ಟಿಮುಟ್ಟಾಗಿ ನಿಂತದ್ದು ಮಹತ್ವದ ಸಂಗತಿಯಾಗಿದೆ. ಅದು ಅತ್ಯಂತ ಆರೋಗ್ಯಕರವಾದ ನಿಲುವು. ೨೪–೮–೧೯೫೩ರ ಪತ್ರದಲ್ಲಿ ಈ ಮಾತುಗಳಿವೆ : ''ನವ್ಯತೆಯ ಬಗ್ಗೆ ನನಗೆ ರೋಮಾಂಚಕತೆ ಇಲ್ಲ. ಏಕೆಂದರೆ, ನಿಜವಾದ ನವ್ಯತೆ, ಒಂದು ರಚನೆ ಅಲ್ಲ, ವಿಕಾಸ ಎಂಬುದನ್ನು ಕಂಡುಕೊಂಡವರಲ್ಲಿ ನಾನೊಬ್ಬ. ನನ್ನ ಒಳಗಿನ 'ನವ್ಯಕವಿ' ತಾನೊಬ್ಬ ಭಾರತೀಯನೆಂಬುದನ್ನು ಎಂತಹ ಹೊತ್ತಿನಲ್ಲೂ ಮರೆಯುವುದಿಲ್ಲ. ಎಂತಹ ಕಷ್ಟ ಕಾರ್ಪಣ್ಯಗಳಲ್ಲೂ ಏನೊ ಒಂದು ಅದಕ್ಕೆ ಮೀರಿದ ಆನಂದ, ಆದರ್ಶಗಳನ್ನು ಕಾಣಬಲ್ಲನು.''

ಕುವೆಂಪು ಬರಿಯ ಕವಿಯಾಗಿ ಅಲ್ಲ, ಮಹಾಲೇಖಕರಾಗಿಯೇ ಮೊದಲಿನಿಂದಲೂ ನನ್ನ ಮನಸ್ಸನ್ನು ತುಂಬಿಕೊಂಡಿದ್ದರು. ಅವರನ್ನು ಆಗ ನಾನು ಕಂಡಿರಲಿಲ್ಲವಾದರೂ ಶಿವರುದ್ರಪ್ಪನವರ ಪತ್ರಗಳ ಮೂಲಕ ಆಗಾಗ ಕೆಲವು ವಿಷಯಗಳನ್ನು ತಿಳಿದು ನನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದೆ. 'ರಾಮಾಯಣ ದರ್ಶನ'ದ ಎರಡನೇ ಭಾಗ ನನ್ನ ಕೈಗಿನ್ನೂ ದೊರೆತಿರಲಿಲ್ಲ. ಆದರೆ ಅವರ ಪತ್ರದಿಂದ (೫–೧೧–೫೧) ಆ ಬಗ್ಗೆ ಒಂದಿಷ್ಟು ವಿವರಗಳು ದೊರೆತು ಹರ್ಷಿತನಾದದ್ದುಂಟು. ಅದೊಂದು ಮಹತ್ತರ ದಾಖಲೆ

ಎನಿಸಿದ್ದರಿಂದ ಪತ್ರದ ಆ ಭಾಗವನ್ನು ಇಲ್ಲಿ ಪೂರ್ತಿಯಾಗಿ ಕೊಡುತ್ತಿದ್ದೇನೆ. ಶಿವರುದ್ರಪ್ಪನವರ ವಿಮರ್ಶಕ ಶಕ್ತಿ ಆಗಲೇ ಎಷ್ಟೊಂದು ಸೂಕ್ಷ್ಮತೆ ಪಡೆದಿತ್ತೆಂಬುದಕ್ಕೂ ಇದು ನಿದರ್ಶನವಾಗಬಲ್ಲದು;

''ಮೊನ್ನೆ ಭಾನುವಾರ ಕುವೆಂಪು ಅವರ ಮನೆಗೆ ನಾವು ನಾಲ್ಕಾರು ವಿದ್ಯಾರ್ಥಿಗಳು ಹೋಗಿದ್ದೆವು. ಮೂರು ಗಂಟೆಗಳ ಕಾಲ 'ರಾಮಾಯಣ ದರ್ಶನ'ದ 'ಅತ್ತಲಾದೈತ್ಯ ಸಭೆಯೋಳ್' ಎಂಬ ಅಧ್ಯಾಯವನ್ನೂ ಓದಿ ವಿವರಿಸಿದರು. ಆ ಭಾಗ ಅತ್ಯುತ್ತಮ ಭಾಗಗಳಲ್ಲಿ ಒಂದು. ಆ ಮಹಾಸಭೆಯಲ್ಲಿ ರಾಕ್ಷಸವೀರರ ಪರಿಚಯವಾಗುತ್ತದೆ. 'ಪ್ರಯಸ್ತ', 'ಮಹಾಪಾರ್ಶ್ವ', 'ಹಿರಣ್ಯಕೇಶಿ', 'ಇಂದ್ರಜಿತು', 'ವಿಭೀಷಣ' ಇವರ ಪಾತ್ರದ ಪರಿಚಯವಾಗುತ್ತದೆ. ಒಂದೊಂದು ಪಾತ್ರವೂ ವಿಶಿಷ್ಟ ಭವ್ಯವಾಗಿದೆ. ಈ ಸನ್ನಿವೇಶವನ್ನು ಅವರು ಬರೆದುದು ಎರಡನೆ ಮಹಾಯುದ್ಧ ನಡೆಯುವ ವೇಳೆಯಲ್ಲಿ. ಆಗ ಚರ್ಚಿಲ್ ಇತ್ಯಾದಿ ರಾಜಕಾರಣ ಪಟುಗಳು ತಮ್ಮ ದೇಶದ ಯುದ್ಧವೀರರ ಸ್ಫೂರ್ತಿಗಾಗಿ ಭಾಷಣ ಮಾಡುತ್ತಿದ್ದ ಕಾಲ. ಹೇಗೆ ರಾಜಕೀಯ ಪಟುಗಳು ಧರ್ಮವನ್ನು ನಿರ್ಲಕ್ಷಿಸಿ ದೇಶಸೇವೆ ದೇಶಪ್ರೇಮ ಇತ್ಯಾದಿ ಮಾತುಗಳಿಂದ ಜನರೆದುರು ತಮ್ಮ ವಾಗ್ಝರಿಯನ್ನು ಹರಿಯಿಸುತ್ತಾರೆ ಎಂಬುದು ಆ ದೈತ್ಯಸಭೆಯಲ್ಲಿ ಮಾತನಾಡುವ ವೀರರಲ್ಲಿ ಪ್ರತಿಮಿತವಾಗಿದೆ.

''ರಾವಣನ ಪಾತ್ರ ರಾಮನ ಪಾತ್ರಕ್ಕಿಂತಲೂ ಹೆಚ್ಚು ಭವ್ಯವಾಗಿದೆ ಎನ್ನುತ್ತಾರೆ. ರಾವಣ ಸೀತೆಯನ್ನು ತಂದುದು ಅವನ ಸಿದ್ಧಿಗಾಗಿಯೇ ಎಂಬುದು ಈಗ ತಿಳಿಯುತ್ತದೆ. ಬೆಂಕಿಯನ್ನಪ್ಪಿದ ವಸ್ತು ಬೆಂಕಿಯಿಂದಲೇ ಪರಿಶುದ್ಧವಾಗುವಂತೆ ರಾವಣ ಸೀತೆಯ ತಪಸ್ಸಿಗಿಂತ ಮಂಡೋದರಿಯ ತಪಸ್ಸಿನಿಂದ ಪರಿಶುದ್ಧನಾಗುತ್ತಾನೆ.''

''ದಶಾನನ ಸ್ವಪ್ನಸಿದ್ಧಿ''– ಶ್ರೀ ಕುವೆಂಪು ಅವರು ಕನಸಿನಲ್ಲಿ ಕಂಡುದಂತೆ. ಅವರು ಹೇಳಿದರು, ''ಆ ಕನಸು ಏಕೆ ಬಿತ್ತೋ''. ಆ ಭವ್ಯದೃಶ್ಯವೆಲ್ಲವೂ ಸ್ಪಷ್ಟವಾಗಿ ಕಂಡಿತಂತೆ. ಆ ಕಾರೊಡಲಿನ ಕುದುರೆ, ಖಡ್ಗ, ಹಸ್ತವೊಂದು ಇಳಿದು ಕತ್ತರಿಸಿದ ದೃಶ್ಯ; ರಾವಣ ಹೊಳೆಯಲ್ಲಿ ಮುಳುಗಿದುದು. ಕಡೆಗೆ ರಾವಣ ಕುಂಭಕರ್ಣರಿಬ್ಬರೂ ಶಿಶುಗಳಾಗಿ ವೈದೇಹಿಯ ತೊಡೆಯ ಮೇಲೆ ನಲಿದುದು (ಮುಂದೆ ಲವಕುಶ ವೃತ್ತಾಂತಕ್ಕೆ ಕನ್ನಡಿ ಹಿಡಿದಿದೆ) ಎಲ್ಲವನ್ನು ಅವರು ಇರುಳ ಕನಸಿನಲ್ಲಿ ಕಂಡರಂತೆ. ''ಈ ರಾಮಾಯಣವನ್ನು ನಾನು ಬರೆಯಲಿಲ್ಲ, ನಾನು ಎಲ್ಲೆಲ್ಲಿ ನನ್ನ ಅಹಂಕಾರದಿಂದ ರಚಿಸಲು ತೊಡಗಿದೆನೋ ಅಂತಹ ಭಾಗಗಳನ್ನೂ, ನೂರಾರು ಪಂಕ್ತಿಗಳನ್ನೂ ಹರಿದು ಬಿಸುಟಿದ್ದೇನೆ. ಇಡೀ ವಿಶ್ವಶಕ್ತಿಯೇ ಈ ಕೃತಿ ಸೃಷ್ಟಿಯಲ್ಲಿ ಭಾಗವಹಿಸಿದೆ. ಈ ಮಹಾಕಾವ್ಯದಲ್ಲಿ ಯಾವ ಒಂದು ಪಂಕ್ತಿಯೂ ರಸದೀಪ್ತವಾಗದಿಲ್ಲ. ಕಾವ್ಯ ಎಂಬುದು ಕವಿಯ ಜ್ಯೋತಿರ್ಮಯವಾದ ವ್ಯಕ್ತಿತ್ವದಿಂದ ದೀಪ್ತವಾದ ತೀರ್ಥ'' ಎನ್ನುತ್ತಾರೆ. ಹಲವು ವರ್ಣನೆಗಳು, ಹಲವು ದೃಶ್ಯಗಳು ಅವು ಸೃಜನೆಯಾಗುವ ವೇಳೆಗೆ ಜಗತ್ತು ತೆರೆದು ಅಂತಹ ಅನುಭವವನ್ನೇ ಆಯಾ ಕಾಲಕ್ಕೆ ಒದಗಿಸಿದೆಯಂತೆ. ಅದು ನಿಜವಾಗಿಯೂ 'ಕಾವ್ಯಗೋಮಟ'. ''ಜಗತ್ತಿನ

ಯಾವ ಮಹಾಕಾವ್ಯವೂ ಇದರ ಮಟ್ಟಕ್ಕೆ ಏರಲಾರದು 'ದರ್ಶನ'ದ ದೃಷ್ಟಿಯಿಂದ! ಇದು ಅರ್ಥವಾಗಬೇಕಾದರೆ ಸುಮಾರು ಒಂದೆರಡು ಶತಮಾನ ಕಾಯಬೇಕಾದೀತು.''

ಕುವೆಂಪು ಕುರಿತು ಇನ್ನೊಂದು ಮಹತ್ವದ ಸಂಗತಿಯನ್ನು ದಿ. ೩–೪–೫೭ರ ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ : ''ಈಗ ಕುವೆಂಪು ಅವರ ಮನಸ್ಸಿನಲ್ಲಿ 'ಆದಿಕವಿ ಸಂಭೂತಿ' ಎಂಬ ದೃಶ್ಯ ಚಂಪೂ ಕೃತಿರೂಪ ತೆಗೊಳ್ಳುತ್ತಿದೆಯಂತೆ, ದಿನದಿನವೂ ಬೆಳೆಯುತ್ತಿದೆಯಂತೆ. ಅದು ಇನ್ನೂ 'ಕೃತಿ'ಯಾಗಿ ಪ್ರಕಾಶಗೊಂಡಿಲ್ಲವಂತೆ. ಯಾವಾಗ ಬರೆಯುತ್ತೀರಿ? ಎಂದು ಕೇಳಿದ್ದಕ್ಕೆ 'ಬಹುಶಃ ಅದು ಈ ಜನ್ಮದಲ್ಲಿ ಆಗುವುದೊ ಇಲ್ಲವೊ, ಮುಂದಿನ ಜನ್ಮಕ್ಕೆ ಮೀಸಲಾಗಿದೆಯೊ' ಎಂದು ನಿಡುಸುಯ್ದರು. ಇದರಿಂದ ಒಂದು ವಿಚಾರ ಸ್ಪಷ್ಟ. ಅವರು 'ರಾಮಾಯಣ ದರ್ಶನ' ಬರೆದರೂ, ಇನ್ನೂ ಪಡೆಯಬೇಕಾದ ಯಾವುದೊ ಒಂದನ್ನು ಪಡೆದಿಲ್ಲವೆಂದು ತೋರುತ್ತದೆ. 'ಆ' ಸಿದ್ಧಿ ಆದಿಕವಿ ಸಂಭೂತಿಯಲ್ಲಿ ಪರ್ಯವಸಾನವಾದೀತು. ''ನಾನು ನನ್ನ ಈ ದೇಹ ಬಿಟ್ಟ ಮೇಲೆ ನನ್ನ ರಾಮಾಯಣದ ನಿತ್ಯ ಶರೀರವನ್ನು ಪ್ರವೇಶಿಸುತ್ತೇನೆ.'' ಎಂದರು. ಕವಿ ಕೃತಿಯಾಗಿ ಪರಿಣಮಿಸುವುದರಿಂದಲೇ ಕಾವ್ಯ ಎಷ್ಟು ಶತಮಾನಗಳಾದರೂ ನಿತ್ಯ ನೂತನವಾಗಿರುವುದು.''

ಕುವೆಂಪು ಅವರ ಅಂತರಂಗದ ಶಿಷ್ಯರಲೊಬ್ಬರೂ, ಗಣ್ಯ ವಿಮರ್ಶಕರೂ ಆದ ಶಿವರುದ್ರಪ್ಪನವರ ಈ ಉಲ್ಲೇಖಗಳು ನಾಲ್ಕೈದು ದಶಕದಷ್ಟು ಹಿಂದಿನವಾದರೂ ಅವು ಇಂದಿಗೂ ಮಹತ್ವದ ದಾಖಲೆ ಎನಿಸುವುದರಲ್ಲಿ ಸಂದೇಹವಿಲ್ಲ.

''ಭಾಷೆ ಮತ್ತು ಭಾವಗಳ ಮೇಲೆ ಅವರಿಗೆ ಹತೋಟಿ ಇದೆ. ಚೆನ್ನಾಗಿ ಬರೆಯುತ್ತಾರೆ. ನವ್ಯತೆಯನ್ನು ಕೂಡಲೆ ತರಬೇಕೆಂಬ ಹಠವೇನೂ ಕಾಣುವುದಿಲ್ಲವಾದುದರಿಂದ ಅವರು ಮುಂದುವರಿದಂತೆ ಸಹಜವಾಗಿ ನವ್ಯತೆ ತಾನೇ ಬರುತ್ತದೆ'' ಹೀಗೆ ನನ್ನ ಕಾವ್ಯದ ಬಗ್ಗೆ ಕುವೆಂಪು ಹೇಳಿದರೆಂದು ಶಿವರುದ್ರಪ್ಪನವರು ತಮ್ಮ ೮–೫–೫೩ರ ಪತ್ರದಲ್ಲಿ ಕಾಣಿಸಿದ್ದರು. ಅಂದಿನ ಸಂದರ್ಭದಲ್ಲಿ ಈ ಮಾತುಗಳು ನನ್ನ ಕಾವ್ಯರಚನೆಯ ದೃಷ್ಟಿಯಿಂದ ನನಗೆ ತುಂಬ ಪ್ರೋತ್ಸಾಹದಾಯಕವಾಗಿ ಪರಿಣಮಿಸಿದವೆಂದು ಬೇರೆ ಹೇಳಬೇಕಿಲ್ಲ.

''ತೀರ್ಥವಾಣಿ'ಯಲ್ಲಿ ಸಂಗ್ರಹಗೊಂಡ ಪದ್ಯಗಳ ಅನುವಾದವನ್ನು ಶಿವರುದ್ರಪ್ಪನವರು ಎಷ್ಟೊಂದು ಶ್ರದ್ಧೆಯಿಂದ ನಿರ್ವಹಿಸಿದರು ಎಂಬುದಕ್ಕೆ ೧೮–೧೨–೫೩ರ ಪತ್ರದಲ್ಲಿಯ ಈ ವಾಕ್ಯಗಳು ಸಾಕ್ಷಿಯಂತಿವೆ : ''ಈ ವರ್ಷವೆಲ್ಲ ನಾನು ದೈವೀಕಾರ್ಯದಲ್ಲಿ ತೊಡಗಿದ್ದೇನೆ. ಅಥವಾ ಆ ದೈವೀಕೃಪೆ ನನ್ನನ್ನು ಅನುಗ್ರಹಿಸಿದೆ. ರಾಮಕೃಷ್ಣಾಶ್ರಮದವರು. The Gospel of Ramkrishana ವನ್ನು ಕನ್ನಡಿಸುತ್ತಿದ್ದಾರೆ. ಅದರಲ್ಲಿ ಬರುವ ಕವನಗಳನ್ನು ಕನ್ನಡಕ್ಕೆ ಪರಿವರ್ತಿಸುವ ಕಾರ್ಯ ನನ್ನದಾಗಿದೆ. ಆಂಗ್ಲ ಭಾಷಾಂತರ ಮತ್ತು ಬಂಗಾಳಿ ಮೂಲ ಇಟ್ಟುಕೊಂಡು ಈ ಭಕ್ತಿಗೀತೆಗಳನ್ನು ಕನ್ನಡಕ್ಕೆ ಮಾಡುತ್ತಿದ್ದೇನೆ. ಸುಮಾರಾಗಿ ಕಾರ್ಯ ಮುಗಿಯುತ್ತ ಬಂದಿದೆ ಮೂರು ತಿಂಗಳಿನಿಂದಲೂ. ಹೀಗಾದರೂ ಆತ್ಮ ಉತ್ತಮ ಸಂಸ್ಕಾರ ಪಡೆಯಲೆಂಬುದು

ಗುರುದೇವರ ಇಚ್ಛೆ. ನನ್ನ ಭಾಷಾಂತರಗಳನ್ನು ವಾರವಾರವೂ ಶ್ರೀಕುವೆಂಪು ನೋಡಿ ಸಲಹೆ ನೀಡುತ್ತಿದ್ದಾರೆ. ಕಾರ್ಯ ಸಾಗುತ್ತಿದೆ. ಇದರ ನಡುವೆ ನನ್ನ ಕವನಗಳನ್ನು ಅಪರೂಪವಾಗಿ ಬರೆಯುತ್ತಿದ್ದೇನೆ.''

ಶಿವರುದ್ರಪ್ಪನವರು ಗಂಭೀರ ಪ್ರವೃತ್ತಿಯವರಂತೆ ತೋರಿದರೂ ಹಾಸ್ಯಕ್ಕೆ, ವಿನೋದಕ್ಕೆ ಅವರ ಮನಸ್ಸು ಅಷ್ಟೇ ತೆರೆದುಕೊಂಡಿರುತ್ತದೆ. ಈ ವಿಷಯದಲ್ಲಿಯೂ ನಮ್ಮದು ಸಮಾನ ಮನೋಧರ್ಮ. ಅವರ ಜೊತೆಗೆ ಆತ್ಮೀಯವಾಗಿ ಸಂಭಾಷಣೆಗೆ ತೊಡಗಿದವರಿಗೆಲ್ಲ ಅದರ ಅನುಭವವಾಗದಿಲ್ಲ. ಅವರ ಪತ್ರಗಳಲ್ಲಿಯೂ ಅದು ಅಲ್ಲಲ್ಲಿ ಮಿನುಗಿರುವುದನ್ನು ಕಂಡು ನಾನು ಖುಷಿಪಟ್ಟಿದ್ದೇನೆ. ಕೆಲವನ್ನು ಇಲ್ಲಿ ಉದಾಹರಿಸಬಹುದು :

''ಕೊರವಂಜಿ'' ಯಲ್ಲಿ 'ಮಂಜು', ಕವಿತೆ ಓದಿದಿರಾ? ಆ ''ದಿಬ್ಬಯ್ಯ'' ನಾನೇ. ಅದು ಹೇಗೆ ತಿಳಿಯಿತು. ಸ್ವಾಮಿ ನಿಮಗೆ?'' (೫–೧೧–೫೧)

''ನಮ್ಮ 'ಮಗು' ಚೆನ್ನಾಗಿದೆ. ಆಗಲೇ ಮತ್ಸ್ಯಾವತಾರದಿಂದ ಕೂರ್ಮಾವತಾರಕ್ಕೆ ಕಾಲಿಟ್ಟಿದೆ.'' (೨೦–೧–೫೨)

''ಹೌದು, ನನ್ನ ಕಾಗದ ನಿಮ್ಮ ಕಡೆ ಹೊರಟು ಬಹಳ ದಿನವಾಯಿತು. ಪರೀಕ್ಷೆಯ ಗಡಿಬಿಡಿ; ನನ್ನ ಎಂ.ಎ.ಯದು ಅಲ್ಲ. ಆ ಬೀಸುವ ದೊಣ್ಣೆ ಮುಂದಿನ ವರುಷ, ೧೯೫೩ನೇ ಜೂನ್ ತಿಂಗಳಿಗೆ–ಇನ್ನೂ ದೂರವಿದೆ. ನಮ್ಮ ಕಾಲೇಜಿನ ಪರೀಕ್ಷೆಯಲ್ಲಿ ಹುಡುಗರನ್ನು ಕಾಯುವ ಕೆಲಸ. ಆ ನಿಶ್ಶಬ್ದವಾದ ಪರೀಕ್ಷಾ ಕೊಠಡಿಯಲ್ಲಿ, ಲೇಖನಿಗಳ ಕರಕರ ಕೊರೆತವೊಂದು, ಪೇಪರುಗಳ ಸರಸರ ಶಬ್ದವೊಂದು, ನಿರ್ಭಯವಾಗಿ, ಆ ಹುಡುಗರ ಬೇಳ್ವೇರಿದ 'ಹಗಲೊಗೆದ ಚಂದ್ರಕಳೆಯಂತಿರುವ' ಮುಖಗಳನ್ನು ವೀಕ್ಷಿಸುತ್ತಾ ಓಡಾಡುವ ನಮ್ಮ ಕಾಲ ಸಪ್ಪಳವೊಂದು ಆ ಮೌನವನ್ನು ಭೇದಿಸುತ್ತವೆ'' (೩–೪–೫೨).

''ಗೆ. ಪ್ರಸಾದರು ಶಿವಮೊಗ್ಗೆಯಲ್ಲಿ ಸ್ವಸ್ಥವಾಗಿ 'ಗೃಹಸ್ಥ'ರಾಗಿದ್ದಾರೆ. ಪ್ರಭುಶಂಕರರು ಬೆಂಗಳೂರಿನ ರಾಮಕೃಷ್ಣಾಶ್ರಮದಲ್ಲಿ ಸಾಧನೆ ಮಾಡುತ್ತಿದ್ದಾರೆ. ನಾನು ಇಲ್ಲಿ ಏನನ್ನೂ ಮಾಡದೆ ಉಂಡಾಡಿಯಾಗಿದ್ದೇನೆ.'' (೩–೪–೫೨).

''ಮೊನ್ನೆ ಶನಿವಾರ ಮಧ್ಯಾಹ್ನ–ಮಟಮಟ ಮಧ್ಯಾಹ್ನ–ಮೇಲೆ ಬಿರುಬಿಸಿಲು ಧಾಳಿ ಇಟ್ಟಾಗ, ನಾನು 'ಆನಂದವರ್ಧನನ ಕಾವ್ಯ ಮೀಮಾಂಸೆ' ಯ ರಸಚಕ್ರವ್ಯೂಹದಲ್ಲಿ ತೊಳಲುತ್ತಿದ್ದೆ. ಅದೋ ನೋಡಿ ಜುಲೈ ತಿಂಗಳ ಮೊದಲ ವಾರ ಬರುತ್ತಿದೆ– ಎಂ.ಎ. ಪರೀಕ್ಷೆ ಮಾಡೀ ಮಾಡೀ ಪರೀಕ್ಷೆಯನ್ನು 'ಸಾಕ್ಷಿ ಪ್ರಜ್ಞೆ' ಯಲ್ಲಿ ನಿಂತು ರಸಾನುಭವ ಮಾಡುತ್ತಿದ್ದ ನನಗೆ ಈ ಪರೀಕ್ಷೆಗೆ ಕೂಡುವ ಪ್ರಸಂಗ ಬಂದು 'ಭಾವಾನುಭವ' ಆರಂಭವಾಗಿದೆ'' (೨೫–೫–೫೩).

''ಶ್ರೀ ರಾಜಗೋಪಾಲ್ ಸಿಗುತ್ತಾರೆ ತಾನೆ? ಕೊಂಚ ತಾಳ್ಮೆಯಿಂದ ಆಲಿಸುವುದಾದರೆ ಅವರು ತುಂಬ ಒಳ್ಳೆಯವರೆ. ಅವರು ತಮ್ಮ ನವ್ಯ ಕವಿತೆಗಳನ್ನೇ ಇಲ್ಲಿ

ನನ್ನ ಕಿವಿಗೆ ತುಂಬೀ ತುಂಬೀ ಸುಸ್ವಾದರು. ಕವಿತೆಗಿಂತ ಕಥೆ ಬಹಳ ಸೊಗಸಾಗಿ ಸಿದ್ಧಿಸಿದೆ ಅವರಿಗೆ'' (೨೮-೮-೫೩).

''ಜಯಕುಮಾರ ಈಗ ಸ್ಕೂಲಿಗೆ ಹೋಗಿ ಬರುವ ಅಭಿನಯದಲ್ಲಿದ್ದಾನೆ. 'ಅಣ್ಣಾ ನಾನು ದೊಡ್ಡವನಾಗಿದೀನಿ. ಅಲ್ವೇನಣ್ಣ' ಎಂದು ಘೋಷಿಸುತ್ತಾನೆ. ಆದರೂ 'ಗಿಡ್ಡಲ್ಲಿ ಯಾಕೆ ಬಿಸ್ಕತ್ತು ಬಿಡಲ್ಲ?' ಎಂದು ಪ್ರಶ್ನಿಸಿ ದಿಗ್ಭ್ರಮೆಗೊಳಿಸುತ್ತಾನೆ'' (೨೨-೧೧-೫೪).

''ನನ್ನ ಥೀಸಿಸ್-ಬಹುದೊಡ್ಡ ತಲೆನೋವು. ವಿಷಯ, ಸೌಂದರ್ಯವನ್ನು ಕುರಿತದ್ದಾದರೂ, ಇಷ್ಟೊಂದು ಭಯಂಕರವಾಗಿರುತ್ತದೆಂದು ನಾನು ಭಾವಿಸಿರಲಿಲ್ಲ. ಈಗಂತೂ ಮುಗಿಲುದ್ದ ನಿಂತಿದೆ. ಚಂಡಿ ಚಾಮುಂಡಿಯನ್ನು ಒಲಿಸಿ, ಸೌಂದರ್ಯ ಲಕ್ಷ್ಮಿಯ ಸಂದರ್ಶನ ಮಾಡಬೇಕಾಗಿದೆ'' (೨೪-೭-೫೬).

ಈ ಪತ್ರ-ಚಿತ್ರಗಳನ್ನು ಬಿಡಿಸುತ್ತಾ ನನ್ನ ಕೆಲವು ನೆನಪುಗಳನ್ನು ಇಲ್ಲಿ ಮೆಲುಕು ಹಾಕಿದ್ದೇನೆ. ಅವರ ಅನುಮತಿಯನ್ನು ಕೇಳದೆ ಧಾರಾಳವಾಗಿ ಪತ್ರಗಳನ್ನು ಈ ಲೇಖನದಲ್ಲಿ ಬಳಸಿಕೊಂಡಿದ್ದಕ್ಕೆ ಶಿವರುದ್ರಪ್ಪನವರು ಕ್ಷಮಿಸುತ್ತಾರೆಂಬ ಭರವಸೆಯೂ ನನಗಿದೆ.

'ಹಣತೆ'
೨೦೦೧

■■

ಜಿ. ಬಿ. ಜೋಶಿ : ಕನಸು-ನನಸು

ಕಳೆದ ವರ್ಷ ಜುಲೈ ೨೯ರಂದು ಜಿ. ಬಿ. ಜೋಶಿಯವರ ಜನ್ಮಶತಮಾನೋತ್ಸವದ ಉದ್ಘಾಟನೆಯಾದ ನಂತರ ಡಿಸೆಂಬರ್ ತಿಂಗಳಲ್ಲಿ ಒಂದು ವಾರ ಅವರ ಐದಾರು ಪ್ರಸಿದ್ಧ ನಾಟಕಗಳು ಬೇರೆ ಬೇರೆ ನುರಿತ ತಂಡಗಳಿಂದ ಪ್ರದರ್ಶಿತಗೊಂಡದ್ದು ತುಂಬ ಔಚಿತ್ಯಪೂರ್ಣವಾಗಿತ್ತು. ಜಿ.ಬಿ. ಯವರೆಂದೊಡನೆ ಕಣ್ಣೆದುರು ಖಚಿತವಾಗಿ ನಿಲ್ಲುವುದು ಮನೋಹರ ಗ್ರಂಥಮಾಲೆ. ಒಬ್ಬ ವ್ಯಕ್ತಿತನ್ನ ಸೃಜನಶಕ್ತಿಯನ್ನು ಹೀಗೆ ಎರಡು ಕ್ಷೇತ್ರಗಳಲ್ಲಿ, ಎರಡು ಪಾತ್ರಗಳಲ್ಲಿ ಸಮರ್ಥವಾಗಿ ದುಡಿಸಿಕೊಂಡದ್ದು ಕನ್ನಡದಲ್ಲಿ ಅಪರೂಪವಲ್ಲದಿದ್ದರೂ ಜೋಶಿಯವರಂತೆ ಯಶಸ್ವಿಯಾದವರು ವಿರಳವೆಂದೇ ಹೇಳಬಹುದು. ಬೇಂದ್ರೆ, ಶಂ.ಬಾ. ಜೋಶಿ, ಸೇಡಿಯಾಪು, ಕಾರಂತ, ಮಧುರಚೆನ್ನ ಮೊದಲಾದ ಹಿರಿಯ ಚೇತನಗಳ ಜನ್ಮಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದ ನಂತರ, ಈ ಸಂದರ್ಭದಲ್ಲಿ ಶ್ರೀರಂಗ, ಕುವೆಂಪು, ಗೊರೂರು, ಪು.ತಿ.ನ. ಸಿಂಪಿ ಲಿಂಗಣ್ಣನವರ ಸಾಧನೆಯ ನೂರರ ನೆನಪುಗಳು ನಮ್ಮ ಸಾಹಿತ್ಯಿಕ ಚಟುವಟಿಕೆಗಳಿಗೆ ವಿವಿಧ ಆಯಾಮಗಳನ್ನು ಒದಗಿಸಿರುವುದು ಗಮನಾರ್ಹ. ಇದನ್ನೆಲ್ಲ ಮನಸ್ಸಿಗೆ ತಂದುಕೊಂಡಾಗ ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇಪ್ಪತ್ತನೆಯ ಶತಮಾನ ಎಂಥ ಉಜ್ವಲವಾದ ಕಾಲಮಾನ ಎನ್ನುವುದರ ಕಲ್ಪನೆ ನಮಗುಂಟಾಗದೆ ಇರದು.

ನಾನು ಧಾರವಾಡಕ್ಕೆ ವಿದ್ಯಾರ್ಥಿಯಾಗಿ ಬಂದಾಗಿನಿಂದಲೂ (೧೯೪೦) ಜಿ.ಬಿ. ಜೋಶಿಯವರನ್ನು ಆಗಾಗ ನೋಡುತ್ತಿದ್ದೆ. ಧೋತರ, ಹಾಫ್‌ಶರ್ಟ್, ಕರಿ ಟೊಪ್ಪಿಗೆ ಅವರ ಖಾಯಂ ವೇಷವಾಗಿತ್ತು. ಆಗ ನಾನು ಬಹಳ ಆಸ್ಥೆಯಿಂದ ಓದಿದ ಕೆಲವು ಪುಸ್ತಕಗಳ ಪ್ರಕಾಶಕರು ಇವರೇ ಎಂಬುದೂ ಆಮೇಲೆ ತಿಳಿಯಿತು. ಆಗ ಧಾರವಾಡದಲ್ಲಿ ವೇದಿಕೆಯ ಮೇಲೆ ನಾನು ಅನೇಕ ಸಾಹಿತಿಗಳನ್ನು ನೋಡಿ ಅವರ ಭಾಷಣ ಕೇಳುತ್ತಿದ್ದೆ. ಆದರೆ ಜಿ.ಬಿ. ಯವರನ್ನು ವೇದಿಕೆಯ ಮೇಲೆ ಕಂಡದ್ದು ತೀರ ವಿರಳ. ಒಂದು ಸಂದರ್ಭ ನೆನಪಾಗುತ್ತದೆ : ೧೯೪೮–೪೯ ಇರಬೇಕು. ಮಿರ್ಜಿ ಅಣ್ಣಾರಾಯರ 'ರಾಷ್ಟ್ರ ಪುರುಷ' ಕಾದಂಬರಿಯ ಬಿಡುಗಡೆ ಸಮಾರಂಭ ಕರ್ನಾಟಕ ವಿದ್ಯಾವರ್ಧಕ ಸಂಘದ ಅಟ್ಟದ ಮೇಲೆ ಬೇಂದ್ರೆಯವರಿಂದ ನೆರವೇರಿತು. ಆಗ ಪ್ರಕಾಶಕರಾಗಿ ಜೋಶಿಯವರು ಆಡಿದ್ದು ಒಂದೊ ಎರಡೊ ಮಾತು, ಅಷ್ಟೇ, ಮತ್ತೊಮ್ಮೆ, ಅಂದರೆ 'ನಡೆದು ಬಂದ ದಾರಿ' ಸಂಪುಟಗಳ ಬಿಡುಗಡೆಯ ಸಮಾರಂಭ ಅದೇ ಸ್ಥಳದಲ್ಲಿ ನಡೆದಾಗ ಜೋಶಿಯವರು

ಮೂರು–ನಾಲ್ಕು ಪುಟಗಳ, ಬರೆದ ಭಾಷಣವನ್ನು ಓದಿದರು. ಅಷ್ಟು ಮಾಡಬೇಕಾದರೂ ಅವರಿಗೆ ಸಾಕುಬೇಕಾಗಿ ಹೋಗಿತ್ತು ಎನ್ನುವುದು ಎದ್ದು ಕಾಣುತ್ತಿತ್ತು. ಜೋಶಿಯವರು ನಿಜವಾದ ಕೆಲಸಗಾರರು. ಹಿಂದೆ, 'ಜಯ ಕರ್ನಾಟಕ' ದಲ್ಲಿ ಕೆಲಸಕ್ಕೆ ಸೇರುವ ಮೊದಲು, 'ಪ್ಯೂನನ ಕೆಲಸದಿಂದ ಹಿಡಿದು 'ಜಯ ಕರ್ನಾಟಕ' ಕಚೇರಿಯ ಎಲ್ಲ ಕೆಲಸಕ್ಕೂ ನಾನು ಸಿದ್ಧ' ಎಂದು ಸಂಪಾದಕರಿಗೆ ಪತ್ರ ಬರೆದಿದ್ದರಂತೆ. ಅದು ಅವರ ನಿಜವಾದ ಮನೋಧರ್ಮ ಕೂಡ. ತಮ್ಮ ಕನಸುಗಳ ಪ್ರಭಾವದಿಂದ ಆದರ್ಶ ಜೀವನ ತಮಗೆ ಹೊರಗಿನದಲ್ಲ ಎಂದು ಅವರು ಭಾವಿಸಿದ್ದರು. ಜಿ.ಬಿ.ಯವರಿಗೆ ಆಗ ಸರಿಯಾದ ಅವಕಾಶ ದೊರೆತಿದ್ದರೆ ಗೆಳೆಯರ ಗುಂಪು ಕೂಡ ಒಂದು ದೊಡ್ಡ ಸಂಸ್ಥೆಯಾಗಬಹುದಿತ್ತು ಎಂಬ ಅಭಿಪ್ರಾಯವನ್ನು ನಾನು ಕೇಳಿದ್ದುಂಟು. ಆದರೆ ಗುಂಪಿನ ಬೆಸುಗೆಗಳು ಎಲ್ಲರೂ ತಿಳಿದುಕೊಂಡಷ್ಟು ಭದ್ರವಾಗಿರಲಿಲ್ಲ . ಅದು ಬೇರೆ ವಿಷಯ.

ನಾನು ಹುಟ್ಟಿದ ಊರು ಹೊಂಬಳ, ಜೋಶಿಯವರದೂ ಕೂಡ ಎಂದು ತಿಳಿದು ಬಂದಾಗ ನಾನು ಹೆಮ್ಮೆ ಪಟ್ಟದ್ದೂ ಉಂಟು. ಅಲ್ಲಿಯ ಶಂಕರಲಿಂಗನ ಗುಡಿಯ ಆವರಣದಲ್ಲಿ ಸುರಕ್ಷಿತವಾಗಿರುವ ಶಾಸನಗಳು ಈ ಸ್ಥಳ ಎಂಟುನೂರು ವರ್ಷಗಳ ಹಿಂದೆ ಕಾಳಾಮುಖ ಪಂಥದವರ ಪ್ರಮುಖ ಕಾರ್ಯಕೇಂದ್ರವಾಗಿತ್ತೆನ್ನುವುದನ್ನು ಉಲ್ಲೇಖಿಸುತ್ತವೆ. ಅಲ್ಲದೆ, ಅಧ್ಯಯನ ಅಧ್ಯಾಪನ ಮತ್ತು ಧಾರ್ಮಿಕ ಕಾರ್ಯಗಳಿಗೆ ಹಲವಾರು ವಿದ್ವಾಂಸರಿಗೆ ದತ್ತಿಯಾಗಿ ಕೊಡಲ್ಪಟ್ಟ ಅಗ್ರಹಾರವೂ ಇದಾಗಿತ್ತು. ಕ್ರಿ.ಶ. ೧೧೪೪ರ ಶಾಸನಗಳಲ್ಲಿ ಈ ಊರಿನ ಹೆಸರನ್ನು 'ಪೊಂಬೊಳಲ್' ಎಂದು ಕರೆಯಲಾಗಿದೆ. ಅದೀಗ 'ಹೊಂಬಳ'ವಾಗಿದೆ. ಅಂಥ ಬಂಗಾರದ ಊರನ್ನು (ಪೊನ್ನ+ಪೊಳಲ್) ಬಿಟ್ಟು ಬಂದ ಜೋಶಿಯವರು ಧಾರವಾಡದ ನೆಲದಲ್ಲಿ 'ಮನೋಹರ ಗ್ರಂಥಮಾಲೆ'ಯ ಮೂಲಕ ಸಾಹಿತ್ಯದ ಬಂಗಾರದ ಖನಿಯನ್ನು ತೋಡುವ ಪರಿಶ್ರಮದ ಕಾರ್ಯದಲ್ಲಿ ತೊಡಗಿಸಿಕೊಂಡುದರಲ್ಲಿ ಒಂದು ಅಜ್ಞಾತ ಸೂತ್ರವಿರಬಹುದು. ಕಾಲುಶತಮಾನದ ಹೊತ್ತಿಗೆ 'ನಡೆದು ಬಂದು ದಾರಿ'ಯ ಮೈಲುಗಲ್ಲುಗಳನ್ನು ನಿಲ್ಲಿಸಿ, ಅರ್ಧಶತಮಾನ ಮುಗಿಯುವುದರೊಳಗೆ 'ಪುಟ ಬಂಗಾರ'ದ ಸಂಪುಟಗಳಿಗೆ ಕೈ ಹಾಕಿದ್ದು ಸಣ್ಣಮಾತಲ್ಲ. ಕೀರ್ತಿನಾಥ ಕುರ್ತಕೋಟಿಯವರ ವಿಮರ್ಶಾಪ್ರಜ್ಞೆ ಜಿ. ಬಿ. ಜೋಶಿಯವರ ಕಾಯಕ ಪ್ರಜ್ಞೆಯಲ್ಲಿ ಪ್ರಕಾಶಗೊಂಡು ಬೇಂದ್ರೆಯವರ 'ಸಮರಸವೇ ಜೀವನ'ಕ್ಕೆ ಸಾಕ್ಷಿಯಾಗಿ ನಿಂತಿತು. ಜೋಶಿಯವರ ಜನ್ಮ ಶತಮಾನೋತ್ಸವಕ್ಕಾಗಿ ಕಾದುಕೊಂಡಂತಿದ್ದ ಕೀರ್ತಿ, ಅದು ಪ್ರಾರಂಭವಾದೊಡನೆ ಕೀರ್ತಿಶೇಷರಾದದ್ದು ಹೊಸಗನ್ನಡ ಸಾಹಿತ್ಯ ಚರಿತ್ರೆಯ ಒಂದು ಮಹತ್ವದ ಅಧ್ಯಾಯಕ್ಕೆ ಬರೆದ ಚರಮಗೀತೆಯಂತಿತ್ತು.

ಗೆಳೆಯರ ಗುಂಪಿನ ನಿಜವಾದ ಕನಸುಗಾರರೆಂದರೆ ಜಿ.ಬಿ. ಜೋಶಿಯವರು ಎಂದು ಕುರ್ತಕೋಟಿ ಬರೆದಿದ್ದಾರೆ. (ಅವರ 'ಜಡಭರತನ ಕನಸುಗಳು' ಪ್ರಕಾಶ ಗರುಡರ ಸಮರ್ಥ ನಿರ್ದೇಶನದಲ್ಲಿ ಈಚೆಗೆ ದೃಶ್ಯರೂಪದಲ್ಲಿ ಕಂಗೊಳಿಸಿದೆ.) ಗುಂಪು ಚದುರಿದ ಮೇಲೆ ಜಿ.ಬಿ.ಯವರು ಮನೋಹರ ಗ್ರಂಥಮಾಲೆಯನ್ನು ಅರುವತ್ತು ವರ್ಷ ಅನುಮಾನವಿಲ್ಲದೆ ನಡೆಸಿಕೊಂಡು ಬಂದರು. ಆಧುನಿಕ ಕನ್ನಡ ಸಾಹಿತ್ಯದ ಪ್ರಕಾರಗಳ

ಬೆಳವಣಿಗೆಯಲ್ಲಿ ಇದರಿಂದ ಒದಗಿದ ಒತ್ತಾಸೆ ಅಷ್ಟಿಷ್ಟಲ್ಲ. ಯಾಕೆಂದರೆ ಆಗ ಆಧುನಿಕ ಕನ್ನಡ ಸಾಹಿತ್ಯದ ಮಹತ್ವದ ಕೃತಿಗಳಲ್ಲಿ ನೂರಕ್ಕೆ ಐವತ್ತರಷ್ಟು ಮನೋಹರ ಗ್ರಂಥಮಾಲೆಯ ಪ್ರಕಟನೆಗಳೇ ಆಗಿದ್ದವೆಂಬುದನ್ನು ಅಲ್ಲಗಳೆಯುವಂತಿಲ್ಲ .

ಸಾಹಿತ್ಯವನ್ನು ಜನತೆಗೆ ಮುಟ್ಟಿಸುವ ಕಾರ್ಯದಲ್ಲಿ ಪ್ರಕಾಶಕನ ಪಾತ್ರ ಬಹಳ ಮುಖ್ಯವಾದದ್ದು. ಲೇಖಕ, ಪ್ರಕಾಶಕ, ಸ್ವಲ್ಪ ಮಟ್ಟಿಗೆ ಪುಸ್ತಕ ವ್ಯಾಪಾರಿ–ಮೂರೂ ಆಗಿದ್ದ ಜೋಶಿಯವರು ಮೂವರ ಸಮಸ್ಯೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಪ್ರಕಾಶನ ಕಾರ್ಯವನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸಿದ್ದಲ್ಲದೆ ಆ ಮೂಲಕ ಒಳ್ಳೊಳ್ಳೆ ಲೇಖಕರನ್ನು, ಜೊತೆಗೆ ಹೊಸ ಪ್ರತಿಭೆಗಳನ್ನು ಬೆಳಕಿಗೆ ತಂದು ಬೆಳೆಯುವಂತೆ ಮಾಡಿದರು. ಜೋಶಿಯವರು ಮಾಲೆಗೆ ಚಂದಾದಾರರನ್ನು ಮಾಡುವ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿದ್ದುದು ವೈಯಕ್ತಿಕವಾಗಿ ಜನರಲ್ಲಿ ಓದುವ ಅಭಿರುಚಿಯನ್ನು ಬೆಳೆಸುವುದಕ್ಕೂ ಪುಟಗೊಟ್ಟಿತು. ಅವರು ಸ್ವತಃ ತಾವೇ ಹೋಗಿ ಚಂದಾದಾರರಿಗೆ ಪುಸ್ತಕಗಳನ್ನು ಮುಟ್ಟಿಸುತ್ತಿದ್ದರು. ಇದರಿಂದ ರೂಪುಗೊಳ್ಳುತ್ತಿದ್ದ ಮಾನವೀಯ ಸಂಬಂಧ ಪುಸ್ತಕದ ಬೆಲೆಗಿಂತ ಸಾಂಸ್ಕೃತಿಕವಾಗಿ ಇನ್ನೂ ಹೆಚ್ಚು ಬೆಲೆಯುಳ್ಳದ್ದಾಗಿ ಪರಿಣಮಿಸಿತು.

ಪ್ರಕಾಶಕರು ವಿದ್ಯಾವಂತರಾಗಿದ್ದು ಸಾಹಿತ್ಯದಲ್ಲಿ ಅಭಿರುಚಿಯುಳ್ಳವರೂ ಆಗಿದ್ದರೆ ಒಳ್ಳೆಯ ಕೃತಿಗಳು ಹೊರಬರಲು ಸಾಕಷ್ಟು ಅವಕಾಶವಿರುತ್ತದೆ. ಇಲ್ಲವಾದರೆ ಕೆಳಮಟ್ಟದ ಸಾಹಿತ್ಯ ಸೃಷ್ಟಿಯಾಗುವುದಲ್ಲದೆ ಅಶ್ಲೀಲ ಸಾಹಿತ್ಯವೂ ತಲೆದೋರಬಹುದು. ಹೀಗಾಗಿ ಕೊಳ್ಳುವ ಸೌಲಭ್ಯವಿರುವ ಎಷ್ಟೋ ಗ್ರಂಥಾಲಯಗಳಲ್ಲಿ ಅಗ್ಗದ ಪುಸ್ತಕಗಳೇ ಹೆಚ್ಚಾಗಿರುವುದನ್ನು ಕಾಣುತ್ತೇವೆ. ಇಂಥ ಪರಿಸ್ಥಿತಿಯಲ್ಲಿಯೂ ನಿರಾಶರಾಗದೆ ಜೋಶಿಯವರು ಉತ್ತಮ ಗ್ರಂಥಕ್ಕೆ ಯಾವಾಗಲೂ ಬೆಲೆ ಇದ್ದೇ ಇರುತ್ತದೆಂಬುದನ್ನು ಸಾಬೀತುಗೊಳಿಸಿದರು. ಸುಸ್ಥಿತಿಯಲ್ಲಿದ್ದ ಕೆಲವು ಗಣ್ಯ ಲೇಖಕರಂತೂ ಅವರ ಬೆಂಬಲಕ್ಕೆ ಇದ್ದೇ ಇದ್ದರು. ಜಿ.ಬಿ.ಯವರ ಜನ್ಮಶತಮಾನೋತ್ಸವದ ಉದ್ಘಾಟನೆಯ ಸಂದರ್ಭದಲ್ಲಿ ಕೀರ್ತಿನಾಥ ಕುರ್ತಕೋಟಿಯವರು ಮಾತನಾಡುತ್ತ 'ಜಿ.ಬಿ. ಜೋಶಿಯವರ ಕೃತಿಗಳಲ್ಲಿ ಮಾಸ್ಟರಪೀಸ್ ಎಂದರೆ ಮನೋಹರ ಗ್ರಂಥಮಾಲೆಯೇ' ಎಂದುದು ನಿಜಕ್ಕೂ ಅರ್ಥಪೂರ್ಣವಾಗಿತ್ತು.

ಗ್ರಂಥಮಾಲೆಯ ಮೂಲಕ ಜೋಶಿಯವರು ಗೈದ ವಿಶಿಷ್ಟ ಹಾಗೂ ಅದ್ಭುತ ಕೆಲಸಕ್ಕೆ ತಕ್ಕ ಮನ್ನಣೆ ಕೊನೆಗಾಲಕ್ಕಾದರೂ ದೊರೆತದ್ದು ಸಂತೋಷಪಡತಕ್ಕ ಸಂಗತಿಯಾಗಿದೆ. ಇದೆಲ್ಲದರ ಮಧ್ಯದಲ್ಲಿಯೂ ಜಿ.ಬಿ.ಯವರು 'ಮೂಕಬಲಿ;, 'ಕದಡಿದ ನೀರು', 'ಸತ್ತವರ ನೆರಳು'ದಂತಹ ಶ್ರೇಷ್ಠ ರಂಗಕೃತಿಗಳನ್ನು ನೀಡುವುದರ ಮೂಲಕ ಅವರು ಕನ್ನಡಿಗರ ಇಮ್ಮಡಿ ಗೌರವಕ್ಕೆ ಪಾತ್ರರಾಗಿದ್ದರೆ.

'ಜಿ. ಬಿ. ಶತನಮನ'

೨೦೦೫

■■

ಹಿರೇಮಲ್ಲೂರು ಈಶ್ವರನ್ : ಒಂದು ಅದ್ಭುತ ಚೇತನ

ತಾಯಿ, ತಾಯ್ನುಡಿ, ತಾಯ್ನಾಡು ಎಂದರೆ ಪಂಚಪ್ರಾಣವಾಗಿದ್ದ ಡಾ. ಹಿರೇಮಲ್ಲೂರು ಈಶ್ವರನ್ ಧಾರವಾಡದಲ್ಲಿಯೇ ತಮ್ಮ ಆಪ್ತಮಿತ್ರರ ಮಧ್ಯದಲ್ಲಿಯೇ ಕೊನೆಯುಸಿರೆಳೆದದ್ದು ಕಾಕತಾಳೀಯವೇನೂ ಅಲ್ಲ. ಅದು ಅವರ ಪ್ರಬಲವಾದ ಇಚ್ಛಾಶಕ್ತಿಯ ದ್ಯೋತಕವೇ ಆಗಿತ್ತು.

೨೨–೬–೧೯೯೮ರಂದು ನಮ್ಮನ್ನಗಲಿದ ಈಶ್ವರನ್, ಪ್ರತಿಭೆ, ಅದಕ್ಕೂ ಹೆಚ್ಚಿನ ಪರಿಶ್ರಮ, ಸಾಹಸ, ಛಲ, ಬಂಡುಗಾರಿಕೆ ಇವೆಲ್ಲದರ ಪ್ರತೀಕವೆನಿಸಿದ್ದರು. ಹೋರಾಟವನ್ನೇ ಜೀವನದುಸಿರನ್ನಾಗಿ ಮಾಡಿಕೊಂಡ ಅವರು ತಮ್ಮ ಸಾಧನೆಯ ಮಾರ್ಗದಲ್ಲಿ ಎದುರಾಗುವ ಯಾವುದೇ ಸವಾಲನ್ನು ಎದುರಿಸಿ ಜಯಶಾಲಿಯಾಗುವ ಅಖಂಡ ಧೈರ್ಯವನ್ನು ಮೊದಲಿನಿಂದಲೂ ಮೈಗೂಡಿಸಿಕೊಂಡಿದ್ದರು.

ಅಂತಾರಾಷ್ಟ್ರೀಯ ಖ್ಯಾತಿಯ ಈ ಸಾಮಾಜಿಕ ಮಾನವಶಾಸ್ತ್ರಜ್ಞ ಮೂಲತಃ ಕನ್ನಡ ಎಂ.ಎ. ಹಾಗೂ ಕನ್ನಡದಲ್ಲಿ ಪಿಎಚ್.ಡಿ. ('ಹರಿಹರನ ರಗಳೆಗಳ ಸಂಖ್ಯಾ ನಿರ್ಣಯ') ಪಡೆದವರೆಂಬುದನ್ನು ಕೆಲವರು ಅಷ್ಟಾಗಿ ಗಮನಿಸಿದಂತೆ ತೋರುವುದಿಲ್ಲ. ಅವರ ಜೀವನದ ವೀರಗಾಥೆಯಂತಿರುವ 'ವಲಸೆ ಹೋದ ಕನ್ನಡಿಗನ ಕಥೆ' ನಮ್ಮ ಇಂದಿನ ಯುವಕರು, ಅವಶ್ಯವಾಗಿ ಓದಬೇಕಾದ ಗ್ರಂಥಗಳಲ್ಲಿ ಒಂದು ಎಂದರೆ ತಪ್ಪಾಗದು.

ಟೊರೆಂಟೋದ ಯಾರ್ಕ್ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮೂರು ಮಹತ್ವದ ಜರ್ನಲ್‌ಗಳನ್ನು ನಡೆಸುತ್ತ, ಅಂತಾರಾಷ್ಟ್ರೀಯ ಗ್ರಂಥ ವಿಭಾಗದಲ್ಲಿ ಹತ್ತಾರು ಕೃತಿಗಳನ್ನು ಬರೆದು ಸಂಪಾದಿಸಿದ ಶ್ರೇಯಸ್ಸು ಅವರದಾಗಿದೆ. ಜಗತ್ತಿನ ಉನ್ನತಮಟ್ಟದ ಜರ್ನಲ್‌ಗಳಲ್ಲಿ ಅವರ ಐವತ್ತಕ್ಕೂ ಹೆಚ್ಚು ಪ್ರಬಂಧಗಳು ಪ್ರಕಟಗೊಂಡಿವೆ. ನಿತ್ಯಜೀವನದಲ್ಲಿ ಶಿಸ್ತು ಹಾಗೂ ಅಚ್ಚುಕಟ್ಟುತನಕ್ಕೆ, ಸತತೋದ್ಯೋಗಕ್ಕೆ ಎಷ್ಟು ಮಹತ್ವವನ್ನು ಅವರು ಕೊಟ್ಟಿದ್ದರೋ ತಮ್ಮ ಬರವಣಿಗೆ ಹಾಗೂ ಪಾಂಡಿತ್ಯಕ್ಕೂ ಅದನ್ನು ಸಂಪೂರ್ಣ ಅಳವಡಿಸಿಕೊಂಡಿದ್ದರು.

ಕೆನಡಾದಲ್ಲಿಯೇ ಕುಟುಂಬದೊಡನೆ ವಾಸವಾಗಿದ್ದರೂ ವರ್ಷ ಎರಡು ವರ್ಷಕ್ಕೆ ಬೇಸಿಗೆಗಾಲದಲ್ಲಿ ಕರ್ನಾಟಕಕ್ಕೆ ಬಂದು ನಾಲ್ಕೈದು ತಿಂಗಳು ಇದ್ದು ಹೋಗುವುದನ್ನು

ಅವರು ತಪ್ಪಿಸಲಿಲ್ಲ. ತಾಯ್ನಾಡಿನ ಕರೆ ಅವರಿಗೆ ಅಷ್ಟೊಂದು ತೀವ್ರವಾಗಿತ್ತು. ಬಂಧು–ಬಳಗದ, ಸ್ನೇಹಿತರ ಹಾಗೂ ಹಿತೈಷಿಗಳ ಭೆಟ್ಟಿಯಲ್ಲಿ ಅವರ ಹೃದಯ ಪುಲಕಗೊಳ್ಳುತ್ತಿತ್ತು. ಧಾರವಾಡದ ಮನೆ 'ಕಲ್ಪನಾ' ಆಗ ಔತಣಕೂಟಗಳಿಗೆ ಸಂಭ್ರಮದಿಂದ ಅಣಿಗೊಳ್ಳುತ್ತಿತ್ತು. ಬಂದ ಸಲಕ್ಕೊಮ್ಮೆ ಸಂಶೋಧನೆಯ ಕ್ಷೇತ್ರಕಾರ್ಯ ಹಾಗೂ ಬರವಣಿಗೆಯ ಯೋಜನೆಗಳನ್ನು ಹಾಕಿಕೊಂಡೇ ಬರುತ್ತಿದ್ದರಲ್ಲದೆ ಅವುಗಳನ್ನು ನಿಯಮಿತವಾಗಿ ಪೂರೈಸಿಕೊಂಡೇ ಹಿಂದಿರುಗುತ್ತಿದ್ದರು. ಅವರ ಈ ದುಡಿಮೆ ಯಾರನ್ನಾದರೂ ಬೆರಗುಗೊಳಿಸುವಂತಿತ್ತು.

ಆದರೆ, ೧೯೯೬ರಲ್ಲಿ ಅವರು ಧಾರವಾಡಕ್ಕೆ ಬಂದಾಗ ಅವರು ಎಂದಿನ ಈಶ್ವರನ್ ಆಗಿರಲಿಲ್ಲ. ನುಗಿಸಿದರೆ ಎಲ್ಲಿ ಬಿದ್ದು ಬಿಡುತ್ತಾರೊ ಎನ್ನುವಷ್ಟು ಅವರ ದೇಹ ದುರ್ಬಲಗೊಂಡಿತ್ತು. ಕಿಬ್ಬೊಟ್ಟೆಯ ಶಸ್ತ್ರಕ್ರಿಯೆಯಿಂದ ಕ್ಷೀಣಗೊಂಡು ಕಂದಿ, ಕುಂದಿ ಹೋಗಿದ್ದರು. ಈ ನಾಡಿಗೆ ಇದೇ ಕೊನೆಯ ಭೆಟ್ಟಿ ಎಂಬ ತೆರದಲ್ಲಿ ಕಂಡವರೊಡನೆ ಅವರು ಕಂಬನಿಗೆರೆಯುತ್ತಿದ್ದರು. ಆದರೆ ಇಲ್ಲಿಯ ಹೋಮಿಯೊಪತಿ ಚಿಕಿತ್ಸೆಯಿಂದ ಅವರು ಆಶ್ಚರ್ಯಕರ ರೀತಿಯಲ್ಲಿ ಚೇತರಿಸಿಕೊಂಡು ಇದ್ದುದರಲ್ಲಿ ಗುಣಮುಖರಾದರು.

ಆ ಜೀವ ಸುಮ್ಮನೆ ಕೂಡಲಿಲ್ಲ. ಯೋಜಿಸಿಕೊಂಡು ಬಂದ ಕೆಲಸವನ್ನು ಮತ್ತೆ ಕೈಗೆತ್ತಿಕೊಂಡರು. ಡೈನಿಂಗ್ ಟೇಬಲ್ಲನ್ನೇ ಅವರು ತಮ್ಮ ಬರವಣಿಗೆಗೂ ಉಪಯೋಗಿಸುತ್ತಿದ್ದರು. ಪುಸ್ತಕಗಳನ್ನು, ಸಂದರ್ಭ ಗ್ರಂಥಗಳನ್ನೂ ಹರವಿಕೊಂಡು ಕೂಡಲು ಅದು ಪ್ರಶಸ್ತವೆನಿಸುತ್ತಿತ್ತು. ಕರ್ನಾಟಕದ ಧರ್ಮಗಳ ಬಗೆಗಿನ ಅಧ್ಯಯನ ಹಾಗೂ ಬರವಣಿಗೆ ಮುಂದುವರಿಯಿತು.

ಜೊತೆಗೆ ತಮ್ಮನ್ನು ಅತೀವ ಸಂಕಟಕ್ಕೊಳಪಡಿಸಿದ ಮಗಳ ದುರಂತ ಕಥೆಯನ್ನು 'ನನ್ನ ಮಗಳು ಆರುಂಧತಿ' ಯಲ್ಲಿ ಕಾದಂಬರಿ ರೂಪಕ್ಕಿಳಿಸಿ ಮನಸ್ಸನ್ನು ಹಗುರಗೊಳಿಸಿಕೊಂಡರು. ಮತ್ತೊಂದು ಕಾದಂಬರಿಗೆ ಹೊಳಹು ಹಾಕಿದರು. ಹೀಗೆ ಈಶ್ವರನ್ ಮರುಜನ್ಮ ಪಡೆದು ಕೆನಡಾಕ್ಕೆ ಹಿಂದಿರುಗಿದರು.

ಮರುವರ್ಷ ೧೯೯೭ರಲ್ಲಿ ಎಂದಿನಂತೆ ಧಾರವಾಡಕ್ಕೆ ಬಂದದ್ದು ನನಗೆ ಗೊತ್ತಾದದ್ದು ಫೋನಿನಲ್ಲಿ, ಅವರು ನನ್ನೊಡನೆ ಮಾತನಾಡಿದಾಗ. ಮಾತು ಅಸ್ಪಷ್ಟವಾಗಿ ತೊದಲಿದಂತೆ ಕೇಳಿದಾಗಲೇ ನನ್ನ ಮನಸ್ಸಿನಲ್ಲಿ ಮೂಡಿದ ಸಂಶಯ ಅವರನ್ನು ಹೋಗಿ ಕಂಡಾಗ ದೃಢಪಟ್ಟಿತು. ಸೌಮ್ಯರೀತಿಯ ಪಾರ್ಶ್ವವಾಯು ಅವರಿಗೆ ಆತಂಕ ಒಡ್ಡಿತ್ತು. ಆದರೂ ಅವರು ಧೈರ್ಯ ಗುಂದಿರಲಿಲ್ಲ. ಸ್ಥಳೀಯ ಚಿಕಿತ್ಸೆ ಆಶಾದಾಯಕವಾಗಿ ಕಂಡು ಬಂದಿತು.

ಯಥಾಪ್ರಕಾರ ಪಟ್ಟು ಹಿಡಿದು ಕುಳಿತು ಹಿಂದೆ ಪ್ರಾರಂಭಿಸಿದ್ದ ಬರವಣಿಗೆಯನ್ನು ಪೂರ್ತಿಗೊಳಿಸಿದರು. ''ಲಿಂಗಾಯತ, ಜೈನ್ ಮತ್ತು ಬ್ರಾಹ್ಮಣ ಧರ್ಮಗಳು: ಮತಗಳ ಒಂದು ತೌಲನಿಕ ಅಧ್ಯಯನ'' ಗ್ರಂಥ ಮುದ್ರಣಗೊಂಡು ಬೆಂಗಳೂರಿನಲ್ಲಿ ಬಿಡುಗಡೆಯಾಯಿತು. ಅಸ್ವಸ್ಥತೆಯಲ್ಲಿಯೂ ಅವರ ಮುಖ ಗೆಲುವಿನಿಂದ ತೃಪ್ತಿಯಿಂದ ಮಿನುಗಿತು.

೧೯೭೪ಆ ಕೆನಡಾದಿಂದ ಮತ್ತೆ ಕನ್ನಡ ನಾಡಿಗೆ 'ಕಲ್ಪನಾ' ಮನೆಯ ಕುರ್ಚಿಯಲ್ಲಿ ಕುಳಿತ ಈಶ್ವರನ್ ಈ ಸಲ ಇನ್ನಿಷ್ಟು ಇಳಿದು ಹೋಗಿದ್ದರು. ಒಂದೊಂದೇ ಶಬ್ದ ಮಾತಾಡುತ್ತಿದ್ದರು.

ಬರೆಯಲು ಯೋಚಿಸಿದ್ದ ಮೂರು ಗ್ರಂಥಗಳನ್ನು ಬರೆಯಲು ಸಾಧ್ಯವಾಗದ್ದಕ್ಕೆ ಕಣ್ಣು ಮತ್ತೆ ಹನಿಗೂಡುತ್ತಿದ್ದವು, ಗಂಟಲು ಕಟ್ಟಿ ಬರುತ್ತಿತ್ತು. ಮಿತ್ರ ಮುಳಗುಂದ ಅವರ ಜೊತೆಯಲ್ಲಿ ಸಂಜೆಯ ವಿಹಾರವನ್ನು ಹೇಗೋ ಮುಗಿಸಿ ಬರುತ್ತಿದ್ದರು. ಮೇಜಿನ ಮೇಲೆ ಎಂದಿನಂತೆ ಪುಸ್ತಕಗಳ ರಾಶಿ, 'ಐದು ಧರ್ಮ, ಐದು ದಾರಿ'– ಸೋತ ಕೈಯಿಂದ ಸಾಲುಗಳು ಮೂಡತೊಡಗಿದ್ದವು. ಆದರೆ ಮುಂದುವರಿಸುವುದು ಕಷ್ಟವಾಯಿತು. ದಿ. ೨೨–೬–೧೯೭೪ರ ರಂದು ಆಸ್ಪತ್ರೆ ಸೇರಿದ ಈಶ್ವರನ್ ರಾತ್ರಿ ಎರಡು ಗಂಟೆಗೆ ಕೊನೆಯುಸಿರೆಳೆದರು. 'ಹೋರು ಬೀಳ್ವನ್ನೆಗಂ ಒಬ್ಬೊಂಟಿಯಾದೊಡಂ' ಎಂಬ ನುಡಿ ಈ ದೈತ್ಯ ಶಕ್ತಿಯ–ವ್ಯಕ್ತಿಯ ವಿಷಯದಲ್ಲಿ ನಿಜವಾಗಿ ಹೋಯಿತು.

* * *

ಬೆಳಗಾವಿ ಲಿಂಗರಾಜ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಈಶ್ವರನ್ ಲೇಖಕರಾಗಿ ರೂಪುಗೊಂಡಿದ್ದರು. ಅವರ ಸಣ್ಣಕತೆ ಹಾಗೂ ಲೇಖನಗಳು ಕನ್ನಡದ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗತೊಡಗಿದ್ದವು. 'ಪ್ರಬುದ್ಧ ಕರ್ನಾಟಕ'ದಲ್ಲಿ 'ಈಶ್ವರನ್ ವಚನ'ಗಳನ್ನು ಓದಿದ ನೆನಪು ನನಗಿದೆ. ಪಾಟೀಲಪುಟ್ಟಪ್ಪ, ಡಿ. ಎಸ್. ಕರ್ಕಿ, ಎಸ್. ಡಿ. ಇಂಚಲ, ಈಶ್ವರನ್, ಸಣಕಲ್, ಬ. ಗಂ. ತುರುಮರಿ, ಕೋ. ಚೆನ್ನಬಸಪ್ಪ ಮೊದಲಾದವರು ಕಟ್ಟಿಕೊಂಡ 'ತುಂಬಿಗಳ ಬಳಗ' ಬೆಳಗಾವಿಯ ಕನ್ನಡ ಚಟುವಟಿಕೆಗಳ 'ಹುಟ್ಟು' ಕಟ್ಟತೊಡಗಿತ್ತು.

ಎಂ. ಎ. ಮುಗಿಸಿಕೊಂಡು ಈಶ್ವರನ್ ಧಾರವಾಡಕ್ಕೆ ಬಂದಾಗ ನಾನು ಅವರನ್ನು ಮೊದಲ ಸಲ ಕಂಡದ್ದು. ಆಗ ನಾನು ಕರ್ನಾಟಕ ಕಾಲೇಜಿನಲ್ಲಿ ಇಂಟರ್ ಆರ್ಟ್ಸ್‌ನಲ್ಲಿ ಓದುತ್ತಿದ್ದೆ. ಮಾಳಮಡ್ಡಿಯ ಜೋಗ ವಕೀಲರ ಬಂಗ್ಲೆಯ ಒಂದು ಕೋಣೆಯನ್ನು ಹಿಡಿದು ಅವರು ತಮ್ಮ ಕಲ್ಪನಾ ಗ್ರಂಥಮಾಲೆ ಹಾಗೂ ಒಂದು ಪುಸ್ತಕದಂಗಡಿಯ ಯೋಜನೆಯ ರೂಪುರೇಷೆಗಳನ್ನು ಹಾಕತೊಡಗಿದ್ದರು.

ವಿದ್ಯಾರ್ಥಿದೆಸೆಯಲ್ಲಿಯೇ 'ವಿಷ ನಿಮಿಷಗಳು' 'ಹಾಲಹಲ' ಕಥಾಸಂಗ್ರಹಗಳ ಮೂಲಕ ಸಾಹಿತ್ಯಾಸಕ್ತರ ಗಮನ ಸೆಳೆದಿದ್ದ ಈಶ್ವರನ್ ಗ್ರಂಥಮಾಲೆಯನ್ನು ಪ್ರಾರಂಭಿಸಿಯೇ ಬಿಟ್ಟರು. ಪ್ರಸಂಗ ಬಂದರೆ ಇದಕ್ಕಾಗಿ ಊರಲ್ಲಿಯ ತಮ್ಮ ಹೊಲವನ್ನು ಕೂಡ ಮಾರಲು ಅವರು ಸಿದ್ಧರಾಗಿದ್ದಂತೆ ಕಂಡು ಬಂದಿತು. ಅದೇ ಹೊತ್ತಿಗೆ ಹುಬ್ಬಳ್ಳಿಯಲ್ಲಿ ಪ್ರಾರಂಭಗೊಂಡ ಜೆ.ಜಿ. ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ ನೇಮಕಗೊಂಡಿದ್ದರಿಂದ ಅವರು ಧಾರವಾಡವನ್ನು ಬಿಡಬೇಕಾಯಿತು.

ತಮ್ಮ ಕೋಣೆಯನ್ನು ನನ್ನ ವಾಸಕ್ಕೆ ಬಿಟ್ಟುಕೊಟ್ಟಿದ್ದಲ್ಲದೆ ಎರಡು ವರ್ಷ ಅದರ ಬಾಡಿಗೆಯನ್ನೂ ಅವರೇ ಕೊಟ್ಟರು. ಕನ್ನಡದ ಹಿರಿಯ ಕವಿಗಳ ಕವನಸಂಗ್ರಹಗಳೆಲ್ಲವೂ ಅವರ ಪುಸ್ತಕ ಭಂಡಾರದಲ್ಲಿದ್ದುದು ನನಗೊಂದು ನಿಧಿ ದೊರಕಿದಷ್ಟು ಸಂತೋಷವಾಯಿತು. (ಎಂ.ಎ. ಮುಗಿಯುವವರೆಗೂ ನಾನು ಅದೇ ಕೋಣೆಯಲ್ಲಿದ್ದೆ) ಶ್ರೀಧರ ತೇಲ್ಕರ್, ಮಿರ್ಜಿ ಅಣ್ಣಾರಾಯ, ಸಿಂಪಿ ಲಿಂಗಣ್ಣ, ವರದರಾಜ ಹುಯಿಲಗೋಳ ಮೊದಲಾದವರು ಕಲ್ಪನಾಗ್ರಂಥ ಮಾಲೆಯ ಲೇಖಕ ಬಳಗದಲ್ಲಿದ್ದರು. ನನ್ನ ಪ್ರಥಮ ಕವನ ಸಂಗ್ರಹ 'ಕಾವ್ಯಾಕ್ಷಿ' ಈ ಮಾಲೆಯಲ್ಲಿಯೇ ಬೆಳಕು ಕಂಡಿತು. ಆಗ ಪ್ರಕಟಗೊಂಡ ಗ್ರಂಥಗಳಲ್ಲಿ ಈಶ್ವರನ್ ಅವರ 'ರಾಜಾರಾಣಿ ದೇಖೊ' (ಕಥಾ ಸಂಗ್ರಹ) 'ಶಿವನಬುಟ್ಟಿ' (ಪ್ರಬಂಧ ಸಂಗ್ರಹ), 'ಕನ್ನಡ ತಾಯ್ ನೋಟ' (ವ್ಯಕ್ತಿಚಿತ್ರ), 'ಕವಿಕಂಡ ನಾಡು' (ಪ್ರವಾಸ ಕಥನ) ಮೊದಲಾದವು ಅವರ ಲೇಖನ ಸಾಮರ್ಥ್ಯವನ್ನು ಎತ್ತಿತೋರಿಸಿದವು. ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಓದುಗರೊಡನೆ ಸಂಭಾಷಣೆ ನಡೆಸಿದಂತೆ ತಮ್ಮದೇ ಆದ ಭಾವನಾತ್ಮಕ ಶೈಲಿಯನ್ನು ಅವರು ಆಗಲೇ ನಿರ್ಮಿಸಿಕೊಂಡಿದ್ದರು. 'ಜಯ ಕರ್ನಾಟಕ'ದಲ್ಲಿ ಪ್ರತಿ ತಿಂಗಳೂ ಬರೆಯುತ್ತಿದ್ದ 'ಕಲ್ಪನೆಗೆ ಕಾಗದಗಳು' ಓದುಗರನ್ನು ವಿಶೇಷ ಆಕರ್ಷಿಸಿದ್ದವು.

ಕಾಮರ್ಸ್ ಕಾಲೇಜಿನ ಕರ್ನಾಟಕ ಸಂಘದ ಮೂಲಕ ಹುಬ್ಬಳ್ಳಿಯಲ್ಲಿ ಸಾಹಿತ್ಯಿಕ ಚಟುವಟಿಕೆಗಳಿಗೆ ಈಶ್ವರನ್ ಹೊಸ ಮೆರುಗು ತಂದುಕೊಟ್ಟರು. ಜಿ. ಪಿ. ರಾಜರತ್ನಂ, ಮಾಸ್ತಿ ಮೊದಲಾದವರ ಭಾಷಣಗಳನ್ನು ಕೇಳುವ ಭಾಗ್ಯ ಆಗ ಹುಬ್ಬಳ್ಳಿ ನಾಗರಿಕರಿಗೆ ಒದಗಿ ಬಂದಿತು.

ನಾಲ್ಕೈದು ವರ್ಷಗಳ ನಂತರ ಅವರು ಸೊಲ್ಲಾಪುರದ ಸಂಗಮೇಶ್ವರ ಕಾಲೇಜಿಗೆ ವರ್ಗವಾಗಿ ಹೋದರು. ನಂತರ ತಮ್ಮ ಕ್ಷೇತ್ರವನ್ನು ಬದಲಿಸಿಕೊಂಡು ಸಮಾಜಶಾಸ್ತ್ರದ ವಿದ್ಯಾರ್ಥಿಯಾಗಿ ಅವರು ಆಕ್ಸ್‌ಫರ್ಡಿಗೆ ಹೋದರು. ಅಲ್ಲಿ ಬಿ.ಲಿಟ್. ಪದವಿ ಪಡೆದು ಅಂತಾರಾಷ್ಟ್ರೀಯ ಖ್ಯಾತಿಯ ಲೈಡನ್ ವಿಶ್ವವಿದ್ಯಾಲಯದ ಡಿ.ಲಿಟ್. ಪದವಿಗಾಗಿ ಡಚ್ ಕುಟುಂಬ ಪದ್ಧತಿಯನ್ನು ಕುರಿತು ಬರೆದ ಥೀಸಿಸ್ ವಿದ್ವಾಂಸರ ಗಮನವನ್ನು ಸೆಳೆಯಿತು. ಆಕಸ್ಮಿಕವೊ ಎಂಬಂತೆ ಅವರು ಪ್ರತಿಷ್ಠಿತ ದೊಡ್ಡ ಮನೆತನದ ಡಚ್ ಮಹಿಳೆಯನ್ನು ಕೈ ಹಿಡಿದರು. ಮದುವೆ ನಡೆದುದು ಕರ್ನಾಟಕದ ಸಿರಿಗೆರೆಯ ಸ್ವಾಮಿಗಳ ಸನ್ನಿಧಿಯಲ್ಲಿ. ಪಾಪು ದಂಪತಿಗಳು ತಂದೆ ತಾಯಿಗಳಾಗಿ ಮದುವೆ ಮಾಡಿಕೊಟ್ಟರು.

ವಿದೇಶದಲ್ಲಿ ಅವರ ವಿದ್ಯಾಭ್ಯಾಸ ಮುಗಿಯುವ ಹೊತ್ತಿಗೆ, ಪ್ರತಿಭಾವಂತರನ್ನು ಎಲ್ಲಿದ್ದರೂ ಹುಡುಕಿ ತೆಗೆದು ಕರ್ನಾಟಕ ವಿಶ್ವವಿದ್ಯಾಲಯವನ್ನು ಭದ್ರ ಬುನಾದಿಯ ಮೇಲೆ ಕಟ್ಟತೊಡಗಿದ್ದ ಕುಲಪತಿ ಡಾ. ಡಿ. ಸಿ. ಪಾವಟೆಯವರು ಅವರನ್ನು ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಮುಖ್ಯಸ್ಥರನ್ನಾಗಿ ಬರಮಾಡಿಕೊಂಡರು.

ಕೆಲವೇ ವರ್ಷಗಳಲ್ಲಿ ವಿಭಾಗ ಮೈದುಂಬಿಕೊಂಡು ಬೆಳೆಯುತ್ತಿದ್ದಂತೆಯೇ ಆಡಳಿತದಲ್ಲಿಯ ಭಿನ್ನಾಭಿಪ್ರಾಯದಿಂದಾಗಿ, ಅಲ್ಲದೆ ಅವರ ಸ್ವಭಾವವೂ ಕೆಲಮಟ್ಟಿಗೆ

ಕಾರಣವಾಗಿ, ಈಶ್ವರನ್ ೧೯೬೬ರಲ್ಲಿ ಟೊರಂಟೊದ ಯಾರ್ಕ್ ವಿಶ್ವವಿದ್ಯಾಲಯಕ್ಕೆ ವಲಸೆ ಹೋದರು.

ಅಲ್ಲಿಯ ಅನುಕೂಲಕರವಾದ ಶೈಕ್ಷಣಿಕ ವಾತಾವರಣದಿಂದ ಉತ್ಸಾಹಿತರಾಗಿ ಉನ್ನತಮಟ್ಟದ ಸಂಶೋಧನ ಕೃತಿಗಳನ್ನು ಹೊರತಂದರು. ಅಂತಾರಾಷ್ಟ್ರೀಯ ಖ್ಯಾತಿಯ ಜರ್ನಲ್‌ಗಳ ಸಂಪಾದಕರಾಗಿ ದುಡಿದರು.

ಜಾತಿ, ಧರ್ಮ ಜನಾಂಗಕ್ಕೆ ಸಂಬಂಧಪಟ್ಟಂತೆ ತಮ್ಮದೇ ಆದ ವಿಚಾರಗಳನ್ನೂ ಸಿದ್ಧಾಂತಗಳನ್ನೂ ಪ್ರತಿಪಾದಿಸುತ್ತ ತಮ್ಮ ವೈಶಿಷ್ಟ್ಯವನ್ನು ಮೆರೆದರು. ಇನ್ನೂ ಮೂರು ಹೊಸ ಜರ್ನಲ್‌ಗಳನ್ನು ಪ್ರಾರಂಭಿಸುವ ಸನ್ನಾಹದಲ್ಲಿದ್ದರು.

ಇಷ್ಟಾಗಿಯೂ ಈಶ್ವರನ್ ಕರ್ನಾಟಕ ಹಾಗೂ ಕನ್ನಡ ಸಾಹಿತ್ಯ ಸಂಸ್ಕೃತಿಯ ಕರುಳಿನ ಸಂಬಂಧವನ್ನು ಉಳಿಸಿಕೊಂಡು ಬೆಳಸಿಕೊಂಡು ಬಂದದ್ದನ್ನು ಯಾರೂ ಮರೆಯುವಂತಿಲ್ಲ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹಳ ಹಿಂದೆಯೇ ಗೌರವ ಪ್ರಶಸ್ತಿಯನ್ನು ನೀಡಿ ಅವರನ್ನು ಸತ್ಕರಿಸಿತು. ಇತ್ತೀಚೆಗೆ ಚಿತ್ರದುರ್ಗದ ಬೃಹನ್ಮಠ ಅವರ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕೊಡುಗೆಯನ್ನು ಗಮನಿಸಿ ಒಂದು ಲಕ್ಷ ಮೊತ್ತದ 'ಬಸವಶ್ರೀ' ಪ್ರಶಸ್ತಿಯನ್ನು ಕೊಡಮಾಡಿತು. ಇದು ಅವರಿಗೆ ಸಮಾಧಾನವನ್ನುಂಟು ಮಾಡಿದ್ದರಲ್ಲಿ ಸಂದೇಹವಿಲ್ಲ. ಆದರೆ ಅದನ್ನು ಪ್ರತ್ಯಕ್ಷವಾಗಿ ಸ್ವೀಕರಿಸುವ ಮೊದಲೇ ಅವರು ನಮ್ಮನ್ನಗಲಿದರು. ಒಳ್ಳೆಯ ಗೃಹಿಣಿಯಾಗಿ ಅವರ ಸುಖ ದಾಂಪತ್ಯ ಜೀವನಕ್ಕೆ ಕಾರಣರಾದ ಅವರ ಪತ್ನಿ ವೋಬಿನ್ (ಶೈಲಜಾ) ಅದನ್ನು ಸ್ವೀಕರಿಸಿದ್ದು ಔಚಿತ್ಯಪೂರ್ಣವೆನಿಸಿತು.

ಈಶ್ವರನ್ ಲಿಂಗಾಯತ ಧರ್ಮವನ್ನು ಕುರಿತು ತಮ್ಮ ಕೊನೆಯ ಗ್ರಂಥದಲ್ಲಿ ಹೇಳಿದ ಕೆಳಗಿನ ಮಾತುಗಳು ಗಮನಾರ್ಹವಾಗಿವೆ: ''ಇದು ಬೋಧಿಸುವುದು ಶಕ್ತಿ ವಿಶಿಷ್ಟಾದ್ವೈತವನ್ನಲ್ಲ. ತೋಂಟದ ಸಿದ್ಧಲಿಂಗಯತಿಯು ಹೇಳುವಂತೆ ಶಿವಾದ್ವೈತವನ್ನು ಪ್ರತಿಪಾದಿಸುತ್ತದೆ. ಇದು ಭಕ್ತಿಧರ್ಮವನ್ನಲ್ಲ, ಸೇವಾ ಧರ್ಮವನ್ನು ಕಲಿಸುತ್ತಿದೆ. ಇದರ ಗುರಿ ಶಿವನನ್ನು ಸಮಾಜದಲ್ಲಿ ಕಾಣಿಸುವುದು. ಇದು ಯಾವ ಧರ್ಮದ ಆಶ್ರಯದಲ್ಲಿ ಬೆಳೆಯದ ಸ್ವತಂತ್ರ ಧರ್ಮ..... ಲಿಂಗಾಯತ ಧರ್ಮದ ಇನ್ನೊಂದು ಹೆಸರು 'ಪ್ರಜಾಧರ್ಮ'. ಪ್ರಜಾಧರ್ಮದ ಹೆಸರಿನಲ್ಲಿ ನನ್ನ ಮೂರನೇ ಪುಸ್ತಕದ ಹೊಳಹನ್ನು ಹಾಕಿದ್ದೇನೆ.''

ಆದರೆ, ಈ ಕನಸು ನನಸಾಗದೆ ಹೋದದ್ದು ಕನ್ನಡಿಗರ ದುರ್ದೈವ. ವಿದ್ವಾಂಸರು ಈ ವಿಚಾರದ ಬಗ್ಗೆ ಚರ್ಚೆಯನ್ನು ಮುಂದುವರಿಸಿದರೆ ಅದೇ ಅವರಿಗೆ ಯೋಗ್ಯ ಸ್ಮಾರಕವೆನಿಸಬಹುದು.

ಎಲ್ಲರಂತೆ ಈಶ್ವರನ್ ಅವರ ಸ್ವಭಾವದಲ್ಲಿಯೂ ಕೆಲವು ದೋಷಗಳಿದ್ದವು. ಅವರೆಷ್ಟು ಸ್ನೇಹಪರರೊ ಅಷ್ಟೇ ನಿಷ್ಠುರಿಯಾಗಿದ್ದರು. ಜನರನ್ನು ಹಚ್ಚಿಕೊಂಡರೆ ತೀರ

ಹಚ್ಚಿಕೊಂಡು ಬಿಡುವುದು. ಯಾವುದೋ ಸಂದರ್ಭದಲ್ಲಿ ತಮ್ಮ ಮನಸ್ಸಿಗೆ ಹಿಡಿಸದ ಸಣ್ಣ ಘಟನೆ ನಡೆದರೂ ಆ ವ್ಯಕ್ತಿಗಳೊಡನೆ ಕೂಡಲೇ ತಮ್ಮ ಸಂಬಂಧವನ್ನು ಕಡಿದುಕೊಂಡು ಬಿಡುತ್ತಿದ್ದರು. ಅತ್ಯಂತ ನಿಕಟವರ್ತಿಗಳೆನಿಸಿದ ಸ್ನೇಹಿತರ ಜೊತೆಯಲ್ಲಿಯೂ ಕೆಲವು ಸಲ ತಪ್ಪು ತಿಳುವಳಿಕೆಯಿಂದ ಮಾತು ಬಿಟ್ಟು ಮತ್ತೆ ಮೊದಲಿನಂತೆ ಗೆಳತನದ ಸವಿಯನ್ನುಣಿಸುತ್ತಿದ್ದರು.

೬೩ ವರ್ಷಗಳಷ್ಟು ದೀರ್ಘಕಾಲ ಅವರ ಒಡನಾಡಿಯಾಗಿದ್ದ ಶ್ರೀ ಪಾಟೀಲ ಪುಟ್ಟಪ್ಪನವರಿಗೂ ಇದರ ಅನುಭವ ಆಗದೆ ಹೋಗಿಲ್ಲ. ಅವರ ಸ್ವಭಾವವನ್ನು ಚೆನ್ನಾಗಿ ಬಲ್ಲವರಿಗೆ ಅವರ ಬಗೆಗಿನ ಗೌರವಕ್ಕೆ ಯಾವ ತೊಡಕೂ ಉಂಟಾಗುತ್ತಿರಲಿಲ್ಲ. ಅಂಥ ಎದೆಗಾರಿಕೆ ಹಾಗೂ ಛಲಗಾರಿಕೆಯ ವ್ಯಕ್ತಿಗಳು ನಮ್ಮ ಸಾಹಿತ್ಯ ಪ್ರಪಂಚದಲ್ಲಿ ತೀರ ವಿರಳವೆಂದೇ ಹೇಳಬಹುದು.

ತಮ್ಮ ಆತ್ಮಕಥೆಯಲ್ಲಿ ಒಂದೆಡೆ ಹೀಗೆ ಹೇಳಿಕೊಂಡಿದ್ದಾರೆ : ''ನಾನು ಇನ್ನೊಮ್ಮೆ ಹುಟ್ಟಿಬರುವುದಕ್ಕೆ ಅವಕಾಶವಿದ್ದರೆ ಹೀರೇಮಲ್ಲೂರಲ್ಲಿ, ಅದೇ ಬಡಕುಟುಂಬವೊಂದರಲ್ಲಿ, ಅದೇ ತಂದೆ ತಾಯಿಯ ಹೆಮ್ಮಗನಾಗಿ ಹುಟ್ಟಿಬರುವ ಆಸೆ ನನಗಿದೆ. ಆದರೆ ದೇವರಲ್ಲೊಂದು ಕರಾರು; ಎಳವೆಯಲ್ಲಿ ಮಕ್ಕಳನ್ನು ಒಯ್ಯಬೇಡಪ್ಪ.'' ಅವರು ಸಾಧಿಸಿದ ಅದ್ಭುತವಾದ ಕಾರ್ಯಗಳ ಹಾಗೂ ಎಲ್ಲಬಗೆಯ ಬರವಣಿಗೆಯ ಮೂಲ ಸೆಲೆ ಇಲ್ಲಿದೆ ಎಂದು ನನಗನಿಸುತ್ತದೆ.

'ಪ್ರಪಂಚ'
೧೯೯೮

■■

ಡಾ. ಆರ್. ಸಿ. ಹಿರೇಮಠ : ಒಂದು ಸ್ಮರಣೆ

೧೯೪೫೪೬ರಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಯಾಗಿ ನಾನು ಅದೇ ಕರ್ನಾಟಕ ಕಾಲೇಜನ್ನು ಪ್ರವೇಶಿಸಿದ್ದೆ. ಆರ್. ಸಿ. ಹಿರೇಮಠರು ಕನ್ನಡ ಎಂ.ಎ. ಪರೀಕ್ಷೆಯಲ್ಲಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಪ್ರಥಮ ರ್‍ಯಾಂಕ್ ಪಡೆದು ಪಾಸಾಗಿರುವ ಸುದ್ದಿ ಎಲ್ಲೆಡೆಗೂ ಹರ್ಷದ ವಾತಾವರಣವನ್ನುಂಟು ಮಾಡಿತ್ತು. ಆಗ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಹಿರೇಮಠರ ಸನ್ಮಾನಾರ್ಥ ಒಂದು ಸಭೆಯ ಏರ್ಪಾಡಾಗಿದ್ದಿತು. ಸಂಘದಲ್ಲಿ ನಡೆಯುತ್ತಿದ್ದ ಸಾಹಿತ್ಯ ಸಮಾರಂಭಗಳಿಗೆ ನಾನು ಸಾಮಾನ್ಯವಾಗಿ ತಪ್ಪಿಸಿಕೊಳ್ಳುತ್ತಿರಲಿಲ್ಲ. ಅಂದಿನ ಸಭೆಯಂತೂ ಕನ್ನಡ ಪ್ರೇಮಿಗಳಿಗೆ ಹಬ್ಬದ ದಿನವಾಗಿತ್ತು. ಹಿರೇಮಠರ ಜೊತೆಯಲ್ಲಿಯೇ ದ್ವಿತೀಯ ರ್‍ಯಾಂಕ್ ಪಡೆದಿದ್ದ ಆರ್. ವಿ. ಕುಲಕರ್ಣಿಯವರೂ ಅಂದಿನ ಸಭೆಯ ಸನ್ಮಾನಿತ ಅತಿಥಿಯಾಗಿದ್ದರು. (ಇವರೇ ಮುಂದೆ ರಾಕು ಎಂದು ಪ್ರಸಿದ್ಧಿ ಪಡೆದ ಲಲಿತ ಪ್ರಬಂಧಕಾರರು.)

ಆರ್. ಸಿ. ಹಿರೇಮಠರನ್ನು ನಾನು ಕಂಡದ್ದು ಅದೇ ಮೊದಲ ಸಲ. ವಿನಯ, ಸಾದಾತನ, ಅವರಲ್ಲಿ ಎದ್ದು ಕಾಣುತ್ತಿದ್ದವು. ಅಂದಿನ ಸಭೆಯ ಇನ್ನೊಂದು ದೊಡ್ಡ ಆಕರ್ಷಣೆಯೆಂದರೆ ಬಿ. ಎಂ. ಶ್ರೀಕಂಠಯ್ಯನವರು. ಧಾರವಾಡದಲ್ಲಿ ಅದೇ ಪ್ರಾರಂಭವಾಗಿದ್ದ ಕೆ.ಇ. ಬೋರ್ಡ್ಸ್ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಬಂದಿದ್ದ ಅವರೇ ಅಂದಿನ ಸಭೆಯ ಅಧ್ಯಕ್ಷರು. ಶ್ರೀಯುತರಾದ ಶಂ. ಬಾ, ಜೋಶಿ, ದ. ರಾ. ಬೇಂದ್ರೆ, ಪ್ರೊ. ಸ. ಸ. ಮಾಳವಾಡ ಅಂದು ಮಾತನಾಡಿದವರಲ್ಲಿ ಮುಖ್ಯರು. ಹಿರೇಮಠರು ತಮ್ಮ ಸನ್ಮಾನಕ್ಕೆ ಸೂಕ್ತ ರೀತಿಯಲ್ಲಿ ಉತ್ತರಿಸಿದರು. ಬಿ.ಎಂ. ಶ್ರೀಯವರ ಕಂಠಶ್ರೀಯಿಂದ ಹೊರಹೊಮ್ಮಿದ ಅಂದಿನ ಭಾಷಣವನ್ನು ಕೇಳುವ ಸೌಭಾಗ್ಯ ನನ್ನದಾಗಿತ್ತು. ಕನ್ನಡತಾಯ ತೇರು ಸಿಂಗಾರಗೊಂಡು ನಿಂತಿದೆ. ತೇರಿನ ಮಿಣೆಗೆ ಕೈ ಹಚ್ಚಿ ಅದನ್ನು ವೈಭವದಿಂದ ಮುಂದೆ ಸಾಗಿಸುವ ಹೊಣೆಗಾರಿಕೆಯನ್ನು ಕುರಿತು ಅವರು ತುಂಬ ಕಳಕಳಿಯಿಂದ ಮಾತನಾಡಿದ್ದು ನನಗೆ ಇನ್ನೂ ನೆನಪಿದೆ. ಅವರು ಬಯಸಿದಂತೆ ಆರ್. ಸಿ. ಹಿರೇಮಠರು ಕನ್ನಡದ ಮುನ್ನಡೆಗೆ ಕೊನೆಯವರೆಗೂ ದಣಿವರಿಯದೆ ದುಡಿದು, ಕನ್ನಡ ತಾಯ ಋಣವನ್ನು ತೀರಿಸಿದರೆಂಬ ಭಾವನೆ ನನ್ನದಾಗಿದೆ.

ನಾನು ಆರ್. ಎಲ್. ಎಸ್. ಹೈಸ್ಕೂಲಿನಲ್ಲಿದ್ದಾಗ ಕೆಲವು ಗೆಳೆಯರು ಕೂಡಿಕೊಂಡು– ಕಾಲೇಜ ವಿದ್ಯಾರ್ಥಿ ಮಿತ್ರರೂ ಇದರಲ್ಲಿದ್ದರು– 'ಕಿರಿಯರ ಬಳಗ'ವನ್ನು ಕಟ್ಟಿದ್ದೆವು. ನಮ್ಮ ಕಾರ್ಯಕ್ರಮಗಳು ಲಿಂಗಾಯತ ಟೌನ್‌ಹಾಲಿನಲ್ಲಿ ನಡೆಯುತ್ತಿದ್ದವು. ಪ್ರೊ. ಶಿ. ಶಿ. ಬಸವನಾಳರು ರಬಕವಿ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದಾಗ ಅವರನ್ನು ಸನ್ಮಾನಿಸಲು ಬಳಗ ಏರ್ಪಡಿಸಿದ ಅಚ್ಚುಕಟ್ಟಾದ ಕಾರ್ಯಕ್ರಮ ಹಿರಿಯರ ಮೆಚ್ಚುಗೆ ಗಳಿಸಿತ್ತು. ಮರುವರ್ಷವೇ ಮತ್ತೆ ಅಂಥ ಒಂದು ಸಮಾರಂಭ ಏರ್ಪಡಿಸುವ ಅವಕಾಶ ಕಿರಿಯರ ಬಳಗಕ್ಕೆ ಒದಗಿತು. ಹಿರೇಮಠರನ್ನು ಹಾಗೂ ಅದೇ ವರ್ಷ ಮುಂಬಯಿ ವಿಶ್ವವಿದ್ಯಾಲಯಕ್ಕೆ ಬಿ.ಇ. ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ಶ್ರೀಮಗದುಮ್ ಅವರನ್ನು ಒಂದೇ ವೇದಿಕೆಯ ಮೇಲೆ ಸನ್ಮಾನಿಸಲಾಯಿತು. ಆ ಹೊತ್ತಿಗಾಗಲೇ ಆರ್. ಸಿ. ಯವರು ಬಾಗಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ನಮ್ಮ ಅಂದಿನ ಕಾರ್ಯಕ್ರಮದ ಮುಂದಾಳತ್ವವನ್ನು ವಹಿಸಿದವರು. ಬಿ.ಎಸ್‌ಸಿ. ಯಲ್ಲಿ ಓದುತ್ತಿದ್ದ ಎಸ್. ಎಸ್. ಹಿರೇಮಠ. ಅವರಿಗೆ ಈ ಮೊದಲೇ ಆರ್. ಸಿ.ಯವರ ಪರಿಚಯವಿದ್ದಿತಲ್ಲದೆ ಅವರ ಕಟ್ಟಾ ಅಭಿಮಾನಿಗಳಾಗಿದ್ದರು. (ಮುಂದೆ ಎಷ್ಟೋ ವರ್ಷಗಳ ನಂತರ ಎಸ್. ಎಸ್. ಹಿರೇಮಠ ಅವರು ಆರ್. ಸಿ.ಯವರ ಬೀಗರಾದದ್ದು ಒಂದು ಯೋಗಾಯೋಗವೆಂದೇ ಹೇಳಬಹುದು.) ಅತ್ಯಂತ ಸಜ್ಜನರೂ ಸಾಹಿತ್ಯ ಪ್ರೇಮಿಗಳೂ ಆದ ಶ್ರೀ ಎಸ್. ಎಸ್. ಹಿರೇಮಠ ಅವರು ಇಂದಿಗೂ ನನ್ನ ಬಗ್ಗೆ ಅದೇ ಆತ್ಮೀಯತೆ ಇಟ್ಟುಕೊಂಡಿರುವುದನ್ನು ನಾನು ಕೃತಜ್ಞತೆಯಿಂದ ನೆನೆಯುತ್ತೇನೆ. ಅಂದಿನ ಸಭೆಯಲ್ಲಿ ಕಿರಿಯರ ಬಳಗ ಸಿದ್ಧಪಡಿಸಿದ ಕೈ ಬರೆಹದ ಪತ್ರಿಕೆಯನ್ನು ಆರ್. ಸಿ.ಯವರು ಬಿಡುಗಡೆ ಮಾಡಿದರು. ಸಭೆಯ ನಂತರ ಅವರು ನನ್ನನ್ನು ಹತ್ತಿರ ಕರೆದು ಮಾತನಾಡಿಸಿ ಆ ಪತ್ರಿಕೆಯಲ್ಲಿದ್ದ ನನ್ನ ಕವಿತೆಯನ್ನು ಹಾಗೂ ನನ್ನ ಕೈ ಬರೆಹವನ್ನು ತಾವು ಬಹಳ ಮೆಚ್ಚಿಕೊಂಡಿರುವುದಾಗಿ ಹೇಳಿ ನನ್ನ ಸಂಕೋಚವನ್ನು ದೂರ ಮಾಡಿದರು. ('ಚೆಂಬೆಳಕು' ಅಭಿನಂದನ ಗ್ರಂಥಕ್ಕೆ ಬರೆದ ತಮ್ಮ ಲೇಖನದಲ್ಲಿ ಆರ್. ಸಿ. ಯವರು ಈ ಪ್ರಸಂಗವನ್ನು ಉಲ್ಲೇಖಿಸಿದ್ದಾರೆ.)

ನಾನು ಎಂ.ಎ.ದಲ್ಲಿದ್ದಾಗ ೧೯೫೮ರಲ್ಲಿ ಡಾ. ಆರ್. ಸಿ. ಹಿರೇಮಠರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ರೀಡರ್ ಆಗಿ ಬಂದರು. ನಮಗೆ ಬೋಧಿಸುತ್ತಿದ್ದ ಐದಾರು ಜನ ಸ್ಥಳೀಯ ಪ್ರಾಧ್ಯಾಪಕರಲ್ಲಿ ಅವರೂ ಒಬ್ಬರಾದರು. ಟ್ರೇನಿಂಗ್ ಕಾಲೇಜ್ ಹಾಸ್ಟೆಲ್ಲಿನ ತಮ್ಮ ಕೋಣೆಯಿಂದ ಅವರು ನಮ್ಮ ವರ್ಗಕ್ಕೆ ಬಂದು ಪಾಠ ಮಾಡುತ್ತಿದ್ದರು. ಅವರ ಅಧ್ಯಾಪನದಲ್ಲಿ ನನಗೆ ವಿಶೇಷವಾಗಿ ಕಂಡದ್ದು ಅವರ ಜ್ಞಾಪಕ ಶಕ್ತಿ. ಈ ಮೊದಲೇ ಪ್ರಕಟವಾಗಿದ್ದ ಅವರ 'ಸುಮಾಂಜಲಿ' (ಕವನ ಸಂಗ್ರಹ) ಹಾಗೂ 'ಮಹಾಕವಿ ರಾಘವಾಂಕ' ಕೃತಿಗಳನ್ನು ಓದಿದ್ದ ನಾನು ಅವರು ಕವಿ ಹೃದಯದ ಪಂಡಿತರೆಂಬುದನ್ನು ಗುರುತಿಸಿದ್ದೆ. ೧೯೫೯ ಜನವರಿಯಲ್ಲಿ ಪ್ರೊ. ತೀ.ನಂ. ಶ್ರೀಕಂಠಯ್ಯನವರು ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿ ಆಗಮಿಸಿದರು. ಆ ವರ್ಷ ನಮ್ಮ ಬ್ಯಾಚಿನಲ್ಲಿ ಸಾಕಷ್ಟು ಜನ

ವಿದ್ಯಾರ್ಥಿಗಳಿದ್ದರು. ಆದರೆ ಮರುವರ್ಷ ವಿಭಾಗದಲ್ಲಿ ಒಬ್ಬನೇ ಒಬ್ಬ ವಿದ್ಯಾರ್ಥಿ. ಹಿರೇಮಠರು ವಿಭಾಗದ ಭವಿಷ್ಯದಲ್ಲಿ ಭರವಸೆಯಿಟ್ಟು ತಮ್ಮ ಅಧ್ಯಯನದಲ್ಲಿ ತೊಡಗಿರುತ್ತಿದ್ದರು. ಮನೆಯವರ ಹಾಗೂ ಮಕ್ಕಳ ಅನಾರೋಗ್ಯ ಇತ್ಯಾದಿ ಕೌಟುಂಬಿಕ ಸಮಸ್ಯೆಗಳು ಆಗಾಗ ಉದ್ಭವಿಸುತ್ತಿದ್ದರೂ ಕಷ್ಟ ಸಹಿಷ್ಣುತೆ ಬಾಲ್ಯದಿಂದಲೇ ಮೈಗೂಡಿಕೊಂಡು ಬಂದುದರಿಂದ ಒದಗಿದ ತೊಂದರೆಗಳಿಂದ ವಿಚಲಿತರಾಗದೆ ಕರ್ತವ್ಯನಿರತರಾಗಿರುತ್ತಿದ್ದರು.

ಹಿರೇಮಠರು ಧಾರವಾಡಕ್ಕೆ ಬಂದೊಡನೆಯೆ ಅವರಿಗೆ ವಿದ್ವತ್ತಿನ ಆಶ್ರಯ ದೊರೆತದ್ದು ಪ್ರೊ. ಶಿ. ಶಿ. ಬಸವನಾಳರದು. ಈ ಮೊದಲೇ ಬೆಳಗಾವಿ ಲಿಂಗರಾಜ ಕಾಲೇಜ್‌ದಲ್ಲಿದ್ದಾಗ ಅವರ ಶಿಷ್ಯತ್ವ ಪಡೆದಿದ್ದ ಅವರು ಸಂಶೋಧನ, ಸಂಪಾದನ ಕ್ಷೇತ್ರದಲ್ಲಿ ಆಗಬೇಕಾದ ಕಾರ್ಯದ ಯೋಜನೆಗಳ ಬಗ್ಗೆ ಬಸವನಾಳರೊಂದಿಗೆ ಚರ್ಚಿಸುತ್ತಿದ್ದರು. ೧೯೫೧ ಜನವರಿಯಲ್ಲಿ ಬಸವನಾಳರ ಅಕಸ್ಮಿಕ ನಿಧನ ಹಿರೇಮಠರನ್ನು ಕಂಗೆಡಿಸಿದರೂ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಚಟುವಟಿಕೆಗಳಲ್ಲಿ ಪಾಲ್ಗೊಂಡು 'ಬಸವಪುರಾಣ'ದ ಸಂಪಾದನ ಹಾಗೂ ಪ್ರಕಟನ ಕಾರ್ಯವನ್ನು ಪೂರೈಸಿದರು. ಹಿರೇಮಠರ ಮುಂದಿನ ಸಾಹಿತ್ಯಕ ಕಾರ್ಯಗಳ ಶುಭೋಧಯಕ್ಕೆ ಇದು ನಾಂದಿಯಾಯಿತೆನ್ನಬಹುದು.

೧೯೫೧ ಅಗಸ್ಟ ತಿಂಗಳಲ್ಲಿ ವಿಶ್ವವಿದ್ಯಾಲಯ ಹೊಸದಾಗಿ ಪ್ರಾರಂಭಿಸಿದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದ ಕಾರ್ಯದರ್ಶಿಯಾಗಿ ನಾನು ಕೆಲಸಕ್ಕೆ ಸೇರಿದೆ. ಸಹಾಯಕ ಕುಲಸಚಿವರಾಗಿದ್ದ ಎಸ್. ಎಸ್. ಒಡೆಯರ್ ಅವರು ನನ್ನನ್ನು ಸಂತೋಷದಿಂದ ಬರಮಾಡಿಕೊಂಡು ಮಾರ್ಗದರ್ಶನ ಮಾಡಿದರು. ಶ್ರೀ ಸಿ. ಸಿ. ಹುಲಕೋಟಿಯವರು ಚೋಟಾ ಮಹಾಬಳೇಶ್ವರದಲ್ಲಿ (ಈಗಿನ ಕ್ಯಾಂಪಸ್) ವಿಶ್ವವಿದ್ಯಾಲಯ ಕಟ್ಟಡಗಳ ನಿರ್ಮಾಣಕ್ಕೆ ಹೆಚ್ಚು ಗಮನ ಕೊಟ್ಟಿದ್ದರು. ಟ್ರೇನಿಂಗ್ ಕಾಲೇಜ್ ಹಾಸ್ಟೆಲ್ಲಿನಲ್ಲಿ ೩೦ ಕೋಣೆಗಳನ್ನು ವಿಶ್ವವಿದ್ಯಾಲಯದ ವಸತಿ ಗೃಹವಾಗಿ ಏರ್ಪಡಿಸಿದಾಗ ಹಿರೇಮಠರೇ ಅದರ ವಾರ್ಡನ್ ಆಗಿದ್ದರು.

ಈ ಸಂದರ್ಭದಲ್ಲಿ ಡಾ. ಎಸ್. ಸಿ. ನಂದೀಮಠರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿ ಕೆಲಸಕ್ಕೆ ಹಾಜರಾದೊಡನೆ ವಿಶ್ವವಿದ್ಯಾಲಯದ ನಿಧಿ ಸಂಗ್ರಹ ಕಾರ್ಯವನ್ನು ತುರ್ತಾಗಿ ಕೈಗೆತ್ತಿಕೊಂಡರು. ಡಾ. ಹಿರೇಮಠರು ಅವರ ಬಲಗೈಯಾಗಿ ನಿಧಿ ಸಂಗ್ರಹ ಕೆಲಸಕ್ಕೆ ಮುಂದಾಗಿ ಅವರೊಡನೆ ಪ್ರವಾಸ ಮಾಡಿದ್ದನ್ನು ನಾನು ಬಲ್ಲೆ. ವಿಶ್ವವಿದ್ಯಾಲಯ ಹಾಗೂ ಕಾಲೇಜು ಅಧ್ಯಾಪಕರು ಮತ್ತು ಆಫೀಸ್ ಸಿಬ್ಬಂದಿ ಒಂದು ತಿಂಗಳ ಸಂಬಳವನ್ನು ವಿಶ್ವವಿದ್ಯಾಲಯಕ್ಕೆ ದೇಣಿಗೆಯಾಗಿ ಕೊಡುವ ಯೋಜನೆ ಯಶಸ್ವಿಯಾಯಿತು. ಅಂದಿನಿಂದಲೇ ಹಿರೇಮಠರು ವಿಶ್ವವಿದ್ಯಾಲಯದ ಸೇವೆಗೆ ಕಂಕಣಬದ್ಧರಾದರೆನ್ನಬಹುದು. ೧೯೫೮ರ ಡಿಶಂಬರ್‌ದಿಂದ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನ ಮನೆಯಲ್ಲಿರತೊಡಗಿದ ಅವರು ದಿನವೂ ಟ್ರೇನಿಂಗ್ ಕಾಲೇಜಿಗೆ

ನಡೆದುಕೊಂಡೇ ಬಂದು ಹೋಗುತ್ತಿದ್ದರು. ಕನ್ನಡ ವಿಭಾಗದಲ್ಲಿ ಮಾತ್ರ ಪ್ರೊ. ತೀ.ನಂ.ಶ್ರೀ.ಯವರ ಜೊತೆಗೆ ಅವರು ಅಷ್ಟು ಹೊಂದಿಕೊಳ್ಳಲಿಲ್ಲವೆಂದು ತೋರುತ್ತದೆ.

೧೯೫೪ರ ಅಗಸ್ಟ್‌ನಲ್ಲಿ ಡಾ. ಡಿ. ಸಿ. ಪಾವಟೆಯವರು ಕುಲಪತಿಗಳಾಗಿ ಅಧಿಕಾರ ಸ್ವೀಕರಿಸಿದೊಡನೆ ವಿಶ್ವವಿದ್ಯಾಲಯದ ಅಭಿವೃದ್ಧಿಯ ಹೊಸ ಅಧ್ಯಾಯ ಪ್ರಾರಂಭವಾಯಿತೆನ್ನಬಹುದು. ವಿಶ್ವವಿದ್ಯಾಲಯದ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಅವರು ಕೈಕೊಂಡ ಯೋಜನೆಗಳಲ್ಲಿ ಕನ್ನಡ ವಿಭಾಗವನ್ನು ಸಮರ್ಥವಾಗಿ ಬೆಳಸಬೇಕೆಂಬ ವಿಶೇಷ ಒಲವು ಅವರಲ್ಲಿತ್ತು. ಪ್ರೊ. ತೀ.ನಂ.ಶ್ರೀ.ಯವರು ಮರಳಿ ಮೈಸೂರು ವಿಶ್ವವಿದ್ಯಾಲಯಕ್ಕೆ ಹಿಂತಿರುಗಿದೊಡನೆ ಡಾ. ಹಿರೇಮಠರು ೧೯೫೭ರಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡರು. ೧೯೫೭ರಲ್ಲಿ ನಾನು ಪ್ರಸಾರಾಂಗದ ನಿರ್ದೇಶಕನಾಗಿ ಪದೋನ್ನತಿ ಪಡೆದಿದ್ದೆ. ಕನ್ನಡ ವಿಭಾಗದಲ್ಲಿ ಪ್ರಾರಂಭವಾದ ಸಂಶೋಧನೆ, ಗ್ರಂಥ ಸಂಪಾದನೆ, ತ್ರೈಮಾಸಿಕ ಸಂಶೋಧನ ಪತ್ರಿಕೆ ಇತ್ಯಾದಿ ಯೋಜನೆಗಳ ಪ್ರಕಟನೆಗೆ ವಿಶ್ವವಿದ್ಯಾಲಯದ ಪ್ರಸಾರಾಂಗ ಸಂಪೂರ್ಣ ಸಹಕಾರ ನೀಡುತ್ತಾ ಬಂದಿತು. 'ರಾಜಶೇಖರ ವಿಳಾಸ ಸಂಗ್ರಹ'ದಿಂದ ಪ್ರಾರಂಭಗೊಂಡ ಗ್ರಂಥ ಪ್ರಕಟನೆ ಮುಂದೆ ವಿವಿಧ ಮುಖಗಳಲ್ಲಿ ಅವ್ಯಾಹತವಾಗಿ ಮುಂದುವರಿಯಿತು.

ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರ ಹಾಗೂ ವಿಶೇಷೋಪನ್ಯಾಸ ಶಿಬಿರಗಳಲ್ಲಿ ಹಿರೇಮಠರು ಬಿಡುವು ಮಾಡಿಕೊಂಡು ಬಂದು ಭಾಗವಹಿಸುತ್ತಿದ್ದರು. ಬಿಡುವಿನ ಸಮಯದಲ್ಲಿ ಉಳಿದ ಉಪನ್ಯಾಸಕರ ಜೊತೆಗೆ ಒಂದಾಗಿ ಚರ್ಚೆಯಲ್ಲಿ ಭಾಗವಹಿಸುತ್ತ, ತತ್ವಪದಗಳನ್ನು ಹಾಡಿ ತೋರಿಸುತ್ತ ಸಂಗೀತದಲ್ಲಿ ತಮಗಿರುವ ಆಸಕ್ತಿಯನ್ನು ವ್ಯಕ್ತಪಡಿಸಿದ್ದನ್ನು ನಾನು ಮರೆತಿಲ್ಲ.

ಡಾ. ಹಿರೇಮಠರು ತಮ್ಮ ಆಯ್ಕೆಯನ್ನು ಸಮರ್ಥಿಸುವಂತೆ ಕೆಲಸ ಮಾಡಿ ಕನ್ನಡ ವಿಭಾಗವನ್ನು ಹಂತಹಂತವಾಗಿ ಬೆಳೆಸಿ ಬಲಪಡಿಸಿದರು. ಡಾ. ಪಾವಟೆಯವರ ಬೆಂಬಲ ಹಾಗೂ ಪ್ರೋತ್ಸಾಹಕ್ಕೆ ಕೊರತೆಯಿರಲಿಲ್ಲ. ಹೀಗಾಗಿ ಹಿರೇಮಠರು ವಿದೇಶ ಪ್ರವಾಸ ಮಾಡಿ ಭಾಷಾವಿಜ್ಞಾನ ಇತ್ಯಾದಿಗಳಲ್ಲಿ ಹೆಚ್ಚಿನ ಪ್ರಾವೀಣ್ಯತೆಯನ್ನು ಗಳಿಸಿದರು. ಸಮಗ್ರ ವಚನ ವಾಙ್ಮಯ ಸಂಶೋಧನ, ಸಂಸ್ಕರಣ ಹಾಗೂ ಪ್ರಕಟನ ಯೋಜನೆಗೆ ಯು.ಜಿ.ಸಿ.ಯಿಂದ ಸಾಕಷ್ಟು ಧನಸಹಾಯ ಒದಗಿದ್ದರಿಂದ ಅದಕ್ಕಾಗಿ ವಿಶೇಷ ಸಿಬ್ಬಂದಿಯನ್ನು ನೇಮಿಸಲು ಅನುಕೂಲವಾಯಿತು. ಅಕಾಡೆಮಿಕ್ ವಲಯದ ಹೊರಗಿರುವ ವಿದ್ವಾಂಸರನ್ನು, ತಜ್ಞರನ್ನು ಈ ಯೋಜನೆಯಲ್ಲಿ ತೊಡಗಿಸಿಕೊಂಡದ್ದು ಇದರ ವಿಶೇಷ. ನಾಗಭೂಷಣಶಾಸ್ತ್ರಿಗಳು, ಈಶ್ವರ ಸಣಕಲ್, ಮೇವುಂಡಿ ಮಲ್ಲಾರಿ, ಬೆಟಗೇರಿ ಕೃಷ್ಣಶರ್ಮ ಮೊದಲಾದವರನ್ನು ಇಲ್ಲಿ ಹೆಸರಿಸಬಹುದು. ಕ್ಷೇತ್ರಕಾರ್ಯವನ್ನು ಬಿರುಸಾಗಿ ನಡೆಸಿ ವಚನ ಸಾಹಿತ್ಯದ ಹಸ್ತಪ್ರತಿ, ತಾಡವೋಲೆ ಪ್ರತಿಗಳನ್ನು ಆ ಸಂದರ್ಭದಲ್ಲಿ ವಿಪುಲವಾಗಿ ಸಂಗ್ರಹಿಸಿದ್ದರಿಂದ ಒಂದು ಉನ್ನತ ಮಟ್ಟದ ಹಸ್ತಪ್ರತಿ ಭಂಡಾರ ಕನ್ನಡ ವಿಭಾಗದಲ್ಲಿ ರೂಪುಗೊಳ್ಳಲು ಸಾಧ್ಯವಾಯಿತು. ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿ,

ಭಾಷಾಶಾಸ್ತ್ರ, ಜಾನಪದ ಇತ್ಯಾದಿ ಶಾಖೋಪಶಾಖೆಗಳಲ್ಲಿ ನಡೆಯುತ್ತಿದ್ದ ಅಧ್ಯಯನ ಅಧ್ಯಾಪನದ ಕಾರ್ಯ ವೈವಿಧ್ಯ ಹಾಗೂ ವಿದ್ಯಾರ್ಥಿ ಚಟುವಟಿಕೆಗಳಿಂದ ಕನ್ನಡ ವಿಭಾಗ ಒಂದು ಹಂತದಲ್ಲಿ, ಜೇನುಗೂಡನ್ನು ನೆನಪಿಗೆ ತರುವಂತಿತ್ತು.

ಹಲವಾರು ವಿಶ್ವವಿದ್ಯಾಲಯಗಳ ಅಭ್ಯಾಸ ಮಂಡಳಿಗಳ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಲೇ ಹಿರೇಮಠರು ವಿಭಾಗದ ಬಿಡುವಿಲ್ಲದ ಕೆಲಸಗಳಲ್ಲಿಯೂ ಸು. ೪೦ ರಷ್ಟು ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಪಿ.ಎಚ್.ಡಿ.ಗಾಗಿ ಮಾರ್ಗದರ್ಶನ ಮಾಡುತ್ತ ಬಂದದ್ದು ಯಾರಿಗಾದರೂ ಆಶ್ಚರ್ಯವನ್ನುಂಟು ಮಾಡುವಂತಿದೆ.

ಶೂನ್ಯ ಸಂಪಾದನೆಯ ಇಂಗ್ಲಿಷ್ ಅನುವಾದ ಮತ್ತು ಕೆಲವು ವಚನ ಸಂಗ್ರಹಗಳ ಬಗ್ಗೆ ('ಮುಕ್ತಿಕಂಠಾಭರಣ') ಎದ್ದ ವಾದವಿವಾದ ಕೆಲಕಾಲ ವಿಶ್ವವಿದ್ಯಾಲಯದ ವಾತಾವರಣವನ್ನು ತಪ್ತಗೊಳಿಸಿದ್ದುಂಟು. ಪ್ರಸಾರಾಂಗದಲ್ಲಿ ಈ ಗ್ರಂಥಗಳ ಪ್ರಕಾಶಕನಾಗಿ ನನಗೂ ಅದರ ಬಿಸಿ ತಾಗದೆ ಹೋಗಲಿಲ್ಲ. ಇದರಿಂದ ಹಿರೇಮಠರಿಗೆ ಈ ಕಾರ್ಯದಲ್ಲಿ ಮೊದಲಿಗಿದ್ದ ಉತ್ಸಾಹ ಮುಂದೆ ಕಂಡು ಬರಲಿಲ್ಲ. ಈ ದಿಸೆಯಲ್ಲಿ ಮುಂದೆ ಮಾಡಬೇಕೆಂದಿದ್ದ ಕೆಲಸಗಳೆಲ್ಲ ಅಲ್ಲಿಗೇ ನಿಲ್ಲುವಂತಾದುದು ಒಂದು ದುರ್ದೈವದ ಸಂಗತಿಯನ್ನದೆ ವಿಧಿಯಿಲ್ಲ.

ಡಾ. ಎ. ಎಸ್. ಅಡಕೆಯವರು ಕುಲಪತಿಗಳಾಗಿ ಆಯ್ಕೆಗೊಂಡು ಅಧಿಕಾರ ವಹಿಸಿಕೊಂಡ ಮೇಲೆ ಕನ್ನಡ ವಿಭಾಗದ ಇತರ ಚಟುವಟಿಕೆಗಳು ಎಂದಿನಂತೆ ಮುಂದುವರಿದವು. ಕನ್ನಡ ವಿಭಾಗ ೧೯೬೯ರಲ್ಲಿ ಅಧ್ಯಯನ ಪೀಠವಾಗಿ ಮಾರ್ಪಾಡುಹೊಂದಿತು. ಅದಕ್ಕಾಗಿ ಯೋಜಿಸಿದ ಸ್ವತಂತ್ರ ಕಟ್ಟಡದ ಕಾರ್ಯ ಆಗಲೇ ಪ್ರಾರಂಭಗೊಂಡರೂ ಮುಂದೆ ಹಿರೇಮಠರು ಕುಲಪತಿಗಳಾದಾಗಲೇ ಅದು ಪೂರ್ತಿಗೊಂಡದ್ದು ಒಂದು ಯೋಗಾಯೋಗವೆಂದೇ ಹೇಳಬೇಕು.

೧೯೭೪ರಲ್ಲಿ ಹಂಗಾಮಿ ಕುಲಪತಿಯೆಂದು ಅಧಿಕಾರವಹಿಸಿಕೊಳ್ಳುವಾಗ ಹಿರೇಮಠರು ಪಾವಟೆ ಸಾಹೇಬರನ್ನು ನೆನಸಿಕೊಂಡದ್ದು ಸಹಜವೇ ಆಗಿದೆ. ಈ ನಡುವೆ ಆಡಳಿತದಲ್ಲಿ ಉಂಟಾಗಿದ್ದ ಕೆಲಮಟ್ಟಿನ ಅಶಿಸ್ತು ಹಾಗೂ ಅವ್ಯವಸ್ಥೆಯನ್ನು ಹಿರೇಮಠರು ಸಾಧ್ಯವಿದ್ದಷ್ಟು ಸರಿಪಡಿಸಿದರು. ಅಪೂರ್ಣವಾಗಿದ್ದ ಕಟ್ಟಡಗಳು ಮೇಲೆದ್ದು ಪೂರ್ತಿಗೊಂಡವು. ಕ್ಯಾಂಪಸ್ಸಿನಲ್ಲಿ ಸ್ವಚ್ಛತೆ ಕಾಣಿಸಿಕೊಂಡಿತು. ಸಿಂಡಿಕೇಟಿನ ಕೆಲವು ಸದಸ್ಯರ ಸಹಯೋಗ ಹಾಗೂ ಹಿತೈಷಿಗಳ ನೆರವಿನಿಂದ ಅವರಿಗೆ ಇದು ಸಾಧ್ಯವಾಯಿತು. ಮತ್ತೊಂದು ಅವಧಿಗೆ ಹಿರೇಮಠರು ಕುಲಪತಿಯೆಂದು ನೇಮಕಗೊಂಡಾಗಲೇ ಅವರು ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲಿದ್ದ ಕುಲಪತಿನಿವಾಸಕ್ಕೆ ಬಂದದ್ದು. ಈ ಅವಧಿಯಲ್ಲಿಯೇ ವಿಶ್ವವಿದ್ಯಾಲಯದ ರಜತೋತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಆ ಒಂದೆರಡು ವರ್ಷದಲ್ಲಿ ಮತ್ತೆ ಅನೇಕ ಮಹತ್ವದ ಗ್ರಂಥಗಳು ಪ್ರಸಾರಾಂಗದಿಂದ ಪ್ರಕಟಗೊಂಡವು.

ಡಾ. ಹಿರೇಮಠರ ಸಾಹಿತ್ಯಿಕ ಜೀವನ 'ಸುಮಾಂಜಲಿ' (೧೯೪೮) ಕವನ ಸಂಗ್ರಹದಿಂದ ಪ್ರಾರಂಭವಾಗಿತ್ತು. ೧೯೫೮ರಲ್ಲಿ ಅವರು ಅಮೇರಿಕೆಯ ಬರ್ಕ್ಲಿಯಲ್ಲಿದ್ದಾಗ ಅಲ್ಲಿಯ ನಿಸರ್ಗ ಸೌಂದರ್ಯ ಅವರನ್ನು ಮತ್ತೆ ಕಾವ್ಯರಚನೆಗೆ ಪ್ರೇರೇಪಿಸಿತು.

ಹತ್ತು ವರ್ಷಗಳಾಯ್ತು
ಎತ್ತಿ ಮೈದಡವಿಲ್ಲ
ಮುತ್ತನಿಡು ತಾಯೆ ನಾ ಪರದೇಶಿಯೆ?
ಎತ್ತ ಹೋದರೂ ನಿನ್ನ
ಹತ್ತಿರವೆ ನಾನಿದ್ದೆ
ಸುತ್ತಿ ಶಾಸ್ತ್ರದ ಗಿರಿಯನೇರುತಿರಲು

ಎಂದು ತಮ್ಮ ಕಾವ್ಯದ ಒಲವನ್ನು ಮತ್ತೆ ನೆನಪಿಸಿಕೊಂಡು 'ಮನಸ್ಪಂದನ' ಸಂಗ್ರಹವನ್ನು ಪ್ರಕಟಿಸಿದರು. ಇತ್ತೀಚೆಗೆ ಮಹಾಕಾವ್ಯವೊಂದರ ರಚನೆಯ ಬಗ್ಗೆ (ತಥಾಗತ ಚಾರಿತ್ರ್ಯ) ಅವರು ಯೋಚಿಸುತ್ತಿದ್ದರೆಂದು ಕೇಳಿದ್ದೇನೆ. 'ದೂರದ ಅಮೇರಿಕೆಯಲ್ಲಿ ಕುಳಿತು ಬರಿಗೈಯಿಂದ ಬರವಣಿಗೆ ಪ್ರಾರಂಭಿಸಿದೆ' ಎಂದು ತಮ್ಮ ಆತ್ಮಕಥೆ 'ಉರಿಬರಲಿ, ಸಿರಿಬರಲಿ'ಯ ಅರಿಕೆಯಲ್ಲಿ ನುಡಿದಿರುವುದು ಅವರ ಅಗಾಧವಾದ ಜ್ಞಾಪಕಶಕ್ತಿಗೆ ಸಾಕ್ಷಿಯಾಗಿದೆ.

ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ, ಕನ್ನಡ ಅಧ್ಯಯನಪೀಠದ ಶಿಲ್ಪಿಗಳಾಗಿ, ಕುಲಪತಿಗಳಾಗಿ ಪ್ರಾರಂಭದಿಂದ ಕೊನೆಯವರೆಗೂ ವಿಶ್ವವಿದ್ಯಾಲಯದ ಅಭ್ಯುದಯಕ್ಕಾಗಿ ದುಡಿದ ಡಾ. ಆರ್. ಸಿ. ಹಿರೇಮಠರ ಹೆಸರನ್ನು ಕನ್ನಡ ಅಧ್ಯಯನ ಪೀಠಕ್ಕಿಡುವುದಾದರೆ ಅದೊಂದು ಯೋಗ್ಯ ಸ್ಮಾರಕವಾಗಬಲ್ಲದೆಂದು ನನ್ನ ಭಾವನೆ.

'ಡಾ. ಆರ್.ಸಿ. ಹಿರೇಮಠ : ನಾವು ಕಂಡಂತೆ'
೧೯೯೯

■■

ಪ್ರೊ. ಸ. ಸ. ಮಾಳವಾಡ : ಜನ್ಮಶತಾಬ್ದಿ ಸ್ಮರಣೆ

“ಪ್ರೊ. ಮಾಳವಾಡರ ಹೆಸರಿನಲ್ಲಿ ಎಸ್. ಎಸ್. ಇದೆ. ಆದರೆ ಅವರು ನೀವು ಹೇಳಿದ್ದಕ್ಕೆಲ್ಲ ‘ಯಸ್, ಯಸ್’ ಎಂದು ಗೋಣು ಹಾಕುವವರಲ್ಲ” ಪ್ರೊ. ಮಾಳಡವಾಡರ ಷಷ್ಟಿ ಪೂರ್ತಿ ಸಮಾರಂಭದ ಸಂದರ್ಭದಲ್ಲಿ(೧೩-೧೨-೧೯೭೦) ವರಕವಿ ಡಾ. ದ. ರಾ. ಬೇಂದ್ರೆಯವರು ಈ ಮಾತನ್ನು ಎತ್ತಿ ಹೇಳಿದ್ದರು. ಮಾಳವಾಡರನ್ನು ಚೆನ್ನಾಗಿ ಬಲ್ಲ ಯಾರಿಗೂ ಈ ಮಾತಿನ ಸತ್ಯ ಗೋಚರಿಸದೆ ಇರದು. ಯಾವುದೇ ವಿಷಯದ ಬಗ್ಗೆ ಭಾವೋದ್ರೇಕಕ್ಕೆ ಒಳಗಾಗದೆ, ಅದನ್ನು ವೈಚಾರಿಕ ಒರೆಗಲ್ಲಿಗೆ ಹಚ್ಚಿನೋಡುವ ಚಿಕಿತ್ಸಕ ದೃಷ್ಟಿ ಅವರ ವ್ಯಕ್ತಿ ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತಿತ್ತು. ಅವರ ಈ ನಿಲುವು ಸ್ವಪ್ರತಿಷ್ಠೆಯಿಂದ ಕೂಡಿರದೆ ಸತ್ಯ ಶೋಧನೆಯ ದೃಷ್ಟಿಯಿಂದ ಪ್ರೇರಿತವಾಗಿರುತ್ತಿತ್ತು ಎಂಬುದನ್ನು ಮರೆಯುವಂತಿಲ್ಲ.

ಕರ್ನಾಟಕ ಕಾಲೇಜಿನಲ್ಲಿ ನಾನು ನೇರವಾಗಿ ಪ್ರೊ. ಮಾಳವಾಡರ ವಿದ್ಯಾರ್ಥಿಯಾಗುವ ಪೂರ್ವದಲ್ಲಿಯೇ ಅಂದರೆ, ಹಾಯ್‌ಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ಅವರ ಪ್ರಭಾವಕ್ಕೆ ಒಳಗಾಗಿದ್ದೆ. ನಾನು ಮುರುಘಾಮಠದ ಪ್ರಸಾದ ನಿಯಲಯದಲ್ಲಿದ್ದಾಗ ಪ್ರೊ. ಶಿ. ಶಿ. ಬಸವನಾಳ ಹಾಗೂ ರೆವರೆಂಡ್ ಚನ್ನಪ್ಪ ಉತ್ತಂಗಿಯವರ ಜೊತೆಗೆ ಪ್ರೊ. ಮಾಳವಾಡರೂ ಆಗಾಗ ಬಂದು ಉಪನ್ಯಾಸವೀಯುತ್ತಿದ್ದರು. ಹಾಗೆಯೇ ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಇನ್ನಿತರ ನಾಡಹಬ್ಬದಂತಹ ಸಾರ್ವಜನಿಕ ವೇದಿಕೆಗಳಲ್ಲಿ ಅವರ ಭಾಷಣಗಳನ್ನು ಕೇಳಿ ಕನ್ನಡ ನಾಡು-ನುಡಿಯ ಬಗ್ಗೆ ಆಸ್ಥೆಯನ್ನೂ ಅಭಿಮಾನವನ್ನೂ ತಾಳಿದವರಲ್ಲಿ ನಾನೂ ಒಬ್ಬ. ಕರ್ನಾಟಕ ಕಾಲೇಜಿನ ಐದಾರು ವರ್ಷಗಳ (೧೯೪೬-೧೯೫೨) ವಿದ್ಯಾರ್ಥಿ ಜೀವನದ ಅವಧಿಯಂತೂ ನಮ್ಮ ಓದು, ಬರವಣಿಗೆ, ಕರ್ನಾಟಕ ಸಂಘದ ಚಟುವಟಿಕೆಗಳು-ಎಲ್ಲದಕ್ಕೂ ಒಂದು ಉತ್ಕರ್ಷದ ಕಾಲವಾಗಿತ್ತು. ಇದಕ್ಕೆಲ್ಲ ಪ್ರೊ. ಮಾಳವಾಡರು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕಾರಣರಾಗಿದ್ದರೆಂದು ಬೇರೆ ಹೇಳಬೇಕಿಲ್ಲ. ಪರೋಕ್ಷವಾಗಿ ಎಂದು ಯಾಕೆ ಹೇಳಿದೆನೆಂದರೆ, ನಮಗೆ ಗೊತ್ತಾಗದ ಹಾಗೆಯೇ ಎಷ್ಟೋ ಬಗೆಯಲ್ಲಿ ಅವರು ನಮ್ಮ ಬೆಳವಣಿಗೆಗೆ ಕಾರಣರಾಗಿದ್ದರು. ಆಡದೆ ಮಾಡುವದು ಅವರ ಸ್ವಭಾವವೇ ಆಗಿತ್ತು. ಇನ್ನೊಬ್ಬ ಕನ್ನಡ ಅಧ್ಯಾಪಕರಾಗಿದ್ದ ಪ್ರೊ. ಎಸ್. ಆರ್.

ಮಳಗಿಯವರು ಅನೇಕ ವಿಷಯಗಳಲ್ಲಿ ಅವರಿಗೆ ಸಹಾಯಕರಾಗಿರುತ್ತಿದ್ದರು. ವೈಯಕ್ತಿಕವಾಗಿ 'ಭಾವಜೀವಿ' ಎನಿಸಿಕೊಂಡ ನನ್ನಲ್ಲಿ ಪ್ರೊ. ಮಾಳವಾಡರು ತಮ್ಮ ನಡೆ–ನುಡಿಗಳಿಂದ ವೈಚಾರಿಕತೆಯನ್ನೂ ವಿಮರ್ಶಾಪ್ರಜ್ಞೆಯನ್ನೂ ಹುಟ್ಟು ಹಾಕಿದರು. ನನ್ನ ಪ್ರಥಮ ಗದ್ಯಕೃತಿ 'ಸಾಹಿತ್ಯ ಚಿಂತನ'ಕ್ಕೆ (೧೯೬೬) ವಿಮರ್ಶಾತ್ಮಕ ಮುನ್ನುಡಿ ಬರೆದು ಪ್ರೋತ್ಸಾಹಿಸಿದರು.

ಕಾಲೇಜಿನ ಕನ್ನಡ ವಿಭಾಗವನ್ನು ಹೊರತು ಪಡಿಸಿಯೂ ಪ್ರೊ. ಮಾಳವಾಡರಿಂದ ಆಕರ್ಷಿತರಾದ ವಿದ್ಯಾರ್ಥಿಗಳು ಹಾಗೂ ಲೇಖಕರು ಕಾಲೇಜಿನ ಒಳಗೂ ಹೊರಗೂ ಅನೇಕರಿದ್ದರು. ಇಂಗ್ಲೀಷ್ ವಿಭಾಗದ ವಿದ್ಯಾರ್ಥಿಯಾಗಿದ್ದ ಡಾ. ಜಿ. ಎಸ್. ಅಮೂರ ಅವರು ಅಂದಿನ ಸಂದರ್ಭವನ್ನು ಹೀಗೆ ನೆನೆದುಕೊಳ್ಳುತ್ತಾರೆ. ''ಕಾಲೇಜಿನ ಕನ್ನಡ ಚಟುವಟಿಕೆಗಳಲ್ಲಿ ನಾನು ಭಾಗವಹಿಸುತ್ತಿದ್ದೆ. ನನಗೆ ಆ ವರ್ಷದ ಕರ್ನಾಟಕ ನಿಬಂಧ ಬಹುಮಾನ ಶಿವರಾಮ ಕಾರಂತರ ಕೃತಿಗಳ ಅಧ್ಯಯನಕ್ಕಾಗಿ ದೊರೆಯಿತು. ನನಗಾಗಿ ಪ್ರಬಂಧ ಸ್ಪರ್ಧೆಯ ಕೊನೆಯ ದಿನಾಂಕವನ್ನು ಪ್ರೊ. ಮಾಳವಾಡರು ವಿಸ್ತರಿಸಿದ್ದಕ್ಕಾಗಿ ಇದು ಸಾಧ್ಯವಾಯಿತು... ೧೯೮೫ರಲ್ಲಿ ನಾನು ಧಾರವಾಡಕ್ಕೆ ಮರಳಿ ಬಂದಾಗ ಪ್ರೊ. ಮಾಳವಾಡರು ಸಾರ್ವಜನಿಕ ಜೀವನದಿಂದ ಹಿಂದೆ ಸರಿದು ಆಧ್ಯಾತ್ಮ ಚಿಂತನೆಯಲ್ಲಿ ತೊಡಗಿದ್ದರು.... ಯಾವುದೋ ಕಾರಣಕ್ಕಾಗಿ ಅವರನ್ನು ಕಂಡಾಗ ತಮ್ಮ ಪುಸ್ತಕಗಳ ಪ್ರತಿಗಳನ್ನು ನನ್ನೆದುರಿಗಿಟ್ಟು ಆಯ್ಕೆಯ ಸ್ವಾತಂತ್ರ್ಯವನ್ನು ನನಗೆಯೇ ನೀಡಿದರು. ಅವರ ಪ್ರವಾಸ ಗ್ರಂಥಗಳನ್ನು ಹಾಗೂ ಆತ್ಮಚರಿತ್ರೆಗಳನ್ನು ನಾನು ಮೆಚ್ಚಿಕೊಂಡಿದ್ದೇನೆ. ಬರಹದಲ್ಲಿಯ ಸಂಯಮ ಹಾಗೂ ವಿವೇಕವಾದ ಸರಳ ಸಂವಹನಶೈಲಿ–ಇವು ಅವರ ಬರಹಗಳಲ್ಲಿ ಅನುಕರಣೀಯ ಗುಣಗಳು.''

೧೯೩೬ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಆಧ್ಯಾಪಕ ವೃತ್ತಿ ಕೈಗೊಂಡಂದಿನಿಂದ ಮುಂದಿನ ಅರ್ಧಶತಮಾನಕ್ಕೂ ಮಿಕ್ಕ ಅವಧಿಯಲ್ಲಿ ಧಾರವಾಡದ ಸಾಹಿತ್ಯಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದಲ್ಲಿ ಹಾಗೆಯೇ ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಿ ಈ ಬಗೆಯ ಆತ್ಮಗೌರವ ಹಾಗೂ ತತ್ವನಿಷ್ಠೆಗೆ ಪ್ರಥಮ ಪ್ರಾಶಸ್ತ್ಯವಿತ್ತು ಪ್ರೊ. ಮಾಳವಾಡರಂತೆ ಬಾಳಿದವರು ವಿರಳವೆಂದೇ ಹೇಳಬೇಕು. ಅಚ್ಚುಕಟ್ಟಾದ ಜೀವನಕ್ರಮ, ಪ್ರತಿಯೊಂದು ಕೆಲಸದಲ್ಲಿ ಶಿಸ್ತು, ಓರಣ, ಗಾಂಭೀರ್ಯವನ್ನು ಬಿಟ್ಟುಕೊಡದ ಸ್ನೇಹ ಸೌಹಾರ್ದತೆ, ಕಾರ್ಯದಕ್ಷತೆ, ನ್ಯಾಯ ನಿಷ್ಠುರ ನಡವಳಿಕೆ, ಮೌನದ ಅಂತರ್ಮುಖತೆ, ನಿರ್ದಿಷ್ಟವಾದ ಚೊಕ್ಕ ಬರವಣಿಗೆ ಇವು ಅವರ ವ್ಯಕ್ತಿತ್ವದ ಅಷ್ಟ ಪೈಲುಗಳೆನ್ನಬಹುದು.

ವಿದ್ಯಾರ್ಥಿ ದೆಸೆಯಲ್ಲಿಯೇ ಇವರ ಕನ್ನಡ ಪ್ರೇಮ ಹಾಗೂ ಉತ್ಸಾಹವನ್ನು ಗಮನಿಸಿದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರು ಇವರನ್ನು ಮೆಚ್ಚಿಕೊಂಡು ಕರ್ನಾಟಕ ಇತಿಹಾಸ ಮಂಡಳದ ಸದಸ್ಯನಾಗಿ ಮಾಡಿಕೊಂಡದ್ದಲ್ಲದೆ ತಮ್ಮ ರಾಯಭಾರಿಯಾಗಿ ಇವರನ್ನು ಆರಿಸಿಕೊಂಡರು. ಅವರು ಆಗ ನವಜೀವನ ಗ್ರಂಥಮಾಲೆಯ ಪರವಾಗಿ ವಿಚಾರ ಸಾಹಿತ್ಯವನ್ನು ಪ್ರಕಟಿಸುತ್ತಿದ್ದರು. ಆ ಪುಸ್ತಕಗಳ

ಪ್ರಚಾರಕ್ಕೆಂದು ಮಾಳವಾಡರು ಅವರ ಅಪೇಕ್ಷೆಯಂತೆ ಕೊಲ್ಹಾಪುರ, ಸಾಂಗಲಿ, ಪುಣೆ, ಮುಂಬಯಿಗಳ ಪ್ರವಾಸ ಕೈಗೊಂಡು ಸಾಧ್ಯವಿದ್ದಷ್ಟು ನೆರವಾದರು.

ಈಗಿನ ಗದಗ ಜಿಲ್ಲೆಯ ಮೆಣಸಿಗಿಯಲ್ಲಿ ೧೯೧೦, ನವೆಂಬರ್ ೧೪ ರಂದು ಜನಿಸಿದ ಸಂಗಪ್ಪ–ಸಂಗನಬಸಪ್ಪ–ಮಾಳವಾಡ ಗೋವನಕೊಪ್ಪದಲ್ಲಿ ಪ್ರಾಥಮಿಕ ಶಿಕ್ಷಣವನ್ನೂ, ಗುಳೇದಗುಡ್ಡ, ಬಾಗಲಕೋಟೆ, ವಿಜಾಪುರಗಳಲ್ಲಿ ಮಾಧ್ಯಮಿಕ ಶಿಕ್ಷಣವನ್ನೂ ಪೂರೈಸಿ, ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಉಚ್ಚ ಶಿಕ್ಷಣ ಪಡೆದು, ಮುಂಬಯಿ ವಿಶ್ವವಿದ್ಯಾಲಯದ ಎಂ.ಎ. ಪದವಿಯೊಡನೆ ಕನ್ನಡ ಐಚ್ಛಿಕದಲ್ಲಿ ಪ್ರಥಮ ಸ್ಥಾನ ಪಡೆದು ೧೯೩೭ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕಗೊಂಡರು. ಮರುವರ್ಷವೇ ಶಾಂತಾದೇವಿಯವರೊಡನೆ ಮದುವೆಯೂ ಆಯಿತು. ಮುಂದೆ ಮೂರುವರೆ ದಶಕಗಳ ಕಾಲ ಪ್ರಾಧ್ಯಾಪಕರಾಗಿ, ಕಾಲೇಜಿನ ಪ್ರಾಚಾರ್ಯರಾಗಿ ಸೇವೆಸಲ್ಲಿಸಿ ೧೯೭೦ರಲ್ಲಿ ನಿವೃತ್ತರಾದರು.

ಬಿ.ಎ. ಪರೀಕ್ಷೆಗೆ ಅವರು ಓದಿದ್ದು ಚರಿತ್ರೆ ಮತ್ತು ಅರ್ಥಶಾಸ್ತ್ರ, ಎಂ.ಎ. ಪರೀಕ್ಷೆಗೆ ಕನ್ನಡವನ್ನು ಪ್ರಮುಖ ಐಚ್ಛಿಕವಾಗಿ ಆರಿಸಿಕೊಳ್ಳುವ ಅವಕಾಶ ಆಗ ಕರ್ನಾಟಕ ಕಾಲೇಜಿನಲ್ಲಿರಲಿಲ್ಲ. ಆದ್ದರಿಂದ ಅನಿವಾರ್ಯವಾಗಿ ಕೊಲ್ಹಾಪುರ ರಾಜಾರಾಮ ಕಾಲೇಜಿನಲ್ಲಿ ಹೆಸರು ಹಚ್ಚಿಸಿ ಪ್ರೊ. ಕೆ. ಜಿ. ಕುಂದಣಗಾರ ಅವರ ಶಿಷ್ಯರಾಗುವ ಭಾಗ್ಯ ಪಡೆದುಕೊಂಡರು. ಅಲ್ಲಿಯ ಚಿತ್ರದುರ್ಗ ಮಠದ ವಸತಿ ಸೌಕರ್ಯ ಲಭ್ಯವಾಯಿತು. ಚಿತ್ರದುರ್ಗ ಮಠದ ವಿದ್ಯಾರ್ಥಿನಿಲಯ ರೂಪುಗೊಳ್ಳುವುದಕ್ಕೆ ಆಗಿನ ಸಂಸ್ಥಾನಿಕರಾದ ಛತ್ರಪತಿ ಶಾಹು ಮಹಾರಾಜರ ಪ್ರೋತ್ಸಾಹವೂ ಕಾರಣವಾಗಿತ್ತು. ಬ್ರಾಹ್ಮಣೇತರ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ, ನೆರವು ಒದಗಿಸುವ ಧೋರಣೆಯೂ ಅವರದಾಗಿತ್ತು. ಕೊಲ್ಹಾಪುರದ ಜನ ಪ್ರೊ. ಕುಂದಣಗಾರರನ್ನು 'ಅಣ್ಣಾ' ಎಂದು ಗೌರವಪೂರ್ವಕ ಸಂಬೋಧಿಸುತ್ತಿದ್ದುದನ್ನೂ ಪ್ರಸಿದ್ಧ ಮರಾಠಿ ಲೇಖಕರಾದ ವಿ.ಸ. ಖಾಂಡೇಕರ ಕುಂದಣಗಾರರ ಮನೆಗೆ ಆಗಾಗ ಬರುತ್ತಿದ್ದುದನ್ನೂ ಪ್ರೊ. ಮಾಳವಾಡರು ತಮ್ಮ ಆತ್ಮಕಥೆಯಲ್ಲಿ ನೆನೆಸಿಕೊಂಡಿದ್ದಾರೆ. ಕನ್ನಡದ ಸ್ಥಾನಮಾನದ ವಿಷಯದಲ್ಲಿ ಮಾಳವಾಡರಿಗಿದ್ದ ಕಳಕಳಿಗೆ ಇಲ್ಲೊಂದು ನಿದರ್ಶನವಿದೆ; ಕನ್ನಡದಲ್ಲಿ ಬರೆದ ವಿಳಾಸಗಳ ಪತ್ರಗಳನ್ನು ಹಂಚುವದು ಸಾಧ್ಯವಿಲ್ಲವೆಂದೂ, ಮರಾಠಿಯಲ್ಲಿ ಅಥವಾ ಇಂಗ್ಲಿಷಿನಲ್ಲಿದ್ದರೆ ಸಾಧ್ಯವೆಂದು ಅಲ್ಲಿಯ ಪೋಸ್ಟ್ ಮಾಸ್ತರ ಪರಿಪತ್ರ ಹೊರಡಿಸಿದಾಗ, ಮಾಳವಾಡರು ಕೊಲ್ಹಾಪುರದ ಕನ್ನಡಿಗರನ್ನು ಸಂಘಟಿಸಿ, ಈ ಅನ್ಯಾಯವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿ, ಪರಿಪತ್ರವನ್ನು ಹಿಂತೆಗೆದುಕೊಳ್ಳುವಂತೆ ಮಾಡುವುದರಲ್ಲಿ ಯಶಸ್ವಿಯಾದರು.

ಅವರು ಕರ್ನಾಟಕ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೇ ಕರ್ನಾಟಕ ಸಂಘಕ್ಕೆ ಮತ್ತು ನಾಡಹಬ್ಬಕ್ಕೆ ಬರುತ್ತಿದ್ದ ನಾಡಿನ ವಿವಿಧ ಪ್ರದೇಶಗಳ ಸಾಹಿತಿಗಳ ಸಂಪರ್ಕ ಅವರಿಗೆ ಒದಗಿತು. ಅಂದಿನ ದಿನಗಳನ್ನು ನೆನೆಪಿಸಿಕೊಳ್ಳುತ್ತ ಅವರು ಬರೆದಿದ್ದಾರೆ. ''ಅಸಾಧಾರಣ ಮೇಧಾವಿ ಪಂಡಿತ ತಾರಾನಾಥರು ತಮ್ಮ ಅಸಾಮಾನ್ಯ ವ್ಯಕ್ತಿತ್ವದಿಂದ, ಉಜ್ವಲ

ಭಾಷಣದಿಂದ ನಮ್ಮ ಮೇಲೆ ಪ್ರಭಾವ ಬೀರಿದರು. ಅತ್ಯಂತ ಸ್ವಾರಸ್ಯಕರವಾದ ಪ್ರವಚನದ ಮೂಲಕ ಕನ್ನಡದ ಬಗೆಗೆ ಅಭಿಮಾನ ಪ್ರಚೋದಿಸುತ್ತಿದ್ದ ಕೀರ್ತನ ಕೇಸರಿ ಶಿವಮೂರ್ತಿ ಶಾಸ್ತ್ರಿಗಳು ನಮ್ಮನ್ನು ಆಕರ್ಷಿಸಿದರು. ೧೯೩೦ರಲ್ಲಿ ಆರ್. ವ್ಹಿ. ಜಹಗೀರದಾರರು ಪ್ರಾಧ್ಯಾಪಕರಾಗಿ ನೇಮಕಗೊಂಡರು. ಅವರ ಬಳಿ ಬರುತ್ತಿದ್ದ ಹಿರಿಯ ಸಾಹಿತಿಗಳ ಪರಿಚಯ ನನಗೆ ಸಾಧ್ಯವಾಯಿತು. ಅಂತಹವರಲ್ಲಿ ಶಿವರಾಮ ಕಾರಂತ, ವಿ.ಸೀ. ಅ.ನ.ಕೃ. ಮೊದಲಾದವರಿದ್ದರು. ನಾನು ಸೀನಿಯರ್ ಬಿ.ಎ. ವರ್ಗಕ್ಕೆ ಬರುವ ಹೊತ್ತಿಗೆ ಗೆಳೆಯರ ಗುಂಪಿನ ಕೆಲವರೊಂದಿಗೆ ಸಲಿಗೆಯುಂಟಾಗಿತ್ತು''. ೧೯೩೩ರಲ್ಲಿ ಬಿ.ಎ. ಪರೀಕ್ಷೆಗೆ ಕುಳಿತ ಮೇಲೆ ಧಾರವಾಡದ ಕರ್ನಾಟಕ ಸಾಹಿತ್ಯ ಮಂದಿರದ ಟಿ. ಡಿ. ಶಿವಲಿಂಗಯ್ಯನವರ ಅಪೇಕ್ಷೆಯ ಮೇರೆಗೆ ಮಾಳವಾಡರು ಬೆಂಗಳೂರಿಗೆ ಹೋಗಿ ಮಧುರಚೆನ್ನರ 'ನನ್ನ ನಲ್ಲ' ಕವನ ಸಂಗ್ರಹವನ್ನು ಮುದ್ರಿಸಿಕೊಂಡು ಬಂದ ಸಂಗತಿ ಇಲ್ಲಿ ಗಮನಾರ್ಹವಾಗಿದೆ. ಅದೇ ವರುಷ ಹುಬ್ಬಳ್ಳಿಯಲ್ಲಿ ನೆರವೇರಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೆ. ವಿ. ಪುಟ್ಟಪ್ಪನವರು ಕವಿಗೋಷ್ಠಿಯ ಅಧ್ಯಕ್ಷರಾಗಿ ಮಾಡಿದ ಭಾಷಣ ಮಾಳವಾಡರಿಗೆ ಸ್ಫೂರ್ತಿದಾಯಕವಾಗಿತ್ತು. ಅವರನ್ನು ಪರಿಚಯಿಸಿಕೊಳ್ಳಬೇಕೆನ್ನುವ ಉತ್ಸಾಹ ಮಾತ್ರ ಫಲಕಾರಿಯಾಗಲಿಲ್ಲ. ಆ ದಿಸೆಯಲ್ಲಿ ಅವರು ಮುಂದಿನ ಮೂರುನಾಲ್ಕು ವರ್ಷ ಕಾಯಬೇಕಾಯಿತು. ಆಮೇಲೆ ಕೊನೆಯವರೆಗೂ ಕುವೆಂಪು ಅವರ ಆತ್ಮೀಯ ಸ್ನೇಹಿತರಲ್ಲಿ ಒಬ್ಬರಾದರು. ಹಳೆಯ ಮೈಸೂರು ಮತ್ತು ಉತ್ತರ ಕರ್ನಾಟಕಕ್ಕೆ ಮೊದಲಿನಿಂದಲೂ ಅವರು ಸ್ನೇಹ ಸೇತುವೆಯಾಗಿದ್ದರು.

ಒಂದು ಕಾಲಕ್ಕೆ ಕನ್ನಡದ ಗಾಳಿ ಕೂಡ ಆಡದ. ಅನ್ಯಭಾಷೆಗಳ ಅಧ್ಯಾಪಕರ ಅಟ್ಟಹಾಸಕ್ಕೊಳಗಾದ ಧಾರವಾಡದ ಈ ಸರಕಾರಿ ಬೃಹತ್ ಕಾಲೇಜು ಬರಬರುತ್ತ ಕನ್ನಡ ಸಾಹಿತ್ಯ–ಸಂಸ್ಕೃತಿಯ ಭದ್ರಕೋಟೆಯಾಗುವಂತೆ ಶ್ರಮಿಸಿದವರಲ್ಲಿ ಆರ್. ವ್ಹಿ. ಜಹಗೀರದಾರ (ಶ್ರೀರಂಗ) ಹಾಗೂ ಮಾಳವಾಡರು ಅಗ್ರಗಣ್ಯರೆನ್ನಬಹುದು. ಡಾ. ಡಿ. ಸಿ. ಪಾವಟೆಯವರು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಸಂದರ್ಭದಲ್ಲಿ, ಪ್ರೊ. ವಿ. ಕೃ. ಗೋಕಾಕರು ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾಗಿದ್ದುದರಿಂದ ಧಾರವಾಡದ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಮಹತ್ವ ಇನ್ನಷ್ಟು ಉಜ್ವಲಗೊಂಡು ರಾಷ್ಟ್ರವ್ಯಾಪಿಯಾಯಿತು. ಕಾಲೇಜಿನಲ್ಲಿ ಮತ್ತು ಸಾರ್ವಜನಿಕ ವಲಯದಲ್ಲಿ ವ್ಯಾಪಕವಾಗಿ ವಿವಿಧ ಕಾರ್ಯರಂಗದಲ್ಲಿ ಈ ಮೊದಲೇ ಪ್ರವೇಶಿಸಿದ್ದ ಮಾಳವಾಡರಿಗೂ ಇದು ಅತ್ಯಂತ ಕ್ರಿಯಾಶೀಲ ದಶಕವಾಗಿತ್ತು.

೧೯೪೯ರಲ್ಲಿ ಪ್ರಕಟವಾದ 'ಕನ್ನಡ ಸಾಹಿತ್ಯ ಸಂಸ್ಕೃತಿ ದರ್ಶನ' ಗ್ರಂಥದಿಂದ ಪ್ರಾರಂಭವಾದ ಮಾಳವಾಡರ ಸಾಹಿತ್ಯಸೃಷ್ಟಿ ವಿಮರ್ಶೆ, ಸಂಶೋಧನೆ, ಸಂಪಾದನೆ, ಜೀವನಚರಿತ್ರೆ, ಅಧ್ಯಾತ್ಮಸಾಹಿತ್ಯ, ಪ್ರವಾಸ ಸಾಹಿತ್ಯ, ವಿಚಾರ ಸಾಹಿತ್ಯ–ಹೀಗೆ ವಿವಿಧ ಪ್ರಕಾರಗಳಲ್ಲಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಕನ್ನಡಕ್ಕೆ ಕೊಡಮಾಡಿದೆ. ೧೯೩೮–೪೯ರಷ್ಟು ಹಿಂದೆಯೇ ಅವರು ಮಾಡಿದ ಇನ್ನೊಂದು ಮಹತ್ವದ ಕಾರ್ಯವೆಂದರೆ, ಕನ್ನಡ ಗದ್ಯವು

ಬೆಳೆದು ಬಂದ ಬಗೆಯನ್ನು ಗದ್ಯಶೈಲಿಯ ವಿವಿಧ ಸೊಬಗನ್ನು ತೋರಿಸಿಕೊಡುವ ದೃಷ್ಟಿಯಿಂದ 'ಗದ್ಯಮಾಲೆ' ಎಂಬ ಮೂರು ಸಂಕಲನಗಳನ್ನು ಸಿದ್ಧಗೊಳಿಸಲು ನಿರ್ಧರಿಸಿ, 'ಕನ್ನಡ ಗದ್ಯಮಾಲೆ–೧' ಅನ್ನು ಪ್ರಕಟಿಸಿದಾಗ ಅದು ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತಸಂಕಲನವೆಂದು ಪರಿಗಣಿತವಾಗಿ, ಬೇರೆ ಬೇರೆ ಆಡಳಿತಕ್ಕೊಳಪಟ್ಟ ಕನ್ನಡ ಪ್ರದೇಶಗಳಲ್ಲಿ ಅದನ್ನು ಪಠ್ಯಗ್ರಂಥವೆಂದು ಬಹುಕಾಲ ಬಳಸಲಾಯಿತು.

ವಿಶ್ರಾಂತ ಜೀವನದಲ್ಲಿ ಪ್ರೊ. ಮಾಳವಾಡರು ತಮ್ಮ ಅನೇಕ ಪುಸ್ತಕಗಳನ್ನು ತಾವೇ ಪ್ರಕಟಿಸಿದ್ದರು. ಈ ಉದ್ದೇಶಕ್ಕಾಗಿಯೇ 'ಸಾಹಿತ್ಯನಿಧಿ' ಎಂಬುದನ್ನು ಸ್ಥಾಪಿಸಿದರು. 'ಜಯಪ್ರಕಾಶ' ಎಂಬುದು ಶ್ರೀಮತಿ ಶಾಂತಾದೇವಿ ಮಾಳವಾಡರು ನಡೆಸಿಕೊಂಡು ಬಂದ ಪ್ರಕಾಶನ. ಈ ಪ್ರಕಾಶನದ ಐದಾರು ಗ್ರಂಥಗಳಿಗೆ ತಮ್ಮ ಪ್ರೀತಿಯ ಶಿಷ್ಯರಿಂದಲೇ ಮುನ್ನುಡಿ ಬರೆಯಿಸಿ ತಮ್ಮ ಶಿಷ್ಯ ವಾತ್ಸಲ್ಯವನ್ನು ಪ್ರಕಟಿಸಿದ್ದುಂಟು. ಇವುಗಳನ್ನು ನನ್ನ ಪಾಲಿಗೆ ಬಂದದ್ದು ವ್ಯಕ್ತಿಚಿತ್ರಗಳನ್ನೂ ವೈಚಾರಿಕ ಪ್ರಬಂಧಗಳನ್ನೂ ಒಳಗೊಂಡ ಅವರ ಕೃತಿ 'ಕಾಲವಾಹಿನಿ' (೧೯೬೮). ಈ ಅವಧಿಯಲ್ಲಿ ಅವರು ಕೈಗೊಂಡ ಒಂದು ಮಹತ್ವದ ಬರವಣಿಗೆಯೆಂದರೆ ಅವರ ಆತ್ಮಚರಿತ್ರೆ 'ದಾರಿ ಸಾಗಿದೆ'. ಅದರ ಮೊದಲ ಭಾಗ 'ಹಳ್ಳಿಯ ಹುಡುಗ' (೧೯೮೦) ಹದಿನಾರು ವಯಸ್ಸಿನ ಅವಧಿಯ ನಿರೂಪಣೆ. ಆರು ಬಾಗಗಳನ್ನೊಳಗೊಂಡ, ಸುಮಾರು ಎಂಟುನೂರು ಪುಟಗಳ ಈ ಕೃತಿ ಪೂರ್ತಿಗೊಳ್ಳುವ ಕೊನೆಯ ಹಂತದಲ್ಲಿದ್ದಾಗಲೇ ಮಾಳವಾಡರು ಕಾಲವಶರಾದರು (೩೦–೦೮–೧೯೮೭) ಕೊನೆಯ ನೂರೈವತ್ತುಪುಟಗಳಷ್ಟನ್ನು ಅವರ ದಿನಚರಿ ಟಿಪ್ಪಣಿಗಳು ಹಾಗೂ ಫೈಲುಗಳು ಆಧಾರದಿಂದ ಶ್ರೀಮತಿ ಶಾಂತಾದೇವಿಯವರು ಕೃತಿಯ ಸಾತತ್ಯಕ್ಕೆ ಭಂಗ ಬರದಂತೆ ಬರೆದು ಪೂರೈಸಿದರು. ಪ್ರೊ. ಮಾಳವಾಡರ ಎಂಬತ್ತನೆಯ ಹುಟ್ಟುಬ್ಬದಂದು, ೧೯೮೯ರಲ್ಲಿ ಇದರ ಬಿಡುಗಡೆಯಾಯಿತು. (ಈ ಆತ್ಮಚರಿತ್ರೆ ಸುಮಾರು ಅರವತ್ತು ವರ್ಷಗಳ ಅವಧಿಯ ಕರ್ನಾಟಕದ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ, ಜನಜೀವನಗಳ ಚರಿತ್ರೆಯೂ ಆಗಿದೆ.)

ಇದರ ಬರವಣಿಗೆಯ ಕಾರ್ಯ ಅವರ ದಾಂಪತ್ಯಯೋಗಕ್ಕೆ ಒಂದು ಉತ್ತಮ ಸಂಕೇತವೆಂದು ಹೇಳಬಹುದು. ''ಪ್ರೊ. ಮಾಳವಾಡರ ಬಗ್ಗೆ ಎಷ್ಟೇ ಹೇಳಿದರೂ ಬರೆದರೂ ಶಾಂತಕ್ಕನವರ ಉಲ್ಲೇಖವಿಲ್ಲದೆ ಅದು ಪೂರ್ಣವಾಗಲಾರದು. ಅವರಲ್ಲಿ ಒಬ್ಬರನ್ನು ಬಿಟ್ಟು ಇನ್ನೊಬ್ಬರನ್ನು ಯೋಚಿಸುವದೂ ಆಗದ ಮಾತು'' ಎಂಬ ಹಾ. ಮಾ. ನಾಯಕರ ಮಾತು ನೂರಕ್ಕೆ ನೂರರಷ್ಟು ಸತ್ಯ. ಶಾಲೆಯಲ್ಲಿ ಕಲಿತದ್ದು ಹೆಚ್ಚಲ್ಲವಾದರೂ ಪ್ರೊ. ಮಾಳವಾಡರ ಪ್ರೋತ್ಸಾಹದಿಂದ ಓದು–ಬರಹವನ್ನು ರೂಢಿಸಿಕೊಂಡು, ಮನೆಯಲ್ಲಿಯೇ ಹಿಂದಿಯನ್ನೂ ತಕ್ಕಮಟ್ಟಿಗೆ ಇಂಗ್ಲಿಷನ್ನೂ ಕಲಿತು ಕನ್ನಡ ಸಾಹಿತ್ಯವನ್ನು ಶ್ರದ್ಧೆಯಿಂದ ಅಭ್ಯಸಿಸಿದರು. ಸೃಜನಶೀಲ ಲೇಖಕಿಯಾಗಿ ಕಥೆ, ಕಾದಂಬರಿ, ಶರಣ ಸಾಹಿತ್ಯ, ಜೀವನಚರಿತ್ರೆಗಳನ್ನಲ್ಲದೆ, ಗೃಹಾಲಂಕಾರ, ಪಾಕಶಾಸ್ತ್ರ ಇವೇ ಮೊದಲಾದ ವಿಷಯಗಳನ್ನು ಕುರಿತು ಮೂವತ್ತಕ್ಕೂ ಮಿಕ್ಕಿ ಕೃತಿಗಳನ್ನು ರಚಿಸಿ ಮಾದರಿ ಎನಿಸಿದರು.

ಸಾಹಿತ್ಯ ಸೃಷ್ಟಿ ಅವರ ವ್ಯಕ್ತಿತ್ವದ ಒಂದು ಮಜಲಾದರೆ, ಮಹಿಳೆಯರ ಸಂಘಟನೆ, ಅಕ್ಕನಬಳಗ, ಮಹಿಳಾ ಮಂಡಳ, ಲೇಖಕಿಯರ ಸಂಘ ಮೊದಲಾದವುಗಳಿಗೆ ಸಂಬಂಧಿಸಿದ ಸಾರ್ವಜನಿಕ ಸೇವೆ ಮತ್ತೊಂದು ಮಹತ್ವದ ಮಜಲು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಮೊದಲಾದ ಹಲವು ಪ್ರಶಸ್ತಿಗಳ ಗೌರವಕ್ಕೆ ಅವರು ಪಾತ್ರರಾದರು. ಬಾಗಲಕೋಟೆಯಲ್ಲಿ ನಡೆದ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರು ಜನಮನ್ನಣೆ ಪಡೆದದ್ದು ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯೇ ಒಂದು ಚರಿತ್ರಾರ್ಹ ಘಟನೆ ಎನ್ನಬಹುದು. ಇದನ್ನು ಅವರ ದಾಂಪತ್ಯಯೋಗಕ್ಕೆ ಸಂದ ಗೌರವವೆಂದೂ ಭಾವಿಸಬಹುದು. ಶಾಂತಾದೇವಿಯವರಿಗೆ ಎಂಟು ಸಲ ಗರ್ಭಪಾತವಾಗಿ ಅನುಭವಿಸಿದ ನೋವನ್ನೂ ಇಲ್ಲಿ ನೆನೆಯಬಹುದು. ಅವರ ಚಿಕಿತ್ಸೆಯನ್ನು ಕೈಗೊಂಡ ಕುಟುಂಬದ ಡಾಕ್ಟರರು "Mrs, Malwad's case is a problem of Medical sceince" ಎಂದು ಹೇಳಿದ್ದರು. ಆ ಹೇಳಿಕೆ ಕೊನೆಗೂ ನಿಜವಾಗಿಯೇ ಪರಿಣಮಿಸಿತು.

ಪ್ರೊ. ಮಾಳವಾಡರ ಸೇವೆ ಎಂದೂ ಅಧ್ಯಾಪನಕ್ಕಷ್ಟೇ ಸೀಮಿತವಾಗಿರದೆ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಗೌರವ ನಿರ್ದೇಶಕತ್ವ, ವಿದ್ಯಾರ್ಥಿ ಕಲ್ಯಾಣಾಧಿಕಾರಿ, ಪ್ರಾಚಾರ್ಯ, ವಿಶ್ವವಿದ್ಯಾಲಯದ ಪಠ್ಯಪುಸ್ತಕ ನಿರ್ದೇಶನಾಲಯದ ಸ್ಥಾಪಕ ನಿರ್ದೇಶಕ–ಇತ್ಯಾದಿಗಳೂ ಅವರ ಅನುಭವದ ಲಾಭವನ್ನು ಪಡೆದಿವೆ. ಮುಂಬಯಿ, ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯಗಳ ಪಠ್ಯಪುಸ್ತಕ ಸಮಿತಿ, ಕನ್ನಡ ಅಭ್ಯಾಸ ನಿಯಾಮಕ ಮಂಡಳ, ವಿಶ್ವವಿದ್ಯಾಲಯದ ಸೆನೆಟ್, ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್– ಇವೇ ಮೊದಲಾದವುಗಳ ಸದಸ್ಯರಾಗಿ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು. ಕರ್ನಾಟಕ ಏಕೀಕರಣ. ಧಾರವಾಡ ಆಕಾಶವಾಣಿ ಕೇಂದ್ರ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ನಡೆದ ಹೋರಾಟದಲ್ಲಿಯೂ ಅವರು ಯಾವಾಗಲೂ ಮುಂಚೂಣಿಯಲ್ಲಿದ್ದರು. ೧೯೪೮ರಲ್ಲಿ ಮುಂಬಯಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಬಿ. ಜಿ. ಖೇರ್ ಅವರನ್ನು ಭೆಟ್ಟಿಯಾಗಿ ಮನವಿ ಸಲ್ಲಿಸಿದ 'ಕರ್ನಾಟಕ ವಿದ್ಯಾಪೀಠ ಸಮಿತಿ'ಯ ಕಾರ್ಯದರ್ಶಿಯಾಗಿದ್ದ ಮಾಳವಾಡರು ಅದೇ ಸಂದರ್ಭದಲ್ಲಿ ರಚಿಸಿದ್ದ 'ಕರ್ನಾಟಕ ವಿಶ್ವವಿದ್ಯಾಲಯ' ಎಂಬ ಪುಸ್ತಿಕೆ ಮಹತ್ವದ ಅಂಶಗಳನ್ನು ಒಳಗೊಂಡಿದ್ದಿತು. ಕನ್ನಡ ಸಾಹಿತ್ಯ ಪರಿಷತ್ತು ಅವರ ಸಲಹೆಗಳಿಗೆ ಮನ್ನಣೆ ನೀಡುತ್ತಿತ್ತು. ಕರ್ನಾಟಕ ವಿದ್ಯಾವರ್ಧಕ ಸಂಘವಂತೂ ಅವರ ಸಾಂಸ್ಕೃತಿಕ ಚಟುವಟಿಕೆಗಳ ಆಡುಂಬೊಲವಾಗಿದ್ದಿತು. ಅಖಿಲ ಭಾರತ ಪಿ.ಈ.ಎನ್. ಕೇಂದ್ರ ಹಾಗೂ ಪ್ರಾಚ್ಯವಿದ್ಯಾಪರಿಷತ್ತುಗಳು ಭಾರತದ ಇತರ ಪ್ರಾಂತಗಳ ಲೇಖಕರ, ವಿದ್ವಾಂಸರ ಸ್ನೇಹವನ್ನೂ ಆಯಾ ಭಾಷಾ ಸಾಹಿತ್ಯಗಳ ಪರಿಚಯವನ್ನೂ ಇವರಿಗೆ ಒದಗಿಸಿದವು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಹಾಗೂ ರಾಜ್ಯ ಸಾಹಿತ್ಯ ಅಖಾಡೆಮಿಯ ಪ್ರಥಮ ಸಮಿತಿಯ ಸದಸ್ಯರಾಗಿದ್ದರು. ಭಾರತೀಯ ಜ್ಞಾನಪೀಠದ

ಪ್ರಥಮ ಕನ್ನಡ ಸಲಹಾ ಸಮಿತಿಯ ಸದಸ್ಯರಾಗಿಯೂ ಅವರು ಕಾರ್ಯ್ಯಗೈದರು– ಇವೆಲ್ಲವುಗಳ ಚಟುವಟಿಕೆಗಳಲ್ಲಿ ಅವರು ತೋರಿಸುತ್ತಿದ್ದ ಆಸ್ಥೆಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

೧೯೩೬ರಲ್ಲಿ ಹಂಪೆಯಲ್ಲಿ ವಿಜಯನಗರ ಸ್ಥಾಪನೆಯ ಆರೂನೂರು ವರ್ಷಗಳ ಸ್ಮಾರಕೋತ್ಸವದ ಸಾಹಿತ್ಯೋತ್ಸವ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯಕ್ರಮ ನಿರ್ವಹಿಸಿದ್ದು ಅವರಿಗೆ ಹೆಚ್ಚಿನ ತೃಪ್ತಿಯನ್ನು ತಂದುಕೊಟ್ಟದ್ದಿತು. ಅಂದು ಬಿ.ಎಂ.ಶ್ರೀಯವರು ಆ ಸಮಾರಂಭದಲ್ಲಿ ತಮ್ಮ 'ಕನ್ನಡ ತಾಯ್ ನೋಟ' ಕವಿತೆಯನ್ನು ಭಾವಪೂರ್ಣವಾಗಿ ವಾಚನಮಾಡಿ ಸಭಿಕರಲ್ಲಿ ರೋಮಾಂಚನವನ್ನುಂಟು ಮಾಡಿದ್ದನ್ನು 'ದಾರಿ ಸಾಗಿದೆ' ಕೃತಿಯಲ್ಲಿ ಸಂಭ್ರಮದಿಂದ ಉಲ್ಲೇಖಿಸಿದ್ದಾರೆ. ಇಂಥ ಅನೇಕ ಘಟನೆಗಳನ್ನು, ಸನ್ನಿವೇಶಗಳನ್ನು ಅವರ ಆತ್ಮಚರಿತ್ರೆ ಒಳಗೊಂಡಿದ್ದು, ಕನ್ನಡ ಲೇಖಕರ ಅಂದಿನ ಸ್ಥಿತಿಗತಿಯ ಮೇಲೆ ಬೆಳಕು ಚೆಲ್ಲುವ ಇನ್ನೊಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಬಹುದು. ಮಾಳವಾಡರು ಹಾಯಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ಗಳಗನಾಥರ ಕಾದಂಬರಿಗಳನ್ನೋದಿ ತಮ್ಮ ವಾಚನಾಭಿರುಚಿಯನ್ನು ಬೆಳೆಸಿಕೊಂಡಿದ್ದರು. ಅವರನ್ನು ನೋಡಿರದಿದ್ದರೂ ಅವರ ಬಗ್ಗೆ ಪೂಜ್ಯ ಭಾವನೆ ತಾಳಿದ್ದರು. ಒಂದು ದಿನ ಮಾಳವಾಡರು ಕಾಲೇಜಿನ ಕೆಲಸ ಪೂರೈಸಿ ಮನೆಗೆ ವಿಶ್ರಾಂತಿಗೆಂದು ತೆರಳಿದ ಸಂದರ್ಭದಲ್ಲಿ ಬಡಕಲು ದೇಹ, ಮಾಸಿದ ಬಟ್ಟೆ, ಬೆಳೆದ ಗಡ್ಡ, ದೈನ್ಯ ಮುಖಮುದ್ರೆಯುಳ್ಳ ಮುದುಕರೊಬ್ಬರು ಭಾರವಾದ ಗಂಟನ್ನು ತಲೆಯ ಮೇಲೆ ಹೊತ್ತುಕೊಂಡು ಅವರ ಮನೆಯ ಬಾಗಿಲಿಗೆ ಬಂದರು. ಅವರೇ ಗಳಗನಾಥರೆಂದು ತಿಳಿದಾಗ ಅವರಿಗೆ ಆಶ್ಚರ್ಯದೊಂದಿಗೆ ವ್ಯಥೆಯೂ ಆಯಿತು. ಪತ್ರಿಕೆ, ಪುಸ್ತಕ, ಪ್ರಕಟಣೆಗಳಿಂದಾಗಿ ಮಾಡಿದ ಸಾಲವನ್ನು ತೀರಿಸಲೆಂದು ಈಗ ಗಳಗನಾಥರು ಪುಸ್ತಕಗಳ ಮೂಟೆಯನ್ನು ತಲೆಯ ಮೇಲೆ ಹೊತ್ತುಕೊಂಡು ಮನೆಮನೆಗೆ ಹೋಗಿ ಪುಸ್ತಕ ಮಾರಾಟ ಮಾಡಲು ತೊಡಗಿದ್ದರು. ಅವರನ್ನು ಉಪಚರಿಸಿ, ಕಾಲೇಜಿನ ಲೈಬ್ರರಿಗಾಗಿ ಹಾಗೂ ಸ್ವಂತಕ್ಕಾಗಿ ಕೆಲವು ಪುಸ್ತಕಗಳನ್ನು ಕೊಳ್ಳುವ ಮೂಲಕ ತಮಗೆ ಸಾಧ್ಯವಿದ್ದ ನೆರವನ್ನು ಆ ಹಿರಿಯ ಸಾಹಿತಿಗೆ ಒದಗಿಸಿದ ಸಂತಸ ಮಾಳವಾಡರಿಗಾದದ್ದು ಸಹಜವೇ ಆಗಿದೆ.

೧೯೫೦ರಲ್ಲಿ ಧಾರವಾಡ ಬಾನುಲಿ ಕೇಂದ್ರ ಪ್ರಾರಂಭವಾದಾಗ ಕೇಂದ್ರದ ನಿಯೋಜಿತ ಮುಖ್ಯಾಧಿಕಾರಿ ಎನ್. ಡಿ. ವಾಕನೀಸ್ ಮರಾಠಿ ಭಾಷಿಕರಾಗಿದ್ದು ಕನ್ನಡ ಪ್ರಾಧ್ಯಾಪಕರಾಗಿದ್ದ ಪ್ರೊ. ಮಾಳವಾಡರೊಂದಿಗೆ ನಿಕಟವರ್ತಿಯಾಗಿ ಕಾರ್ಯಕ್ರಮಗಳ ಸಂಯೋಜನೆಯಲ್ಲಿ ಅವರ ಸಲಹೆಗಳನ್ನು ಪದೇ ಪದೇ ಪಡೆದುಕೊಳ್ಳುತ್ತಿದ್ದರು.

ನಂತರದ ವರ್ಷಗಳಲ್ಲಿ, ಸಾರ್ವಜನಿಕ ಸಾಹಿತ್ಯ ವಲಯದಲ್ಲಿ ಕಳಕಳಿಯ ಸೇವಾಭಾವನೆ ಹಿಂದಾಗಿ, ರಾಜಕೀಯ ವ್ಯಾಪಾರಿ ಮನೋಭಾವ ಪ್ರಬಲವಾಗತೊಡಗಿದ್ದನ್ನು ಕಂಡು ಮಾಳವಾಡರು ಅವುಗಳಿಂದ ದೂರವಿರತೊಡಗಿದರು. ಅದಕ್ಕೊಂದು ಪ್ರಬಲದ ಕಾರಣವೂ ಇತ್ತು. ೧೯೫೮ರಿಂದ ೧೯೬೮ರ ವರೆಗೆ

ಮಾಳವಾಡರು ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯರಾಗಿದ್ದರು. ಇದಕ್ಕೆ ಪೂರ್ವದಲ್ಲಿಯೇ ಮಾಸ್ತಿಯವರ 'ಚೆನ್ನಬಸವನಾಯಕ' ಕಾದಂಬರಿ ಭಾರತದ ಇತರ ಭಾಷೆಗಳಿಗೆ ಭಾಷಾಂತರಕ್ಕೆ 'ಸೂಚಿತ'ವಾಗಿತ್ತು ಆ ಸೂಚನೆಯು ಸಾರ್ವಜನಿಕರಲ್ಲಿ ತೀವ್ರವಾದ ವಿವಾದಕ್ಕೆ ಆಸ್ಪದವಾಗಿತ್ತು. ಪ್ರಮುಖ ಐತಿಹಾಸಿಕ ಆಧಾರಗಳಿಗೆ ಅದು ಅನುಗುಣವಾಗಿಲ್ಲ ಎಂಬ ಕಾರಣದಿಂದ ವಿರೋಧ ವ್ಯಕ್ತವಾಗಿತ್ತು. ('ದಾರಿ ಸಾಗಿದೆ' ಆತ್ಮಚರಿತ್ರೆಯಲ್ಲಿ ಈ ಬಗ್ಗೆ ಇಪ್ಪತ್ತು ಪುಟಗಳ ಬರವಣಿಗೆಯನ್ನು ಇವರು ಮುಕ್ತ ಮನಸ್ಸಿನಿಂದ ಪ್ರತಿಪಾದಿಸಿದ್ದಾರೆ.) 'ಸುಹೃದ್ಭಾವ ಬೆಳೆಯುವದೆಂಬ ಭರವಸೆ'ಯಿಂದ ಮೂಡಿಬಂದ ಸಮತೋಲನ ದೃಷ್ಟಿ, ಸಭ್ಯ ನುಡಿಗಳು ತಮ್ಮ ಸಂಯುಕ್ತ ಪ್ರಕಟಣೆ–ಕರ್ನಾಟಕದ ವಿವಿಧ ಕೋಮುಗಳಿಗೆ ಸೇರಿದ ಎಂಟು ಜನ ಲೇಖಕರ ಅಂಕಿತದಲ್ಲಿರೂಪುಗೊಂಡ–ಮನವಿಯನ್ನು ಸಮತೋಲನ ದೃಷ್ಟಿ, ಸಭ್ಯ ನುಡಿಗಳ ತಮ್ಮ ಸಂಯುಕ್ತಪ್ರಕಟಣೆ–ಕರ್ನಾಟಕದ ವಿವಿಧ ಕೋಮುಗಳಿಗೆ ಸೇರಿದ ಎಂಟು ಜನ ಲೇಖಕರ ಅಂಕಿತದಲ್ಲಿ ರೂಪುಗೊಂಡ–ಮನವಿಯನ್ನು ಇತ್ತಂಡದವರೂ ಒಪ್ಪಿಕೊಳ್ಳದೆ ಅವರನ್ನು ನಿಂದನೆಗೊಳಗುಮಾಡಿದ್ದರು. ಈ ರೀತಿಯ ಸಾಹಿತ್ಯಿಕ ಸಾರ್ವಜನಿಕ ಸಂಬಂಧಗಳಲ್ಲಿ ತಾವು ಹೊಂದಿಕೊಳ್ಳಲಾರದವ (misfit) ಎಂದು ಅವರಿಗೆ ಮನವರಿಕೆಯಾಯಿತು. ಈ ಮೊದಲೇ ಮೂಡಿದ್ದ ಆಧ್ಯಾತ್ಮಿಕ ಒಲವು ಹಾಗೂ ಸಾಧನೆಗಳಿಂದ ಬಾಳಿಗೆ ಹೊಸ ದೃಷ್ಟಿಯನ್ನು ಪಡೆಯುವ ಪ್ರಾಮಾಣಿಕ ಪ್ರಯತ್ನ ಅವರದಾಯಿತು.

೧೯೪೫ರ ಕೊನೆಯ ಭಾಗದಲ್ಲಿ ಮಧುರಚೆನ್ನರ ಪ್ರೇರಣೆಯಿಂದ ಮಾಳವಾಡರು ಪ್ರಥಮಸಲ ಅರವಿಂದಾಶ್ರಮವನ್ನು ಸಂದರ್ಶಿಸಿದರು. ಅಂದಿನಿಂದ ಸುಮಾರು ಮೂವತ್ತೈದು ವರ್ಷ ಅವರು ಪಾಂಡಿಚೇರಿ ಪ್ರಯಾಣ ಕೈಗೊಳ್ಳುತ್ತ ಅಲ್ಲಿ ನಾಲ್ಕೈದು ವಾರ ಮನೆಯವರ ಜೊತೆಗೆ ವಾಸಿಸುವ ರೂಢಿ ಇತ್ತು. 'ಶಿವಶರಣರ ಬೋಧೆಯಲ್ಲಿ ಆ ನೆಮ್ಮದಿಯ ಹಾದಿ ಸೂಚಿತವಾಗಿದೆಯೆಂಬುದು ನಿಜ. ಆದರೆ ಅದನ್ನು ವಾಸ್ತವವಾಗಿ ರೂಢಿಸಿಕೊಳ್ಳುವ ಪ್ರಯೋಗಶಾಲೆಯಾಯಿತು ಆಶ್ರಮವು ನಮಗೆ'' ಎನ್ನುತ್ತಿದ್ದರು ಮಾಳವಾಡರು. ಅರವಿಂದಾಶ್ರಮದ ಸ್ವರೂಪ, ಕಾರ್ಯ ಯೋಜನೆ, ಅನುಷ್ಠಾನಗಳ ವಿವರಗಳನ್ನು ತಮ್ಮ 'ಅರವಿಂದ ಸಂಗಮ' ಪುಸ್ತಕದಲ್ಲಿ ನಿರೂಪಿಸಿದ್ದಾರೆ. ಅರವಿಂದರು ಹಾಗೂ ಮಾತೆಯವರ ವಿಚಾರಧಾರೆಯನ್ನು ಬೇರೆ ಕೆಲವು ಗ್ರಂಥಗಳಲ್ಲಿ ಸುಲಭ ಶೈಲಿಯಲ್ಲಿ ಅವರು ವಿವರಿಸಿದ್ದಾರೆ. ಅವರ ಪ್ರಕಾರ ಅರವಿಂದಾಶ್ರಮವು ಬಾಳಿನಿಂದ ಪಲಾಯನವನ್ನು ಬೋಧಿಸುವದಿಲ್ಲ. ಮಾನವೀಯ ಬಾಳಿನ ಮಧ್ಯದಲ್ಲಿಯೇ ದೈವೀಪ್ರಜ್ಞೆ ಪ್ರಕಟವಾಗಬೇಕೆಂಬುದು ಅಲ್ಲಿಯ ಸಂದೇಶವಾಗಿದೆ. ಯಾವುದೇ ಬಗೆಯ ಧಾರ್ಮಿಕ ವಿಧಿವಿಧಾನ. ದೀಕ್ಷೆ ಇತ್ಯಾದಿ ಅಲ್ಲಿ ಇಲ್ಲ. ಪರಮಾತ್ಮನ ಅನುಸಂಧಾನವನ್ನು ಕುರಿತು ಯಾರೂ ಯಾವುದೇ ಕ್ರಮವನ್ನು ಧರ್ಮವನ್ನು ಅನುಸರಿಸಬಹುದು.

೧೯೭೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಹಾಗೂ ೧೯೮೫ರಲ್ಲಿ ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ರಾಜ್ಯೋತ್ಸವ ಪ್ರಶಸ್ತಿಗಳಿಂದ ಅವರನ್ನು

ಗೌರವಿಸಲಾಯಿತು. ಆದರೆ ಮಾಳವಾಡರಿಗೆ ಇದಾವುದರ ಕಡೆಗೂ ಲಕ್ಷ್ಯವಿರಲಿಲ್ಲ. ತಮ್ಮ 'ಪ್ರಶಾಂತ' ಗೃಹದಲ್ಲಿ ಪತ್ನಿ ಶಾಂತಾದೇವಿಯವರ ಜೊತೆಗೆ ಸದಾ ವ್ಯಾಸಂಗನಿರತರಾಗಿ, ಸಾಧ್ಯವಿದ್ದಷ್ಟು ಬರವಣಿಗೆಯನ್ನು ಮಾಡುತ್ತ ಜೀವನ–ಸಾಹಿತ್ಯ–ಆಧ್ಯಾತ್ಮ– ದಾಂಪತ್ಯಗಳಲ್ಲಿ ಪರಸ್ಪರ ಪೂರಕವೆನಿಸಿದ್ದರು. ಹಡೆದ ಮಗನಲ್ಲದಿದ್ದರೂ ಪಡೆದ ಮಗ (ತಮ್ಮನ ಮಗ ಚೆನ್ನಬಸವ) ಮನೆಯಲ್ಲಿದ್ದು, ಸೊಸೆ (ಲಲಿತಾ) ಮನೆತುಂಬಿ, ಮಾಳವಾಡ ದಂಪತಿಗಳ ಉಡಿಯಲ್ಲಿ ಮೂವರು ಮೊಮ್ಮಕ್ಕಳನ್ನು (ಮೀರಾ, ಚಿನ್ಮಯಿ, ಅರವಿಂದ) ನೀಡಿರುವಾಗ ಅವರಿಗೆ ಯಾವ ಕೊರತೆಯೂ ಎನಿಸಿರಲಿಲ್ಲ. ಸಾಮಾನ್ಯವಾಗಿ ಎಲ್ಲರೂ ಹಂಬಲಿಸಬಹುದಾದ, ರಾಜ್ಯ ಸರ್ಕಾರ ಕೊಡ ಮಾಡಿದ ಮಾಸಿಕ ಗೌರವ ಧನವನ್ನು ನಿರಾಕರಿಸಿದ್ದು ಮಾಳವಾಡರ ನಿಸ್ಪೃಹತೆಗೆ ಸಾಕ್ಷಿಯಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ದತ್ತಿ ಉಪನ್ಯಾಸಕ್ಕಾಗಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಾಹಿತ್ಯ ಪ್ರಶಸ್ತಿಗಾಗಿ ಒಂದು ಮೊತ್ತದ ಹಣವನ್ನು ನೀಡಿ, ಕನ್ನಡ ಸಾಹಿತ್ಯ ಸಂವರ್ಧನೆಯ ಬಗೆಗಿನ ತಮ್ಮ ಕಳಕಳಿಯನ್ನು ಕಾರ್ಯರೂಪಕ್ಕಿಳಸಿ ಕೃತಾರ್ಥರಾದರು. ''ಕಾಯದ ಕಳವಳಕ್ಕಂಜಿ 'ಕಾಯಯ್ಯ' ಎನ್ನೆನು; ಜೀವನೋಪಾಯಕ್ಕಾಗಿ 'ಈಯಯ್ಯಾ' ಎನ್ನೆನು'' ಎಂಬ ಬಸವವಾಣಿಯನ್ವಯ ತಮ್ಮ ಜೀವನವನ್ನು ರೂಪಿಸಿಕೊಂಡ ಮಾಳವಾಡರು, 'ಧೃತಿಗೆಟ್ಟು ಅನ್ಯರ ಬೇಡದಂತೆ, ಮತಿಗೆಟ್ಟು ಪರರ ಹೊಗಳದಂತೆ'' ನ್ಯಾಯನಿಷ್ಠುರರಾಗಿ ಬಾಳಿದರು.

ಸ್ನೇಹಿತರ ಹಾಗೂ ಸಾಹಿತ್ಯಾಸಕ್ತರ ಅಪೇಕ್ಷೆಯಂತೆ ಮಾಳವಾಡರ ಅರವತ್ತನೆಯ ಹುಟ್ಟುಹಬ್ಬವನ್ನು ಧಾರವಾಡದಲ್ಲೂ ಎಪ್ಪತ್ತರ ಹುಟ್ಟುಹಬ್ಬವನ್ನು ಬೆಂಗಳೂರಿನಲ್ಲೂ ಸಾರ್ವಜನಿಕ ಸಮಾರಂಭವಾಗಿ ಆಚರಿಸಲಾಯಿತು. ಧಾರವಾಡದ ಸಮಾರಂಭದಲ್ಲಿ ಅವರು ಹೇಳಿದರು; ''ನಾನು ಜನಪ್ರಿಯತೆ ಗಳಿಸಲಿಲ್ಲ ಎಂಬುದು ನನಗೆ ಗೊತ್ತಿದೆ. ಆ ದಿಸೆಯಲ್ಲಿ ನಾನು ಸಾಗಲಿಲ್ಲ. ಕರ್ತವ್ಯನಿಷ್ಠೆ, ನ್ಯಾಯಸಮ್ಮತ ಸ್ಪಷ್ಟೋಕ್ತಿ ಈ ದೃಷ್ಟಿಯಿಂದ ಕೆಲಮಟ್ಟಿಗೆ ನಿಷ್ಠುರವಾದ ಹಾದಿಯನ್ನೇ ನಾನು ತುಳಿದೆ.'' ಅವರ ಭಾಷಣ ಹಾಗೂ ಬರಹಗಳಲ್ಲಿ ಹೆಚ್ಚಿನ ವ್ಯತ್ಯಾಸವಿರುತ್ತಿರಲಿಲ್ಲ.

೭೫ನೆಯ ಹುಟ್ಟುಹಬ್ಬದಂದು (೧೯೮೫) 'ವ್ಯಾಸಂಗ' ಹೆಸರಿನ ಅಭಿನಂದನ ಗ್ರಂಥವನ್ನು ಧಾರವಾಡದಲ್ಲಿ ಶ್ರೀರಂಗರ ಅಧ್ಯಕ್ಷತೆಯಲ್ಲಿ ಮಾಳವಾಡರಿಗೆ ಸಲ್ಲಿಸಲಾಯಿತು. ವಿಮರ್ಶಕ ಮಾಳವಾಡರ ಅಭಿರುಚಿಗೆ ತಕ್ಕಂತೆ ಆ ಗ್ರಂಥದಲ್ಲಿ, ಭಾರತೀಯ ಹಾಗೂ ಪಾಶ್ಚಾತ್ಯ ವಿಮರ್ಶಾ ಪರಿಕಲ್ಪನೆಗಳು ಮತ್ತು ಸಮಸ್ಯೆಗಳನ್ನು ಕುರಿತಂತೆ ಸಂಪಾದಕರಾದ ಪ್ರೊ. ಸದಾನಂದ ಕನವಳ್ಳಿಯವರು ವಿದ್ವತ್ಪೂರ್ಣ ಲೇಖನಗಳನ್ನು ಬರೆಯಿಸಿ ವಿಶಿಷ್ಟ ಮಾದರಿಯನ್ನು ಹಾಕಿಕೊಟ್ಟರು. ಈ ಗ್ರಂಥ ಯಾವ ಅಭಿಮಾನಿ ಸಂಘವನ್ನು ಕಟ್ಟಿಕೊಂಡಿರದ, ವ್ಯಾಸಂಗಪ್ರಿಯರಾದ ಪ್ರೊ. ಮಾಳವಾಡರಿಗೆ ಬೆಲೆಯುಳ್ಳದ್ದಾಗಿ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ .

ಧಾರವಾಡವೆ ಮಾಳವಾಡರ ಜ್ಞಾನಕ್ಷೇತ್ರ ಹಾಗೂ ಕರ್ಮಭೂಮಿಯಾಗಿದ್ದರಿಂದ, 'ಬೇಂದ್ರೆಯವರಂತೆ ನನಗೂ ಧಾರವಾಡ ತಾಯಿಯ ವಾತ್ಸಲ್ಯ ಒಡಗೂಡಿ ಬಂದಿತು' ಎಂಬ ಅವರ ಹೇಳಿಕೆ ಅರ್ಥಪೂರ್ಣವಾಗಿದೆ. ವಸ್ತುನಿಷ್ಠ ದೃಷ್ಟಿಯಿಂದ ಅವರು ಜಗತ್ತನ್ನೂ ಉಳಿದವರನ್ನೂ ನೋಡಿದಂತೆ ಆ ದೃಷ್ಟಿಯನ್ನು ತಮ್ಮ ಮೇಲೂ ಹಾಯಿಸಿ ಕೊಳ್ಳಲು ಅವರು ಮರೆಯಲಿಲ್ಲ. ಒಂದೆಡೆ ಅವರು ಹೇಳದ್ದಾರೆ; ''ನನ್ನ ಓದು ವಿಸ್ತಾರವಾದದ್ದು; ಆಳ ಇರಲಿಕ್ಕಿಲ್ಲ. ಈ ಮಾತು ನನ್ನ ಬರಹಕ್ಕೂ ಅನ್ವಯಿಸಬಹುದು. ನನ್ನ ಚೇತನವೇ ಹಾಗಿರಬಹುದು. ಈ ಬಗೆಗೆ ನಾನು ವಿಷಾದಪಟ್ಟುಕೊಳ್ಳುವದಿಲ್ಲ. ಪರಮಾತ್ಮ ದಯಪಾಲಿಸಿದ ಸೀಮಿತ ಶಕ್ತಿಯನ್ನು ಶ್ರದ್ಧೆಯಿಂದ, ಪರಿಶ್ರಮದಿಂದ ಉಪಯೋಗಿಸಿದೆನೆಂಬ ಸಮಾಧಾನ ನನ್ನದಾಗಿದೆ. ನನ್ನ ದುಡಿಮೆಯೆ ನನಗೆ ಸಂತೋಷವನ್ನು ನೀಡಿದೆ.'' ಈ ಪ್ರವೃತ್ತಿಯೇ ಅವರನ್ನು ದೊಡ್ಡವರನ್ನಾಗಿಸಿತು.

'ಹೊಸತು'
೨೦೧೨

■■

ಕಲಬುರ್ಗಿ ನೆನಪುಗಳು

ಎಂ. ಎಂ. ಕಲಬುರ್ಗಿಯವರು ಸ್ನಾತಕೋತ್ತರ ಶಿಕ್ಷಣಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬಂದದ್ದು ೧೯೬೦ರಲ್ಲಿ. ಪ್ರತಿಭಾವಂತ ವಿದ್ಯಾರ್ಥಿಯೆಂದು ಅವರ ಬಗ್ಗೆ ಕೇಳಿದ್ದೇನೇ ಹೊರತು ಸಂಪರ್ಕ ಬಂದಿರಲಿಲ್ಲ. ೧೯೬೨ರಿಂದ ನಾಲ್ಕುವರ್ಷ ಅವರು ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ನನಗೆ ಅವರ ಪರಿಚಯವಾದ ಸ್ವಾರಸ್ಯದ ಪ್ರಸಂಗ ನನಗಿನ್ನೂ ನೆನಪಿದೆ: ಪ್ರೊ.ಬಸವನಾಳರು ಸಂಪಾದಕರಾಗಿದ್ದ 'ಜಯ ಕರ್ನಾಟಕ' ಮಾಸ ಪತ್ರಿಕೆಯ ೧೯೬೩ರ ಮೂರು ಸಂಚಿಕೆಗಳಲ್ಲಿ ಒಟ್ಟು ಎಪ್ಪತ್ತಕ್ಕೂ ಹೆಚ್ಚು ಜನಪದ ಹಾಡುಗಳು ಪ್ರಕಟವಾಗಿದ್ದವು. ಹಾಡುಗಳೂ ತುಂಬ ಚೆನ್ನಾಗಿದ್ದವು. ಸಂಗ್ರಹಕಾರರ ಹೆಸರು ಮಲ್ಲಿನಾಥ ಕಲಬುರ್ಗಿ ಎಂದಿತ್ತು. ನಾನು ಕುತೂಹಲ ತಡೆಯಲಾರದೆ ವಿಚಾರಿಸಿದಾಗ ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಎಂ.ಎಂ.ಕಲಬುರ್ಗಿಯವರೇ ಇವರು ಎಂಬುದು ಗೊತ್ತಾಗಿ ಅವರ ಪರಿಚಯವೂ ಆಯಿತು. ತಾವು ಸಂಗ್ರಹಿಸಿದ ಜನಪದ ಹಾಡುಗಳಲ್ಲಿ ಕೆಲವನ್ನು ಅವರೇ ಸೊಗಸಾಗಿ ಹಾಡಿಯೂ ತೋರಿಸಿದರು. ಅವರು ಅಂದು ಹಾಡಿದ 'ಯಾಲಕ್ಕಿ ಗೊನಿಯ ಗಿಣಿರಾಮಾ' ಎಂಬ ಪದ್ಯದ ಸಾಲು ಇಂದಿಗೂ ನನ್ನ ಕಿವಿಯಲ್ಲಿ ಅನುರಣನಗೊಳ್ಳುತ್ತಿದೆ.

೧೯೬೬ರಲ್ಲಿ ಕಲಬುರ್ಗಿಯವರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿ ಬಂದ ಮೇಲೆ ನನಗೆ ಇನ್ನೂ ಹೆಚ್ಚು ಹತ್ತಿರವಾದರು. ಮೈಸೂರು ಸರಕಾರದ ಶ್ರೀ ಬಸವೇಶ್ವರರ ಎಂಟನೇ ಶತಮಾನೋತ್ಸವ ಸಮಿತಿಯವರು ೧೯೬೭ರಲ್ಲಿ ಪ್ರಕಟಿಸಿದ 'ಶ್ರೀ ಬಸವೇಶ್ವರರು' ಗ್ರಂಥದಲ್ಲಿ ಕಲಬುರ್ಗಿಯವರು 'ಬಸವಣ್ಣನವರ ಜೀವನ ಚರಿತ್ರೆ' ಕುರಿತು ಸಂಶೋಧನಾತ್ಮಕ ಲೇಖನ ಬರೆದಿದ್ದರು. ನಾನದನ್ನು ತುಂಬ ಮೆಚ್ಚಿಕೊಂಡಿದ್ದೆ. ಅದೇ ಗ್ರಂಥದಲ್ಲಿ 'ಬಸವಣ್ಣನವರ ವಚನಗಳ ಸಾಹಿತ್ಯ ಮೌಲ್ಯ' ಎಂಬ ನನ್ನ ಲೇಖನವೂ ಪ್ರಕಟವಾಗಿತ್ತು. ನಮ್ಮ ಸ್ನೇಹ ಸಂವರ್ಧನೆಗೆ ಇದೂ ಒಂದು ಕಾರಣವಾಗಿತ್ತು.

ನಮ್ಮ ನೆರೆಮನೆಯವರಾಗಿ ಕಲಬುರ್ಗಿಯವರು ಎಷ್ಟು ಹತ್ತಿರವಾಗಿದ್ದರೊ ಮಾನಸಿಕವಾಗಿ ಇನ್ನೂ ಹೆಚ್ಚು ಹತ್ತಿರದವರಾಗಿದ್ದರು. ಸುಮಾರು ಐವತ್ತು ವರುಷಗಳ ಒಡನಾಟದಿಂದಾಗಿ ನೂರಾರು ನೆನಪುಗಳು ಈ ಸಂದರ್ಭದಲ್ಲಿ ನುಗ್ಗಿ ಬರುತ್ತಿವೆ. ಕೆಲವನ್ನು

ಮಾತ್ರ ಇಲ್ಲಿ ಹೇಳಲು ಸಾಧ್ಯ. ಅದರಲ್ಲಿಯೂ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಸಂಬಂಧಿಸಿದಂತೆ ಅವನ್ನು ಅನಿವಾರ್ಯವಾಗಿ ಸೀಮಿತಗೊಳಿಸಿಕೊಂಡಿದ್ದೇನೆ.

ಕಲಬುರ್ಗಿಯವರು ಕನ್ನಡ ವಿಭಾಗಕ್ಕೆ ಬಂದ ಒಂದೆರಡು ವರ್ಷಗಳಲ್ಲಿ 'ದರ್ಪಣಾವಲೋಕನ' ಶೀರ್ಷಿಕೆಯಲ್ಲಿ ಎರಡು ಲೇಖನಗಳನ್ನು ಬರೆದರು. ಒಂದು ಲೇಖನ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸುತ್ತಿದ್ದ ''ಜರ್ನಲ್''-ದಲ್ಲಿ ಪ್ರಕಟವಾಗಿದ್ದರೆ ಇನ್ನೊಂದು ಲೇಖನ ಪ್ರಸಾರಾಂಗದ ಕನ್ನಡ ತ್ರೈಮಾಸಿಕ 'ಕರ್ನಾಟಕ ಭಾರತಿ'ಯಲ್ಲಿ ಬೆಳಕು ಕಂಡಿತು. ಎರಡರಲ್ಲೂ ಪ್ರೊ.ಡಿ.ಎಲ್.ಎನ್. ಅವರು ಸಂಪಾದಿಸಿದ ಕೇಶಿರಾಜನ ಶಬ್ದಮಣಿದರ್ಪಣದ ಸೂತ್ರ ವೃತ್ತಿ ಟೀಕೆಗಳಲ್ಲಿಯ ಸ್ಖಾಲಿತ್ಯಗಳನ್ನು ಕಲಬುರ್ಗಿಯವರು ತೋರಿಸಿದ್ದರು. ಆ ಕಾಲಕ್ಕೆ ಈ ಬರೆಹಗಳು ಅನೇಕ ವಿದ್ವಾಂಸರ ಹುಬ್ಬೇರಿಸುವಂತೆ ಮಾಡಿದವು. ಪ್ರೊ.ಡಿ.ಎಲ್.ಎನ್.ಅವರು ತಾವು ಸಂಪಾದಿಸಿದ ಗ್ರಂಥದ ಮರು ಮುದ್ರಣದಲ್ಲಿ ಆ ದೋಷಗಳನ್ನು ತಿದ್ದಿಕೊಂಡು ಹೆಚ್ಚು ಸಮರ್ಪಕವಾಗುವಂತೆ ಮಾಡಿದ್ದು ಕಂಡುಬರುತ್ತದೆ. (೧೯೭೧ರಲ್ಲಿ ಪ್ರೊ.ಡಿ.ಎಲ್.ಎನ್. ನಿಧನರಾದಾಗ ಡಾ.ಕಲಬುರ್ಗಿಯವರು ಅವರ ಬಗ್ಗೆ ಬರೆದ ಲೇಖನವೊಂದರಲ್ಲಿ ಡಿ.ಎಲ್.ಎನ್. ಅವರ ದೊಡ್ಡಮನಸ್ಸನ್ನು ನೆನೆದು ಗೌರವ ಸೂಚಿಸಿದ್ದುಂಟು.)

ಡಾ.ಕಲಬುರ್ಗಿಯವರು 'ಪ್ರಸಾರಾಂಗ'ದ ಆಫೀಸಿಗೆ ಬಂದಾಗಲೆಲ್ಲ ಕನ್ನಡಕ್ಕಾಗಿಯೇ ಒಂದು ತ್ರೈಮಾಸಿಕದ ಪ್ರಕಟನೆಯ ಆವಶ್ಯಕತೆಯ ಬಗ್ಗೆ ನನ್ನೊಡನೆ ಚರ್ಚಿಸುತ್ತಿದ್ದರು. ಮುಂದೆ ಒಂದು ವರ್ಷದಲ್ಲಿಯೇ ಅವರ ಹಂಬಲ ಈಡೇರುವಂತಾಯಿತು. ೧೯೬೬ರಲ್ಲಿ 'ಕರ್ನಾಟಕ ಭಾರತಿ'ಯ ಮೊದಲ ಸಂಚಿಕೆ ಪ್ರಕಟವಾಯಿತು. ಕಲಬುರ್ಗಿಯವರು ಅದಕ್ಕೆ 'ಸಹಾಯಕ ಸಂಪಾದಕರು' ಎಂದು ಇದ್ದರೂ ಪತ್ರಿಕೆಗೆ ಸಂಬಂಧಪಟ್ಟ ಎಲ್ಲ ಕೆಲಸವನ್ನೂ ಅತ್ಯಂತ ದಕ್ಷತೆಯಿಂದ, ಅಚ್ಚುಕಟ್ಟಾಗಿ ಅವರೇ ನಿರ್ವಹಿಸುತ್ತಿದ್ದರು. ಹೀಗೆ ಯಾವಾಗಲೂ ಹೊಸ ಹೊಸ ಯೋಜನೆಗಳನ್ನು ತಲೆಯಲ್ಲಿ ತುಂಬಿಕೊಂಡಿರುತ್ತಿದ್ದ ಅವರ ನೆರವನ್ನು ಪ್ರಸಾರಾಂಗದ ನಿರ್ದೇಶಕನಾಗಿ ನಾನು ಮರೆಯುವಂತಿಲ್ಲ.

ಈ ಪತ್ರಿಕೆಯ ಗುಣಮಟ್ಟದ ಬಗ್ಗೆ ಕಲಬುರ್ಗಿಯವರು ಎಷ್ಟು ಕಾಳಜಿ ವಹಿಸುತ್ತಿದ್ದರು ಎಂದರೆ 'ಕರ್ನಾಟಕ ಭಾರತಿ' ಐದು ವರುಷ ಪೂರೈಸುತ್ತಿದ್ದಾಗ ಅದನ್ನು ಜನಪದ ಸಾಹಿತ್ಯದ ವಿಶೇಷ ಸಂಚಿಕೆಯಾಗಿ ತರಲು ಯೋಚಿಸತೊಡಗಿದರು. ಇದನ್ನೇ ನೆಪ ಮಾಡಿಕೊಂಡು ೧೯೭೩ರಲ್ಲಿ ಕನ್ನಡ ವಿಭಾಗದಿಂದ ಒಂದು ಜಾನಪದ ಸಮ್ಮೇಳನವನ್ನೇ ಸಂಘಟಿಸಲು ಅವರು ವಿಭಾಗದ ಮುಖ್ಯಸ್ಥರ ಹಾಗೂ ಸಹೋದ್ಯೋಗಿಗಳ ಮನಸ್ಸು ಒಲಿಸಿದರು. ಶಿವರಾಮ ಕಾರಂತರಿಂದ ಸಮ್ಮೇಳನದ ಉದ್ಘಾಟನೆಯೂ ಆಯಿತು. ಈ ಒಂದು ಒಳ್ಳೆಯ ಉಪಕ್ರಮ ಇಂದಿಗೂ ಮುಂದುವರಿದಿದ್ದು ಕನ್ನಡ ಅಧ್ಯಯನ ಪೀಠ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿವರ್ಷ ಜಾನಪದ ಸಮ್ಮೇಳನವನ್ನು ಏರ್ಪಡಿಸುತ್ತ ಬಂದಿದೆ. ಅಲ್ಲಿ ಮಂಡಿತವಾದ ಪ್ರಬಂಧಗಳ

ಸಂಗ್ರಹಗಳು 'ಜಾನಪದ ದರ್ಶನ' ಮಾಲಿಕೆಯಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾಗುತ್ತ ಬಂದಿವೆ.

ವಿಶ್ವವಿದ್ಯಾಲಯದ ಬೆಳ್ಳಿಹಬ್ಬದ ಸಂದರ್ಭದಲ್ಲಿ(೧೯೭೫–೭೬) 'ಕನ್ನಡ ಭಾಷಾ ಪ್ರಭೇದ'ಗಳಿಗೆ ಸಂಬಂಧಪಟ್ಟಂತೆ ಐದು ನೂರು ಪುಟಗಳ ವಿಶೇಷ ಸಂಚಿಕೆಯಾಗಿ 'ಕರ್ನಾಟಕ ಭಾರತಿ' ಪ್ರಕಟವಾಯಿತು. 'ಈ ಲೋಕದೊಳಗೆ ಮತ್ತನಂತ ಲೋಕಗಳು' ಎಂಬ ಬಸವಣ್ಣನ ಮಾತಿನಂತೆ 'ಈ ಕನ್ನಡದೊಳಗೆ ಮತ್ತನಂತ ಕನ್ನಡಗಳು' ಎಂಬುದನ್ನು ಈ ವಿಶೇಷ ಸಂಚಿಕೆಯ ಮೂವತ್ತು ಲೇಖನಗಳೂ ಪ್ರತಿಬಿಂಬಿಸುತ್ತವೆ. ಇದನ್ನು ರೂಪಿಸುವಲ್ಲಿ ಕಲಬುರ್ಗಿಯವರು ಪಟ್ಟ ಪರಿಶ್ರಮವನ್ನು ನಾನು ಬಲ್ಲೆ. ಒಂದು ದೃಷ್ಟಿಯಲ್ಲಿ ಪ್ರರಿಶ್ರಮವನ್ನೇ ಪರಮಾನಂದವಾಗಿ ಅವರು ಪರಿಗಣಿಸುತ್ತಿದ್ದರು. 'ಕರ್ನಾಟಕ ಭಾರತಿ'ಯ ಯಶಸ್ಸನ್ನು ಕಂಡುಕೊಂಡೇ ವಿಶ್ವವಿದ್ಯಾಲಯ 'ವಿಜ್ಞಾನ ಭಾರತಿ', 'ಮಾನವಿಕ ಭಾರತಿ' ಷಾಣ್ಮಾಸಿಕಗಳನ್ನು ಪ್ರಕಟಿಸಲು ಮುಂದೆ ಬಂದಿತು ಎನ್ನಬಹುದು. ವಿಶ್ವವಿದ್ಯಾಲಯದ ಎಲ್ಲ ವಿಭಾಗಗಳ ಬರೆಹಗಳಿಗಾಗಿಯೇ 'ವಿದ್ಯಾರ್ಥಿ ಭಾರತಿ'ಯೂ ಪ್ರಕಟವಾಗುವಂತಾಯಿತು. ತಮ್ಮ ಬೋಧನ ಕ್ರಮದಿಂದಲ್ಲದೆ ಇಂಥ ಪ್ರೋತ್ಸಾಹಕರ ಚಟುವಟಿಕೆಗಳಿಂದಲೂ ಕಲಬುರ್ಗಿಯವರು ವಿದ್ಯಾರ್ಥಿಗಳಿಗೆ ಅಚ್ಚು ಮೆಚ್ಚಿನವರಾದರು.

'ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಸಂಪ್ರಬಂಧ ವನ್ನೊಳಗೊಂಡಂತೆ ಡಾ.ಕಲಬುರ್ಗಿಯವರ ಇಪ್ಪತ್ತಕ್ಕೂ ಹೆಚ್ಚು ಕೃತಿಗಳು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟವಾಗಿವೆ. ಹಲವಾರು ಪ್ರಶಸ್ತಿಗಳನ್ನೂ ಪಡೆದಿವೆ. ಪುಸ್ತಕಗಳಲ್ಲಿ ಒಂದೂ ಮುದ್ರಣ ದೋಷಗಳುಳಿಯದಂತೆ ಅವರು ಪ್ರೂಫು ನೋಡುತ್ತಿದ್ದ ರೀತಿ, ಯಾವ್ಯಾವ ಚಿತ್ರಗಳು ಎಲ್ಲಿ ಬರಬೇಕು, ಮುಖಪುಟ ಹೇಗಿರಬೇಕು–ಇತ್ಯಾದಿಗಳ ಬಗ್ಗೆ ಅವರು ವಹಿಸುತ್ತಿದ್ದ ಕಾಳಜಿ ಅಪೂರ್ವವಾದದ್ದು. ಪ್ರಾಧ್ಯಾಪಕರಾಗಿ, ವಿದ್ವಾಂಸರಾಗಿ, ಲೇಖಕರಾಗಿ, ಪ್ರಸಾರಾಂಗದೊಡನೆ ಅವರಷ್ಟು ಸಹಕರಿಸಿದವರು ವಿರಳವೆಂದೇ ಹೇಳಬೇಕು.

ವಿಶ್ವವಿದ್ಯಾಲಯದ ಬಸವೇಶ್ವರ ಪೀಠ, ಹಂಪಿ ಕನ್ನಡ ವಿಶ್ವವಿದ್ಯಾಲಯ, ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಹಳಕಟ್ಟಿ ಸಂಶೋಧನ ಸಂಸ್ಥೆ, ಬಸವರಾಜ ಕಟ್ಟೀಮನಿ ಟ್ರಸ್ಟ್– ಇವೇ ಮೊದಲಾದ ಸಂಸ್ಥೆಗಳಿಗೆ ಭದ್ರವಾದ ಬುನಾದಿ ಹಾಕಿದ್ದಲ್ಲದೆ ಅವುಗಳ ಕಾರ್ಯಾಚರಣೆಗೆ ಹೊಸ ಸ್ವರೂಪವನ್ನು ತಂದುಕೊಟ್ಟರು. ಅವು ಒಂದೊಂದರದೂ ಒಂದು ಇತಿಹಾಸವೇ. ಅಂಥ ಇತಿಹಾಸ ನಿರ್ಮಾಣ ಸಾಮರ್ಥ್ಯ ಡಾ.ಕಲಬುರ್ಗಿಯವರದಾಗಿತ್ತು. ಇದಕ್ಕೆ ಒಂದು ಉದಾಹರಣೆಯೆಂದರೆ ಬಸವರಾಜ ಕಟ್ಟೀಮನಿ ಟ್ರಸ್ಟ್‌ನ ಉದ್ಘಾಟನೆಯ ಸಂದರ್ಭ. ಇದರಲ್ಲಿ ನಾನೂ ಭಾಗವಹಿಸಿದ್ದರಿಂದ ನನಗೆ ಚೆನ್ನಾಗಿ ನೆನಪಿದೆ. ಸಾಮಾನ್ಯವಾಗಿ ಇಂಥ ಟ್ರಸ್ಟ್‌ಗಳು ಉದ್ಘಾಟನೆಯಾದ ನಂತರ ಸರಕಾರದಿಂದ ಹಣ ಬಂದಮೇಲೆ ತಮ್ಮ ಚಟುವಟಿಕೆಗಳನ್ನು ಪ್ರಾರಂಭಿಸುತ್ತವೆ. ಆದರೆ

ಕಲಬುರ್ಗಿಯವರು ಉದ್ಘಾಟನೆಯ ಸಮಾರಂಭದಲ್ಲಿಯೇ ಕಟ್ಟೀಮನಿಯವರ ಎರಡು ಕೃತಿಗಳನ್ನು ಬಿಡುಗಡೆ ಮಾಡಿಸಿದರು. ಒಂದು 'ಕಾದಂಬರಿಕಾರನ ಕಥೆ'ಯ ಪುನರ್ ಮುದ್ರಣವಾದರೆ, ಇನ್ನೊಂದು 'ಮಾಡಿ ಮಡಿದವರು' ಕಾದಂಬರಿಯ ಇಂಗ್ಲಿಷ್ ಅನುವಾದ. ಸಂಸ್ಕೃತಿ ಇಲಾಖೆಯ ಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳ ಅವರು ಡಾ.ಕಲಬುರ್ಗಿಯವರ ಕರ್ತವ್ಯ ದಕ್ಷತೆಯನ್ನು ಕಂಡುಕೇಳಿ ಬೆರಗಾಗಿ ಬಿಟ್ಟರು. ಮುಂದೆ ಮೂರು ವರ್ಷಗಳ ಅವಧಿಯಲ್ಲಿಯೇ ಟ್ರಸ್ಟಿನ ಇತರ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಲೇ ಕಟ್ಟೀಮನಿಯವರ ಸಮಗ್ರ ಕಥೆ, ಕಾದಂಬರಿ ಮತ್ತು ಲೇಖನಗಳ ಹದಿಮೂರು ಸಂಪುಟಗಳನ್ನು ಬಿಡುಗಡೆಗೊಳ್ಳುವಂತೆ ನೋಡಿಕೊಂಡ ಶ್ರೇಯಸ್ಸು ಅವರದಾಗಿತ್ತು. ಇಂಥ ಉದಾಹರಣೆಗಳು ಇನ್ನೂ ಅನೇಕ ಇವೆ.

'ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು' ಎಂದು ಕಡೆಂಗೋಡ್ಲು ಶಂಕರಭಟ್ಟರ ಕವಿತೆಯೊಂದು ಹೇಳುತ್ತದೆ. ತಮ್ಮ ಸಾಧನೆಯ 'ಮಹಾಮಾರ್ಗ'ದಲ್ಲಿ ಅನೇಕ 'ಅಗ್ನಿಕುಂಡ'ಗಳನ್ನು ಕಲಬುರ್ಗಿಯವರು ದಾಟಬೇಕಾಯಿತು. ಇಷ್ಟಾದರೂ ಅವರ ಕಾಯಕಶ್ರದ್ಧೆ ಜೀವನೋತ್ಸಾಹಗಳಿಗೆ ಎಂದೂ ಕುಂದುಂಟಾಗಲಿಲ್ಲ.

೧೯೯೮ರಲ್ಲಿ ಕಲಬುರ್ಗಿಯವರ 'ಅರುವತ್ತರ ಅಭಿನಂದನ' ಸಮಾರಂಭ 'ನ ಭೂತೋ ನ ಭವಿಷ್ಯತಿ' ಎನ್ನುವ ರೀತಿಯಲ್ಲಿ ಧಾರವಾಡದ ಕಲಾಭವನದಲ್ಲಿ ನೆರವೇರಿತು. ಆಗ ಅವರು ತಮ್ಮ ಭಾಷಣದ ಕೊನೆಯಲ್ಲಿ ಹೇಳಿದ ಒಂದು ಮಾತು ಇನ್ನೂ ನನ್ನ ನೆನಪಿನಲ್ಲಿದೆ: ''ವ್ಯಕ್ತಿಕೇಂದ್ರಿತ ಬದುಕಿಗಿಂತ, ಸಮಾಜಕೇಂದ್ರಿತ ಬದುಕು ಹೆಚ್ಚು ದುಃಖಮಯವಾದುದು. ....ನನಗೆ ಈ ದುಃಖದಲ್ಲಿಯೇ ಸುಖವಿದೆ. ಈ ದುಃಖದ ಆಚೆ ಇನ್ನೂ ದೊಡ್ಡ ಸುಖವಿದೆ ಎಂದು ನನಗೆ ತಿಳಿದಿದೆ........ ಆದ್ದರಿಂದ ನಾನು ಸುದೈವಿಯೆಂದೇ ಹೇಳಬೇಕು.'' ಇಂಥ ವ್ಯಕ್ತಿಯನ್ನು ಕಳೆದುಕೊಂಡ ನಾವು ದುರ್ದೈವಿಗಳು, ಅಷ್ಟೇ.

'ಕಲಬುರ್ಗಿ ನೆನಪು'
೨೦೧೬

■■

ಚೆನ್ನವೀರ ಕಣವಿ

(ಬದುಕು - ಬರೆಹ)

ಜನನ : ಹೊಂಬಳ, ತಾ. ಗದಗ, ಜಿ. ಗದಗ ೨೮ ಜೂನ್ ೧೯೨೮

ಶಿಕ್ಷಣ : ಎಂ.ಎ.ಕನ್ನಡ (ಕರ್ನಾಟಕ ವಿಶ್ವವಿದ್ಯಾಲಯ) ೧೯೫೨

ವೃತ್ತಿ : ಕಾರ್ಯದರ್ಶಿ : ವ್ಯಾಸಂಗ ವಿಸ್ತರಣ – ೧೯೫೨
ಪ್ರಕಟನ ವಿಭಾಗ ಕ.ವಿ.ವಿ.
ನಿರ್ದೇಶಕ : ಪ್ರಸಾರಾಂಗ ಕ.ವಿ.ವಿ. ೧೯೫೬
ಗೌರವ ಸಂದರ್ಶಕ ಪ್ರಾಧ್ಯಾಪಕ: ೧೯೮೧ – ೮೩
ಕನ್ನಡ ಅಧ್ಯಯನ ಪೀಠ ಕ.ವಿ.ವಿ.
ಪ್ರಸಾರಾಂಗದಿಂದ ನಿವೃತ್ತಿ ೧೯೮೩

ಕೃತಿಗಳು – ಕಾವ್ಯ

ಕಾವ್ಯಾಕ್ಷಿ : ಕಲ್ಪನಾ ಗ್ರಂಥಮಾಲೆ, ಧಾರವಾಡ, ೧೯೪೯

ಭಾವಜೀವಿ : ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ, ೧೯೫೦

ಆಕಾಶಬುಟ್ಟಿ : ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೫೩

ಮಧುಚಂದ್ರ : ಶಾರದಾ ಪ್ರಕಟನಾಲಯ, ಬೆಂಗಳೂರು, ೧೯೫೪

ದೀಪಧಾರಿ : ಸುರುಚಿ ಪ್ರಕಾಶನ, ಮೈಸೂರು, ೧೯೫೬

ಮಣ್ಣಿನ ಮೆರವಣಿಗೆ : ಶಾರದಾ ಪ್ರಕಟನಾಲಯ, ಬೆಂಗಳೂರು, ೧೯೬೦

ನೆಲ-ಮುಗಿಲು : ಶಾರದಾ ಮಂದಿರ, ಮೈಸೂರು, ೧೯೬೫,೧೯೭೧

ಎರಡು ದಡ : ಗೀತಾ ಬುಕ್ ಹೌಸ್, ಮೈಸೂರು, ೧೯೬೯

ನಗರದಲ್ಲಿ ನೆರಳು : ತ. ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೪

ಚಿರಂತನ ದಾಹ (ಆಯ್ದ ಕವನಗಳು) : ವಿಶ್ವಕನ್ನಡ ಸಮ್ಮೇಳನ, ಮೈಸೂರು ೧೯೮೯

ಜೀವಧ್ವನಿ : ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, ೧೯೮೦, ೧೯೮೩, ೨೦೦೭

ಹಕ್ಕಿಪುಚ್ಚ (ಮಕ್ಕಳ ಪದ್ಯಗಳು) : ಭಾರತೀ ಸಾಹಿತ್ಯ ಭಂಡಾರ ವಿಜಾಪುರ, ೧೯೮೫

ಕಾರ್ತಿಕದ ಮೋಡ : ಶಾರದಾ ಪ್ರಕಟನಾಲಯ, ಬೆಂಗಳೂರು, ೧೯೮೬

ಹೂವು ಹೊರಳುವವು ಸೂರ್ಯನ ಕಡೆಗೆ :

(ಆಯ್ದ ಗೇಯ ಕವನಗಳು) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೭

(ವಿವಿಧ ಪ್ರಕಾಶಕರಿಂದ ೫ ಆವೃತ್ತಿಗಳು)

ಹೊಂಬೆಳಕು : (ಮೊದಲ ೧೨ ಸಂಗ್ರಹಗಳ ಸಂಪುಟ) ೧೯೮೯

ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ಜೀನಿಯಾ : ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೦

ಕಣವಿ ಸಮಗ್ರ ಕಾವ್ಯ : ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೧೯೯೬

ಬರೆದು ತೀರದ ಬದುಕು : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು ೨೦೦೦

ಸುನೀತ ಸಂಪದ : ಲೋಹಿಯಾ ಪ್ರಕಾಶನ ಬಳ್ಳಾರಿ, ೨೦೦೨

ಕಣವಿ ಸಮಗ್ರ ಕಾವ್ಯ : ಸಂವಹನ ಪ್ರಕಾಶನ, ಮೈಸೂರು, ೨೦೦೩

ಚಿಣ್ಣರ ಲೋಕವ ತೆರೆಯೋಣ :(ಮಕ್ಕಳ ಪದ್ಯಗಳು)

ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೦೬,೨೦೦೮, ೨೦೧೪

ಮಾನಸ ಪೂಜೆ : ಸಾಹಿತ್ಯ ಸಿರಿ, ಸಿರಿಗೆರೆ, ೨೦೦೬

ನೀವೇ ಪ್ರಮಾಣು : ಸುಮುಖ ಪ್ರಕಾಶನ, ಬೆಂಗಳೂರು, ೨೦೦೭

ಕಣವಿ ಚುಟುಕುಗಳು : ವೈದ್ಯವಾರ್ತಾ ಪ್ರಕಾಶನ, ಮೈಸೂರು, ೨೦೦೯

ಜೀವ - ಜೀವಾಳ (ಆಯ್ದ ಕವನಗಳು) : ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೧

ಭೂಮಿ - ಬದುಕು : ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೨

ಕಣವಿ ಕಾವ್ಯ ಭಂಡಾರ : (ಎರಡು ಸಂಪುಟಗಳು) ಕನ್ನಡ ಮತ್ತು ೨೦೦೯

ಸಂಸ್ಕೃತಿ ಇಲಾಖೆ, ಬೆಂಗಳೂರು,

ಗದ್ಯ

ವಿಮರ್ಶೆ - ಪ್ರಬಂಧ ಇತ್ಯಾದಿ

ಸಾಹಿತ್ಯ ಚಿಂತನ : ಮಿಂಚಿನಬಳ್ಳಿ ಗ್ರಂಥಮಾಲೆ, ಧಾರವಾಡ, ೧೯೬೬
ಕಾವ್ಯಾನುಸಂಧಾನ : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೧
ಸಮಾಹಿತ : ಭಾಂಡಗೆ ಪ್ರಕಾಶನ, ಗದಗ, ೧೯೭೭
ಮಧುರಚೆನ್ನ : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೪
ಸಮತೋಲನ : ಮಿಂಚಿನಬಳ್ಳಿ ಗ್ರಂಥಮಾಲೆ, ಹುಬ್ಬಳ್ಳಿ, ೧೯೮೯
ವಚನಾಂತರಂಗ : ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ, ೧೯೯೯
ಶುಭನುಡಿಯೆ ಹಕ್ಕಿ : ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೦೦
ಸಾಹಿತ್ಯ ಸಮಾಹಿತ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬
ಸದ್ಭಾವ : ಸಂವಹನ ಪ್ರಕಾಶನ, ಮೈಸೂರು, ೨೦೦೮
ಕಣವಿ ಸಮಗ್ರ ಗದ್ಯ : (ಎರಡು ಸಂಪುಟಗಳು) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯
ಬೇಂದ್ರೆ ಕಾವ್ಯದ ಕುಹುಕ್ಕುಹೂ : ಡಾ|| ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ, ೨೦೧೨
ಅವಿನಾಭಾವ : ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ನಿಯಮಿತ ಗುಲಬರ್ಗಾ, ೨೦೧೪
ಸ್ಮೃತಿ ಸೌರಭ : ಮನೋಹರ ಗ್ರಂಥ ಮಾಲಾ, ಧಾರವಾಡ, ೨೦೧೬

ಸಂಪಾದನೆ

ನವಿಲೂರು ಮನೆಯಿಂದ (ಇತರರೊಡನೆ) ೧೯೫೨
ನವ್ಯ ಧ್ವನಿ (ಇತರರೊಡನೆ) ಸಮಾಜ ಪುಸ್ತಕಾಲಯ ಧಾರವಾಡ, ೧೯೫೬
ನಮ್ಮೆಲ್ಲರ ನೆಹರು (ಇತರರೊಡನೆ) ಭಾವಸಂಗಮ, ಹಿಂದಿ ಪ್ರಚಾರಸಭಾ, ಧಾರವಾಡ, ೧೯೬೪
ನೈವೇದ್ಯ : ಬಾಲಲೀಲಾ ಮಹಾಂತ ಶಿವಯೋಗಿಶ್ವರ ಗ್ರಂಥಮಾಲೆ, ಧಾರವಾಡ, ೧೯೬೦
ಕನ್ನಡದ ಕಾಲು ಶತಮಾನ (ಇತರರೊಡನೆ) ಮಿಂಚಿನಬಳ್ಳಿ ಗ್ರಂಥಮಾಲೆ, ಧಾರವಾಡ, ೧೯೬೫
ಸಿದ್ಧಿ ವಿನಾಯಕ ಮೋದಕ : ಗೋಕಾಕ ಷಷ್ಟಿಪೂರ್ತಿ ಅಭಿನಂದನ ಸಮಿತಿ, ಧಾರವಾಡ ೧೯೬೯
೧೯೮೦ : ಕವಿತೆಗಳು : ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು, ೧೯೮೦
ಜೀವನಸಿದ್ಧಿ (ಇತರರೊಡನೆ) ಎಸ್. ಶೆಟ್ಟರ, ಕೊಪ್ಪಳ, ೧೯೭೧

ಸುವರ್ಣ ಸಂಪುಟ (ಇತರರೊಡನೆ) ಮೈಸೂರು ವಿಶ್ವವಿದ್ಯಾನಿಲಯ, ೧೯೮೦

ರತ್ನ ಸಂಪುಟ (ಇತರರೊಡನೆ) ಮೈಸೂರು ವಿಶ್ವವಿದ್ಯಾನಿಲಯ, ೧೯೮೫

ಆಧುನಿಕ ಕನ್ನಡ ಕಾವ್ಯ (ಇತರರೊಡನೆ) Modern Kannada Poetry
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭

ದಶವಾರ್ಷಿಕ ಕವಿತೆಗಳು (ಇತರರೊಡನೆ) ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು, ೧೯೮೫

ಎರಡು ದಶಕದ ಕವಿತೆಗಳು (ಇತರರೊಡನೆ) ಕೇಂದ್ರ ಸಾಹಿತ್ಯ ಅಕಾಡೆಮಿ,
ನವದೆಹಲಿ

ಅನುಭಾವ ಪಥ (ಇತರರೊಡನೆ) : ಉದ್ದಾನ ಶ್ರೀ ಪ್ರಕಾಶನ, ಸಿದ್ಧಗಂಗಾಮಠ,
ತುಮಕೂರು, ೨೦೧೦

ಬಾಬಾ ಫರೀದ್ : (ಭಾಷಾಂತರ) ಕೇಂದ್ರ ಸಾಹಿತ್ಯ ಅಕಾಡೆಮಿ,
ನವದೆಹಲಿ, ೧೯೯೩

ಪ್ರಶಸ್ತಿ / ಬಹುಮಾನ

- ಮುಂಬಯಿ ರಾಜ್ಯದ ಪ್ರಥಮ ಬಹುಮಾನ :
  'ಆಕಾಶಬುಟ್ಟಿ' ಕವನ ಸಂಕಲನಕ್ಕೆ, ೧೯೫೫
- ವಿಶಾಲ ಮೈಸೂರು ರಾಜ್ಯ ಸಂಸ್ಕೃತಿ ಪ್ರಸಾರ ಇಲಾಖೆ ಬಹುಮಾನ :
  'ದೀಪಧಾರಿ' ಕವನ ಸಂಕಲನಕ್ಕೆ, ೧೯೫೭
- ವಿಶಾಲ ಮೈಸೂರು ರಾಜ್ಯ ಸಂಸ್ಕೃತಿ ಪ್ರಸಾರ ಇಲಾಖೆ ಬಹುಮಾನ :
  'ನೆಲ–ಮುಗಿಲು' ಕವನ ಸಂಕಲನಕ್ಕೆ, ೧೯೬೬
- ಜ.ಚ.ನಿ.ಯವರಿಂದ 'ಕವನ ಕಲಾರವಿ' ಪ್ರಶಸ್ತಿಯೊಂದಿಗೆ
  ಚಿನ್ನದ ಪದಕ, ೧೯೬೭
- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ :
  'ಜೀವಧ್ವನಿ' ಕವನ ಸಂಕಲನಕ್ಕೆ, ೧೯೮೨
- ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವಪ್ರಶಸ್ತಿ, ೧೯೮೫
- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೧೯೮೯
- ಬೆಂಗಳೂರಿನ ಸಂಗೀತಗಂಗಾ ಸಂಸ್ಥೆಯಿಂದ
  'ಸುನೀತ ಸಾಮ್ರಾಟ್' ಪ್ರಶಸ್ತಿ, ೧೯೯೬
- ಧಾರವಾಡ – ಹುಬ್ಬಳ್ಳಿ ಮಹಾನಗರ ಪಾಲಿಕೆಯಿಂದ ಪೌರಸನ್ಮಾನ, ೧೯೯೬
- ಸಂಕೇಶ್ವರ ನಾಗರಿಕರಿಂದ ಪೌರಸನ್ಮಾನ, ೧೯೯೭
- ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಕೃತಿ
  ಇಲಾಖೆಯ ಎಮೆರಿಟಸ್ ಫೆಲೋಶಿಪ್ ೧೯೯೬ ರಿಂದ ೧೯೯೮

- ಎಸ್.ಆರ್.ಪಾಟೀಲ (ಗುಲ್ಬರ್ಗಾ) ಪ್ರತಿಷ್ಠಾನ ಪ್ರಶಸ್ತಿ, ೧೯೯೭
- ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಬೆಂಗಳೂರು, 'ಸಾಹಿತ್ಯ ಚಿಂತಾಮಣಿ' ಪ್ರಶಸ್ತಿ ೧೯೯೯
- ಇಳಕಲ್ ಚಿತ್ತರಗಿ ವಿಜಯಮಹಾಂತೇಶ ಮಠದ 'ಬಸವಕಾರುಣ್ಯ ಪ್ರಶಸ್ತಿ' ೧೯೯೬
- ಕರ್ನಾಟಕ ಸರಕಾರದ 'ಪಂಪ ಪ್ರಶಸ್ತಿ', ಬನವಾಸಿ, ೧೯೯೯
- ಹಂಪಿ ಕನ್ನಡ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ 'ನಾಡೋಜ ಪ್ರಶಸ್ತಿ' ೨೦೦೨
- ಡಾ. ಮಲ್ಲಿನಕಾರ್ಜುನ ಮನಸೂರ ಪ್ರತಿಷ್ಠಾನ (ರಾಯಚೂರು) ಪ್ರಶಸ್ತಿ. ೨೦೦೪
- ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ, ೨೦೦೪
- ಬಸವರಾಜ ಮನಸೂರ್ ಪ್ರಶಸ್ತಿ , ಧಾರವಾಡ, ೨೦೦೬
- ಭಾರತೀಯ ಲಲಿತಕಲಾ ಸಂಸ್ಥೆ, ಬೆಂಗಳೂರು : ' ಕರ್ನಾಟಕ ಕವಿರತ್ನ ಪ್ರಶಸ್ತಿ' ೨೦೦೬
- ವಿಶ್ವವೀರಶೈವ ಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು, : 'ಕಾಯಕ ಶ್ರೀ ಪ್ರಶಸ್ತಿ' ೨೦೦೮
- ಸಂದೇಶ ಕನ್ನಡ ಸಾಹಿತ್ಯ ಪ್ರಶಸ್ತಿ ಮಂಗಳೂರು, : ೨೦೦೭
- ಅ.ನ.ಕೃ. ನಿರ್ಮಾಣ ಪ್ರಶಸ್ತಿ ಬೆಂಗಳೂರು, ೨೦೦೭
- ಉಡುಪಿ ಪೇಜಾವರ ಮಠದಿಂದ 'ಶ್ರೀಕೃಷ್ಣಪ್ರಶಸ್ತಿ'
- ಯಕ್ಸಂಬಾ ಕನ್ನಡ ಬಳಗದಿಂದ 'ಕನ್ನಡ ಕುಲ ತಿಲಕ' ಪ್ರಶಸ್ತಿ
- ಸಿರಿಗನ್ನಡ ರಾಷ್ಟ್ರೀಯ ರತ್ನ ಪ್ರಶಸ್ತಿ ಬೆಳಗಾವಿ ೨೦೧೦
- ಬೇಂದ್ರೆ ರಾಷ್ಟ್ರೀಯ ಕಾವ್ಯ ಪ್ರಶಸ್ತಿ ಧಾರವಾಡ, ೨೦೧೨
- ಬಸವವೇದಿಕೆ, ಬೆಂಗಳೂರು : 'ಬಸವ ಶ್ರೀ' ಪ್ರಶಸ್ತಿ, ೨೦೧೩
- ಮೃತ್ಯುಂಜಯ – ಮಹಾಂತ ಪ್ರಶಸ್ತಿ: ಮುರುಘಾಮಠ ಧಾರವಾಡ, ೨೦೧೩
- ದೂರದರ್ಶನ 'ಚಂದನ ಪ್ರಶಸ್ತಿ' ಬೆಂಗಳೂರು ೨೦೧೪
- ವಿ. ಕೃ. ಗೋಕಾಕ ಪ್ರಶಸ್ತಿ ಬೆಂಗಳೂರು, ೨೦೧೪
- ಆಳ್ವಾಸ ನುಡಿಸಿರಿ ದಶಮಾನೋತ್ಸವ ಸನ್ಮಾನ, ೨೦೧೪

ಗೌರವ ಸದಸ್ಯತ್ವ - ಅಧ್ಯಕ್ಷತೆ ಇತ್ಯಾದಿ

- ಕೇಂದ್ರ ಸರಕಾರದ ಶಿಕ್ಷಣ ಇಲಾಖೆ :
  ಅಖಿಲಭಾರತ ಲೇಖಕರ ಪ್ರಥಮ
  ಶಿಬಿರಃ ಕನ್ನಡದ ಪ್ರತಿನಿಧಿ (ಡಾ. ಡಿ.ಎಸ್. ಕರ್ಕಿ.ಯರೊಡನೆ
  ಕೃಷ್ಣರಾಜ ಸಾಗರ – ಬೃಂದಾವನ) ೧೯೬೨
- ಗಣರಾಜ್ಯೋತ್ಸವ ರಾಷ್ಟ್ರೀಯ ಕವಿಸಮ್ಮೇಳನ, ನವದೆಹಲಿ :
  ಕನ್ನಡದ ಪ್ರತಿನಿಧಿ– ೧೯೬೫
- ಅ.ಭಾ. ಲೇಖಕರ ಸಮ್ಮೇಳನ, ಎರ್ನಾಕುಲಂ :
  ಕ.ವಿ.ವಿ ಪ್ರತಿನಿಧಿ ೧೯೬೫
- ಕೇಂದ್ರಸಾಹಿತ್ಯ / ಅಕಾಡೆಮಿ, ನವದೆಹಲಿ :
  ಜನರಲ್ ಕೌನ್ಸಿಲ್ ಮತ್ತು ಕನ್ನಡ ಸಲಹಾಸಮಿತಿ ಸದಸ್ಯ : ೧೯೬೯ –೧೯೭೯
- ನ್ಯಾಷನಲ್ ಬುಕ್ ಟ್ರಸ್ಟ್ : ಕನ್ನಡ ಸಲಹಾಸಮಿತಿ ಸದಸ್ಯ, ೧೯೭೭–೧೯೮೦
- ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ೧೯೭೮–೧೯೮೪
- ಕನ್ನಡ ವಿಶ್ವವಿದ್ಯಾಲಯ, ಹಂಪಿ : ಕಾರ್ಯಕಾರಿ ಸಮಿತಿ ಸದಸ್ಯ ೧೯೯೧–೧೯೯೪
- ಪಂಪ ಪ್ರಶಸ್ತಿ ಆಯ್ಕೆ ಸಮಿತಿ : ಸದಸ್ಯ ೧೯೯೩
- ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು : ಸದಸ್ಯ ೧೯೯೪–೧೯೯೬
- ಬೆಂಗಳೂರು ವಿಶ್ವವಿದ್ಯಾಲಯ : ಬೇಂದ್ರೆ ಕಾವ್ಯೋತ್ಸವ
  ಕವಿಗೋಷ್ಠಿ ಅಧ್ಯಕ್ಷತೆ : ೧೯೯೫
- ಮೈಸೂರು ದಸರಾ ಕವಿ ಸಮ್ಮೇಳನದ ಅಧ್ಯಕ್ಷತೆ– ೧೯೮೦
- ಕನ್ನಡ ರಾತ್ರಿ ಶಾಲೆಯ ಸುವರ್ಣಮಹೋತ್ಸವ
  ಕವಿ ಸಮ್ಮೇಳನದ ಅಧ್ಯಕ್ಷತೆ, ಮುಂಬಯಿ, ೧೯೯೫
- ಹಂಪಿ ಉತ್ಸವ : ಕವಿ ಸಮ್ಮೇಳನ ಅಧ್ಯಕ್ಷತೆ : ೧೯೯೫
- ಬೇಂದ್ರೆ ಶತಮಾನೋತ್ಸವ ವಿಚಾರ ಸಂಕಿರಣ, ಉದ್ಘಾಟನೆ
  ಆಕಾಶವಾಣಿ ಧಾರವಾಡ ೧೯೯೬
- ಸಂತ ಶಿಶುನಾಳ ಶರೀಫ್ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ : ೨೦೦೦
- ಪಂಪ ಪ್ರಶಸ್ತಿ ಆಯ್ಕೆಸಮಿತಿ ಅಧ್ಯಕ್ಷ : ೨೦೦೦
- ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ೨೦೦೧–೨೦೦೪

- ಗೋಕಾಕ ಚಳುವಳಿ ಅ.ಕ. ಕೇಂದ್ರ ಕನ್ನಡ ಕ್ರಿಯಾ ಸಮಿತಿ,
  ಧಾರವಾಡ, ಉಪಾಧ್ಯಕ್ಷ ೧೯೮೨
- ಗೋಕಾಕ ಚಳುವಳಿ ಕೇಂದ್ರ ಕನ್ನಡ ಕ್ರಿಯಾಸಮಿತಿ ಅಧ್ಯಕ್ಷ : ೧೯೮೩–೧೯೮೮
- ಗೌರವಾಧ್ಯಕ್ಷ, ಕನ್ನಡಶಕ್ತಿಕೇಂದ್ರ, ಬೆಂಗಳೂರು, ೧೯೮೫–೧೯೯೦
- ಮೈಸೂರು ಸಂಗೀತ ವಿದ್ಯಾಲಯ, ಮುಂಬಯಿ :
  ಕಾವ್ಯೋತ್ಸವ ಉದ್ಘಾಟನೆ – ೧೯೯೧
- ಪುಣೆ ಕರ್ನಾಟಕ ಸಂಘದ ನಾಡಹಬ್ಬ ಉದ್ಘಾಟನೆ ೧೯೯೧
- ಕನ್ನಡ ಸಾಹಿತ್ಯ ಪರಿಷತ್ತು ಅಮೃತ ಮಹೋತ್ಸವ
  ಕವಿ ಸಮ್ಮೇಳನದ ಅಧ್ಯಕ್ಷತೆ – ೧೯೯೧
- ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ವಜ್ರಮಹೋತ್ಸವದ ಉದ್ಘಾಟನೆ : ೧೯೯೨
- ಬಸವರಾಜ ಕಟ್ಟೀಮನಿ ವಿಚಾರ ವೇದಿಕೆ, ಧಾರವಾಡ : ಅಧ್ಯಕ್ಷ ೧೯೯೧ ರಿಂದ
- ಅಖಿಲಭಾರತ ೬೫ನೇ ಕನ್ನಡ ಸಾಹಿತ್ಯ ಸಮ್ಮೇಳನ (ಹಾಸನ) ಅಧ್ಯಕ್ಷತೆ : ೧೯೯೬
- ಬೆಳಗಾವಿಯ ನಾಡೋಜ ಪ್ರತಿಷ್ಠಾನದ ಉದ್ಘಾಟನೆ : ೨೦೦೩
- ಆಳ್ವಾಸ್ ನುಡಿಸಿರಿ ಸರ್ವಾಧ್ಯಕ್ಷತೆ, ಮೂಡಬಿದಿರೆ : ೨೦೦೮
- ವಿಶ್ವ ಕನ್ನಡ ಸಮ್ಮೇಳನ, ಬೆಳಗಾವಿ : ಸಿರಿಗನ್ನಡ ಕವಿಗೋಷ್ಠಿ ಅಧ್ಯಕ್ಷತೆ : ೨೦೧೧
- ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು : ಸದಸ್ಯ – ೨೦೦೬–೨೦೦೮
- ಡಾ. ವಿ. ಕೃ. ಗೋಕಾಕ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಹಾವೇರಿ, ಸದಸ್ಯ ೨೦೦೮ ರಿಂದ
- ಕನ್ನಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ
  ಶತಮಾನೋತ್ತರ ಸುವರ್ಣ ಮಹೋತ್ಸವ ಧಾರವಾಡ,
  ಕ್ರಿಯಾ ಯೋಜನಾ ಸಮಿತಿ ಅಧ್ಯಕ್ಷ ೨೦೦೫
- ಧಾರವಾಡ ಸಾಹಿತ್ಯ ಸಂಭ್ರಮ : ಗೌರವಾಧ್ಯಕ್ಷರು ೨೦೧೩ ರಿಂದ
- ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು :
  ವಾರ್ಷಿಕ ಗೌರವ ಪ್ರಶಸ್ತಿ ಪ್ರದಾನ : ೨೦೧೫
- ಮೈಸೂರು ದಸರಾ ಉದ್ಘಾಟನೆ ೧, ಅಕ್ಟೋಬರ್ ೨೦೧೬

ವಿದೇಶ ಪ್ರವಾಸ ಇತ್ಯಾದಿ

- ಅಮೇರಿಕದ ಮೇರಿ ಲ್ಯಾಂಡಿನ ಬಾಲ್ಟಿಮೋರ : ೫ನೇ ವಿಶ್ವಕನ್ನಡ ಸಮ್ಮೇಳನ (ಅಕ್ಕ ಸಮ್ಮೇಳನ) ಕವಿಗೋಷ್ಠಿ ಅಧ್ಯಕ್ಷತೆ : ೨೦೦೬
- ದುಬೈ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ : ೨೦೧೦

ಭಾವಗೀತೆಗಳ ಧ್ವನಿಸುರುಳಿಗಳು

- ಜಿ. ವಿ. ಅತ್ರಿ ಸಂಗೀತ ನಿರ್ದೇಶನದ 'ಮಲ್ಲಿಗೆದಂಡೆ' ೧೯೯೨
- ಲಹರಿ ಕಂಪನಿಯ 'ಒಂದು ಮುಂಜಾವಿನಲಿ'
- ಜಯಶ್ರೀ ಅರವಿಂದ ಸಂಗೀತ ನಿರ್ದೇಶನದ 'ಮಧು ಕೋಗಿಲೆ'
- ಮೃತ್ಯುಂಜಯ ದೊಡವಾಡ ಸಂಗೀತ ನಿರ್ದೇಶನದ 'ಬರುವುದೆಲ್ಲ ಬರಲಿಬಿಡು'

ಸಾಕ್ಷ್ಯ ಚಿತ್ರ

- ರಾಜ್ಯ ವಾರ್ತಾ ಇಲಾಖೆ, ಬೆಂಗಳೂರು
- ಭಾಷಾ ಸಂಸ್ಥೆ, ಮೈಸೂರು

ಚೆನ್ನವೀರ ಕಣವಿಯವರನ್ನು ಕುರಿತ ಗ್ರಂಥಗಳು

ಚೆನ್ನವೀರ ಕಣವಿ ಕಾವ್ಯ ದೃಷ್ಟಿ : ಗೌರೀಶ ಕಾಯ್ಕಿಣಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ೧೯೭೮

ಚೆಂಬೆಳಕು (ಅಭಿನಂದನ ಗ್ರಂಥ) : ಸಂ : ಡಾ. ಗುರುಲಿಂಗ ಕಾಪಸೆ ,೧೯೮೦

ಚೆನ್ನವೀರ ಕಣವಿ ಹಾಗೂ
ಜಿ. ಎಸ್. ಶಿವರುದ್ರಪ್ಪ ಅವರಕಾವ್ಯ: ಸಂ : ಎ. ಬಿ. ಹಿರೇಮಠ ಅನ್ನದಾನೀಶ್ವರ ಕಾಲೇಜ, ಮುಂಡರಗಿ ೧೯೯೧

ಕಣವಿ ಸಾಹಿತ್ಯ ಸಂಪದ : ಸಂ : ಡಾ. ಗುರುಪಾದ ಮರಿಗುದ್ದಿ ಶ್ರೀ ನಿಜಲಿಂಗೇಶ್ವರ ಪ್ರಕಾಶನ ನಿಡಸೋಸಿ ೧೯೯೪

ಚೆನ್ನವೀರ ಕಣವಿ ಬದುಕು-ಬರಹ : ಕೀರ್ತಿನಾಥ ಕುರ್ತಕೋಟಿ ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು ೧೯೯೬

ಮುಗಿಯದ ಹಾಡು(ಕಾವ್ಯಾಭಿನಂದನ): ಸಂ. ಡಾ. ಗುರುಲಿಂಗ ಕಾಪಸೆ, ರಾಘವೇಂದ್ರ ಪ್ರಕಾಶನ, ಅಂಕೋಲಾ ೧೯೯೮

ಕವಿ ಕಣವಿ : ಡಾ. ಜಿ. ಎಂ. ಹೆಗಡೆ ನೆಲೆ ಪ್ರಕಾಶನ, ಸಿಂದಗಿ ೧೯೯೬, ೧೯೯೯, ೨೦೦೫

ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ : (ಪಿಎಚ್.ಡಿ ಪ್ರಬಂಧ) ೨೦೦೦ ಡಾ. ಗುಂಡಣ್ಣ ಕಲ್ಬುರ್ಗಿ, ಸೌಜನ್ಯ ಪ್ರಕಾಶನ, ಮೂಡಲಗಿ

ಬೆಳ್ಳಿ ತೇರಿನ ದಾರಿ (ವಿವಿಧ ವಿಮರ್ಶಕರು): ಸಂ : ಡಾ. ಗುರುಲಿಂಗ ಕಾಪಸೆ, ಡಾ. ಜಿ. ಎಂ. ಹೆಗಡೆ ೨೦೦೩


ಕವಿ ಕಣವಿ ಸಂದರ್ಶನ : ಸಂ : ಡಾ. ಜಿ. ಎಂ. ಹೆಗಡೆ, ಕನ್ನಡ ಜಾಗೃತಿ ಗ್ರಂಥ ಮಾಲೆ, ಚಿಂಚಣಿ ೨೦೦೩

ಕಣವಿಯವರ ಕವಿತೆ:ಹೊಸ ಓದು : ಸಂ : ಡಾ. ಗುರುಲಿಂಗ ಕಾಪಸೆ, ಡಾ. ಜಿ. ಎಂ. ಹೆಗಡೆ ಸುಮುಖ ಪ್ರಕಾಶನ, ಬೆಂಗಳೂರು ೨೦೦೮

ಕಣವಿಯವರ ಆಯ್ದ
ಕವಿತೆಗಳ ಅನುಸಂಧಾನ : ಸಂ : ಡಾ. ಗುರುಲಿಂಗ ಕಾಪಸೆ, ಸಪ್ನ ಬುಕ್ ಹೌಸ್, ಬೆಂಗಳೂರು ಡಾ. ಜಿ.ಎಂ. ಹೆಗಡೆ ೨೦೧೩

ಚೆನ್ನವೀರ ಕಣವಿ : ಡಾ. ಗುರುಲಿಂಗ ಕಾಪಸೆ ನವ ಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು ೨೦೦೯, ೨೦೧೨

Inviting Life : (ಆಯ್ದ ಕವಿತೆಗಳ ಇಂಗ್ಲಿಷ್ ಅನುವಾದ) ೨೦೦೩ ಸಂ : ಡಾ. ಕೆ. ರಾಘವೇಂದ್ರ ರಾವ್, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ



ಕಣವಿಯವರು ಚಿತ್ರಿಸುವ ಯಾವುದೇ ವ್ಯಕ್ತಿಚಿತ್ರದಲ್ಲಿಯೂ ಕೊಂಕು, ವ್ಯಂಗ್ಯ, ಉಡಾಫೆಗಳಲ್ಲ. ಪ್ರತಿಯೊಬ್ಬ ವ್ಯಕ್ತಿಯ ಇತ್ಯಾತ್ಮಕ ಮತ್ತು ಆದರ್ಶದ ಗುಣಗಳನ್ನು ಅವರು ಕಂಡಿದ್ದಾರೆ. ಅವರಿಂದ ನಾಡು-ನುಡಿಗೆ ಸಂದ ಸೇವೆಯನ್ನು ಸ್ಮರಿಸಿದ್ದಾರೆ. ವ್ಯಕ್ತಿಯ ಇನ್ನೊಂದು ಮುಖವಾದ ದೌರ್ಬಲ್ಯಗಳನ್ನು, ಸಣ್ಣತನಗಳನ್ನು ಅವರು ಕೆಲಮಟ್ಟಿಗೆ ಉಪೇಕ್ಷೆಯಿಂದಲೇ ಕಂಡಿದ್ದಾರೆ. ಅಂತಹ ಸಾಧಕರ ಸಾಧನೆಯ ಮುಂದೆ ಇವಷ್ಟು ದೊಡ್ಡವಲ್ಲ ಹಾಗೂ ಎತ್ತಿ ಆಡುವವುಗಳಲ್ಲವೆಂದು ಅವರು ಭಾವಿಸಿದಂತೆ ತೋರುತ್ತದೆ. ಕಣವಿಯವರು ಇಂತಹ ವ್ಯಕ್ತಿಚಿತ್ರಗಳನ್ನು ಹಾಗೂ ನವ್ಯದ ಸಂದರ್ಭದಲ್ಲಿ ಪ್ರಕಟವಾದ ವ್ಯಕ್ತಿಚಿತ್ರವನ್ನು ಒಂದು ತುಲನಾತ್ಮಕ ಅಧ್ಯಯನಕ್ಕೆ ಒಳಪಡಿಸಿದರೆ ಕಣವಿಯವರ ಕಣ್ಣಲ್ಲಿ ರೂಪುಗೊಳ್ಳುವ ವ್ಯಕ್ತಿತ್ವದ ಮಹತ್ವ ಮತ್ತು ಗುಣಾತ್ಮಕತೆ-ನಿರ್ವ್ಯಾಜ-ಅಜಾತಶತ್ರುತನದ ಮನೋಭಾವ ಗಮನಕ್ಕೆ ಬರುತ್ತದೆ.

ಆಧುನಿಕತೆ ಹಾಗೂ ಪರಂಪರೆಯ ಒಂದು ಹದವಾದ ಬೆಸುಗೆಯಂತಿರುವ ಕಣವಿಯವರ ಗದ್ಯಬರವಣಿಗೆಯ ವೈಶಿಷ್ಟ್ಯಕ್ಕೆ ಪ್ರಸ್ತುತ ಕೃತಿ ಒಂದು ನಿರ್ದೇಶನದಂತಿದೆ.

ಡಾ. ಪ್ರಹ್ಲಾದ ಅಗಸನಕಟ್ಟೆ

9 789381 822777

₹: 120/-

ಮನೋಹರ ಗ್ರಂಥ ಮಾಲಾ
MANOHARA GRANTHA MALA

ಲಕ್ಷ್ಮೀ ಭವನ, ಸುಭಾಸ ರಸ್ತೆ, ಧಾರವಾಡ-580 001.

Shop Online at www.granthamala.com